## ಅಧ್ಯಾಯ 4

# ಕ್ರಿಸ್ತನ ಸುವಾರ್ತೆಯ ವಿಷಯದಲ್ಲಿ ಪೌಲನು ಅನುಭವಾತ್ಮಕವಾಗಿ ಹಾಗೂ ಶಾಸ್ತ್ರಗಳ ಪ್ರಕಾರವಾಗಿ ಪ್ರತಿವಾದವನ್ನು ಮಾಡಿದ್ದು

## (ಭಾಗ 2)

ಪೌಲನು ಧರ್ಮಶಾಸ್ತ್ರಕ್ಕಿಂತ ಕ್ರಿಸ್ತನಲ್ಲಿಡುವ ನಂಬಿಕೆಯು ಸರ್ವೋಚ್ಚವಾದದ್ದೆಂಬ ತನ್ನ ವಾದವನ್ನು ಮುಂದುವರೆಸುತ್ತಾನೆ (4:1-7). ಈ ಮುಂಚೆ 3:23-25ರಲ್ಲಿ ಬಾಧ್ಯಸ್ತನಾಗಿದ್ದ ಮಗನ ಮೇಲೆ ಕಾಯುವ ಆಳು ಅಥವಾ ಪಾಲಕನು ಎಂಬುದಾಗಿ ಬಳಸಿದ ಸಾದೃಶ್ಯವನ್ನು ಇನ್ನಷ್ಟು ವಿಸ್ತರಿಸುವವನಾಗಿ, ಆತನು ಮತ್ತೊಂದಾವರ್ತಿ ಧರ್ಮಶಾಸ್ತ್ರಕ್ಕಿರುವ ತಾತ್ಕಾಲಿಕ ಸ್ವಭಾವದ ಕುರಿತು ಒತ್ತಿ ಹೇಳುತ್ತಾನೆ. ಕ್ರಿಸ್ತನಲ್ಲಿ ಸಿಕ್ಕುವ ಆಶೀರ್ವಾದಗಳನ್ನು ಅನುಭವಿಸಿದ ಬಳಿಕ ಪುನಃ ಧರ್ಮಶಾಸ್ತ್ರದ ಆತ್ಮೀಕ ದಾಸತ್ವಕ್ಕೆ ಹಿಂದಿರುಗುವದೆಂದರೆ ಕ್ರಿಸ್ತನಲ್ಲಿರುವ ಸಂತೋಷ ಮತ್ತು ನಿರೀಕ್ಷೆಗಳನ್ನು ಕಳೆದುಕೊಂಡಂತೆಯೇ ಆಗಿತ್ತು (4:8-20). ಆತನು ಸಾರಳು ಹಾಗೂ ಹಾಗರಳ ಸಾಂಕೇತಿ ನಿರೂಪಣೆಯನ್ನು ಒದಗಿಸಿ, ಮೋಶೆಯ ಧರ್ಮಶಾಸ್ತ್ರಕ್ಕೆ ದಾಸರಾಗಿರುವದಕ್ಕಿಂತ ಕ್ರಿಸ್ತನಲ್ಲಿರುವ ಸ್ವಾತಂತ್ರ್ಯವು ಶ್ರೇಷ್ಠವಾದದ್ದೆಂಬುದನ್ನು ದೃಷ್ಟಾಂತಪಡಿಸುವ ಮೂಲಕ ಈ ವಿಭಾಗವನ್ನು ಮುಕ್ತಾಯಗೊಳಿಸುತ್ತಾನೆ (4:21-31).

### ಧರ್ಮಶಾಸ್ತ್ರದ ತಾತ್ಕಾಲಿಕ ಸ್ವಭಾವ: ದಾಸತ್ವದಿಂದ ಪುತ್ರಸ್ವೀಕಾರದ ಕಡೆಗೆ (4:1-7)

**1ಆದರೆ ನಾನು ಹೇಳುವದೇನಂದರೆ ಬಾಧ್ಯನು ತಾನು ಆಸ್ತಿಗೆಲ್ಲಾ ಧಣಿಯಾಗಿದ್ದರೂ ಬಾಲಕನಾಗಿರುವ ತನಕ ದಾಸನಂತೆ ಇರುವನೇ ಹೊರತು ಬೇರೆಯಿಲ್ಲ. 2ತಂದೆಯು ನೇಮಿಸಿದ ದಿನದವರೆಗೂ ಪಾಲಕರ ಮತ್ತು ಮನೆವಾರ್ತೆಯವರ ಕೈಕೆಳಗಿರುವನು. 3ಹಾಗೆಯೇ ನಾವು ಸಹ ಬಾಲಕರಾಗಿದ್ದಾಗ ಲೋಕದವರ ಬಾಲಬೋಧೆಗೆ ಅಧೀನರಾಗಿದ್ದೆವು. 4-5ಆದರೆ ಕಾಲವು**

**ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಧೀನನಾಗಿಯೂ ಬಂದನು. [6]ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು. [7]ಹೀಗಿರುವಲ್ಲಿ ಇನ್ನು ನೀನು ದಾಸನಲ್ಲ, ಮಗನಾಗಿದ್ದೀ. ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ.**

**ವಚನಗಳು 1, 2.** ಅಧ್ಯಾಯ 3ರಲ್ಲಿ, ಪೌಲನು ಬಾಲಕನ್ನೊಬ್ಬನು ಶಾಲೆಗೆ ಹೋಗುವಾಗ ಮತ್ತು ಹಿಂದಿರುಗಿ ಬರುವಾಗ ಆತನ ಜೊತೆಯಲ್ಲಿ ಆತನ ಕಾಯುವ ಆಳು ಅಥವಾ ಪಾಲಕನು ಹೋಗುತ್ತಿದ್ದನು ಎಂಬ ಚಿತ್ರಣವನ್ನು ಬಳಸಿದನು. ಶಾಲೆಯ ಬಳಿಕ, ಪಾಠಗಳನ್ನು ಸಿದ್ಧಪಡಿಸಿಕೊಳ್ಳುವಂತೆ ಮತ್ತು ಪಠಿಸುವಂತೆ ಮಗುವಿಗೆ ಆತನು ಸಹಾಯ ಮಾಡುತ್ತಿದ್ದನು - ಮತ್ತು ಅವಶ್ಯವಾದರೆ, ಆತನನ್ನು ಒತ್ತಾಯ ಸಹ ಮಾಡುತ್ತಿದ್ದನು. ಪೌಲನು ಅನೇಕ ಅನ್ಯಜನರನ್ನೊಳಗೊಂಡಿದ್ದ ಗಲಾತ್ಯದಲ್ಲಿನ ಕ್ರೈಸ್ತರಿಗೆ "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ" ಎಂದು ಘಂಟಾಘೋಷವಾಗಿ ಹೇಳುವ ಮೂಲಕ ತನ್ನ ಪತ್ರಿಕೆಯ ಆ ಭಾಗವನ್ನು ಸಾರಾಂಶಗೊಳಿಸಿದನು. ಅವರು "ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡಿದ್ದರು" ಮತ್ತು ಅವರು "ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ" (3:26-29).

ಇಸ್ರಾಯೇಲವು ಧರ್ಮಶಾಸ್ತ್ರಾಧೀನವಾಗಿರುವ ವೇಳೆ ಇದ್ದಂಥ ಅದರ ಶಿಶುವಿನ ಸ್ಥಿತಿ (ಅಥವಾ ಪಕ್ವತೆಯಿಲ್ಲದ) ಕುರಿತಾಗಿ ಹೇಳುವದಕ್ಕೆ ಪೌಲನ ಬಳಿಯಲ್ಲಿ ಇನ್ನು ಬಹಳವಿತ್ತು: **ಆದರೆ ನಾನು ಹೇಳುವದೇನಂದರೆ ಬಾಧ್ಯನು ತಾನು ಆಸ್ತಿಗೆಲ್ಲಾ ಧಣಿಯಾಗಿದ್ದರೂ ಬಾಲಕನಾಗಿರುವ** [νήπιος, *nēpios*] **ತನಕ ದಾಸನಂತೆ** [δοῦλος, *doulos*] **ಇರುವನೇ ಹೊರತು ಬೇರೆಯಿಲ್ಲ. ತಂದೆಯು ನೇಮಿಸಿದ ದಿನದವರೆಗೂ ಪಾಲಕರ ಮತ್ತು ಮನೆವಾರ್ತೆಯವರ ಕೈಕೆಳಗಿರುವನು.** ಪೌಲನು ಗಲಾತ್ಯದವರಿಗೆ ಈ ಹೇಳಿಕೆಯನ್ನು ವಿವರಿಸುವದರ ಅಗತ್ಯವಿರಲಿಲ್ಲ. ಅವರ ಪಟ್ಟಣಗಳು ಬಹು ಕಾಲದ ಹಿಂದೆಯೇ ಗ್ರೀಕ್ ಸಂಸ್ಕೃತಿಗೊಳಪಡಿಸಲ್ಪಟ್ಟಿದ್ದವು, ಮತ್ತು ಅವುಗಳು ಸಾಮ್ರಾಜ್ಯದಲ್ಲಿದ್ದ ಸಾಂಸ್ಕೃತಿಕವಾಗಿ ಗ್ರೀಕ್-ರೋಮನ್ ಪದ್ಧತಿಗಳಿಗೆ ಒಗ್ಗಿಕೊಂಡಿದ್ದವು.

ಒಂದು ಉತ್ತಮ ಕುಟುಂಬದಲ್ಲಿ ಬೆಳೆದ ಒಬ್ಬ ಮಗುವಿಗೆ ಆತನನ್ನು ಆರೈಕೆ ಮಾಡಿ ಆ ದಿನದ ಕೊಯ್ನೆ (ರೂಢಿಯಲ್ಲಿದ್ದ) ಗ್ರೀಕ್ ಭಾಷೆಯಲ್ಲಿ ಪರಿಣಿತನಾಗುವಂತೆ ಆತನಿಗೆ ಸಹಾಯ ಮಾಡುವಂತೆ "ಪಾಲಕರು" ಇರುತ್ತಿದ್ದರು. ಅಂತಹ ಕಾಯುವ ಆಳು ಅಥವಾ ಪಾಲಕರನ್ನಿಟ್ಟುಕೊಳ್ಳಲು ಶಕ್ತವಾದ ಕುಟುಂಬಕ್ಕಿರುತ್ತಿದ್ದ ಪ್ರಮುಖವಾದ ಶೈಕ್ಷಣಿಕ ಗುರಿಗಳಲ್ಲಿ ಒಂದಾಗಿರುತ್ತಿತ್ತು. ಬಾಲಕನು ತನ್ನ ಪರಿಪಕ್ವತೆಯ ವಯಸ್ಸನ್ನು ಮುಟ್ಟುವ ತನಕವೂ ತನ್ನ ಪಾಲಕರಿಗೆ ವಿಧೇಯನಾಗುವ ನಿರ್ಬಂಧಕ್ಕೊಳಪಟ್ಟಿರುತ್ತಿದ್ದನು. ಈ ಸಮಯದಲ್ಲಿಯೇ ಯುವಕನು ಜವಾಬ್ದಾರನೆಂದು ಪರಿಗಣಿಸುವದಕ್ಕೆ ಸಾಕಾಗುವಷ್ಟು ಪರಿಪಕ್ವಗೊಂಡಿದ್ದಾನೆ ಎಂದು ನಿರ್ಧರಿಸುತ್ತಿದ್ದನು. ಯೆಹೂದ್ಯರೊಳಗೆ, ಇದು ಆತನ "ಬಾರ್ ಮಿಟ್ಜ್ವಾ ಹ" ಸಮಯದಲ್ಲಿ ಸಂಭವಿಸುತ್ತಿತ್ತು. ರೋಮನ್ನರೊಳಗೆ, ಹುಡುಗನು ಹದಿಹರೆಯದ ಕಡೆಯ ಘಟ್ಟದಲ್ಲಿರುವ ವೇಳೆ ಸಂಭವಿಸುತ್ತಿತ್ತು; ಆತನಿಗೆ ರೋಮನ್ ಇಳಿವಸ್ತ್ರವನ್ನು ಧರಿಸುವದಕ್ಕೆ ಅನುಮತಿ ಕೊಡಲಾಗುತ್ತಿತ್ತು ಮತ್ತು ಯುವ ಪ್ರಾಯಸ್ಥನಾಗಿ ಆತನಿಗಿರುವ ಹೊಸ ಸ್ಥಾನದೊಂದಿಗೆ ಇನ್ನು ಕೆಲವೊಂದು ಸವಲತ್ತುಗಳನ್ನು ಒದಗಿಸಲಾಗತ್ತಿತ್ತು.

ಪೌಲನು ಇಲ್ಲಿ ಯೆಹೂದಿ ಪದ್ಧತಿಯನ್ನು ಯೋಚಿಸುತ್ತಿದ್ದನೋ ಅಥವಾ ರೋಮನ್ನರದ್ದೋ ಎಂಬದು ಮುಖ್ಯವಾಗುವದಿಲ್ಲ. ಆತನ ಉದ್ದೇಶವು, ತಂದೆಯು "ನೇಮಿಸಿದ ದಿನ" (προθεσμία, *prothesmia*) ತನಕ, ಒಬ್ಬ ಬಾಧ್ಯಸ್ಥನು (ಎಲ್ಲದರ ಭಾವಿ "ಯಜಮಾನನು [κύριος, *kurios*[1]]") ಒಬ್ಬ ದಾಸನಿಗಿಂತಲೂ ಅಷ್ಟೇನೂ ಭಿನ್ನನಾಗಿರಲಿಲ್ಲ ಎಂಬುದನ್ನು ಒತ್ತಿ ಹೇಳುವದೇ ಆಗಿತ್ತು. ಒಬ್ಬ ಹುಡುಗನು ತಮ್ಮ ವಶದಲ್ಲಿರುವ ಕಿರಿಯನಿಂದ ವಿಧೇಯತೆಯನ್ನು ಕೇಳುವ ಅಧಿಕಾರವುಳ್ಳ ಕೆಲವೊಂದು ದಾಸರ ಅಧೀನದಲ್ಲಿ ಇಡಲ್ಪಡಬಹುದು.

ಬಾಲಕ ಮತ್ತು ಆತನನ್ನು ಕಾಯುವ ಆಳಿನ ಅಥವಾ ಪಾಲಕನ ಸಾದೃಶ್ಯವು ಧರ್ಮಶಾಸ್ತ್ರದ ಅಡಿಯಲ್ಲಿ ಇಸ್ರಾಯೇಲ್ಯರಿಗಿದ್ದ ಸ್ಥಾನಮಾನಕ್ಕೆ ದೃಷ್ಟಾಂತವಾಗಿರುತ್ತದೆ. ಈ ಅಧ್ಯಾಯದೊಳಗೆ ಅನಂತರದಲ್ಲಿ, ಸೀನಾಯ್ ಪರ್ವತದಲ್ಲಿ ಕೊಡಲ್ಪಟ್ಟ ಒಡಂಬಡಿಕೆಯ (ಸಾಂಕೇತಿಕವಾಗಿ ಸಾರಳ ದಾಸಿಯಾದ ಹಾಗರಳಿಂದ ಪ್ರತಿನಿಧಿಸಲ್ಪಟ್ಟಿರುತ್ತದೆ) ಕುರಿತಾಗಿಯೇ ಮಾತಾಡುತ್ತಾನೆ. ಹಾಗರಳನ್ನು "ತನ್ನ ಮಕ್ಕಳ ಸಹಿತ ದಾಸತ್ವದಲ್ಲಿದ್ದಾಳೆ" (4:25) ಎಂದು ಚಿತ್ರಿಸುವ ಮೂಲಕ, ಒಡಂಬಡಿಕೆಯ ಮಕ್ಕಳಾದ ಇಸ್ರಾಯೇಲ್ಯರು, ಧರ್ಮಶಾಸ್ತ್ರಕ್ಕೆ ದಾಸರಾಗಿದ್ದರು ಎಂದು ತೋರಿಸಿ ಕೊಡುತ್ತಾನೆ.

ಗಲಾತ್ಯದವರಿಗೆ ಬರೆದ ಪತ್ರಿಕೆಯನ್ನು ಅನೇಕ ಸಾರಿ "ಕ್ರೈಸ್ತ ಸ್ವಾತಂತ್ರ್ಯತೆಯ ಶಾಸನಪತ್ರ" ಎಂದು ಕರೆಯಲ್ಪಟ್ಟಿದೆ. ದಾಸತ್ವದ ಕುರಿತು ಪ್ರಸ್ತಾಪಿಸುವ ಈ ವಚನಗಳು ನಮಗೆ ಗಲಾತ್ಯದ ಈ ಸಭೆಗಳಲ್ಲಿನ ಜೀವಿತದ ಸ್ಥಿತಿ ಹಾಗೂ ಒಟ್ಟಾರೆಯಾಗಿ ಪತ್ರಿಕೆಯ ಉದ್ದೇಶ ಎರಡನ್ನೂ ಅರ್ಥಮಾಡಿಕೊಳ್ಳುವಂತೆ ನಮಗೆ ಸಹಾಯ ಮಾಡುತ್ತವೆ. ಯೆಹೂದಿಕರಣಗೊಳಿಸುವವರು, ಬಹಳ ಯಶಸ್ವಿಯಾಗಿ ಈ ಸಭೆಗಳನ್ನು ಬುಡಮೇಲು ಮಾಡಿ ಸೀನಾಯ್ ಪರ್ವತದ ಮೇಲೆ ಧರ್ಮಶಾಸ್ತ್ರವು ತೋರಿಸಿ ಕೊಟ್ಟ ಸುನ್ನತಿಯನ್ನು ಮಾಡಿಸಿಕೊಳ್ಳುವದು ಕಡ್ಡಾಯಗೊಳಿಸುವದಕ್ಕೆ ಪ್ರಯತ್ನಿಸುತ್ತಿದ್ದರೆಂಬುದರ ಮೇಲಿನ ನಮ್ಮ ದೃಷ್ಟಿಯನ್ನು ಕಳೆದುಕೊಳ್ಳಬಾರದು. ಕೆಲವು ವ್ಯಾಖ್ಯಾನಕಾರರು ಪ್ರಸ್ತಾವಿಟ್ಟಿರುವ ಪ್ರಕಾರ, ಪೌಲನು ಇಲ್ಲಿ ಒಬ್ಬನ ಸ್ವಂತ ಕ್ರಿಯೆಗಳ ಮೂಲಕ ನೀತಿಗೆ ಅರ್ಹರಾಗುವದಕ್ಕೆ ಮಾಡುತ್ತಿರುವ ನೇಮನಿಷ್ಠೆಯ ಪ್ರಯತ್ನಗಳ ವಿರುದ್ಧ ಕಾದಾಡುತ್ತಿದ್ದನೆಂಬುದಕ್ಕೆ ಯಾವದೇ ಸೂಚನೆಗಳೂ ಸಿಕ್ಕುವದಿಲ್ಲ.

ಇನ್ನು ಪರಿಪಕ್ವತೆಯನ್ನು ಹೊಂದಿರದ ಪ್ರಾಯದ ಹುಡುಗನ ಕುರಿತಾದ ಆತನ ಉದಾಹರಣೆಯನ್ನು ಅನ್ವಯಿಕೆಯ ಕಡೆಗೆ ಹೋಗುವದಕ್ಕೆ ಮುನ್ನ, "ಪಾಲಕರು" (ἐπίτροπος, *epitropos* ಎಂಬದರಿಂದ ಬಂದದ್ದು) ಮತ್ತು "ನಿರ್ವಾಹಕರು" (οἰκονόμος, *oikonomos*) ಎಂಬ ಪದಗಳನ್ನು ಆಲೋಚಿಸತಕ್ಕದ್ದು. *ಎಪಿತ್ರೊಪೊಸ್* ಎಂಬ ಪದವು ಗ್ರೀಕ್ ಸಾಹಿತ್ಯದಲ್ಲಿ ಒಂದು ವ್ಯಾಪಕ ಪ್ರಮಾಣದ ವಿವಿಧ ಸ್ಥಾನಗಳಿಗೆ ಅನ್ವಯಿಸಲ್ಪಟ್ಟಿದ್ದು, "ದೇಶಾಧಿಪತಿ" ಮತ್ತು "ದಂಡಾಧಿಕಾರಿ"[2]ಗಳಿಗೆ ಸಹ ಅನ್ವಯಿಸಲ್ಪಟ್ಟಿರುತ್ತದೆ. ಈ ಪದವು ಹೊಸ ಒಡಂಬಡಿಕೆಯಲ್ಲಿ ಕೇವಲ ಮೂರು ಸಾರಿ ಮಾತ್ರವೇ ಕಾಣಿಸಿಕೊಳ್ಳುತ್ತದಾದರೂ, ಅದು ἐπιτροπή (*epitropē*) ಎಂಬ ಪದಕ್ಕೆ ಸಂಬಂಧ ಹೊಂದಿರುತ್ತದೆ, ಆ ಪದದ ಅರ್ಥವು "ಅನುಮತಿ," "ಆದೇಶ," ಅಥವಾ "ಪೂರ್ಣ ಅಧಿಕಾರ"[3] ಎಂದು ಸಹ ಆಗಿರುತ್ತದೆ. ಈ ಅರ್ಥನಿರೂಪಣೆಗಳು ತನ್ನ ವಶಕ್ಕೆ ಒಪ್ಪಿಸಲ್ಪಟ್ಟಿದ್ದ ಹುಡುಗನ ಮೇಲೆ ಕಾಯುವ ಆಳಿಗೆ ಅಥವಾ ಪಾಲಕನಿಗೆ ಇರುತ್ತಿದ್ದ ಅಧಿಕಾರದ ಕುರಿತು ತಿಳುವಳಿಕೆಯನ್ನು ಒದಗಿಸುತ್ತವೆ.

*ಒಯ್ಕೊನೊಮೊಸ* ಎಂಬ ಪದವು, ಹೊಸ ಒಡಂಬಡಿಕೆಯಲ್ಲಿ *ಎಪಿತ್ರೊಪೊಸ* ಎಂಬ ಪದಕ್ಕಿಂತ ಎಷ್ಟು ಹೆಚ್ಚು ಸಾಮಾನ್ಯವಾಗಿ ಕಾಣಿಸುವದಾಗಿದ್ದು, ಅದು ಒಬ್ಬ ಮನೆಯ

ಯಜಮಾನನು ಪ್ರಯಾಣ ಹೊರಟ ವೇಳೆಯಲ್ಲಿ ತನ್ನ ಸ್ಥಿರಾಸ್ತಿಯ ಜವಾಬ್ದಾರಿಯನ್ನು ವಹಿಸಿ ಹೋಗುತ್ತಿದ್ದ ಮನೆಯ ನಿರ್ವಾಹಕನನ್ನು ಸೂಚಿಸಲು ಬಳಸಲ್ಪಡುತ್ತದೆ (ಲೂಕ 12:42; ನೋಡಿರಿ 16:1, 3, 8). ಅಕ್ಷರಶಃ ಆತನು "ಮನೆಯ (ಮನೆಯವರಿಗೆ) ಧರ್ಮಶಾಸ್ತ್ರ" ಆಗಿರುತ್ತಿದ್ದನು. ಆ ಪದವು ಕೊರಿಂಥದಲ್ಲಿ ಖಜಾನೆಯ ಮೇಲ್ವಿಚಾರಕನಾಗಿರುವ ಎರಸ್ತನಿಗೆ ಬಳಸಲ್ಪಟ್ಟಿರುತ್ತದೆ (ರೋಮಾ 16:23), ಪಟ್ಟಣದಲ್ಲಿನ ಬೃಹತ್ ನಾಟಕಶಾಲೆಯ ಸಮೀಪದ ಕಾಲುದಾರಿಗಳಲ್ಲಿರುವ ಕಲ್ಲುಗಳಲ್ಲಿ ಕೆತ್ತಿದ್ದ ಆತನ ಶಾಸನಗಳು ಈಗಲೂ ಕಾಣುವದಕ್ಕೆ ಸಿಕ್ಕುತ್ತವೆ. ಅದು ಹೊಸ ಒಡಂಬಡಿಕೆಯಲ್ಲಿ ಅಪೊಸ್ತಲರನ್ನು (1 ಕೊರಿಂಥ 4:1, 2), ಹಿರಿಯರನ್ನು (ತೀತನಿಗೆ 1:7), ಮತ್ತು "ದೇವರ ವಿವಿಧ ಕೃಪೆಯ ವಿಷಯದಲ್ಲಿ" (1 ಪೇತ್ರ 4:10; NIV1984) ಕ್ರೈಸ್ತೀಯ ಸೇವೆಗಳನ್ನು ನಡಿಸುತ್ತಿರುವವರನ್ನು ಸೂಚಿಸುವದಕ್ಕೆ ಸಹ ಬಳಸಲ್ಪಟ್ಟಿದೆ.

**ವಚನ 3.** ಇಸ್ರಾಯೇಲ್ಯರನ್ನು ಈಗಲೂ ಕೂಸಿನ ಸ್ಥಿತಿಯಲ್ಲಿರುವವರೆಂದು ಸೂಚಿಸುವವನಾಗಿ, ಪೌಲನು ಹೀಗೆ ಬರೆದನು, **ಹಾಗೆಯೇ ನಾವು ಸಹ ಬಾಲಕರಾಗಿದ್ದಾಗ ಲೋಕದವರ ಬಾಲಬೋಧೆಗೆ ಅಧೀನರಾಗಿದ್ದೆವು.** 4:9ರಲ್ಲಿ, ಗಲಾತ್ಯದ ಸಮುದಾಯದಲ್ಲಿನ ಅನ್ಯಜನಾಂಗದ ಸದಸ್ಯರು "ಕೆಲಸಕ್ಕೆ ಬಾರದ ದರಿದ್ರಬಾಲಬೋಧೆಗೆ ಮತ್ತೊ ಅಧೀನರಾಗಬೇಕೆಂದು ಅಪೇಕ್ಷಿಸಿ ಪುನಃ ಅದಕ್ಕೆ ತಿರುಗಿಕೊಳ್ಳುತ್ತಿರುವರು" ಎಂದು ಆತನು ಹೇಳಿದನು. ಇದರ ಅರ್ಥವು "ಬಾಲಬೋಧೆ" (στοιχεῖα, *stoicheia*) ಎಂಬ ಪದವು ಧರ್ಮಶಾಸ್ತ್ರವನ್ನು ಒಳಗೊಂಡಿರುತ್ತಾದರೂ, ಅದರಲ್ಲಿ ಅದಕ್ಕಿಂತ ಅಧಿಕವಾದದ್ದು ಸೇರಿರುತ್ತದೆಂಬ ಎಂದಾಗಿರತಕ್ಕದ್ದು.

*ಸ್ಟೊಯಿಖೆಯಿಯಾ* ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಯಾವಾಗಲೂ ಬಹವನಚದಲ್ಲಿ ಬಳಸಲ್ಪಟ್ಟಿದ್ದು, ಇದು ಯಾವದೇ ಬೋಧನೆಯಲ್ಲಿನ ಪ್ರಾಥಮಿಕ ಘಟಕಗಳನ್ನು ಸೂಚಿಸಬಹುದಾಗಿದೆ. ಗ್ರೀಕ್ ಸಾಹಿತ್ಯದಲ್ಲಿ, ಈ ಪದವು ವಿವಿಧ ಸನ್ನಿವೇಶಗಳಲ್ಲಿ ಬಳಸಲ್ಪಡುತ್ತದೆ. (1) *ಸ್ಟೊಯಿಖೆಯಿಯಾ* ಅಕ್ಷಮಾಲೆಯಲ್ಲಿರುವಂತಹ ಒಂದೊಂದು ಅಕ್ಷರವನ್ನು ಸೂಚಿಸುತ್ತದೆ, ಮತ್ತು (2) ಈ ಪದವು ವ್ಯಾಕರಣದಲ್ಲಿರುವಂಥ ಪದವಾಚಕಗಳನ್ನು (ನಾಮಪದಗಳು, ಕ್ರಿಯಾಪದಗಳು, ಗುಣವಾಚಕಗಳು, ಕ್ರಿಯಾವಿಶೇಷಣ ಇತ್ಯಾದಿ) ಸೂಚಿಸುವದಕ್ಕೆ ಸಹ ಬಳಸಲ್ಪಡಬಹುದು. (3) ಇದು ಭೂಮಿ, ಗಾಳಿ, ಬೆಂಕಿ, ಮತ್ತು ನೀರು ಇವುಗಳನ್ನು ಸಹ ಸೂಚಿಸುತ್ತದೆ. ಭೌತಿಕದ ಕುರಿತು ಗ್ರೀಕ್ ಕಲ್ಪನೆಯ ಪ್ರಕಾರವಾಗಿ, ಈ ನಾಲ್ಕು ಮೂಲಭೂತ ವಸ್ತುಗಳಿಂದಲೇ ಭೌತಿಕ ಜಗತ್ತು ಉಂಟಾಗಿತ್ತೆಂದಾಗಿದೆ (ನೋಡಿರಿ 2 ಪೇತ್ರ 3:10, 12). (4) *ಸ್ಟೊಯಿಖೆಯಿಯಾ* ಎಂಬುದು ಗೋಚರವಾಗುವ ಆಕಾಶವನ್ನು ತುಂಬಿಕೊಂಡಿರುವ ನಕ್ಷತ್ರಪುಂಜಗಳ ರಚನೆಗೆ ಕಾರಣವಾದ ವ್ಯಕ್ತಿಗತ ನಕ್ಷತ್ರಗಳನ್ನು ಸೂಚಿಸುತ್ತದೆ (ನೋಡಿರಿ 1 ಕೊರಿಂಥ 15:40, 41). (5) ಗ್ರೀಕರ ತತ್ವಜ್ಞಾನಿಕ ಹಾಗೂ ಆಧ್ಯಾತ್ಮಿಕ ಭಾಷೆಯಲ್ಲಿ, ಆಕಾಶಕಾಯಗಳನ್ನು ಸೂಚಿಸುವದಕ್ಕೆ ಮಾತ್ರವಲ್ಲ, ಆದರೆ ಆಕಾಶಕಾಯಗಳಿಗೆ ಸಂಬಂಧಪಟ್ಟ ಪ್ರಾಥಮಿಕವಾದ ಆತ್ಮಗಳನ್ನು[4] ಮತ್ತು ಸ್ವತಃ ಭೌತಿಕದ ಶಾರೀಕ ಅಂಶಗಳನ್ನು[5] ಸಹ ಸೂಚಿಸುವದಕ್ಕಾಗಿ ಬಳಸಲ್ಪಡುವಂತದ್ದಾಗಿತ್ತು.

*ಸ್ಟೊಯಿಖೆಯಿಯಾ* ಎಂಬುದು ಈ ಅಧ್ಯಾಯದಲ್ಲಿ ಹಲವಾರು ವಿಧದಲ್ಲಿ ಅನುವಾದಿಸಲ್ಪಟ್ಟಿದೆ. ಇಲ್ಲಿ ಅದು "ಮೂಲಪಾಠಗಳು" (ASV), "ಮೂಲತತ್ವಗಳು" (NIV1984), ಅಥವಾ "ಪ್ರಾಥಮಿಕ ತತ್ವಗಳು" (ESV).[6] ದೇವರು ಮಗುವಿಗಾಗಿ (ಧರ್ಮಶಾಸ್ತ್ರದ ಅಡಿಯಲ್ಲಿದ್ದ ಯೆಹೂದ್ಯರು) ಪ್ರಾಯಸ್ಥರಿಗೆ (ಪುತ್ರಸ್ವೀಕಾರದ ಆತ್ಮವು

ಕೊಡಲ್ಪಟ್ಟಿರುವ ಒಬ್ಬ ಕ್ರಿಸ್ತನು) ಸಮರ್ಪಕವಲ್ಲದ ಕೆಲವು ಸಂಗತಿಗಳನ್ನು ಸ್ವೀಕರಿಸಿಕೊಂಡಿದ್ದನು ಮತ್ತು ನೇಮಿಸಿದ್ದನು ಸಹ ಎಂದು ಪೌಲನು ವಾದಿಸುತ್ತಿದ್ದಾನೆ. ಸನ್ನಿವೇಶವು ಬೇರೆಯಾಗಿರುತ್ತಾದರೂ, ಇದೇ ರೀತಿಯ ಆಲೋಚನೆಯೊಂದು 1 ಕೊರಿಂಥ 13:11ರಲ್ಲಿ ವ್ಯಕ್ತಪಡಿಸಲ್ಪಟ್ಟಿದೆ: "ನಾನು ಬಾಲಕನಾಗಿದ್ದಾಗ ಬಾಲಕನ ಮಾತುಗಳನ್ನಾಡಿದೆನು, ಬಾಲಕನ ಸುಖ ದುಃಖಗಳನ್ನು ಅನುಭವಿಸಿದೆನು, ಬಾಲಕನ ಆಲೋಚನೆಗಳನ್ನು ಮಾಡಿಕೊಂಡೆನು. ಪ್ರಾಯಸ್ಥನಾದ ಮೇಲೆ ಬಾಲ್ಯದವುಗಳನ್ನು ಬಿಟ್ಟುಬಿಟ್ಟೆನು."

ಪೌಲನು ಗಲಾತ್ಯದಲ್ಲಿದ್ದ ಈ ಪರಿಪಕ್ವವಿಲ್ಲದ ಶಿಷ್ಯರಿಗೆ ಧರ್ಮಶಾಸ್ತ್ರವು - ಅದರ ಬಾಹ್ಯ ಸಾಮಗ್ರಿಗಳಿಂದ ಕೂಡಿದ್ದಾಗಿ - ಒಂದು ಶಾರೀರಿಕ ಮಟ್ಟದಲ್ಲಿರುತ್ತದೆ ಎಂಬುದನ್ನು ತಿಳಿಯಪಡಿಸುವದಕ್ಕೆ ಪ್ರಯತ್ನಿಸುತ್ತಿದ್ದಾನೆ (ನೋಡಿರಿ ಇಬ್ರಿಯ 9; 10). ಅದರ ಅನೇಕ ಕಟ್ಟಳೆಗಳು ಹಾಗೂ ಯಜ್ಞಗಳು "ಪ್ರಾಥಮಿಕ" ಆಗಿದ್ದವು. ಧರ್ಮಶಾಸ್ತ್ರವು ಒಂದು ಗೋಚರವಾದ, ಚಿತ್ರಾತ್ಮಕ ದೃಷ್ಟಾಂತವಾಗಿದ್ದು ಅದು ಮೆಸ್ಸೀಯನಾದ ಯೇಸುವಿನ ವ್ಯಕ್ತಿತ್ವ ಹಾಗೂ ಸೇವೆಯಲ್ಲಿ ಬರಲಿದ್ದ ಆತ್ಮೀಕ ರಾಜ್ಯ ಮತ್ತು ಯಾಜಕ ಸೇವೆಯ ಕಡೆಗೆ ಎದುರುನೋಡುವಂತೆ ಮಾಡುವದಾಗಿತ್ತು.

ಯೇಸುವು ಬಾವಿಯ ಬಳಿಯಲ್ಲಿ ದೇವರನ್ನು ಆರಾಧಿಸುವದಕ್ಕೆ ಸರಿಯಾದ ಸ್ಥಳ ಯಾವದೆಂದು ತನ್ನನ್ನು ಪ್ರಶ್ನಿಸಿದ ಸಮಾರ್ಯದ ಸ್ತ್ರೀಗೆ ಇದೇ ಪಾಠವನ್ನು ತಿಳಿಸಿದನು. ಅದು ಗೆರಿಜ್ಜೀಮ್ ಪರ್ವತದ ಮೇಲೆಯೋ ಅಥವಾ ಯೆರೂಸಲೇಮಿನಲ್ಲಿಯೋ? ಯೇಸುವಿನ ಉತ್ತರದಲ್ಲಿನ ಮಹತ್ವಪೂರ್ಣತೆಯನ್ನು ಗಮನದಿಂದ ತಪ್ಪಲು ಬಿಡಕೂಡದು: ". . . ಈ ಬೆಟ್ಟಕ್ಕೂ ಹೋಗುವದಿಲ್ಲ, ಯೆರೂಸಲೇಮಿಗೂ ಹೋಗುವದಿಲ್ಲ . . . ಸತ್ಯಭಾವದಿಂದ ದೇವಾರಾಧನೆ ಮಾಡುವವರು *ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ* ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದಿದೆ (ಯೋಹಾನ 4:21-23; ಒತ್ತಿ ಹೇಳಿದ್ದು ನನ್ನದು). ಸರಳವಾಗಿ ಹೇಳುವದಾದರೆ, ಕಾಲ ಮತ್ತು ಸ್ಥಳಗಳಂತಹ ಶಾರೀರಿಕ ಭಾವನೆಗಳು ಏನೇ ಇದ್ದರೂ ಸರಿಯೇ, ನಿಜವಾದ ಆರಾಧಕರು ಪ್ರಾಥಮಿಕವಾದ ಭೌತಿಕ ಮಟ್ಟವನ್ನು ಬಿಟ್ಟು ಮೇಲಕ್ಕೆ ಆತ್ಮೀಕವಾದ ಮಟ್ಟಕ್ಕೆ ಏರುವವರು ಮತ್ತು ದೇವರಿಗೆ ಮೆಚ್ಚಿಕೆಯಾಗುವಂತಹ ನಿಜವಾದ, ಆತ್ಮೀಕ ಯಜ್ಞಗಳನ್ನು ಅರ್ಪಿಸುವರು.

"ಕೆಲಸಕ್ಕೆ ಬಾರದ ದರಿದ್ರಬಾಲಬೋಧೆಗೆ ಮತ್ತೂ ಅಧೀನರಾಗಬೇಕೆಂದು" ಎಂಬುದಾಗಿ ಪೌಲನು ಹೇಳಿದ ಮಾತಿನ ತಾತ್ಪರ್ಯವು ಏನಾಗಿತ್ತು? ಆತನು ಬಾಲ್ಯದಲ್ಲಿ ಸ್ವಾಭಾವಿಕವಾಗಿರುವ ಮಿತಿಗಳನ್ನು ಸೂಚಿಸುತ್ತಿರಬಹುದು. ಬಹುಶಃ ಪವಿತ್ರಾತ್ಮನು ಅವರೊಳಗೆ ಇನ್ನೂ ನೆಲೆಸದೆ ಇದ್ದ ವೇಳೆಯಲ್ಲಿ, ಯೆಹೂದ್ಯರು ಬಾಹ್ಯ ವಿಷಯಗಳಲ್ಲಿಯೇ ಬಂಧಿಸಲ್ಪಟ್ಟಿದ್ದರು ಎಂದು ಹೇಳುತ್ತಿರಬಹುದಾಗಿದೆ. ಅವರ ರೆಕ್ಕೆಯ ಪುಕ್ಕಗಳು ಇನ್ನೂ ಬೆಳೆದಿರಲಿಲ್ಲ, ಮತ್ತು ಅವರು ಭೌತಿಕದ ಕೆಳಮಟ್ಟದ ಮಂಡಲದಲ್ಲಿಯೇ ಸೀಮಿತವಾಗಿದ್ದರು. ಅವರು ಪವಿತ್ರಾತ್ಮನ ಶಕ್ತಿಯಿಂದ ಮಾತ್ರವೇ ಲಭ್ಯವಿರುವಂಥ ಉನ್ನತ ಮಟ್ಟದಲ್ಲಿ ಮೇಲಕ್ಕೆ ಹಾರಾಡುವದಕ್ಕೆ ಇನ್ನೂ ಶಕ್ತರಾಗಿರಲಿಲ್ಲ.

**ವಚನ 4.** ಇಸ್ರಾಯೇಲವು ಧರ್ಮಶಾಸ್ತ್ರಾಧೀನವಾಗಿ ಇನ್ನೂ ಅದರ ಪ್ರಾಥಮಿಕ ಅಥವ ಕೂಸಿನ ಸ್ಥಿತಿಯಲ್ಲಿಯೇ ಇರುವದರ ಬಗ್ಗೆ ಚರ್ಚಿಸಿದವನಾಗಿ, ಪೌಲನು ನಂತರ ಎಲ್ಲಾ ಮಾನವ ಇತಿಹಾಸದ ಸರ್ವೋಚ್ಛತೆಯನ್ನೊಳಗೊಂಡಿರುವ ಸಂಗತಿಯ ಕಡೆಗೆ ತಿರುಗಿಕೊಳ್ಳುತ್ತಾನೆ: **ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು.** ಮೆಸ್ಸೀಯನ ಬರೋಣವು ದೇವರು ಜಗದುತ್ಪತ್ತಿಗೂ ಮುನ್ನ ತನ್ನ ಮನಸ್ಸಿನಲ್ಲಿ ಹೊಂದಿದ್ದ

ಎಲ್ಲದಕ್ಕೂ ಒಂದು ಕಿರೀಟಪ್ರಾಯವಾದ ಘಟನೆಯಾಗಿರುತ್ತದೆ. "ದೇವರು ತನ್ನ ವಾಕ್ಯವನ್ನು ಸಂಪೂರ್ಣವಾಗಿ ತಿಳಿಸುವ . . . ಆ ವಾಕ್ಯವು ಹಿಂದಿನ ಯುಗಗಳಿಂದಲೂ ತಲತಲಾಂತರಗಳಿಂದಲೂ ಮರೆಯಾಗಿತ್ತು; ಈಗಿನ ಕಾಲದಲ್ಲಿ ದೇವಜನರಿಗೆ ತಿಳಿಸಲ್ಪಟ್ಟಿದೆ" ಈ ಕಾರ್ಯವನ್ನು ನೆರವೇರಿಸುವದು ದೇವರ ನಿತ್ಯವಾದ ಉದ್ದೇಶವಾಗಿತ್ತು (ಕೊಲೊಸ್ಸೆ 1:25, 26). ಇದು ನಮ್ಮನ್ನು ಇಲ್ಲಿಗೆ ತಂದು ನಿಲ್ಲಿಸುತ್ತದೆ ಏನೆಂದರೆ "ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆಮಾಡಿಕೊಂಡಿದ್ದನು. ಅದೇನಂದರೆ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬದೇ. ಕ್ರಿಸ್ತನಲ್ಲಿಯೇ ಸಮಸ್ತವು ಒಂದಾಗುವದು" (ಎಫೆಸ 1:10).

"ಕಾಲವು ಪರಿಪೂರ್ಣ" ಎಂಬ ಈ ಭಾವನೆಯು ಹೊಸ ಒಡಂಬಡಿಕೆಯಲ್ಲಿರುವ ಹಲವಾರು ಬೇರೆ ಬೇರೆ ಮಾತುಗಳಿಗೆ ಆಧಾರಭೂತವಾಗಿರುತ್ತದೆ. ಯೇಸುವು ತನ್ನ ಆರಂಭಿಕ ಸೇವೆಯನ್ನು ಪ್ರಾರಂಭಗೊಳಿಸುವ ವೇಳೆ, ಆತನು ಹೀಗೆ ಸಾರಿದನು, "*ಕಾಲ ಪರಿಪೂರ್ಣವಾಯಿತು*, ದೇವರ ರಾಜ್ಯವು ಸಮೀಪಿಸಿತು" (ಮಾರ್ಕ 1:15a). ಆತನು ತನ್ನ ವಿಮೋಚನಾತ್ಮಕ ಮರಣವನ್ನು ಅನುಭವಿಸುವ ಸಮಯಕ್ಕೆ ಸಮೀಪವಾಗುತ್ತಿದ್ದ ಹಾಗೆ, ಆತನು ಹೀಗೆ ಹೇಳಿದನು, "*ನನ್ನ ಕಾಲ* ಸಮೀಪವಾಯಿತು" (ಮತ್ತಾಯ 26:18). ಪೌಲನು ಬರೆದದ್ದೇನೆಂದರೆ ಕ್ರಿಸ್ತನು "ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. ಇದೇ *ತಕ್ಕ ಸಮಯಗಳಲ್ಲಿ* ಹೇಳಬೇಕಾದ ಸಾಕ್ಷಿಯು" (1 ತಿಮೊಥೆ 2:6). ಆತನು ಇದನ್ನು ಸಹ ಹೇಳಿದನು, "ಸುಳ್ಳಾಡದ ದೇವರು ಆ ನಿತ್ಯಜೀವವನ್ನು ಕೊಡುತ್ತೇನೆಂದು *ಅನಾದಿಕಾಲ*ದಲ್ಲಿ ವಾಗ್ದಾನಮಾಡಿ ತನ್ನ *ಕ್ಲುಪ್ತ ಸಮಯದಲ್ಲಿ* ವಾಗ್ದಾನ ನೆರವೇರಿಸಿ ಪ್ರಸಂಗದ ಮೂಲಕ ಪ್ರಕಟಿಸಿದನು" (ತೀತನಿಗೆ 1:2, 3; ASV). ಯೂದನು ಅಪೊಸ್ತಲರ ಮಾತನ್ನು ಉಲ್ಲೇಖಿಸುತ್ತಾನೆ, ಅವರು ಹೀಗೆ ಹೇಳಿದ್ದರು, ". . . ಕುಚೋದ್ಯಗಾರರು ಅಂತ್ಯಕಾಲದಲ್ಲಿ ಇರುವರು" (ಯೂದನು 18). (ಎಲ್ಲಾ ಒತ್ತಿ ಹೇಳಿದ್ದು ನನ್ನದು.)

ಈ ವಾಕ್ಯಭಾಗಗಳಲ್ಲಿ "ಕಾಲ" ಎಂದು ಅನುವಾದಿಸಲ್ಪಟ್ಟ ಪದವು ಕೆಲವು ಸಾರಿ καιρός (*kairos*) ಮತ್ತು ಇನ್ನು ಕೆಲವು ಸಾರಿ *χρόνος* (*chronos*) ಎಂದಾಗಿರುತ್ತದಾದರೂ, ಯೋಚನೆಯು ಒಂದೇ ಆಗಿದೆ: ನಮ್ಮ ದೇವರು ಇತಿಹಾಸದ ದೇವರು. ಆತನು ತನ್ನ ಸ್ವಂತ ನಿತ್ಯವಾದ ಉದ್ದೇಶಕ್ಕನುಗುಣವಾಗಿ ಎಲ್ಲಾ ಮಾನವ ಘಟನೆಗಳ ಗತಿಯ ಬ್ರಹ್ಮಾಂಡದಲ್ಲಿ ಎಲ್ಲಾ ಕಾರ್ಯಗಳನ್ನೆಲ್ಲಾ ಒಟ್ಟಾಗಿ ನಿರ್ವಹಿಸುವ ದೇವರಾಗಿದ್ದಾನೆ. 4ನೇ ವಚನದಲ್ಲಿ ಬಳಸಲಾಗಿರುವ *ಕ್ರೊನೊಸ* ಎಂಬ ಪದವು ಸಾಮಾನ್ಯವಾಗಿ ಕಾಲದ ವಿಚಾರವನ್ನು ಕಾಲಾನುಕ್ರಮವೆಂದು ಸೂಚಿಸುತ್ತದೆ, ಆದರೆ *ಕಾಯಿರೊಸ* ಎಂಬುದು ಸಾಧಕ, ಸಮರ್ಪಕ, ಅಥವಾ ಸೂಕ್ತ (ಸರಿಯಾದ ಸಮಯ) ಆಗಿರುವ ಸಮಯವನ್ನು ಬಣ್ಣಿಸುತ್ತದೆ. *ಕಾಯಿರೊಸ* ಎಂಬುದು ಧಾನ್ಯ ಅಥವಾ ಹಣ್ಣು ಪಕ್ವಗೊಳ್ಳುವ ಸಮಯವನ್ನು ಸೂಚಿಸುವದಕ್ಕೆ ಬಳಸಲ್ಪಡುವ ಪದವಾಗಿದೆ, ಫಲವಿಲ್ಲದ ಅಂಜೂರ ಮರದ ಕಥೆಯಲ್ಲಿರುವ ಪ್ರಕಾರವೇ ("ಅದು ಅಂಜೂರದ ಹಣ್ಣಿನ ಕಾಲವಲ್ಲ"; ಮಾರ್ಕ 11:13). ಒಂದು ಹಣ್ಣು ಕಾಲ, ನೀರು, ಮತ್ತು ಸೂರ್ಯನ ಬಿಸಿಲಿನಂತಹ ಕಾಲದ ಪರಿಣಾಮಗಳನ್ನೊಳಗೊಂಡ ಕೆಲವೊಂದು ಪ್ರಕ್ರಿಯೆಗಳನ್ನು ಹಾದು ಹೋಗುವ ಹೊರತು ಪಕ್ವಗೊಳ್ಳಲು ಸಾಧ್ಯವಿಲ್ಲ ಎಂಬುದು ಪ್ರಕೃತಿಯ ನಿಯಮವಾಗಿರುತ್ತದೆ.

ದೇವರು ತಕ್ಕ ಕಾಲದಲ್ಲಿಯೇ ತನ್ನ ಮಗನನ್ನು ಲೋಕದೊಳಗೆ ಕಳುಹಿಸಿದನು, ಆತನನ್ನು **ಸ್ತ್ರೀಯಲ್ಲಿ ಹುಟ್ಟಿದವನಾಗಿ** ಬರುವಂತೆ ಮಾಡಿದನು. ಈ ಪದಗುಚ್ಛವನ್ನು ಅಕ್ಷರಶಃ

ಭಾವಿಸಿಕೊಳ್ಳಕೂಡದು, ಯಾಕೆಂದರೆ ಇದು ನಮ್ಮ ಮುಂದೆ ಒಂದು ದೊಡ್ಡ ಮರ್ಮವನ್ನು ಮಾತ್ರವಲ್ಲದೆ ನಂಬಿಕೆಯಿಂದ ಸ್ವೀಕರಿಸಿಕೊಳ್ಳತಕ್ಕ ಒಂದು ಪ್ರಾಮುಖ್ಯವಾದ ಸತ್ಯವನ್ನು ಇಡುತ್ತದೆ. ಯೇಸುವು ಮನುಷ್ಯಕುಮಾರ ಮತ್ತು ದೇವಕುಮಾರ ಎರಡೂ ಆಗಿದ್ದನು, ಆತನು ಮನುಷ್ಯಕುಮಾರ ಎಂದು ಕರೆದುಕೊಳ್ಳಲು ಬಯಸುತ್ತಿದ್ದನು. ಈ ಎರಡು ಪದಗಳು "ತಮ್ಮ ತಮ್ಮ ಜಾತಿಗನುಸಾರವಾಗಿ" (ಆದಿಕಾಂಡ 1:24, 25) ಹುಟ್ಟಿಸುವ ನಿಯಮವನ್ನು ದೃಢೀಕರಿಸುತ್ತದೆ. ನಿಜವಾದ ಮಾನವ ತಾಯಿಯ ಮಗುವಾಗಿ, ಯೇಸವು ಒಬ್ಬ ಮನುಷ್ಯನಾಗಿದ್ದನು. ಪೌಲನು ಹೀಗೆ ಬರೆದನು, "ಏಕಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ" (1 ತಿಮೊಥೆ 2:5). ಅದೇ ಸಮಯದಲ್ಲಿ, ಆತನು ದೇವಕುಮಾರನಾಗಿ ದೈವತ್ವವೂ ಆಗಿದ್ದನು (ಯೋಹಾನ 20:28; ಇಬ್ರಿಯ 1:8).

ಮೆಸ್ಸೀಯ ಮತ್ತು ದೇವಕುಮಾರನಾಗಿ, ಯೇಸುವು "ಶರೀರಧಾರಿಯಾಗಿ" ಬಂದನು (1 ಯೋಹಾನ 4:2) ಮತ್ತು ಆದದರಿಂದ ಆತನು ನಿಜವಾದ ಮಾನವ ಜೀವಿಯಾಗಿದ್ದನು. ಆತನು "ಅಪ್ಪಟ ದೇವರು, ಮತ್ತು ಅಪ್ಪಟ ಮನುಷ್ಯನು"[7] ಎಂದು ಬಣ್ಣಿಸಲ್ಪಟ್ಟಿರುತ್ತಾನೆ. ಯೇಸುವು ನರಾವತಾರವೆತ್ತಿದ ದೇವಕುಮಾರನು ಎಂಬುದನ್ನು ತಿರಸ್ಕರಿಸಿದ್ದು ಆತನಿಗಿದ್ದ ಬೃಹತ್ ಪ್ರಮಾಣದ ವಿರೋಧಕ್ಕೆ ಸಾಕ್ಷಿ ಒದಗಿಸುತ್ತದೆ (1 ಯೋಹಾನ 4:1-3; 2 ಯೋಹಾನ 7). ನಾವು ರಕ್ಷಕನು ಕನ್ಯೆಯಲ್ಲಿ ಹೊಂದಿದ ಜನನದ ಮರ್ಮವನ್ನು ವಿವರಿಸುವದಕ್ಕೆ ಎಂದಿಗೂ ಶಕ್ತರಾಗುವದಿಲ್ಲ. ಹಾಗಿದ್ದರೂ, ನಾವು ಪರಿಶುದ್ಧ ಶಾಸ್ತ್ರಗಳಲ್ಲಿ ತಿಳಿಸಲಾಗಿರುವ ಅಪೊಸ್ತಲರ ಹಾಗೂ ಪ್ರವಾದಿಗಳ ಸಾಕ್ಷಿಯನ್ನು ನಂಬುತ್ತೇವೆಂದು ಹೇಳುವದಾದರೆ, ನಾವು ಅದನ್ನು ನಂಬಿಕೆಯಿಂದ ಸ್ವೀಕರಿಸಿಕೊಳ್ಳತಕ್ಕದ್ದು. ನಾವು ಪೂರ್ತಿಯಾಗಿ ಗ್ರಹಿಸಿಕೊಳ್ಳಲಾಗದಂತಹ ಅನೇಕ ವಿಚಾರಗಳನ್ನು ಬೈಬಲ್ ತಿಳಿಸುತ್ತದೆ. ಹೇಗೂ, ನಾವು ಅವುಗಳನ್ನು ಧ್ಯಾನಿಸುತ್ತಲೇ ಇರುವದಾದರೆ, ಕಾಲವು ಕಳೆದಂತೆ ಅವುಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಶಕ್ತರಾಗಬಹುದು. ಯೇಸುವು "ಸ್ತ್ರೀಯಲ್ಲಿ ಹುಟ್ಟಿದವನಾಗಿ" ಬಂದನು, ಆದರೆ ದೇವರ ಪರಿಶುದ್ಧಾತ್ಮನ ಮೂಲಕವಾಗಿ ಗರ್ಭಧರಿಸಲ್ಪಟ್ಟನು, "ಪರಾತ್ಪರನ ಶಕ್ತಿ"ಯಿಂದ ಸಹ ಗರ್ಭಧರಿಸಲ್ಪಟ್ಟನು. ಇದು ದೇವದೂತನು ಮರಿಯಳಿಗೆ ಹೇಳಿದ್ದ ಪ್ರಕಾರವೇ ಸಂಭವಿಸಿತು, ಹೀಗೆ "ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು" (ಲೂಕ 1:35).

ಹಳೆಯ ಒಡಂಬಡಿಕೆಯ ಪ್ರವಾದನೆಯನ್ನು ನೆರವೇರಿಸುವವನಾಗಿ (ಮೀಕನು 5:2), ಯೇಸುವು ಬೇತ್ಲೆಹೇಮಿನಲ್ಲಿ ಹುಟ್ಟಿದನು, ಅದು ದಾವೀದನ ನಗರವಾಗಿತ್ತು (ಮತ್ತಾಯ 2:1-6; ಲೂಕ 2:1-7). "ಬೇತ್ಲೆಹೇಮ್" ಅಂದರೆ "ರೊಟ್ಟಿಯ ಮನೆ" ಎಂದರ್ಥ. ಯೇಸುವು ಅನಂತರದಲ್ಲಿ ಮಾಡಿದ ಬೋಧನೆಗೆ ಸಂಬಂಧ ಪಟ್ಟಂತೆ ಇದು ಆಸಕ್ತಿಕರವಾಗಿರುತ್ತದೆ: "ಪರಲೋಕದಿಂದ ಇಳಿದುಬರುವ ಜೀವವುಳ್ಳ ರೊಟ್ಟಿಯು ನಾನೇ; ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ಬದುಕುವನು. ಮತ್ತು ನಾನು ಕೊಡುವ ರೊಟ್ಟಿ ನನ್ನ ಮಾಂಸವೇ; ಅದನ್ನು ಲೋಕದ ಜೀವಕ್ಕೋಸ್ಕರ ಕೊಡುವೆನು" (ಯೋಹಾನ 6:51). ಬೇತ್ಲೆಹೇಮ ನಗರವು ಪ್ರಧಾನ ಯಾಜಕರ ಹಾಗೂ ಶಾಸ್ತ್ರಿಗಳ ಗಮನಕ್ಕೆ ಬಾರದಂತೆ ತಪ್ಪಿಸಿಕೊಂಡಿರಲಿಲ್ಲ; ಅಲ್ಲಿ ಮಗುವೊಂದರ ಜನನದಿಂದಾಗಿ ಕೆಲವೊಂದು ವಿಚಿತ್ರವಾದ ಹಾಗೂ ಕಳವಳಕಾರಿ ಘಟನೆಗಳು ಸಂಭವಿಸಿದ್ದವೆಂಬುದನ್ನು ಬಲ್ಲವರಾಗಿದ್ದರು (ಮತ್ತಾಯ 2:1-6). ಹೇಗೂ, ಯೇಸುವು ತನ್ನ ಸೇವೆಯನ್ನು ಪ್ರವೇಶಿಸುವ ಹೊತ್ತಿಗೆ, ಈ ಘಟನೆಗಳು ಅವರ ನೆನಪಿನಿಂದ ಮರೆಯಾಗಿ ಹೋಗಿರುವಂತೆ ತೋರುತ್ತದೆ, ಮತ್ತು ಯೆಹೂದ್ಯರು "ಕಾಲದ ಸೂಚನೆಗಳನ್ನು" ಗಮನಿಸದೆ

ಬಿಟ್ಟು ಬಿಟ್ಟಿದ್ದರು (ನೋಡಿರಿ ಮತ್ತಾಯ 16:3). ಯೇಸುವು ಗಲಿಲಾಯದ ನಜರೇತಿನಲ್ಲಿ ಬೆಳೆದಿದ್ದರ ಕಾರಣದಿಂದ ಆತನು ಯೆಹೂದದ ಬೇತ್ಲೆಹೇಮಿನಲ್ಲಿ ನಡೆದ ಘಟನೆಗಳ ಸಂಬಂಧದಿಂದ ಇನ್ನಷ್ಟು ದೂರವಾಗುವಂತಾಗಿತ್ತು (ಯೋಹಾನ 7:41, 42).

ಯೇಸುವು ಈ ಲೋಕದೊಳಗೆ ಬಂದಾಗ, ಆತನು **ಧರ್ಮಶಾಸ್ತ್ರಾಧೀನನಾಗಿ** ಹುಟ್ಟಿದ ಯೆಹೂದ್ಯನಾಗಿದ್ದನು. ಗ್ರೀಕ್ ವಾಕ್ಯದಲ್ಲಿ (γενόμενον ὑπό νόμον, *genomenon hupo nomon*) ನಿರ್ದಿಷ್ಟ ಗುಣವಾಚಿ ("the") ಇರುವದಿಲ್ಲ, ಆದ್ದರಿಂದ ಅದನ್ನು "ಧರ್ಮಶಾಸ್ತ್ರಾಧೀನನಾಗಿ ಹುಟ್ಟಿದನು" ಎಂದು ಅನುವಾದಿಸಲಾಗಿರುತ್ತದೆ. ಹೇಗೂ, NASB ಅನುವಾದಕರು ಪೌಲನ ವಾದದ ಸನ್ನಿವೇಶವನ್ನು ಸರಿಯಾಗಿಯೇ ಅನುಸರಿಸಿದ್ದಾರೆ, ಅದು ಇಬ್ರಿಯ ಶಾಸ್ತ್ರಗಳ ಸುತ್ತ ಕೇಂದ್ರಿಕೃತವಾಗಿದೆ. ಇದು 4:5ರಲ್ಲಿ ಸಹ ಅಷ್ಟೇ ಸತ್ಯವಾಗಿದೆ. F. F. Bruceನು ಹೇಳಿದ್ದೇನೆಂದರೆ "ಧರ್ಮಶಾಸ್ತ್ರಾಧೀನನಾಗಿಯೂ ಬಂದನು" ಎಂಬ ಪದಗುಚ್ಛವು ಹಳೆಯ ಒಡಂಬಡಿಕೆಯು ಯೆಹೂದ್ಯರಿಗೆ ಇನ್ನೂ ಧರ್ಮಶಾಸ್ತ್ರವಾಗಿ ಇದ್ದಂಥ ಕಾಲದಲ್ಲಿ ಯೇಸವು ಜನಿಸಿದನು, ಮತ್ತು ಆತನು ಧರ್ಮಶಾಸ್ತ್ರಾಧೀನವಾಗಿ ಜೀವಿಸುತ್ತಿದ್ದ ಕುಟುಂಬದ ಭಾಗವಾಗಿದ್ದನು ಎಂಬುದನ್ನು ಸೂಚಿಸುತ್ತದೆ. Bruceನು ಹೀಗೆ ಬರೆದನು, "ಯೆಹೂದಿ ತಾಯಿಯಲ್ಲಿ ಜನಿಸಿದವನಾಗಿ, ಯೇಸುವು ಹುಟ್ಟು ಯೆಹೂದ್ಯನಾಗಿದ್ದನು ಮತ್ತು, ಹಾಗಿರುವದರಿಂದ, ὑπὸ νόμον [*hupo nomon*, 'ಧರ್ಮಶಾಸ್ತ್ರಾಧೀನ'] ಆಗಿದ್ದನು. ಆತನು ತನ್ನ ಜನರನ್ನು ಬಿಡುಗಡೆಗೊಳಿಸುವದಕ್ಕೋಸ್ಕರ ಅವರು ಸೆರೆಯಾಳುಗಳಾಗಿ ಹಿಡಿದಿಡಲ್ಪಟ್ಟಿದ್ದಂಥ ಸೆರೆಮನೆಯೊಳಗೆ ಪ್ರವೇಶಿಸಿನು."[8]

ಒಬ್ಬ ಕೂಸಾಗಿ, ಯೇಸುವಿಗೆ ಎಂಟನೆಯ ದಿನದಲ್ಲಿ ಸುನ್ನತಿ ಮಾಡಿಸಲಾಗಿತ್ತು ಮತ್ತು ಅನಂತರದಲ್ಲಿ ಧರ್ಮಶಾಸ್ತ್ರವು ನೆರವೇರುವಂತೆ ದೇವರಿಗೆ ಸಮರ್ಪಿಸಲ್ಪಡುವದಕ್ಕಾಗಿ ದೇವಾಲಯಕ್ಕೆ ಕರೆದೊಯ್ಯಲ್ಪಟ್ಟಿದ್ದನು (ಲೂಕ 2:21-24, 39). ಆತನು ಹನ್ನೆರಡು ವಯಸ್ಸಿನವನಾಗಿದ್ದ ವೇಳೆ ಮತ್ತು ಆತನ ಹೆತ್ತವರು ಆರಾಧನೆಗಾಗಿ ಯೆರೂಸಲೇಮಿಗೆ ಹೋದ ವೇಳೆ, ಆತನು ಅವರ ಜೊತೆಯಲ್ಲಿ ಹೋಗಿದ್ದು ಮಾತ್ರವೇ ಅಲ್ಲ ಆದರೆ - ಆತನ ತಂದೆತಾಯಿಗಳು ನಜರೇತಿಗೆ ಹಿಂದಿರುಗಲು ಪ್ರಯಾಣವನ್ನು ಆರಂಭಿಸಿದ ವೇಳೆ - ಅವರಿಗೆ ತಿಳಿಯದೆಯೇ - ಪಟ್ಟಣದಲ್ಲಿಯೇ ಉಳಿದುಕೊಂಡಿದ್ದನು (ಲೂಕ 2:42-44). ಯೇಸುವಿಗಾಗಿ ಹುಡುಕಾಡಿ ಆತನನ್ನು ಕಂಡುಕೊಂಡ ಬಳಿಕ, ಆತನ ತನ್ನ ಆ ನಡವಳಿಕೆಗೆ ಕೊಟ್ಟ ಉತ್ತರದಿಂದ ಅವರಿಗೆ ಆಘಾತವಾಗಿತ್ತು: "ಆತನು ಅವರಿಗೆ - ನೀವು ನನ್ನನ್ನು ಹುಡುಕಿದ್ದೇನು? ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕಾದದ್ದು ನಿಮಗೆ ತಿಳಿಯಲಿಲ್ಲವೇ?" (ಲೂಕ 2:49). ಇಷ್ಟೊಂದು ಚಿಕ್ಕ ವಯಸ್ಸಿನಲ್ಲಿಯೇ, ದೇವರಿಂದ ಅಭಿಷೇಕಿಸಲ್ಪಟ್ಟವನಾಗಿ ತನ್ನ ಜೀವನದ ವಿಧಿ ಏನೆಂಬುದಾಗಿ ಯೇಸುವಿಗೆ ಗೊತ್ತಿತ್ತೆಂದು ಕಾಣಿಸುತ್ತದೆ. ಹಾಗಿದ್ದಾಗ್ಯೂ, "ಬಳಿಕ ಆತನು ಅವರ ಜೊತೆಯಲ್ಲಿ ನಜರೇತಿಗೆ ಬಂದು ಅವರಿಗೆ ಅಧೀನನಾಗಿದ್ದನು" (ಲೂಕ 2:51a). ಈ ವಿಧದಲ್ಲಿ ಆತನು ವಿಮೋಚನಕಾಂಡ 20:12ರಲ್ಲಿ ತಿಳಿಸಲಾಗಿರುವ ಐದನೆಯ ಆಜ್ಞೆಗೆ ವಿಧೇಯನಾದನು: "ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು." ಯೇಸುವು ಧರ್ಮಶಾಸ್ತ್ರದ ಆಜ್ಞೆಗನುಸಾರವಾಗಿ ಇರುವ ರೀತಿಯಲ್ಲಿ ನಡೆದುಕೊಂಡನು ಮತ್ತು ಬೋಧಿಸಿದನು.

ಯೇಸುವು "ಧರ್ಮಶಾಸ್ತ್ರಾಧೀನನಾಗಿ" ಹುಟ್ಟಿದ್ದು ಮಾತ್ರವೇ ಆಗಿರಲಿಲ್ಲ, ಆದರೆ ಆತನು ಧರ್ಮಶಾಸ್ತ್ರಾಧೀನನಾಗಿ ಮತ್ತು ಧರ್ಮಶಾಸ್ತ್ರಕ್ಕನುಗುಣವಾಗಿ ಮರಣವನ್ನು ಸಹ ಅನುಭವಿಸಿದನು, ಹೀಗೆ ಅನೇಕ ಪ್ರವಾದನೆಗಳನ್ನು ನೆರವೇರಿಸಿದನು.[9] ಈ ವಿಧವಾಗಿ ಧರ್ಮಶಾಸ್ತ್ರವನ್ನು ನೆರವೇರಿಸುವವನಾಗಿ, ಆತನು ತನ್ನ ಮೇಲೆ ಧರ್ಮಶಾಸ್ತ್ರದಲ್ಲಿನ

ಶಾಪವನ್ನು ಹೊತ್ತುಕೊಂಡನು. ಪೌಲನು 3:13, 14ದಲ್ಲಿ ಹೀಗೆ ದೃಢೀಕರಿಸಿದ್ದನು:

> ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು. ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.

ಒಬ್ಬ ಯೆಹೂದ್ಯನು ನಿತ್ಯಜೀವವನ್ನು ಪಡೆಯಬೇಕೆಂದರೆ, ಆತನು ದೇವರು ಕೇಳುವ ನಿಮಯಗಳನ್ನೆಲ್ಲಾ ಸಂಧಿಸುವದು ಅಗತ್ಯವೆಂದು ಧರ್ಮಶಾಸ್ತ್ರವು ಹೇಳುವದಾಗಿತ್ತು (3:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಹೇಗೂ, ಸ್ವತಃ ಯೇಸುವನ್ನೇ ಹೊರತು ಪಡಿಸಿ ಬೇರೆ ಯಾರಿಗೂ ಇದನ್ನು ಮಾಡಲು ಸಾಮರ್ಥ್ಯವಿರಲಿಲ್ಲ. ಪೌಲನು ತಾನು ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಬರೆದದ್ದೇನೆಂದರೆ,

> ಧರ್ಮಶಾಸ್ತ್ರವು ನಮ್ಮ ಶರೀರಾಧೀನಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು. ಏನಂದರೆ ಆತನು ಪಾಪನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು. ಹೀಗಿರಲು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರಾದ ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು [δικαίωμα, *dikaiōma*] ನೆರವೇರುವದಕ್ಕೆ ಮಾರ್ಗವಾಯಿತು (ರೋಮಾ 8:3, 4).

ದೇವರ ದೃಷ್ಟಿಯಲ್ಲಿ ನೀತಿವಂತರು ಆಗುವದಕ್ಕೋಸ್ಕರ ಮಾಡುವದಕ್ಕಾಗದ ಕಾರ್ಯವನ್ನು ದೇವರೇ ತನ್ನ ಮಗನನ್ನು ಶಿಲುಬೆಯ ಮೇಲೆ ವಿಮೋಚನಾತ್ಮಕ ಮರಣ ಹೊಂದುವಂತೆ ಕಳುಹಿಸುವ ಮೂಲಕವಾಗಿ ಮಾಡಿದ್ದನು. ಅಷ್ಟುಮಾತ್ರವಲ್ಲದೆ, ಆತನಿಗೆ ನಾವು ಮೆಚ್ಚಿಕೆಯುಳ್ಳವರಾಗಿರುವಂತೆ ಮಾಡುವ ಪ್ರಯತ್ನಗಳಲ್ಲಿ ನಮ್ಮನ್ನು ಶಕ್ತರನ್ನಾಗಿಸುವದಕ್ಕಾಗಿ ತನ್ನ ಪವಿತ್ರಾತ್ಮನನ್ನು ನಮ್ಮ ಮೇಲೆ ಸುರಿಸಿದನು.

ಯೇಸುವು ಧರ್ಮಶಾಸ್ತ್ರದ ನಿಯಮವನ್ನು ನೆರವೇರಿಸಿದನು ಮತ್ತು ಅದರ ಸ್ಥಾನದಲ್ಲಿ ಒಂದು "ಶ್ರೇಷ್ಠವಾದ ಒಡಂಬಡಿಕೆ"ಯನ್ನು ತಂದನು (ಇಬ್ರಿಯ 7:22). ಈ ಒಡಂಬಡಿಕೆಯು ವಿಶ್ವಾಸಿಗೆ ಕೃಪೆಯ ಮೂಲಕವಾಗಿ ರಕ್ಷಣೆಯನ್ನು ಲಭ್ಯಗೊಳಿಸುವದು ಮಾತ್ರವೇ ಅಲ್ಲ ಆದರೆ ಆತನ ಚಿತ್ತವನ್ನು ರೂಪಾಂತರಗೊಳಿಸುತ್ತದೆ ಮತ್ತು ಆತನಲ್ಲಿ ವಾಸಿಸುವ ಪವಿತ್ರಾತ್ಮನ ಮೂಲಕವಾಗಿ ಆತನನ್ನು ಸ್ಪೂರ್ತಿಗೊಳಿಸುವದಾಗಿದೆ. ನಾವು ದೇವರಿಗೆ ನಮ್ಮ ಸ್ತೋತ್ರ, ಕೃತಜ್ಞತೆ, ಆರಾಧನೆ, ಮತ್ತು ಮಹಿಮೆಯನ್ನು ಆತನಿಗೆ ಸಲ್ಲಿಸಬೇಕು ಯಾಕೆಂದರೆ ಕ್ರೈಸ್ತರು ಮೋಶೆಯ ಧರ್ಮಶಾಸ್ತ್ರಾಧೀನರಾಗಿರುವದಿಲ್ಲ! ಬದಲಾಗಿ, ನಾವು "ಜೀವವನ್ನುಂಟುಮಾಡುವ ಪವಿತ್ರಾತ್ಮನಿಂದಾದ ನಿಯಮವು [ನಮ್ಮನ್ನು] ಪಾಪಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿ [ಸಿದ್ದು]" ಅದರ ಅಧೀನದಲ್ಲಿ ಇದ್ದೇವೆ (ರೋಮಾ 8:2). ಗಲಾತ್ಯದವರಿಗೆ ಬರೆದ ಪತ್ರಿಕೆಯೊಳಗೆ ಅನಂತರದಲ್ಲಿ, ಪೌಲನು ಇದನ್ನು "ಕ್ರಿಸ್ತನ ನಿಯಮ" ಎಂದು ಕರೆದನು, ಅದು ಬೇರೆಯವರ ಕಡೆಗೆ ಹೊಂದಿರುವ ಪ್ರೀತಿಯ ಮೇಲೆ ಆಧಾರವಾಗಿರುತ್ತದೆ (ಗಲಾತ್ಯ 6:2).

**ವಚನ 5.** ಯೇಸುವು **ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ**

ಬಂದನು. "ಎಂತಲೂ" (ἵνα, *hina*) ಎಂಬದು "ಉದ್ದೇಶ, ಲಕ್ಷ್ಯ, ಅಥವಾ ಗುರಿ"ಯನ್ನು ಸೂಚಿಸುವ ಸಂಬಂಧಾವ್ಯಯವಾಗಿ ಕೆಲಸ ಮಾಡುತ್ತದೆ.[10] "ವಿಮೋಚಿಸಬೇಕೆಂತಲು" (ἐξαγοράζω, *exagorazō*) ಎಂಬ ಕ್ರಿಯಾಪದವು ಹಿಂದಿನ ಅಧ್ಯಾಯದಿಂದ ಪುನರಾವರ್ತಿಸಲ್ಪಟ್ಟಿದೆ; ಅದು ಮಾರುಕಟ್ಟೆ ಸ್ಥಳದಿಂದ ತೆಗೆದುಕೊಳ್ಳಲ್ಪಟ್ಟಿದ್ದು ಕೆಲವು ಸಾರಿ ಈಡು ಕೊಟ್ಟು ಗುಲಾಮರಿಗೆ ಬಿಡುಗಡೆಯನ್ನು ಖರೀದಿಸುವದನ್ನು ಸೂಚಿಸುತ್ತದೆ (3:13ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 3:13 ಮತ್ತು 4:5ರಲ್ಲಿ, ಯೇಸುವು ಜನರನ್ನು "ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ" ಮತ್ತು ಸ್ವತಃ "ಧರ್ಮಶಾಸ್ತ್ರಾಧೀನ"ತೆಯಿಂದ ಬಿಡಿಸಿದನು ಎಂದು ಪೌಲನು ಹೇಳುತ್ತಾನೆ. ಆತನು ಮುಖ್ಯವಾಗಿ ಯೆಹೂದಿ ಕ್ರೈಸ್ತರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದು; ಅವರು ಒಂದು ಕಾಲದಲ್ಲಿ ಧರ್ಮಶಾಸ್ತ್ರಾಧೀನರಾಗಿ ಹಾಗೂ ಅದರ ಶಾಪದಡಿಯಲ್ಲಿ ಇದ್ದರು ಆದರೆ ಈಗ, ಕ್ರಿಸ್ತನ ನಿಮಿತ್ತವಾಗಿ, ಅವರು ಹಾಗಿರಲಿಲ್ಲ.[11] ಅನ್ಯಜನಾಂಗದ ಕ್ರೈಸ್ತರು "[ತಮ್ಮ] ವ್ಯರ್ಥವಾದ ನಡವಳಿಕೆಯಿಂದ" ವಿಮೋಚಿಸಲ್ಪಟ್ಟದ್ದರ ಕುರಿತು ಹೊಸ ಒಡಂಬಡಿಕೆಯೊಳಗೆ ಬೇರೆ ಕಡೆಯಲ್ಲಿ ಹೇಳಲಾಗಿರುತ್ತದೆ (1 ಪೇತ್ರ 1:17-19).

5ನೇ ವಚನದಲ್ಲಿ ಯೇಸುವು ಏಕೆ ಬಂದನು ಎಂಬುದರ ಅರ್ಥನಿರೂಪಣೆ ಮಾಡುವಂಥ ಉದ್ದೇಶದ ಎರಡನೆಯ ಪರಿಚ್ಛೇದವು ಯಾವದೆಂದರೆ **ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ** [*ಹಿನಾ*] ಎಂಬುದೆ. ಧರ್ಮಶಾಸ್ತ್ರದ ಅಡಿಯಲ್ಲಿ ದಾಸರಾಗಿದ್ದವರನ್ನು ವಿಮೋಚಿಸಿದ ಬಳಿಕ, ಅವರನ್ನು ದತ್ತುಪಡೆದು ಪುತ್ರರನ್ನಾಗಿ ಸ್ವೀಕರಿಸಿಕೊಳ್ಳುವದು ದೇವರ ಇಂಗಿತವಾಗಿತ್ತು. ಇದು ಈಗಾಗಲೇ ಪೌಲನು 3:23-25 ಮತ್ತು 4:1, 2ರಲ್ಲಿ ಹೇಳಿದ್ದಕ್ಕಿಂತಲೂ ಅಧಿಕ ಸುಸ್ಪಷ್ಟವಾಗಿರುತ್ತದೆ: "ಕ್ರಿಸ್ತ ನಂಬಿಕೆಯು ಬಂದಿರಲಾಗಿ," ಮತ್ತು ಬಾಧ್ಯಸ್ಥನು ಇನ್ನು ಬಾಲಕನಾಗಿರುವದಿಲ್ಲ. "ಕಾಲವು ಪರಿಪೂರ್ಣ" ಆಗಿರುತ್ತದೆ, ಮತ್ತು ಕರ್ತನ ಮರಣ ಮತ್ತು ಪುನರುತ್ಥಾನಗಳ ಮೂಲಕವಾಗಿ ವಿಮೋಚನೆಯು ಜಾರಿಗೆ ಬಂದಿರುತ್ತದೆ (4:4, 5; ನೋಡಿರಿ ರೋಮಾ 4:25). ಈ ಪುತ್ರಸ್ವೀಕಾರವು ಎಲ್ಲರಿಗೂ - ಯೆಹೂದ್ಯರು ಮತ್ತು ಅನ್ಯಜನರು ಇಬ್ಬರಿಗೂ - ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕವಾಗಿ ಲಭ್ಯವಾಗುವಂತೆ ಮಾಡಲಾಗಿರುತ್ತದೆ. ಪೌಲನು 3:26, 27ರಲ್ಲಿ ಹೀಗೆ ಬರೆದನು, "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ" (ನೋಡಿರಿ ಯೋಹಾನ 1:11-13).

**ವಚನ 6.** ಪೌಲನು ಮುಂದುವರೆದು ಹೇಳಿದ್ದೇನೆಂದರೆ, **ನೀವು ಪುತ್ರರಾಗಿರುವದರಿಂದ ದೇವರು . . . ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು.** ಈ ಪುತ್ರಸ್ವೀಕಾರವು ಕೇವಲ ಕಾನೂನಾತ್ಮಕ ವ್ಯವಹಾರಕ್ಕಿಂತಲೂ ಬಹಳ ಹೆಚ್ಚಿನದ್ದಾಗಿದೆ. "ತನ್ನ ಮಗನ ಆತ್ಮನನ್ನು" - ಪವಿತ್ರಾತ್ಮನನ್ನು - ಕೊಡುವದರಲ್ಲಿ ದೇವರು ತನ್ನ ಮಕ್ಕಳಿಗೆ ಶಕ್ತಿಯುತವಾದ ಪ್ರಸನ್ನತೆಯನ್ನು ಅನುಗ್ರಹಿಸಿರುತ್ತಾನೆ. ನಮ್ಮ ತಂದೆಯ ಚಿತ್ತವನ್ನು ಈ ಲೋಕದಲ್ಲಿ ಮಾಡುವಂತೆ ಪವಿತ್ರಾತ್ಮನು - ನಮ್ಮ ತಿಳುವಳಿಕೆಗೆ ಮೀರಿದ ರೀತಿಗಳಲ್ಲಿ - ನಮಗೆ ಸಹಾಯ ಮಾಡುವನು. ನಾವು ದೇವರಿಗೆ ಸಮೀಪವಾಗಿ ಬರುವ ವೇಳೆ ಈ ಮುಂಚೆ ನಮಗೆ ಅಸಾಧ್ಯವಾಗಿದ್ದಂಥ ದಾರಿಯಲ್ಲಿ ನಡೆಯಲು ಸಹಾಯ ಮಾಡುವನು. ದೈವಿಕ ಚಿತ್ತದ ಮೂಲಕವಾಗಿ ಆತನ ದೈವಿಕ ಚೈತನ್ಯವು ನಮಗೆ ಈ ಮುಂಚೆ ಗೊತ್ತಿಲ್ಲದಿದ್ದಂಥ ಮಾರ್ಗದರ್ಶನ ಹಾಗೂ ಬಲವನ್ನು ಅನುಗ್ರಹಿಸುವನು.

ಯೇಸುವಿನ ಮರಣಕ್ಕೆ ಮುಂಚೆ ಪವಿತ್ರಾತ್ಮನ ಶಕ್ತಿಗಳು ಲಭ್ಯವಿರಲೇ ಇಲ್ಲ ಎಂಬಂತೆ ಅಲ್ಲ. ಸುವಾರ್ತೆಯ ಯುಗದ ಮುನ್ನ ದೇವರ ಮನುಷ್ಯರಿಗೆ ವಿಸ್ಮಯಗೊಳಿಸುವಂತಹ ಶಕ್ತಿಗಳು ಕೊಡಲ್ಪಟ್ಟಿದ್ದವು. ಉದಾಹರಣೆಗಳಲ್ಲಿ ಮೋಶೆ ಹಾಗು ಯೆಹೋಶುವ ಮಾಡಿದ ಮಹತ್ಕಾರ್ಯಗಳು, ಸಂಸೋನನ ದೈಹಿಕ ಬಲ, ದಾವೀದನ ಕಾವ್ಯಾತ್ಮಕ ಪ್ರೇರಣೆ, ಮತ್ತು ಸೊಲೊಮೋನನ ಮಹಾ ಜ್ಞಾನ ಇವುಗಳು ಸೇರಿರುತ್ತವೆ. ಎರಡೂ ಒಡಂಬಡಿಕೆಗಳಲ್ಲಿರುವ ವ್ಯಕ್ತಿಗಳಲ್ಲಿ ಹಾಗೂ ಅವರ ಮೂಲಕವಾಗಿ ತೋರಿ ಬಂದ ಅದ್ಭುತಕರವಾದ ಶಕ್ತಿಗಳಿಗೆ ಶಾಸ್ತ್ರಗಳಲ್ಲಿ ಬಹಳಷ್ಟು ಸಾಕ್ಷಿಗಳು ತುಂಬಿರುತ್ತಾವಾದರೂ, ಇಲ್ಲಿ ನಾವು ಅಪೊಸ್ತಲರ ಕೃತ್ಯಗಳು 2ರಲ್ಲಿನ ಪಂಚಾಶತ್ತಮ ದಿನ ಮತ್ತು ಪವಿತ್ರಾತ್ಮನ ಸುರಿಸಲ್ಪಡುವಿಕೆಯ ಮುಂಚೆ ಜೀವಿಸಿದ್ದವರಿಗೆ ಲಭ್ಯವಿಲ್ಲದೆ ಇದ್ದಂಥ ಒಂದು ವಿಶಿಷ್ಟವಾದ ಸಂಗತಿಯ ಕುರಿತು ಮಾತಾಡುತ್ತಿದ್ದೇವೆ.[12]

ಯೋಹಾನ 7:37-39ರಲ್ಲಿ ಯೇಸುವು ನುಡಿದ ಮಾತುಗಳು ಈ ಚರ್ಚೆಗೆ ಪೂರಕವಾಗಿರುತ್ತವೆ:

> ಆ ಜಾತ್ರೆಯ ಮಹಾದಿವಸವಾದ ಕಡೇ ದಿನದಲ್ಲಿ ಯೇಸು ನಿಂತುಕೊಂಡು - ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ. ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು. ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪವಿತ್ರಾತ್ಮವರವನ್ನು ಕುರಿತು ಹೇಳಿದನು; ಆತನು ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದಕಾರಣ ಪವಿತ್ರಾತ್ಮವರವು ಇನ್ನೂ ಬಂದಿದ್ದಿಲ್ಲ.

ಯೋಹಾನ 7:37-39ರಲ್ಲಿ ಗಮನಿಸುವದಾದರೆ, ಯೇಸುವು ಯಾವ ಆತ್ಮನನ್ನು ಕುರಿತು ಹೇಳಿದನೋ ಆ ಆತ್ಮನು ಕೇವಲ ಪವಿತ್ರಾತ್ಮನ ಯಾವದೋ ಒಂದು ಶಕ್ತಿಯಷ್ಟೇ ಆಗಿರಲಿಲ್ಲ, ಆದರೆ ಸ್ವತಃ ಪವಿತ್ರಾತ್ಮನೇ ಆಗಿದ್ದನು. ಆತನು ವಿಶ್ವಾಸಿಯೊಳಗಿಂದ ಹೊರಡುವಂಥ ಪವಿತ್ರಾತ್ಮನ ಜೀವಿತ-ಸಂಬಂಧಿತ ಗುಣಗಳನ್ನು ಕುರಿತು ಮಾತಾಡುತ್ತಿರುವಂತೆ ತೋರುತ್ತದೆ. ವಾಚಕನು ಪವಿತ್ರಾತ್ಮನ ಗುಣಗಳು ಹಾಗೂ ಒಬ್ಬ ವ್ಯಕ್ತಿಯ ಮೂಲಕವಾಗಿ ಆತನು ನಡಿಸುವ ಕ್ರಿಯೆಗಳ ನಡುವಿನ ವ್ಯತ್ಯಾಸವನ್ನು ಕಾಣುವದು ಪ್ರಾಮುಖ್ಯವಾಗಿರುತ್ತದೆ. ಆತನ ಆತ್ಮೀಕ ಸ್ವಭಾವವು - ಮಾನವ ವಿಶ್ವಾಸಿಗೆ ಸಂಬಂಧಪಟ್ಟಂತೆ ಆತನ ಅಸ್ತಿತ್ವದ ಆತ್ಮೀಕ ಮಂಡಲ - ವಿಶ್ವಾಸಿಯ ಆತ್ಮೀಕತೆಯಲ್ಲಿರುತ್ತದೆ. ಈ ವ್ಯತ್ಯಾಸವನ್ನು ಕೊರಿಂಥ ಸಭೆಯಲ್ಲಿ ಉತ್ತಮವಾಗಿ ಗ್ರಹಿಸಿಕೊಳ್ಳಬಹುದಾಗಿದೆ, ಆ ಸಭೆಯವರು "ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ" ಇರುವವರಾಗಿ "ಯಾವ ಕೃಪಾವರದಲ್ಲಿಯೂ [χάρισμα, *charisma*] ಕೊರತೆಯಿಲ್ಲದವರಾಗಿ" ಇದ್ದರು (1 ಕೊರಿಂಥ 1:7). ಹಾಗಿದ್ದರೂ, ಈ ಸಭೆಯು ಆಗಲೂ "ಶರೀರಧೀನಸ್ವಭಾವದ" ಮತ್ತು ಆತ್ಮೀಕವಲ್ಲದ ಸಭೆಯಾಗಿತ್ತು (1 ಕೊರಿಂಥ 3:1-3). ಕೊರಿಂಥದವರಿಗೆ ಬರೆದ ಪತ್ರಿಕೆಯನ್ನು ಸ್ಥೂಲವಾಗಿ ಓದುವದಾದರೆ ಸಭೆಯಲ್ಲಿ ಘೋರವಾದ ಅನೈತಿಕತೆ ಮತ್ತು ಪ್ರಾಕೃತತೆ ಇತ್ತೆಂಬುದು ಕಂಡು ಬರುತ್ತದೆ. ಅದಕ್ಕಿಂತಲೂ ಘೋರವೆಂದರೆ, ಅದರಲ್ಲಿನ ಕೆಲವು ಸದಸ್ಯರು ಅಂಥ ನಡವಳಿಕೆಯನ್ನು ಅನುಮೋದಿಸುತ್ತಿದ್ದರು ಹಾಗೂ ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು (1 ಕೊರಿಂಥ 5:1-6).

4:6ರಲ್ಲಿ, ಪೌಲನು ಪವಿತ್ರಾತ್ಮನು ನಮ್ಮೊಳಗೆ ವಾಸಿಸುವದರ ಕುರಿತಾಗಿ ಮಾತಾಡುತ್ತಿದ್ದಾನೆ - ಆತ್ಮೀಕ ವರಗಳು ಬಾಹ್ಯದಲ್ಲಿ ತೋರ್ಪಡುವಿಕೆಯ ಕುರಿತಲ್ಲ, ಆದರೆ

ಪವಿತ್ರಾತ್ಮನು "ನಮ್ಮ ಹೃದಯಗಳಲ್ಲಿ" ಕಳುಹಿಸಿ ಕೊಡುವಿಕೆಯಾಗಿದೆ. ಪವಿತ್ರಾತ್ಮನ ಈ ವಾಸಿಸುವಿಕೆಯು ನಮ್ಮನ್ನು ಆತ್ಮ ವಾಕ್ಯದ ಮುಖಾಂತರವಾಗಿ ನಮ್ಮ ಪರಲೋಕದ ತಂದೆಯೊಂದಿಗೆ ನಿಕಟವಾದ ಸಂಬಂಧ ಹೊಂದಿರುವ ಪ್ರಜ್ಞೆಗೆ ನಡಿಸುತ್ತದೆ. ದೇವರನ್ನು ಯೇಸುವು ಪರಿಶುದ್ಧವಾದ ಆದಾಗ್ಯೂ ನೋವುದಾಯಕವಾದ ದೇವರ ಚಿತ್ತವನ್ನು ಅಂಗೀಕರಿಸಿಕೊಳ್ಳಲು ಹೋರಾಟವನ್ನು ಅನುಭವಿಸಿದ ವೇಳೆ ಹೇಗೆ ಆಪ್ತವಾದ ರೀತಿಯಲ್ಲಿ ಕರೆದನೋ ಹಾಗೆಯೇ, ನಾವು ಆತನನ್ನು **ಅಪ್ಪಾ ತಂದೆಯೇ** ಎಂದು ಕೂಗುವಂತೆ ಪವಿತ್ರಾತ್ಮನು ನಮಗೆ ಸಹಾಯ ಮಾಡುವನು. ಮಾರ್ಕ 14:36ರಲ್ಲಿ, ಯೇಸುವು ಹೀಗೆ ಕೂಗಿದನು, "ಅಪ್ಪಾ, ತಂದೆಯೇ, ನಿನಗೆ ಎಲ್ಲವೂ ಸಾಧ್ಯ; ಈ ಪಾತ್ರೆಯನ್ನು ನನ್ನಿಂದ ತೊಲಗಿಸು; ಆದರೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ." "ಅಪ್ಪಾ" ಎಂಬ ಪದವು ಅರಾಮಿಕ್ ಭಾಷೆಯದ್ದಾಗಿದೆ, ಇದು ಪ್ರಥಮ ಶತಮಾನದ ವೇಳೆ ಜೀವಿಸಿದ್ದ ಯೆಹೂದ್ಯರ ಭಾಷೆಯಾಗಿತ್ತು.

ಗ್ರೀಕ್ ವಾಕ್ಯದಲ್ಲಿ, **ಕೂಗುವ** (κρᾶζον, *krazon*) ಎಂಬುದು ನಪುಂಸಕ ಲಿಂಗದಲ್ಲಿರುವ ಒಂದು ಕೃದಂತವಾಗಿದ್ದು, ಅದು "ಆತ್ಮ"ನ (πνεῦμα, *pneuma*) ನಪುಂಸಕ ಲಿಂಗದೊಂದಿಗೆ ಒಮ್ಮತದಲ್ಲಿರುತ್ತದೆ. ಈ ಅಂಶವನ್ನು ಬಳಸಿಕೊಂಡು ಯಾವ ವಿಧದಲ್ಲಿಯೂ ಪವಿತ್ರಾತ್ಮನನ್ನು ಅಪವ್ಯಕ್ತೀಕರಣ ಮಾಡಕೂಡದು. ಇದೊಂದು ಮೂಲ ಭಾಷೆಯಲ್ಲಿರುವ ವ್ಯಾಕರಣ ಸಂಬಂಧಿತ ವೈಶಿಷ್ಟ್ಯತೆಯಾಗಿದೆಯಷ್ಟೆ. ವಾಕ್ಯವು ಹೇಳುತ್ತಿರುವದೇನೆಂದರೆ, ಕೂಗು ನಮ್ಮ ಹೃದಯದೊಳಗಿಂದ ಹೊರಡುತ್ತದಾದರೂ, ವಾಸ್ತವಿಕದಲ್ಲಿ ಕೂಗುತ್ತಿರುವದು ಆತ್ಮನೇ ಆಗಿರುತ್ತಾನೆ. ಆತನು ಬೇರೆ ಯಾರೂ ಅಲ್ಲ ಆದರೆ ಪವಿತ್ರಾತ್ಮನೇ, ನಮ್ಮ ಹೃದಯಗಳಲ್ಲಿ ವಾಸಿಸುವವನಾಗಿ, ಪ್ರಾರ್ಥಿಸತಕ್ಕ ರೀತಿಯಲ್ಲಿ ನಮಗೆ ಪ್ರಾರ್ಥಿಸಲು ಆಗದಿರುವ ವೇಳೆ ಆತನು ನಮ್ಮ ಸಹಾಯಕ್ಕೆ ಬರುವವನಾಗಿದ್ದಾನೆ (ನೋಡಿರಿ ರೋಮಾ 8:26, 27).

ಪೌಲನು ನಮ್ಮೊಳಗೆ ಪವಿತ್ರಾತ್ಮನು ವಾಸಿಸುವ ಕುರಿತಾಗಿ ಬೇರೆ ವಾಕ್ಯಭಾಗಗಳಲ್ಲಿ ಮಾತಾಡಿರುತ್ತಾನೆ, ವಿಶೇಷವಾಗಿ ರೋಮಾಪುರದವರಿಗೆ ಬರೆದ ಪತ್ರಿಕೆಯ 8ನೇ ಅಧ್ಯಾಯದಲ್ಲಿ ಮಾತಾಡಿದ್ದಾನೆ. ಆತನು ಹೇಳಿದ್ದೇನೆಂದರೆ, "ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ" (ರೋಮಾ 8:9). ಅದಕ್ಕೆ ತದ್ವಿರುದ್ಧವಾಗಿ, "ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು" (ರೋಮಾ 8:14). "ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು" (ಆತ್ಮವನ್ನು) ಪಡೆಯುವದರ ಬದಲಾಗಿ, ನಾವು "ಮಗನ ಭಾವವನ್ನು [ಆತ್ಮನನ್ನು] ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ, ತಂದೆಯೇ, ಎಂದು ಕೂಗುತ್ತೇವೆ" (ರೋಮಾ 8:15; ESV). ನಮ್ಮೊಳಗೆ ಪವಿತ್ರಾತ್ಮನ ವಾಸಿಸುವಿಕೆಯು ಇರುತ್ತದೆ, ಮತ್ತು ಆತನು ನಮಗೋಸ್ಕರವಾಗಿ "ಮಾತಿಲ್ಲದ ನರಳಾಟದಿಂದ" ವಿಜ್ಞಾಪಿಸುತ್ತಾನೆ (ರೋಮಾ 8:26). ಅಪೊಸ್ತಲನು ದತ್ತು ಹಾಗೂ ಪುತ್ರಸ್ವೀಕಾರದ ಸಾದೃಶ್ಯವನ್ನು ಬಳಸಿಕೊಳ್ಳುತ್ತಾನೆ, ಅದನ್ನು ದೇವಜನರಿಗಾಗುವ ಪುನರುತ್ಥಾನಕ್ಕೆ ಅನ್ವಯಿಸುತ್ತಾನೆ: "ಇದು ಮಾತ್ರವಲ್ಲದೆ ಪ್ರಥಮ ಫಲವಾಗಿರುವ ಪವಿತ್ರಾತ್ಮವರವನ್ನು ಹೊಂದಿದ ನಾವಾದರೂ ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರುನೋಡುತ್ತಾ ನಮ್ಮೊಳಗೆ ನರಳುತ್ತೇವೆ" (ರೋಮಾ 8:23; NIV).[13]

1 ಕೊರಿಂಥದಲ್ಲಿ, ಪೌಲನು ನಮ್ಮೊಳಗೆ ಪವಿತ್ರಾತ್ಮನು ವಾಸಿಸುವದರ ಕುರಿತು ಮಾತಾಡಿದನು. ಆತನು ಕೊರಿಂಥದ ಸಭೆಗೆ ಹೀಗೆ ಕೇಳಿದನು, "ದೇವರಿಂದ ದೊರಕಿ

ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಂಬದು ನಿಮಗೆ ತಿಳಿಯದೋ?" (1 ಕೊರಿಂಥ 6:19). ದೇವರ ಆಲಯ ಮತ್ತು ಕ್ರಿಸ್ತನ ದೇಹ ಎರಡೂ ಆಗಿರುವಂಥ ಸಭೆಯಲ್ಲಿ (2 ಕೊರಿಂಥ 6:16; ಎಫೆಸ 1:22, 23) ಪವಿತ್ರಾತ್ಮನು ನೆಲೆಸುವಾಗ (1 ಕೊರಿಂಥ 3:16), ಆತನು ದೇಹದಲ್ಲಿರುವಂಥ ಅಂಗಗಳಲ್ಲಿ ಸಹ ವಾಸಿಸಬಾರದೋ (1 ಕೊರಿಂಥ 12:13, 24-27)? ಈ ವಾಕ್ಯಭಾಗಗಳೊಳಗೆ ಯಾವದೊಂದದರಲ್ಲಿಯೂ ಪೌಲನು ದೈವಶಾಸ್ತ್ರವನ್ನು ಪರಿಶೋಧಿಸುತ್ತಿಲ್ಲ. ಬದಲಾಗಿ, ಆತನು ಕ್ರಿಸ್ತನ ಸಂಗಡದ ನಮ್ಮ ಸಂಬಂಧ, ನಮ್ಮ ಆತ್ಮೀಕ ವಿಚಾರ ನಮೂನೆಗಳು, ಮತ್ತು ಆತ್ಮಾನುಸಾರವಾದ ನಮ್ಮ ನಡೆಯ ಕುರಿತಾಗಿ ಹೇಳುತ್ತಿದ್ದಾನೆ.

ಪವಿತ್ರಾತ್ಮನ ದೇವರ ಮಗುವಿನಲ್ಲಿ ವಾಕ್ಯದ ಕುರಿತಾಗಿ ಒಬ್ಬನಿಗಿರುವ ಜ್ಞಾನ ಅಥವಾ ಪ್ರಜ್ಞೆಯ ಮೂಲಕವಾಗಿ ನೆಲೆಸುವದಿಲ್ಲ. ಈ ಸತ್ಯವು ರೋಮಾ 8:16ರಲ್ಲಿ ಪ್ರತಿಫಲಿಸಲ್ಪಟ್ಟಿರುತ್ತದೆ: "ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ." ನಮ್ಮ ಆತ್ಮನ ಯಾವದೇ ಸಾಕ್ಷಿಯು ನಾವು ಯಾವದನ್ನು ನಂಬುತ್ತೇವೋ ಅದರ ಕುರಿತಾಗಿರುವ ದೃಢವಾದ, ವಸ್ತುನಿಷ್ಠ ಮನವರಿಕೆಯಿಂದ ಕಲ್ಪಸಿಕೊಳ್ಳಲ್ಪಡುವದಕ್ಕೆ ಸಾಧ್ಯ. ಆದದರಿಂದ, ಪೌಲನು ಇಲ್ಲಿ ವಿವರಿಸುತ್ತಿರುವದು ಆತ್ಮನು ನಮ್ಮ ಕೂಡ ಸಾಕ್ಷಿ ಹೇಳುವದರ (συμμαρτυρέω, *summartureō*) ಕುರಿತಾಗಿಯೇ ಎಂಬುದು ತಾರ್ಕಿಕವೆಂದು ಕಾಣಿಸುತ್ತದೆ.

ಪವಿತ್ರಾತ್ಮನ ವ್ಯಕ್ತಿತ್ವ ಹಾಗೂ ಕಾರ್ಯವಿಲ್ಲದಿದ್ದರೆ, ಧರ್ಮಶಾಸ್ತ್ರಾಧೀನನಾಗಿರುವ ಭಕ್ತಿಯುಳ್ಳ ಯೆಹೂದ್ಯನು ಅದನ್ನು ಅನುಸಿರುವದಕ್ಕೆ ಹೇಗೆ ಕಷ್ಟಪಡುತ್ತಿದ್ದನೋ ಅದೇ ರೀತಿಯಲ್ಲಿ ಕ್ರೈಸ್ತೀಯ ಜೀವಿತವನ್ನು ನಡಿಸುವದು ಕಷ್ಟಕರವಾಗುತ್ತದೆ. Bruceನು ಹೀಗೆ ವ್ಯಾಖ್ಯಾನಿಸಿದನು,

> ಧರ್ಮಶಾಸ್ತ್ರವು ದೇವರ ಚಿತ್ತಕ್ಕೊಳಪಡಬೇಕೆಂದು ಕೇಳಿದ್ದೆಲ್ಲವೂ ಈಗ ಪವಿತ್ರಾತ್ಮನ ನಿಯಂತ್ರಣದಲ್ಲಿರುವ ಜೀವಿತಗಳಲ್ಲಿ ಸಾಕಾರಗೊಳ್ಳುತ್ತಿದೆ ಮತ್ತು ಹಳೆಯ ವ್ಯವಸ್ಥೆಗೆ ಹೊಂದಿದ್ದ ಗುಲಾಮಗಿರಿಯಿಂದ ಬಿಡಿಸಲ್ಪಡುತ್ತಿದ್ದಾರೆ. ದೇವರ ಆಜ್ಞೆಗಳು ಈಗ ದೇವರ ಶಕ್ತಗೊಳಿಸುವಿಕೆಗಳಾಗಿವೆ.

ಬಳಿಕ ಆತನು ಒಂದು ಹಳೇ ಸಂಕೀರ್ತನೆಯ ಚರಣವೊಂದನ್ನು ಉಲ್ಲೇಖಿಸುತ್ತಾನೆ:

> ಓಡು . . . ಮತ್ತು ದುಡಿ, ಎಂದು ಧರ್ಮಶಾಸ್ತ್ರವು ಆಜ್ಞಾಪಿಸುತ್ತದೆ,
> ಆದಾಗ್ಯೂ ನನಗೆ ಕಾಲನ್ನಾಗಲಿ ಅಥವಾ ಕೈಗಳನ್ನಾಗಲಿ ಸಹ ಕೊಡುವದಿಲ್ಲ;
> ಆದರೆ ಸುವಾರ್ತೆಯು ತರುವ ಅತಿ ಮಧುರ ಸುದ್ದಿಯು,
> ಅದು ನನಗೆ ಹಾರುವಂತೆ ಮಾಡುತ್ತದೆ, ಮತ್ತು ನನಗೆ ರೆಕ್ಕೆಗಳನ್ನು ಕೊಡುತ್ತದೆ.[14]

**ವಚನ 7.** ಇಸ್ರಾಯೇಲವು ತನ್ನ ಅಪ್ರಬುದ್ಧತೆಯ ಸ್ಥಿತಿಯಲ್ಲಿರುವದರ ಕುರಿತಾದ ಚರ್ಚೆಯನ್ನು ಪೌಲನು ಒಂದು ಮುಕ್ತಾಯಕ್ಕೆ ತರುತ್ತಾನೆ. ಈಗ ಬಾಧ್ಯಸ್ಥನು "ತಂದೆಯು ನೇಮಿಸಿದ ದಿನದ" (4:2) ಪ್ರಕಾರವಾಗಿ ಪ್ರಾಯಕ್ಕೆ ಬಂದಿರುವನು ಮತ್ತು ಜವಾಬ್ದಾರಿಕೆಯ ವಯಸ್ಸನ್ನು ತಲುಪಿರುವದರಿಂದ, ಆತನು ಇನ್ನು ಮೇಲೆ "ಪಾಲಕರು ಮತ್ತು ನಿರ್ವಾಹಕರ" ಅಧೀನದಲ್ಲಿರುವದಿಲ್ಲ ಮತ್ತು 3:25ರಲ್ಲಿನ "ಕಾಯುವ ಆಳಿನ" ಸೇವೆಗಳನ್ನು ತಾನೇ ನಿರ್ವಹಿಸಬಲ್ಲನು. ಈ ಕಾಯುವ ಆಳು ಬಹಳಷ್ಟು ಮಿತಿಗಳನ್ನು ಮತ್ತು ನಿಯಂತ್ರಣಗಳನ್ನು,

ಅದರ "ನೀನು ಮಾಡಬೇಕು" ಮತ್ತು "ನೀನು ಮಾಡಬಾರದು" ಎಂಬವುಗಳನ್ನೊಳಗೊಂಡ ಧರ್ಮಶಾಸ್ತ್ರವನ್ನು ಪ್ರತಿನಿಧಿಸುತ್ತಾನೆ. ಇವುಗಳ ಅಗತ್ಯವು ದೇವರ ಮಗುವಿಗೆ ಇನ್ನು ಅಗತ್ಯವಿರುವದಿಲ್ಲ. ಪುತ್ರಸ್ವೀಕರಾದ ಆತ್ಮನು ಸುರಿಸಲ್ಪಡುವ ಮೂಲಕ, ಆತನು ಜವಾಬ್ದಾರಿಯುತ ನಡವಳಿಕೆಯ ವಯಸ್ಸನ್ನು ತಲುಪಿದ್ದಾನೆ ಮತ್ತು ತಾನು ಯಾವದ ಪರಿಸ್ಥಿತಿಯನ್ನು ಎದುರಿಸಿದರೂ ತನ್ನ ತಂದೆಗೆ ಮೆಚ್ಚಿಕೆಯಾಗುವಂತಹ ಪ್ರಾಯಸ್ಥರ ತೀರ್ಮಾನಗಳನ್ನು ಮಾಡುವದಕ್ಕೆ ಶಕ್ತನಾಗಿದ್ದಾನೆ.

ಪರಿಪಕ್ವತೆಯ ವಯಸ್ಸಿಗೆ ಬರುವಿಕೆಯ ಭಾವನೆಯನ್ನು ಕಾಲಹಂಚಿಕೆಯ ವ್ಯವಸ್ಥೆಯೊಂದಿಗೆ ವ್ಯಾಖ್ಯಾನಿಸತಕ್ಕದ್ದು. ಈ ಸನ್ನಿವೇಶದಲ್ಲಿ, ಪೌಲನು ವ್ಯಕ್ತಿಗತವಾಗಿ ಪ್ರಾಯಕ್ಕೆ ಬರುವದರ ಕುರಿತು ಮಾತಾಡುತ್ತಿಲ್ಲ, ಆದರೆ ಇಸ್ರಾಯೇಲ್ಯರ ಇತಿಹಾಸದಲ್ಲಿನ ನಿರ್ದಿಷ್ಟವಾದ ಯುಗದ ಕುರಿತು ಮಾತಾಡುತ್ತಿದ್ದಾನೆ. ಆತನು "ಕಾಲವು ಪರಿಪೂರ್ಣವಾದಾಗ" (4:4) ಎಂಬುದರ ಕುರಿತು ಮಾತಾಡುತ್ತಿದ್ದಾನೆ, ಆ ವೇಳೆಯಲ್ಲಿ ದೇವರು ಪವಿತ್ರಾತ್ಮನ ಶಕ್ತಗೊಳಿಸುವ ಶಕ್ತಿಯನ್ನು ಪರಿಚಯಿಸುವಂತೆ ಜನಾಂಗದ ಸಾಂಘೀಕ ಸಮೂಹದ ಮೇಲೆ ಕೆಲಸ ಮಾಡಿದನು.[15] ಆತನು "ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರಾದ ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು [*ಡಿಕಾಯಿಯೋಮಾ*] ನೆರವೇರುವದಕ್ಕೆ" ಮಾರ್ಗವಾಗಲಿ ಎಂಬುದಕ್ಕಾಗಿ ಇದನ್ನು ಮಾಡಿದನು (ರೋಮಾ 8:4). ಈ ಆಶೀರ್ವಾದಗಳು "ಮೊದಲು ಯೆಹೂದ್ಯರಿಗೆ ಆಮೇಲೆ ಗ್ರೀಕರಿಗೆ" (ರೋಮಾ 1:16; ನೋಡಿರಿ 2:9, 10). ಪೌಲನು ತಾನು ಮಾಡಿದ ಸುವಾರ್ತಾಸೇವೆಯಲ್ಲಿ ಈ ನಿಯಮವನ್ನು ನಿರಂತರವಾಗಿ ಅನುಸರಿಸಿದನೆಂಬುದನ್ನು ಅಪೊಸ್ತಲರ ಕೃತ್ಯಗಳು ಪುಸ್ತಕವು ತೋರಿಸಿ ಕೊಡುತ್ತದೆ.

**ಹೀಗಿರುವಲ್ಲಿ** ಎಂಬ ಪದವು ಮುಂಚಿನ ವಚನದಲ್ಲಿ ಗಲಾತ್ಯದವರು ಪವಿತ್ರಾತ್ಮನನ್ನು ಸ್ವೀಕರಿಸಿಕೊಂಡದರೊಂದಿಗೆ ಜೋಡಿಸುತ್ತದೆ. ಪವಿತ್ರಾತ್ಮನು ವಿಶ್ವಾಸಿಗೆ ಸ್ವಾತಂತ್ರ್ಯವನ್ನು ತರುವವನಾದ್ದರಿಂದ, **ಇನ್ನು ನೀನು ದಾಸನಲ್ಲ, ಮಗನಾಗಿದ್ದೀ. ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ** ಎಂದು ಪೌಲನು ಹೇಳಿದನು. ಪ್ರಾಚೀನ ಜಗತ್ತಿನಲ್ಲಿ ದಾಸತ್ವವು ಸಾಮಾನ್ಯವಾಗಿತ್ತಾದರೂ, ವಿಶೇಷವಾಗಿ ಮೂಡಣ ಭಾಗದ ಹತ್ತಿರದಲ್ಲಿ ಸಾಮಾನ್ಯವಾಗಿದ್ದರಿಂದ, ಸ್ವಾತಂತ್ರ್ಯವು ಸಂಪಾದಿಸಿಕೊಳ್ಳಲು ಸಾಧ್ಯವಿರುವವರೆಲ್ಲರೂ ನಿಶ್ಚಯವಾಗಿ ಅದನ್ನು ಪಡೆಯಲು ಇಷ್ಟಪಡುತ್ತಿದ್ದರು (ನೋಡಿರಿ ಯೋಹಾನ 8:31-36).[16] ಗ್ರೀಕರೊಳಗೆ, ಒಬ್ಬ ಸೋಗಿನಿಂದ ಕೂಡಿದ "ಧಾರ್ಮಿಕ ವಿಧಿಯ ವಿಮೋಚನೆ"[17] ಮೂಲಕವಾಗಿ ಬಿಡುಗಡೆಗೊಳ್ಳಬಹುದಿತ್ತು, ದೆಲ್ಫಿಯ ಅಪೊಲ್ಲೊವಿನ ದೇವಾಲಯದಲ್ಲಿ ನಡೆದ ಪ್ರಕಾರವಾಗಿಯೇ. ಪೌಲನು ಈ ಪತ್ರಿಕೆಯನ್ನು ಬರೆಯುತ್ತಿರುವ ವೇಳೆ ಸ್ವಾತಂತ್ರ್ಯ Vs ದಾಸತ್ವದ ವಿಚಾರವು ಆತನ ಮನಸ್ಸಿನಿಂದ ಎಂದಿಗೂ ದೂರದಲ್ಲಿರಲಿಲ್ಲ.

ಇಲ್ಲಿ ಅಪೊಸ್ತಲನ ಮುಖ್ಯ ಗಮನವು ರಾಜಕೀಯ ಸ್ವಾತಂತ್ರ್ಯವಾಗಿರಲಿಲ್ಲ. ಬದಲಾಗಿ, ಆತನು ಧರ್ಮಶಾಸ್ತ್ರದಿಂದ ಮತ್ತು ನೀತಿಯುಳ್ಳ ದೇವರ ದೃಷ್ಟಿಯಲ್ಲಿ ಒಬ್ಬನು ನೀತಿವಂತವನಾಗುವದಕ್ಕೆ ವಿಧೇಯತೆಯನ್ನು ಅಗತ್ಯವೆನ್ನುವ ಅಂತಹ ಯಾವದೇ ವ್ಯವಸ್ಥೆಯಿಂದ ಸಿಕ್ಕುವ ಆತ್ಮೀಕ ಸ್ವಾತಂತ್ರ್ಯತೆಯ ಬಗ್ಗೆ ಮಾತಾಡುತ್ತಿದ್ದಾನೆ. ಪೌಲನು ವಿಮೋಚನೆ ಮತ್ತು ಬಿಡುಗಡೆಯ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನು, ಅವೆರಡೂ ಕ್ರಿಸ್ತನ ಬರುವಿಕೆ ಮತ್ತು ಆತನು ಮನುಷ್ಯ ಪುತ್ರರ ಮಧ್ಯದಲ್ಲಿ ನಡಿಸುವ ಧ್ಯೇಯದೊಂದಿಗೆ ಜೋಡಿಸಲ್ಪಟ್ಟಿದ್ದವು. ಹೇಗೂ, ಇದರರ್ಥವು ಕ್ರೈಸ್ತರು ಹೊಣೆಗಾರಿಕೆಗಳಿಂದ

ಮುಕ್ತರಾಗಿದ್ದಾರೆನೋ ಎಂಬಂತೆ ಆಗಿರುವದಿಲ್ಲ. ಪಾಪ ಮತ್ತು ಧರ್ಮಶಾಸ್ತ್ರದ ನೊಗದಿಂದ ಬಿಡಿಸಲ್ಪಟ್ಟಿರುವವರಿಗಾದರೋ, ಪೌಲನು ಹೀಗೆ ಹೇಳಿದನು, "ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃಪೂರ್ವಕವಾಗಿ ಅಧೀನರಾದದರಿಂದಲೂ ಪಾಪದಿಂದ ಬಿಡುಗಡೆಯನ್ನು ಹೊಂದಿ ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ" (ರೋಮಾ 6:17b, 18). ಹೊಸ ಜನ್ಮದ ಮೂಲಕವಾಗಿ ಪವಿತ್ರಾತ್ಮನ ವರದಾನವನ್ನು ಅನುಭವಿಸಿರುವ ದೇವರ ಮಗುವು, ವಿಧೇಯತೆ*ಯಿಂದ* ಬಿಡಿಸಲ್ಪಟ್ಟಿರುವದಿಲ್ಲ ಆದರೆ ಬದಲಾಗಿ "ಮನಃಪೂರ್ವಕವಾಗಿ ಅಧೀನವಾಗುವ" ಮೂಲಕ ವಿಧೇಯತೆ*ಗೋಸ್ಕರ* ಬಿಡಿಸಲ್ಪಟ್ಟಿದ್ದಾನೆ. ಆತನು ಪಾಪ ಮತ್ತು ಧರ್ಮಶಾಸ್ತ್ರದ ನೊಗವನ್ನು ಕೊಟ್ಟು ಯೇಸುವಿನ ಹಗುರವಾದ ನೊಗವನ್ನು ತೆಗೆದುಕೊಂಡಿರುತ್ತಾನೆ, ಆ ಯೇಸುವು ಅವನ ಚಿತ್ತವನ್ನು ಸೆರೆ ಹಿಡಿದು ಆತನ ರಾಜ್ಯದ ಸೇವೆಯಲ್ಲಿ ಮನಃಪೂರ್ವಕವಾಗಿ ವಿಧೇಯನಾಗುವಂತೆ ನೇಮಿಸಿಕೊಂಡಿರುತ್ತಾನೆ (ಮತ್ತಾಯ 11:28–30). ಯೇಸುವಿನ ಪ್ರೀತಿಯುಳ್ಳ, ಕೃಪೆಯುಳ್ಳ ಸಾರ್ವಭೌಮತೆಯ ಮುಂದೆ ಮೊಣಕಾಲೂರುವದರಲ್ಲಿಯೇ ನಾವು ಮತ್ತಾಯ 11 ಮತ್ತು ಗಲಾತ್ಯ 4ರಲ್ಲಿ ಚರ್ಚಿಸಲಾಗಿರುವ ಸ್ವಾತಂತ್ರ್ಯವನ್ನು ಅನುಭವಿಸುತ್ತೇವೆ.

ಪುತ್ರಸ್ವೀಕಾರದ ಕೃಪೆಯೊಂದಿಗೆ ಕೂಡಿ ಬರುವ ಮತ್ತೊಂದು ಉದಾರ ಹೃದಯದ ಆಶೀರ್ವಾದವು ಬಾಧ್ಯತೆಯನ್ನೊಳಗೊಂಡದ್ದಾಗಿದೆ: **ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ**. "ಬಾಧ್ಯತೆ" (κληρονομία, *klēronomia*) ಮತ್ತು "ಬಾಧ್ಯನು" (κληρονόμος, *klēronomos*) ಎಂಬ ಪದಗಳ ಪ್ರಾಥಮಿಕ ಹಿನ್ನಲೆಯು ಏನೆಂದರೆ ಇಸ್ರಾಯೇಲ್ಯರು ಐಗುಪ್ತ ದೇಶದ ದಾಸತ್ವವೆಂಬ ನೊಗದಲ್ಲಿ ಸಿಕ್ಕಿ ನರಳಾಡುವ ವೇಳೆ, ಅವರಿಗೆ ದೇವರು ಕಾನಾನ್ ದೇಶವನ್ನು ಕೊಡುವೆನೆಂದು ವಾಗ್ದಾನ ಮಾಡಿದನು (ವಿಮೋಚನಕಾಂಡ 2:24; 3:17). ದೇವರು ತನ್ನ "ಚೊಚ್ಚಲಮಗ" ಇಸ್ರಾಯೇಲ್ (ವಿಮೋಚನಕಾಂಡ 4:22) ಜನವನ್ನು ಒಂದು ಬಾಧ್ಯತೆಯನ್ನು ನೀಡಿ ಆಶೀರ್ವದಿಸುವದಕ್ಕೋಸ್ಕರ ದಾಸತ್ವದೊಳಗೆ ಹೊರಗೆ ಕರೆದನು. ಮೂಲತಃ, ದೇವರು ಅಬ್ರಹಾಮನಿಗೆ ಆತನ ಸಂತತಿಯವರು "ದಾಸರಾಗುವರು. ನಾನೂರು ವರುಷ ಆ ದೇಶದವರಿಂದ ಬಾಧೆಪಡುವರು" ಎಂದು ಹೇಳಿದನು. ಆ ಕಾಲದ ಬಳಿಕ, ಅವರು ಬಿಡುಗಡೆಗೊಳಿಸಲ್ಪಡುವರು ಮತ್ತು ಕಾನಾನ್ ದೇಶವನ್ನು ಬಾಧ್ಯವಾಗಿ ಪಡೆಯಲು ಹಿಂದಿರುಗುವಂತೆ ಅನುಮತಿಸಲ್ಪಡುವರು (ಆದಿಕಾಂಡ 15:13–21). ಈ ದೇಶವನ್ನು "ಚೀಟು"[18] ಹಾಕಿ ವಿಭಾಗಿಸಬೇಕಾಗಿತ್ತು. ದೇವರು ಮೋಶೆಗೆ ಹೀಗೆ ಅಪ್ಪಣೆ ಕೊಟ್ಟನು, "ಪ್ರತಿಯೊಂದು ಕುಲದ ಪಿತೃವಿನ ಹೆಸರನ್ನು ಬರೆದು ಚೀಟುಹಾಕಿ ಆಯಾ ಕುಲಕ್ಕೆ ಸ್ವಾಸ್ಥ್ಯವನ್ನು ಗೊತ್ತುಮಾಡಬೇಕು. ಹೆಚ್ಚು ಮಂದಿಯುಳ್ಳ ಕುಲಕ್ಕಾಗಲಿ ಕಡಿಮೆಯಾದ ಕುಲಕ್ಕಾಗಲಿ ಚೀಟು ಬಂದ ಪ್ರಕಾರವೇ ಸ್ವಾಸ್ಥ್ಯವನ್ನು ಗೊತ್ತುಮಾಡಬೇಕು" (ಅರಣ್ಯಕಾಂಡ 26:55, 56). ಇದು ಹೇಗೆ ಮಾಡಲ್ಪಟ್ಟಿತೆಂಬುದು ನಿಶ್ಚಿತವಾಗಿ ತಿಳಿದಿರುವದಿಲ್ಲ, ಆದರೆ ಅಂಥ ವಿಷಯಗಳಲ್ಲಿ ಅಂತಿಮ ತೀರ್ಮಾನವು ದೇವರಿಂದ ಮಾಡಲ್ಪಡುತ್ತಿತ್ತು. ಇದು ಜ್ಞಾನೋಕ್ತಿ 16:33ರಿಂದ ಸ್ಪಷ್ಟಗೊಳ್ಳುತ್ತದೆ: "ಉಡಿಯಲ್ಲಿ ಚೀಟು ಹಾಕಬಹುದು; ಅದರ ತೀರ್ಪು ಯೆಹೋವನದೇ."

ಹೊಸ ಒಡಂಬಡಿಕೆಯಲ್ಲಿ ಬಾಧ್ಯಸ್ಥರಿಗೆ ದೊರಕುವ ಬಾಧ್ಯತೆಯು ಆತ್ಮೀಕ ಮತ್ತು ಪರಲೋಕಿಕವಾದದ್ದು. ಪೌಲನು ಇದನ್ನು 5:21ರಲ್ಲಿ "ದೇವರ ರಾಜ್ಯ" ಎಂದು ಕರೆಯುತ್ತಾನೆ (ನೋಡಿರಿ 1 ಕೊರಿಂಥ 15:50; ಎಫೆಸ 5:5). ಪೇತ್ರನು ಇದನ್ನು "ಲಯ ಕಳಂಕ ಕ್ಷಯಗಳಿಲ್ಲದ ಬಾಧ್ಯತೆ" ಎಂದು ಕರೆಯುತ್ತಾ "ಆ ಬಾಧ್ಯತೆಯು ನಿಮಗೋಸ್ಕರ ಪರಲೋಕದಲ್ಲಿ ಇಟ್ಟಿರುವದು"

ಎಂದು ಹೇಳುತ್ತಾನೆ (1 ಪೇತ್ರ 1:4).

ಯಾವನಾದರೂ "ದೇವರ ಮೂಲಕ ಬಾಧ್ಯನು" ಎಂಬ ಪದಗುಚ್ಛದ ಅರ್ಥವೇನೆಂದು ಗೊಂದಲಕ್ಕೀಡಾಗಿರುವದಾದರೆ, ಅತಿ ಪ್ರಾಚೀನ ಹಸ್ತಪ್ರತಿಗಳನ್ನು ನಕಲು ಮಾಡಿದವರಿಗೆ ಸಹ ಇದನ್ನು ಅರ್ಥಮಾಡಿಕೊಳ್ಳುವದಕ್ಕೆ ಸಮಸ್ಯೆಗಳಾಗಿದ್ದವು ಎಂಬದನ್ನು ತಿಳಿದರೆ ಆತನಿಗೆ ಆದರಣೆಯಾಗಬಹುದು. ಖಂಡಿತವಾಗಿಯೂ "ದೇವರ ಮೂಲಕ" ಎಂಬುದು ಉತ್ತಮವಾಗಿರುತ್ತದೆ. ಹೇಗೂ, ಎರಡನೆಯ ಶತಮಾನದ ಕಡೇ ಭಾಗದಿಂದ ಒಂಭತ್ತನೆಯ ಶತಮಾನದ ತನಕದ ಮತ್ತು ಅದರಾಚೆಯ ಹಸ್ತಪ್ರತಿಗಳಲ್ಲಿ, ಕನಿಷ್ಠ ಎಂಟು ವ್ಯತ್ಯಾಸಗಳು ಕಂಡು ಬರುತ್ತವೆ: "ದೇವರಿಂದ," "ದೇವರ ಲೆಕ್ಕದಲ್ಲಿ," "ಕ್ರಿಸ್ತನ ಮೂಲಕ," "ಕ್ರಿಸ್ತ ಯೇಸುವಿನ ಮುಖಾಂತರ," "ಕ್ರಿಸ್ತ ಯೇಸುವಿನಲ್ಲಿ ದೇವರ ಮೂಲಕವಾಗಿ," ಮತ್ತು "ಒಂದೆಡೆ ದೇವರಿಂದ ಹಾಗೂ ಮತ್ತೊಂದೆಡೆ ಕ್ರಿಸ್ತನ ಜೊತೆಯಲ್ಲಿ ಬಾಧ್ಯರು." ಈ ಕೆಲವೊಂದು ವಚನಗಳು ಗ್ರೀಕ್ ಹಸ್ತಪ್ರತಿಗಳಲ್ಲಿ ಕಾಣಿಸಿಕೊಳ್ಳುವದಿಲ್ಲ ಆದರೆ ಹಳೇ ಲ್ಯಾಟಿನ್, ಸಿರಿಯಾಕ್, ಕಾಪ್ಟಿಕ್, ಇಥಿಯೋಪಿಕ್, ಮತ್ತು ಗೋಥಿಕ್ ಇವುಗಳಂತಹ ಆವೃತ್ತಿಗಳಲ್ಲಿ ಪ್ರತಿನಿಧಿಸಲ್ಪಟ್ಟಿರುತ್ತವೆ. ಈ ವ್ಯತ್ಯಾಸಗಳು ಹಲವಾರು ಶತಮಾನಗಳಿಂದಲೂ ನಕಲು ಮಾಡುವವರು ಮತ್ತು ಅನುವಾದಕರು ಈ ಸನ್ನಿವೇಶದಲ್ಲಿನ "ಮೂಲಕ" ಎಂಬದರ ಅರ್ಥವನ್ನು ವಿವೇಚಿಸುವದಕ್ಕೆ ಕಷ್ಟಪಡುತ್ತಿದ್ದರೆಂಬುದಕ್ಕೆ ಸಾಕ್ಷಿಯನ್ನು ಕೊಡುತ್ತವೆ. ಆದಿಯಲ್ಲಿನ ವಾಚಕರಿಗೆ "ದೇವರ ಮೂಲಕ" ಎಂಬುದಕ್ಕಿಂತಲೂ "ದೇವರ" ಎಂದು ಓದುವದು ಹೆಚ್ಚು ತಾರ್ಕಿಕವಾದದ್ದೆಂದು ಕಾಣಿಸಿತ್ತು. ಬಹುಶಃ, ಒಂದು ವಿವರಣೆಯಾಗಿ, ಒಬ್ಬ ಪ್ರಾಚೀನ ಬೋಧಕನು ಮೂಲ ವಚನದ ಮೇಲೆ ಅಥವಾ ತಾನು ಬಳಸುತ್ತಿದ್ದ ಹಸ್ತಪ್ರತಿಯ ಬದಿಯ ಸ್ಥಳದಲ್ಲಿ "ಇಂದ" ಎಂಬುದಾಗಿ ಸೇರ್ಪಡೆಗೊಳಿಸಿದ್ದನು; ಬಳಿಕ ಅದನ್ನು ನಕಲು ಮಾಡಿದರೆಲ್ಲರೂ ಅದನ್ನು ವಾಕ್ಯದಲ್ಲಿ ದೋಷವನ್ನು ತಿದ್ದಿರುವ ಪದವೆಂಬಂತೆ (ಅದೊಂದು ಕೇವಲ ವಿವರಣಾತ್ಮಕ ಟಿಪ್ಪಣಿಯಾಗಿತ್ತೆಂಬುದನ್ನು ಗ್ರಹಿಸಿದೆಯೇ) ಸೇರ್ಪಡೆಗೊಳಿಸುತ್ತಾ ಬಂದರು.[19]

## ಪೌಲನ ವೈಯಕ್ತಿಕ ಮನವಿ (4:8-20)

ಪೌಲನು ಕ್ರಿಸ್ತನಲ್ಲಿರುವ ನಂಬಿಕೆಯ ಶ್ರೇಷ್ಠತೆಯನ್ನು ಕುರಿತು ವಾದ ಮುಂದುವರೆಸುವವನಾಗಿ, ಎರಡು ಭಾಗಗಳನ್ನೊಳಗೊಂಡ ತನ್ನ ವೈಯಕ್ತಿಕ ಮನವಿಯೊಂದನ್ನು ಸೇರ್ಪಡೆಗೊಳಿಸಿದನು. ಮೊದಲನೆಯದು, ಅಪೊಸ್ತಲನು ಗಲಾತ್ಯದ ಕ್ರೈಸ್ತರಿಗೆ ಆತ್ಮೀಕ ದಾಸತ್ವಕ್ಕೆ ಹಿಂದಿರುಗಬಾರದೆಂದು ಎಚ್ಚರಿಸಿದನು. ಯೆಹೂದಿಕರಣಗೊಳಿಸುವ ವ್ಯಕ್ತಿಗಳ ಪ್ರಭಾವಕ್ಕೊಳಗಾಗಿ, ಅನ್ಯಜನಾಂಗದ ಕೆಲವು ಕ್ರೈಸ್ತರು ಧರ್ಮಶಾಸ್ತ್ರದ ನೊಗವನ್ನು ಹೊತ್ತುಕೊಳ್ಳುವ ಮೂಲಕ ಇದೇ ಕಾರ್ಯವನ್ನು ಮಾಡುತ್ತಿದ್ದರು (4:8-11). ಎರಡನೆಯದಾಗಿ, ತಾನು ಅವರಿಗೆ ಮೊದಲ ಬಾರಿಗೆ ಸುವಾರ್ತೆಯನ್ನು ಸಾರಿದ ವೇಳೆ ಹೇಗೆ ಸಂತೋಷದಿಂದ ಸ್ವೀಕರಿಸಿಕೊಂಡಿದ್ದರೋ ಅದೇ ರೀತಿಯಲ್ಲಿಯೇ, ಈಗಲೂ ಆತನನ್ನು ಮತ್ತು ಆತನ ಸಂದೇಶವನ್ನು ಸ್ವೀಕರಿಸಿಕೊಳ್ಳಬೇಕೆಂದು ಕರೆ ನೀಡುತ್ತಾನೆ (4:12-20).

### ಗಲಾತ್ಯದವರು ಆತ್ಮೀಕ ದಾಸತ್ವಕ್ಕೆ ಹಿಂದಿರುಗುವದು (4:8-11)

**[8]ಪೂರ್ವಕಾಲದಲ್ಲಿ ನೀವು ದೇವರ ಜ್ಞಾನವಿಲ್ಲದವರಾಗಿ ದೇವರಲ್ಲದವುಗಳಿಗೆ ಅಧೀನರಾಗಿದ್ದಿರಿ. [9]ಈಗಲಾದರೋ ನೀವು ದೇವರನ್ನು ತಿಳುಕೊಂಡಿದ್ದೀರಿ; ಸರಿಯಾಗಿ**

**ಹೇಳಬೇಕಾದರೆ ದೇವರು ನಿಮ್ಮನ್ನು ತಿಳುಕೊಂಡಿದ್ದಾನೆ. ಹೀಗಿರಲಾಗಿ ನೀವು ಕೆಲಸಕ್ಕೆ ಬಾರದ ದರಿದ್ರಬಾಲಬೋಧೆಗೆ ಮತ್ತೂ ಅಧೀನರಾಗಬೇಕೆಂದು ಅಪೇಕ್ಷಿಸಿ ಪುನಃ ಅದಕ್ಕೆ ತಿರುಗಿಕೊಳ್ಳುವದು ಹೇಗೆ? [10]ನೀವು ಆಯಾ ದಿನಗಳನ್ನೂ ಮಾಸಗಳನ್ನೂ ಉತ್ಸವಕಾಲಗಳನ್ನೂ ಸಂವತ್ಸರಗಳನ್ನೂ ನಿಷ್ಠೆಯಿಂದ ಆಚರಿಸುತ್ತೀರಿ. [11]ನಾನು ನಿಮಗೋಸ್ಕರ ಪ್ರಯಾಸಪಟ್ಟದ್ದು ನಿಷ್ಫಲವಾಯಿತೋ ಏನೋ ಎಂದು ನಿಮ್ಮ ವಿಷಯದಲ್ಲಿ ಭಯಪಡುತ್ತೇನೆ.**

**ವಚನ 8.** ಯಾವನಾದರೂ ಕ್ರಿಸ್ತನಲ್ಲಿ ನಂಬಿಕೆಯಿಡುವರಿಂದ ಸಿಕ್ಕುವ ಆಶೀರ್ವಾದವನ್ನು ಬಿಟ್ಟು ಧರ್ಮಶಾಸ್ತ್ರದ ಶಾಪವೇ ಬೇಕೆಂದು ಕೇಳುವದರ ಮೂರ್ಖತನವನ್ನು ತೋರ್ಪಡಿಸಿದ ಬಳಿಕ (ನೋಡಿರಿ 3:24, 25), ಗಲಾತ್ಯದವರು ಕ್ರೈಸ್ತರಾಗುವದಕ್ಕೆ ಮುಂಚೆ ಹೊಂದಿದ್ದ ಸ್ಥಿತಿಯನ್ನು ಕುರಿತು ಪೌಲನು ಯೋಚಿಸುತ್ತಾನೆ. ಅವರಲ್ಲಿ ಅನೇಕರು ಅನ್ಯಜನರಾಗಿದ್ದರಿಂದ, **ಪೂರ್ವಕಾಲದಲ್ಲಿ** [ಅವರು] **ದೇವರ ಜ್ಞಾನವಿಲ್ಲದವರಾಗಿ ದೇವರಲ್ಲದವುಗಳಿಗೆ ಅಧೀನರಾಗಿದ್ದರು** ಎಂಬುದನ್ನು ಜ್ಞಾಪಿಸಿಕೊಳ್ಳುತ್ತಾನೆ. ಈ ಸ್ಥಿತಿಯು ಸಹ ಒಂದು ವಿಧವಾದ ದಾಸತ್ವವಾಗಿತ್ತು, ಯಾಕೆಂದರೆ ಅವರು ವಿಗ್ರಹಾರಾಧನೆಗೆ ಅಧೀನರು ಮಾತ್ರವೇ ಆಗಿರಲಿಲ್ಲ ಆದರೆ ವ್ಯರ್ಥವಾದ ಮೂಢನಂಬಿಕೆಗಳಿಗೆ ಮತ್ತು ಅನ್ಯಜನಾಂಗ ಜಗತ್ತಿನಲ್ಲಿ ಸಾಮಾನ್ಯವಾಗಿದ್ದ ನೈತಿಕ ಭ್ರಷ್ಟತೆಗೆ ಸಹ ಅಧೀನರಾಗಿದ್ದರು (ರೋಮಾ 1:18-32). ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ, ಅಪೊಸ್ತಲನು ಅಂಥ ಜನರನ್ನು "ಈ ಲೋಕದಲ್ಲಿ ಯಾವ ನಿರೀಕ್ಷೆಯಿಲ್ಲದವರೂ ದೇವರನ್ನರಿಯದವರೂ" ಆಗಿದ್ದರು ಎಂದು ಬಣ್ಣಿಸುತ್ತಾನೆ (ಎಫೆಸ 2:12).

ದಾಸತ್ವ ಮತ್ತು ಸ್ವಾತಂತ್ರ್ಯದ ವಿಷಯವನ್ನು ಚರ್ಚಿಸುವ ವೇಳೆ, ಪೌಲನು ಅವರ ಪರಿಸ್ಥಿತಿಯಲ್ಲಿನ ವಿರೋಧಾಭಾಸವನ್ನು ಗಲಾತ್ಯದವರಿಗೆ ತೋರಿಸುವದಕ್ಕೆ ಪ್ರಯತ್ನಿಸಿದನು. ಅವರು ಇತ್ತೀಚೆಗಷ್ಟೇ "ಕೆಲಸಕ್ಕೆ ಬಾರದ ದರಿದ್ರಬಾಲಬೋಧೆ"ಯ ದಾಸತ್ವದಿಂದ ವಿಮುಕ್ತಗೊಂಡ ಜನರಾಗಿದ್ದರು (4:9) ಮತ್ತು ಕ್ರಿಸ್ತನಲ್ಲಿ ಸಿಕ್ಕುವ ಹೊಸ ಸ್ವಾತಂತ್ರ್ಯವು ಅವರಿಗೆ ಕೊಡಲ್ಪಟ್ಟಿತ್ತು, ಅದು ಸಕಲ ಆಶೀರ್ವಾದಗಳನ್ನು ಮತ್ತು ವಿಶೇಷಾಧಿಕಾರಗಳನ್ನೊಳಗೊಂಡಿತ್ತು. ಹೇಗೂ, ಧರ್ಮಶಾಸ್ತ್ರಕ್ಕೆ ನಿಷ್ಠೆಯನ್ನು ತೋರಿಸುವ ಮೂಲಕ ಅಷ್ಟೇ ಸಮಾನವಾದ ವಿನಾಶಕರವಾದ ರೀತಿಯ ದಾಸತ್ವದೊಳಗೆ ಸಿಕ್ಕಿಕೊಂಡಿದ್ದರು (ನೋಡಿರಿ 4:3). ಅವರು ಹೇಗೆ ಅಂಥ ಮೂರ್ಖ ಸಂಗತಿಯನ್ನು ಮಾಡುವದಕ್ಕೆ ಸಾಧ್ಯವಾಗಿತ್ತು (3:1-5)? ಅಂತೂ, ದೇವರು ಅವರನ್ನು ತನ್ನ ದಾಸರನ್ನಾಗಿ ಮಾಡಿಕೊಳ್ಳುವದರ ಬದಲಾಗಿ ತನ್ನ ಪುತ್ರರನ್ನಾಗಿ ಮಾಡಿಕೊಂಡಿದ್ದನಷ್ಟೆ, ಮತ್ತು ಅವರು ನಿತ್ಯವಾದ ಬಾಧ್ಯತೆಗೆ ಬಾಧ್ಯಸ್ಥರಾಗಿ ಮಾರ್ಪಟ್ಟಿದ್ದರು (4:7; ನೋಡಿರಿ 4:1). ಅವರು ಏಕೆ ಪುನಃ ದಾಸತ್ವದ ಕಡೆಗೆ ಮರಳಿದರೆಂಬುದನ್ನು ಅರ್ಥಮಾಡಿಕೊಳ್ಳಲು ಅಪೊಸ್ತಲನಿಗೆ ಸಾಧ್ಯವಾಗಲಿಲ್ಲ. ಸಾರಂಶದಲ್ಲಿ, ಆತನು ಅವರಿಗೆ "ಸೆರೆಮನೆಯಿಂದ ವಿಮೋಚಿಸಲ್ಪಟ್ಟವರಾಗಿ, ನೀವು ಪುನಃ ನೇರವಾಗಿ ಬೇರೊಂದು ಸೆರೆಮನೆಯೊಳಗೆ ಹೋಗುವಿರೋ?" ಎಂದು ಕೇಳುತ್ತಿದ್ದಾನೆ.

ಅನ್ಯಜನಾಂಗದವರ ಪರಿವರ್ತನೆ-ಪೂರ್ವ ಸ್ಥಿತಿಯಲ್ಲಿ, ಈ ಕ್ರೈಸ್ತರು **ದೇವರಲ್ಲದವುಗಳಿಗೆ ಅಧೀನರಾಗಿದ್ದರು**. ಪೌಲನು ಇಲ್ಲಿ ಬಳಸುವ ಭಾಷೆಯು ಆತನು 1 ಕೊರಿಂಥ 8:5, 6ರಲ್ಲಿ ಅನ್ಯಧರ್ಮಿಯರ "ದೇವರುಗಳೆನಿಸಿಕೊಳ್ಳುವ" ಅನೇಕರು ಮತ್ತು ಕ್ರೈಸ್ತರು ಹಾಗೂ ಯೆಹೂದ್ಯರಿಗಿರುವ "ಒಬ್ಬನೇ ದೇವರು" ಕುರಿತಾಗಿ ಬರೆದ ಮಾತುಗಳನ್ನು ಜ್ಞಾಪಿಸುತ್ತದೆ. ಈ ವಚನಗಳು ಪ್ರಸ್ತುತವಾಗಿವೆಯಾದರೂ, ಇವುಗಳ ಮುಂಚಿನ ವಚನವನ್ನು NASBಯು ಅನುವಾದ ಮಾಡಿರುವ ರೀತಿಯು ವಿಷಾದನೀಯವಾಗಿರುತ್ತದೆ: "ವಿಗ್ರಹಗಳಿಗೆ ಸಮರ್ಪಣೆ ಮಾಡಿದವುಗಳನ್ನು ತಿನ್ನುವದರ ವಿಷಯದಲ್ಲಿ ನಾನು ಹೇಳುವದೇನಂದರೆ, ಜಗತ್ತಿನಲ್ಲಿ

*ವಿಗ್ರಹವು ಏನೂ ಅಲ್ಲವೆಂದೂ* ಒಬ್ಬ ದೇವರಿದ್ದಾನೆ ಹೊರತು ಬೇರೆ ದೇವರಿಲ್ಲವೆಂದೂ ನಾವು ಬಲ್ಲೆವು" (1 ಕೊರಿಂಥ 8:4; ಒತ್ತಿ ಹೇಳಿದ್ದು ನನ್ನದು). ಖಂಡಿತವಾಗಿಯೂ, ಜನರು ಪ್ರಾಚೀನ ಜಗತ್ತಿನಲ್ಲಿ ಜನರು ವಿಗ್ರಹಗಳನ್ನು ಇಟ್ಟುಕೊಂಡಿದ್ದರು ಮತ್ತು ಬಳಸುತ್ತಿದ್ದರು. ಈ ಜಗತ್ತಿನಲ್ಲಿ ವಿಗ್ರಹಗಳಿಗೆ ಯಾವದೇ ಮಹತ್ವವಿರುವದಿಲ್ಲ ಎಂಬ ವಾಸ್ತವಾಂಶವನ್ನು ಸೂಚಿಸುತ್ತಿದ್ದಾನೆ. ಆತನು ಇದನ್ನು ವಿಗ್ರಹಗಳಿಗೆ ನೈವೇದ್ಯ ಮಾಡಿದ ಆಹಾರವನ್ನು ತಿನ್ನುವದರ ವಿಷಯವಾಗಿ ಹೇಳಿದನು. ಸ್ವಾಭಾವಿಕವಾಗಿ ಅದನ್ನು ತಿನ್ನುವದರಲ್ಲಿ ಯಾವದೇ ತಪ್ಪಿರಲಿಲ್ಲ; ಇದನ್ನು ಅರ್ಥಮಾಡಿಕೊಂಡಿರುವ ಹಾಗೂ ತಾನೇನು ಮಾಡುತ್ತಿರುವೆನೆಂಬುದನ್ನು ತಿಳಿದಿರುವ ಕ್ರೈಸ್ತನಿಗೆ ಆತ್ಮೀಕವಾಗಿ ಹೊಲೆಯನ್ನಾಗಲಿ ಅಥವಾ ಹಾನಿಯನ್ನಾಗಲಿ ಮಾಡಲಾಗಲಿಲ್ಲ. ಹೇಗೂ, ಒಬ್ಬ ಮನಸಾಕ್ಷಿಯು ವಿಗ್ರಹದೊಂದಿಗೆ ಬಂಧಿಸಲ್ಪಟ್ಟಿದ್ದರೆ - ತನ್ನ ಸ್ವಂತ ಮನಸ್ಸಾಕ್ಷಿ ಅಥವಾ ಬೇರೊಬ್ಬನ ಮನಸ್ಸಾಕ್ಷಿ - ಆತನು ತಿನ್ನದೆ ಇರುವದು ಉತ್ತಮವಾಗಿರುತ್ತದೆ (1 ಕೊರಿಂಥ 10:25-29). ಇನ್ನೊಂದೆಡೆಯಲ್ಲಿ, "ದೇವರೆನಿಸಿಕೊಂಡಿರುವವರ" ಅಥವಾ ಯಜ್ಞದಲ್ಲಿ ಅಡಕವಾಗಿರುವ ಸಂಗತಿಗಳ ಪ್ರಭಾವವನ್ನು ಸಂಪೂರ್ಣವಾಗಿ ಅಲ್ಲಗಳೆಯಲಿಲ್ಲ. "ದೇವರೆನಿಸಿಕೊಂಡವರು" ದೇವತ್ವದೊಂದಿಗೆ ಯಾವದೇ ಸಮಾನತೆಯನ್ನು ಹೊಂದಿರುವದಿಲ್ಲ.

**ವಚನ 9.** ಅನ್ಯಜನಾಂಗದ ಕ್ರೈಸ್ತರು ವಿಗ್ರಹಾರಾಧಕರಾಗಿದ್ದ ವೇಳೆ, ಅವರು **ದೇವರನ್ನು ತಿಳುಕೊಂಡಿದ್ದೀರಿ; ಸರಿಯಾಗಿ ಹೇಳಬೇಕಾದರೆ ದೇವರು ನಿಮ್ಮನ್ನು ತಿಳುಕೊಂಡಿದ್ದಾನೆ.** "ತಿಳುಕೋ" ಎಂಬುದು ಗ್ರೀಕ್ ಪದವಾದ γινώσκω (*ginōskō*) ಎಂಬುದರ ಅನುವಾದವಾಗಿದೆ, ಅದನ್ನು "ಅನುಮೋದಿಸು" ಅಥವಾ "ಒಪ್ಪಿಕೋ" ಎಂಬುದಾಗಿ ಸಹ ಅನುವಾದಿಸಬಹುದಾಗಿದೆ.[20] ಅನುವಾದಕನು ಈ ಸನ್ನಿವೇಶದಲ್ಲಿ ಅರ್ಥಗಳ ನಡುವೆ ಆಯ್ಕೆಯನ್ನು ಮಾಡಿಕೊಳ್ಳತಕ್ಕದ್ದು, ಇವುಗಳೊಳಗೆ ಯಾವದಾದರೂ ಒಂದು ಮಾತ್ರವೇ ಸೂಕ್ತವಾದ ಆಯ್ಕೆಯಾಗಿರುತ್ತದೆ (ನೋಡಿರಿ ಕೀರ್ತನೆ 1:6; LXX; 1 ಕೊರಿಂಥ 8:3). "ತಿಳಿದುಕೊಂಡಿದ್ದೀರಿ" ಎಂಬ ಪದಗುಚ್ಛವು ಈ ಅನ್ಯಜನರು ಪರಿವರ್ತನೆಗೊಂಡು ದೇವರ ಕಡೆಗೆ ತಿರುಗಿಕೊಂಡದ್ದನ್ನು ತೋರಿಸುತ್ತದೆ. ಅಷ್ಟುಮಾತ್ರವಲ್ಲದೆ, "ದೇವರು ನಿಮ್ಮನ್ನು ತಿಳುಕೊಂಡನು" ಎಂಬ ಪದಗುಚ್ಛವು ಅವರು ದೇವರಿಂದ ಆತನ ಜನರೆಂಬುದಾಗಿ ಅಂಗೀಕರಿಸಲ್ಪಟ್ಟದ್ದನ್ನು ಅಥವಾ ಒಪ್ಪಿಕೊಳ್ಳಲ್ಪಟ್ಟಿದ್ದನ್ನು ಸೂಚಿಸುತ್ತದೆ.[21] ಈ ಸಂಬಂಧವು 4:6, 7ರಲ್ಲಿನ ಪುತ್ರಸ್ವೀಕಾರದ ಮಾತುಗಳಲ್ಲಿ ವ್ಯಕ್ತಪಡಿಸಲ್ಪಟ್ಟಿದೆ.

ಗಲಾತ್ಯದವರು ಕ್ರಿಸ್ತನಲ್ಲಿ ಅತ್ಯಾಶ್ಚರ್ಯವಾದ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದರಾದ್ದರಿಂದ, ಪೌಲನು ಹೀಗೆ ಕೇಳಿದನು, **ಹೀಗಿರಲಾಗಿ ನೀವು ಕೆಲಸಕ್ಕೆ ಬಾರದ ದರಿದ್ರಬಾಲಬೋಧೆಗೆ ಮತ್ತೂ ಅಧೀನರಾಗಬೇಕೆಂದು ಅಪೇಕ್ಷಿಸಿ ಪುನಃ ಅದಕ್ಕೆ ತಿರುಗಿಕೊಳ್ಳುವದು ಹೇಗೆ?** "ಬಾಲಬೋಧೆ" (στοιχεῖα, *stoicheia*) ಎಂಬ ಪದವು 4:3ರಿಂದ ಪುನರಾವರ್ತಿಸಲ್ಪಟ್ಟಿದೆ. ಆ ವಚನದಲ್ಲಿ, ಅದು ಯೆಹೂದ್ಯರಿಗೆ ಸಂಬಂಧಿಸಿದ್ದಾಗಿತ್ತು, ಅವರು ಧರ್ಮಶಾಸ್ತ್ರಾಧೀನರಾಗಿ ಇದ್ದವರಾಗಿ "ಲೋಕದವರ ಬಾಲಬೋಧೆಗೆ ಅಧೀನರಾಗಿದ್ದರು." ಅವರು ಧರ್ಮಶಾಸ್ತ್ರದ ಶಾರೀರಿಕವಾದ ಮತ್ತು ಮೂಲಪಾಠದ ತತ್ವಗಳಿಗೆ ದಾಸತ್ವದಲ್ಲಿದ್ದರು.

4:9ರಲ್ಲಿ, ವಿಗ್ರಹಾರಾಧನೆ ಮತ್ತು ಅನೈತಿಕ ಜೀವಿತಕ್ಕೆ ಸಂಬಂಧಪಟ್ಟಂತೆ ಅನ್ಯಜನಾಂಗದ ಕ್ರೈಸ್ತರು "ಕೆಲಸಕ್ಕೆ ಬಾರದ ದರಿದ್ರಬಾಲಬೋಧೆಗೆ" "ದಾಸತ್ವದಲ್ಲಿದ್ದರು" (KJV) ಎಂದು ಹೇಳಿದನು. ರೋಮಾ 1-3 ಅಧ್ಯಾಯಗಳಲ್ಲಿ ಅದೇ ರೀತಿಯ ದೃಶ್ಯಾವಳಿಯು ಮುಂದಿಡಲ್ಪಟ್ಟಿದೆ, ಅಲ್ಲಿ ಅನ್ಯಜನರು ಮತ್ತು ಯೆಹೂದ್ಯರು ಇವರಿಬ್ಬರನ್ನೂ ಪಾಪದ ಧೊರೆತನದಲ್ಲಿರುವವರು ಮತ್ತು ರಕ್ಷಕನ ಅಗತ್ಯವಿರುವವರು ಎಂದು ಬಣ್ಣಿಸಲಾಗಿದೆ. ರೋಮಾ

3:1, 2ರಲ್ಲಿ, ಪೌಲನು "ಹಾಗಾದರೆ ಯೆಹೂದ್ಯರ ಶ್ರೇಷ್ಠತ್ವವೇನು? ಸುನ್ನತಿಯಿಂದ ಲಾಭವೇನು?" ಎಂಬ ಪ್ರಶ್ನೆಯನ್ನು ಎದುರುನೋಡಿದ್ದನು. ಆ ಪ್ರಶ್ನೆಗೆ ಸ್ವತಃ ತಾನೇ ಉತ್ತರ ಕೊಡಲು ಮುಂದಾಗುತ್ತಾನೆ: "ಎಲ್ಲಾ ವಿಷಯಗಳಲ್ಲಿಯೂ ಬಹಳ ಉಂಟು. ಮೊದಲನೇದಾಗಿ ದೈವೋಕ್ತಿಗಳು ಅವರ ವಶಕ್ಕೆ ಒಪ್ಪಿಸಲ್ಪಟ್ಟವು." ಹಾಗಿದ್ದರೂ, ದೈವೋಕ್ತಿಗಳು ಬಳಿಯಲ್ಲಿ ಇದ್ದ ಮಾತ್ರಕ್ಕೆ ದೇವರ ಬಳಿಗೆ ಮಾರ್ಗವು ತನ್ನಿಂದ ತಾನೇ ಸಿಕ್ಕುತ್ತದೆಂದು ಸೂಚಿಸುವ ಅವಶ್ಯಕತೆಯಿಲ್ಲ. ಅದೇ ಸನ್ನಿವೇಶದಲ್ಲಿ, ಪೌಲನು ಇನ್ನೂ ಕೇಳಿದ್ದೇನೆಂದರೆ, "ಹಾಗಾದರೆ ಏನು ಹೇಳಬೇಕು? ನಾವು ಅನ್ಯರಿಗಿಂತ ಉತ್ತಮಸ್ಥಾನದಲ್ಲಿದ್ದೇವೋ? ಎಷ್ಟು ಮಾತ್ರಕ್ಕೂ ಇಲ್ಲ. ಯೆಹೂದ್ಯರೇ ಆಗಲಿ ಗ್ರೀಕರೇ ಆಗಲಿ ಎಲ್ಲರೂ ಪಾಪಕ್ಕೆ ಒಳಬಿದ್ದವರೆಂದು ಮೊದಲೇ ತೋರಿಸಿಕೊಟ್ಟಿದ್ದೇವಲ್ಲಾ" (ರೋಮಾ 3:9). ಕ್ರಿಸ್ತನು ಮಾತ್ರವೇ ದೇವರ ಬಳಿಗೆ ಹೋಗಲು ಮತ್ತು ಆತ್ಮೀಕ ಮಟ್ಟಕ್ಕೆ ಮಾರ್ಗವನ್ನು ಒದಗಿಸಬಲ್ಲನು (ರೋಮಾ 3:21-26). ದೇವರನ್ನು ಇನ್ನೂ "ತಿಳಿದುಕೊಂಡಿ"ಲ್ಲದ ಮತ್ತು ಕ್ರಿಸ್ತನಲ್ಲಿ ಯಾರನ್ನು ಇನ್ನೂ "ದೇವರು ತಿಳುಕೊಂಡಿ"ಲ್ಲವೋ ಅವರೆಲ್ಲರ ಸಾಮಾನ್ಯ ಪಾಲಾಗಿರುವ ಪಾಪದಿಂದ ಮನುಷ್ಯನನ್ನು ಬಿಡಿಸುವದಕ್ಕೆ ಆತನು ಮಾತ್ರವೇ ಶಕ್ತನಾಗಿದ್ದಾನೆ.

ಯೆಹೂದಿಕರಣಗೊಳಿಸುವವರ ಸುಳ್ಳು ಬೋಧನೆಯನ್ನು ಅಂಗೀಕರಿಸಿಕೊಂಡಿದ್ದ ಆ ಕ್ರೈಸ್ತರೊಂದಿಗೆ ಮಾತಾಡಿದ ವೇಳೆ ಪೌಲನ ತಾತ್ಪರ್ಯವು ಇದೇ ಆಗಿತ್ತು. ಅನ್ಯಜನಾಂಗದ ಕ್ರೈಸ್ತರ ಮೇಲೆ ಧರ್ಮಶಾಸ್ತ್ರವನ್ನು ಕಡ್ಡಾಯಗೊಳಿಸುವ ಮೂಲಕ, ಈ ಸುಳ್ಳು ಬೋಧಕರು ಅವರನ್ನು "ಕೆಲವರು [ಅವರನ್ನು] ಕಳವಳಪಡಿಸುತ್ತಾ ಕ್ರಿಸ್ತನ ಸುವಾರ್ತೆಯನ್ನು ಮಾರ್ಪಡಿಸುವದಕ್ಕೆ ಪ್ರಯತ್ನಿಸು[ತ್ತಿದ್ದರು]" (ಗಲಾತ್ಯ 1:7; NIV).

ಪೌಲನು ಅವರನ್ನು "ಕೆಲಸಕ್ಕೆ ಬಾರದ [ಬಲಹೀನ] ದರಿದ್ರಬಾಲಬೋಧಗೆ" ಪುನಃ ತಿರುಗಿಕೊಳ್ಳಬೇಡಿರೆಂದು ಎಚ್ಚರಿಸಿದನು. "ಬಲಹೀನ" ಎಂಬುದಕ್ಕೆ ಗ್ರೀಕ್ ಪದವು (ἀσθενής, *asthenēs*) "ರೋಗ" (ἀσθένεια, *astheneia*) ಎಂಬ ಗ್ರೀಕ್ ಪದದ ಗುಣವಾಚಕ ರೂಪವಾಗಿರುತ್ತದೆ. 4:13ರಲ್ಲಿ, ಪೌಲನು ತನ್ನ "ಶರೀರಕ್ಕೆ ಅಸೌಖ್ಯ" ಎಂಬ ಅಕ್ಷರಶಃ ಅರ್ಥದಲ್ಲಿ ಈ ಪದವನ್ನು ಬಳಸಿರುತ್ತಾನೆ. *ಅಸ್ತೆನೆಯಿಯ* ಎಂಬದು σθένος (*sthenos*) ಎಂಬ ಪದದಿಂದ ತೆಗೆದುಕೊಳ್ಳಲ್ಪಟ್ಟಿದ್ದು, ಅದರ ಅರ್ಥವು "ಬಲಿಷ್ಠ" ಎಂದಾಗಿರುತ್ತದೆ. ಆ ಪದದ ಮುಂಚೆ α (*a*) ಸೇರ್ಪಡೆಗೊಳಿಸುವದು ಅದೊಂದು "ರಹಿತ" ಎಂಬ ಪದದ ರೀತಿಯಲ್ಲಿ ಒಂದು ನಿಷೇಧೋಕ್ತಿಯಾಗುತ್ತದೆ, ಆದ್ದರಿಂದ ಆ ಪದವು "ಬಲರಹಿತ" ಎಂಬುದಕ್ಕೆ ಸಮಾನವಾಗಿರುತ್ತದೆ ಮತ್ತು ಅದು "ಬಲಹೀನ," "ದೃಢವಿಲ್ಲದ," ಅಥವಾ "ಸೌಖ್ಯವಿಲ್ಲದ" ಎಂದು ಅನುವಾದಿಸಬಹುದಾಗಿದೆ. ಪೌಲನು ಹೇಳುತ್ತಿರುವದೇನೆಂದರೆ *ಈ ಅನ್ಯಜನಾಂಗದ ಕ್ರೈಸ್ತರು ಎತ್ತಿಹಿಡಿಯುವದಕ್ಕೆ ಹೊರಟಿದ್ದ ಪ್ರಾಥಮಿಕ ಅಥವಾ ಮೂಲಪಾಠದ ಸಂಗತಿಗಳು ಅವರಿಗಿದ್ದ ಹಿಂದಿನ ಸುಳ್ಳು ದೇವರುಗಳ ರೀತಿಯಲ್ಲಿಯೇ ಅವರನ್ನು ರಕ್ಷಿಸುವದಕ್ಕೆ ಶಕ್ತಿಯಿಲ್ಲದವುಗಳಾಗಿದ್ದವು* ಎಂಬುದೆ, ಆ ವಿಗ್ರಹಗಳಲ್ಲಿಯೇ ಅವರು ತಮ್ಮ ವಿಶ್ವಾಸವನ್ನು ಇಟ್ಟವರಾಗಿದ್ದರು.

"ಪ್ರಯೋಜನವಿಲ್ಲದ" (πτωχός, *ptōchos*), ಅಥವಾ "ದರಿದ್ರ" (NIV) ಎಂಬ ಪದವು ಬಡತನದಲ್ಲಿರುವದು ಎಂಬ ಆಲೋಚನೆಯನ್ನು ಹೊಂದಿರುತ್ತದೆ. ಯೇಸುವು ಅದೇ ಪದವನ್ನು ಬಳಸಿ ಹೀಗೆ ನುಡಿದಿದ್ದನು, "ಬಡವರು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುತ್ತಾರೆ" (ಮತ್ತಾಯ 26:11a). ಬದುಕುವದಕ್ಕೆ ಕಷ್ಟಪಡುತ್ತಿರುವ ಬಡವನೊಬ್ಬನು ಹೇಗೆ ತನ್ನ ವಿಮೋಚನೆಯನ್ನು ಕೊಂಡುಕೊಳ್ಳು ಸಾಧ್ಯ? ಮನುಷ್ಯನು ತನ್ನ ಪಾಪಭರಿತ ಆತ್ಮಕ್ಕಾಗಿ,

ದೇವರಿಗೆ ಈಡು ಕೊಡುವದಕ್ಕೆ ಏನೇ ಬೆಲೆಯಿರಬಹುದಾದಂಥ ಯಾವ ಸಂಗತಿಯು ಆತನ ಬಳಿಯಲ್ಲಿರುವದಿಲ್ಲ. ನಾವು ಹೀಗೆ ಹಾಡುತ್ತೇವಲ್ಲಾ, "ನನ್ನ ಪಾಪವನ್ನು ಯಾವದು ತೊಳೆಯಬಲ್ಲದು? ಯೇಸುವಿನ ರಕ್ತವೇ ಅಲ್ಲದೆ ಬೇರೆ ಏನೂ ಅಲ್ಲ."[22] ಧರ್ಮಶಾಸ್ತ್ರದ ಎಲ್ಲಾ "ಕೆಲಸಕ್ಕೆ ಬಾರದ ದರಿದ್ರಬಾಲಬೋಧೆ"ಗಳ ವಿಷಯದಲ್ಲಿಯೂ ಹೀಗೆಯೇ ಇರುತ್ತದೆ ಹಳೆಯ ಒಡಂಬಡಿಕೆಯ ಯಜ್ಞವೇದಿಯ ಮೇಲೆ ಯಜ್ಞಮಾಡಲ್ಪಟ್ಟ ಸಾವಿರಾರು ದೋಷವಿಲ್ಲದ ಪ್ರಾಣಿಗಳು ಯೆಹೂದ್ಯರ ಪಾಪಗಳನ್ನು ಸಂಪೂರ್ಣವಾಗಿ ನೀಗಿಸುವದಕ್ಕೆ ಶಕ್ತವಾಗಲಿಲ್ಲ. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಬರೆಯುತ್ತಾನೆ,

> ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ ಹೊರತು ಅವುಗಳ ನಿಜ ಸ್ವರೂಪವಲ್ಲವಾದದರಿಂದ ಆ ಧರ್ಮಶಾಸ್ತ್ರವು ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾಗುವ ಒಂದೇ ವಿಧವಾದ ಯಜ್ಞಗಳನ್ನು ಅರ್ಪಿಸಿ ದೇವರ ಸಮೀಪಕ್ಕೆ ಬರುವವರನ್ನು ಎಂದಿಗೂ ಸಿದ್ಧಿಗೆ ತರಲಾರದು . . . ಆ ಯಜ್ಞಗಳಿಂದ ಪ್ರತಿವರುಷದಲ್ಲಿ ಯೂ ಪಾಪಗಳ ಜ್ಞಾಪಕವಾಗುವದುಂಟು; ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ (ಇಬ್ರಿಯ 10:1-4).

ಈ ಕಾರಣದಿಂದಲೇ ನಾವು ಅನ್ಯಜನಾಂಗದ ಕ್ರೈಸ್ತರು ಒಂದು ಸೆರೆಮನೆಯನ್ನು (ವಿಗ್ರಹಾರಾಧನೆ ಮತ್ತು ಅನೈತಿಕತೆ) ತೊರೆದು ನೇರವಾಗಿ ಇನ್ನೊಂದು ಸೆರೆಮನೆಯೊಳಗೆ (ಧರ್ಮಶಾಸ್ತ್ರದ ದಾಸತ್ವಕ್ಕೆ) ಸಾಗುವವರಾಗಿದ್ದಾರೆ ಎಂದು ಹೇಳುತ್ತೇವೆ - ಅದನ್ನು ಮನಃಪೂರ್ವಕವಾಗಿ ಸಹ ಮಾಡುವವರಾಗಿದ್ದರು! ಎಷ್ಟೊಂದು ವಿಪರ್ಯಾಸ! ಪೌಲನು ಪತ್ರಿಕೆಯಲ್ಲಿ ಅಂಥ ಕಠೋರವಾದ ಭಾಷೆಯನ್ನು ಬಳಸಿದ್ದರಲ್ಲಿ ಆಶ್ಚರ್ಯವೇನಿಲ್ಲ: "ಎಲೈ ಬುದ್ಧಿಯಿಲ್ಲದ ಗಲಾತ್ಯದವರೇ" (ಗಲಾತ್ಯ 3:1); "ಇಷ್ಟು ಬುದ್ಧಿಯಿಲ್ಲದವರಾಗಿದ್ದೀರಾ?" (3:3). ಧರ್ಮಶಾಸ್ತ್ರದ - ಯಾವದೇ ಧರ್ಮಶಾಸ್ತ್ರ - ಮೂಲಕ ನೀತಿವಂತಿಕೆಯು ಮಾನವ ಶರೀರದ ಸಾಧನೆಯಾಗುವದು ಮತ್ತು ಒಬ್ಬನ ಸ್ವನೀತಿಯಾಗುವದು. ಹೇಗೂ, ಕ್ರಿಸ್ತನಲ್ಲಿ ಸಿಕ್ಕುವ ನೀತಿಯು ನಮ್ಮ ದೇವರಿಂದ ದೊರಕುವ ಕೃಪೆಯ ವರದಾನವಾಗಿದ್ದು, ಅದು ಧರ್ಮಶಾಸ್ತ್ರದಡಿಯಲ್ಲಿರುವ ದಾಸತ್ವದಿಂದ ವಿಮೋಚನೆಯನ್ನು ಉಂಟುಮಾಡುವದಾಗಿದೆ.

**ವಚನ 10.** ಈ ಅನ್ಯಜನಾಂಗದ ಕ್ರೈಸ್ತರು ತಮ್ಮ ಅನ್ಯಧರ್ಮಿಯ ಅಭ್ಯಾಸಗಳಿಗೆ ಹಿಂದಿರುಗಬೇಕೆಂಬ ಪ್ರಲೋಭನೆಗೆ ಒಳಗಾಗಿದ್ದರು ಎಂಬ ಯಾವ ಸೂಚನೆಯನ್ನೂ ಈ ಸನ್ನಿವೇಶವು ಕೊಡುವದಿಲ್ಲ. ಬದಲಾಗಿ, ಅವರು ತಮ್ಮನ್ನು ಉತ್ತಮ ಯೆಹೂದಿ ಕ್ರೈಸ್ತರೆಂದು ಭಾವಿಸಿಕೊಂಡಿದ್ದಂಥ ಯೆಹೂದಿಕರಣಗೊಳಿಸುವ ವ್ಯಕ್ತಿಗಳಿಂದ ಅವರಂತೆಯೇ ಉತ್ತಮ ಯೆಹೂದಿ ಕ್ರೈಸ್ತರಾಗುವಂತೆ ಮಾಡುವ ಪ್ರಯತ್ನಗಳನ್ನು ಅಂಗೀಕರಿಸಿಕೊಳ್ಳುವದಕ್ಕೆ ನಡಿಸಲ್ಪಟ್ಟಿದ್ದರು. ಆದದರಿಂದ, ಪೌಲನು **ಆಯಾ ದಿನಗಳನ್ನೂ ಮಾಸಗಳನ್ನೂ ಉತ್ಸವಕಾಲಗಳನ್ನೂ ಸಂವತ್ಸರಗಳನ್ನೂ** ಎಂದು ಹೇಳಿದ್ದರ ತಾತ್ಪರ್ಯವೇನೆಂದು ನಿರ್ಧರಿಸಬೇಕಾದರೆ, ಧರ್ಮಶಾಸ್ತ್ರವನ್ನು ಪರೀಕ್ಷಿಸಬೇಕೇ, ಹೊರತು ಆ ಕಾಲದಲ್ಲಿದ್ದ ಗ್ರೀಕ್-ರೋಮನ್ ಧರ್ಮಗಳನ್ನಲ್ಲ.

ಸಾಮಾನ್ಯವಾಗಿ ಹೇಳುವದಾದರೆ, ಕಾಲದ ವಿಭಜನೆಗಳು ಒಂದು ಪ್ರಯೋಜನಕರವಾದ ಉದ್ದೇಶವನ್ನು ನಡಿಸುತ್ತವೆ. ಇವುಗಳು ಮೊದಲ ಬಾರಿಗೆ ಶಾಸ್ತ್ರಗಳಲ್ಲಿ ಸೃಷ್ಟಿಯ ಕಥನದಲ್ಲಿ ಎದುರುಗೊಳ್ಳಲ್ಪಡುತ್ತವೆ. ಆದಿಕಾಂಡ 1:14ರ ಪ್ರಕಾರವಾಗಿ, "ಬಳಿಕ ದೇವರು - ಆಕಾಶಮಂಡಲದಲ್ಲಿ ಬೆಳಕುಗಳು ಉಂಟಾಗಲಿ; ಅವು ಹಗಲಿರುಳುಗಳನ್ನು ಬೇರೆ ಬೇರೆ

ಮಾಡಲಿ; ಇದಲ್ಲದೆ ಅವು ಗುರುತುಗಳಾಗಿದ್ದು ಸಮಯಗಳನ್ನೂ ದಿನಸಂವತ್ಸರಗಳನ್ನೂ ತೋರಿಸಲಿ" ಎಂದು ಹೇಳಿದನು.

ಪೌಲನು ಹೇಳಿದ "ಆಯಾ ದಿನಗಳನ್ನೂ ಮಾಸಗಳನ್ನೂ ಉತ್ಸವಕಾಲಗಳನ್ನೂ ಸಂವತ್ಸರಗಳನ್ನೂ" ಎಂಬ ಮಾತುಗಳಿಗೆ ಹಳೆಯ ಒಡಂಬಡಿಕೆಯನ್ನು ಹಿನ್ನಲೆ ಎಂದು ಪರಿಗಣಿಸುವಾಗ, ಮೇಲಕ್ಕೆ ಕಾಣಿಸಿಕೊಳ್ಳುವ ಹಲವಾರು ವಾಕ್ಯಭಾಗಗಳು ದೇವದರ್ಶನ ಗುಡಾರ ಅಥವಾ ದೇವಾಲಯಕ್ಕೆ ಸಂಬಂಧ ಪಟ್ಟಿರುತ್ತವೆ. ಪವಿತ್ರ ದಿನಗಳನ್ನು ಮತ್ತು ಧಾರ್ಮಿಕ ಹಬ್ಬದ ದಿನಗಳನ್ನು ಪ್ರತಿಷ್ಠಾಪಿಸುವದರ ಕುರಿತು ಯಾಜಕಕಾಂಡ 23ನೇ ಅಧ್ಯಾಯದಲ್ಲಿ ಕಾಣುತ್ತೇವೆ, ಅದು ಯಜ್ಞಗಳು ಹಾಗೂ ಯಜ್ಞಗಳನ್ನು ಸರಿಯಾಗಿ ಯಾವ ಸಮಯಗಳಲ್ಲಿ ಸಮರ್ಪಿಸಬೇಕೆಂಬ ಅನೇಕ ವಿವರಗಳನ್ನು ನೀಡುತ್ತದೆ. ಇಸ್ರಾಯೇಲ್ಯರ ಆರಾಧನೆಯ ಪ್ರಮುಖ ಕೇಂದ್ರಬಿಂದುವಾಗಿ ಮೊದಲು ದೇವದರ್ಶನ ಗುಡಾರವು ಪರಿಚಯಿಸಲ್ಪಟ್ಟಿತು. ತರುವಾಯ, ಸೊಲೊಮೋನನು "ಸಬ್ಬತ್‌ದಿನ, ಅಮಾವಾಸ್ಯೆ, ನಮ್ಮ ದೇವರಾದ ಯೆಹೋವನ ಜಾತ್ರೆ ಇವುಗಳಲ್ಲಿ ಸರ್ವಾಂಗ ಹೋಮವನ್ನರ್ಪಿಸುವದ"ಕ್ಕೆ ಯೆರೂಸಲೇಮಿನಲ್ಲಿ ದೇವಾಲಯನ್ನು ನಿರ್ಮಿಸಿದನು (2 ಪೂರ್ವಕಾಲವೃತ್ತಾಂತ 2:4). ದೇವರ ಆಜ್ಞೆಯ ಪ್ರಕಾರವಾಗಿ, "ಸಬ್ಬತ್ ದಿವಸ, ಅಮಾವಾಸ್ಯೆ ಇವುಗಳಲ್ಲಿಯೂ ಹುಳಿಯಿಲ್ಲದ ರೊಟ್ಟಿಗಳ ಜಾತ್ರೆ, ಪಂಚಾಶತ್ತಮದಿನದ ಜಾತ್ರೆ, ಪರ್ಣಶಾಲೆಗಳ ಜಾತ್ರೆ ಎಂಬೀ ಮೂರು ವಾರ್ಷಿಕಜಾತ್ರೆಗಳಲ್ಲಿಯೂ" ಯಜ್ಞಗಳನ್ನು ಸಮರ್ಪಿಸಲಾಗುತ್ತಿತ್ತು (2 ಪೂರ್ವಕಾಲವೃತ್ತಾಂತ 8:13). ಅವಿಧೇಯರಾದ ಇಸ್ರಾಯೇಲ್ಯರು ಪಶ್ಚಾತ್ತಾಪ ಪಡದಿದ್ದಲ್ಲಿ, ದೇವರು ಹೀಗೆ ಘೋಷಿಸಿದನು, "ನಾನು ಅವಳ ಉಲ್ಲಾಸ, ಹಬ್ಬ, ಅಮಾವಾಸ್ಯೆ, ಸಬ್ಬತ್ತು, ಮಹೋತ್ಸವ, ಇವುಗಳನ್ನೆಲ್ಲಾ ನಿಲ್ಲಿಸಿಬಿಡುವೆನು" (ಹೋಶೇಯ 2:11). ಸೊಲೊಮೋನನು ಮಾಡಿದ್ದ ರೀತಿಯಲ್ಲಿಯೇ, ಹಿಜ್ಕೀಯನು ಯೆಹೂದಕ್ಕೆ "ಯೆಹೋವನ ಧರ್ಮಶಾಸ್ತ್ರವಿಧಿಗನುಸಾರವಾಗಿ ಪ್ರಾತಃಕಾಲ ಸಾಯಂಕಾಲ ಸಬ್ಬತ್‌ದಿನ ಅಮಾವಾಸ್ಯೆ ಜಾತ್ರೆ ಇವುಗಳಲ್ಲಿ" ಸರ್ವಾಂಗಹೋಮ ಯಜ್ಞಗಳನ್ನು ಮಾಡುವಂತೆ ಆಜ್ಞಾಪಿಸಿದನು (2 ಪೂರ್ವಕಾಲವೃತ್ತಾಂತ 31:3).

ಪೌಲನು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಅಂಥ ಪದಗಳನ್ನು ಬಳಸಿದ್ದು, ಹಳೆಯ ಒಡಂಬಡಿಕೆಯಲ್ಲಿ ಪ್ರಾಮುಖ್ಯವಾಗಿದ್ದರೂ, ಹೊಸ ಒಡಂಬಡಿಕೆಯ ಅಡಿಯಲ್ಲಿರುವ ಕ್ರೈಸ್ತರಿಗೆ ಯಾವದೇ ಪರಿಣಾಮಗಳನ್ನು ಬೀರದಂತಹ ನೇಮಗಳಿಗೆ ಸಂಬಂಧಿಸಿದ್ದವು. ಅಪೊಸ್ತಲನು ಬಹಳ ಕಾಲದಿಂದ ಆಚರಿಸುತ್ತ ಬಂದಿದ್ದವರು ಈಗಲೂ ಅಂತಹ ಭಾವನೆಗಳಿಗೆ ಕಟ್ಟಿಹಾಕಲ್ಪಟ್ಟಿದ್ದಂಥ ದೃಢವಿಲ್ಲದ ಮನಸ್ಸಾಕ್ಷಿಯ ಜನರ ಕಡೆಗೆ ಸಹನೆಯುಳ್ಳವನಾಗಿದ್ದನು; ಆತನು ದೃಢವಾಗಿರುವವರಿಗೆ ರೋಮಾ 14:1-15:3ರಲ್ಲಿ ಅಂಥವರ ಕಡೆಗೆ ಕಾಳಜಿಯುಳ್ಳವರಾಗಿರಿ ಎಂದು ಬುದ್ಧಿವಾದ ಹೇಳಿದನು. ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿದ್ದ ಸನ್ನಿವೇಶವು ಅಲ್ಲಿ ಪೌಲನು ಇತ್ತೀಚಿಗೆ ಪರಿವರ್ತನೆಗೊಂಡ ಅನ್ಯಜನರ ಬಗ್ಗೆ ಮಾತಾಡುತ್ತಿದ್ದಾನೋ ಅಥವಾ ಯೆಹೂದ್ಯರ ಬಗ್ಗೆಯೋ ಎಂಬುದು ಸ್ಪಷ್ಟವಾಗಿರುವದಿಲ್ಲ. ಆತನ ಕಳಕಳಿಯು ಕೆಲವೊಂದು ಆಹಾರಗಳನ್ನು ತಿನ್ನುವದು ಮತ್ತು ವಿಶೇಷ ಕಾಲಗಳ ಆಚರಣೆ ಮಾಡುವದು ದೃಢವಿಲ್ಲದ ಮನಸ್ಸಾಕ್ಷಿಯ ಮೇಲೆ ಹೇಗೆ ಪರಿಣಾಮ ಬೀರುತ್ತದೆಂಬುದರ ಬಗ್ಗೆಯೇ ಆಗಿತ್ತು. ಆತನು ಹೀಗೆ ಬರೆದನು,

> ಒಬ್ಬನು ಯಾವದನ್ನಾದರೂ ತಿನ್ನಬಹುದೆಂದು ನಂಬುತ್ತಾನೆ; ನಂಬಿಕೆಯಲ್ಲಿ ದೃಢವಿಲ್ಲದವನು ಕಾಯಿಪಲ್ಯಗಳನ್ನು ಮಾತ್ರ ತಿನ್ನುತ್ತಾನೆ. . . . ಒಬ್ಬನು ಒಂದು ದಿನಕ್ಕಿಂತ ಮತ್ತೊಂದು ದಿನವನ್ನು ವಿಶೇಷವೆಂದೆಣಿಸುತ್ತಾನೆ; ಮತ್ತೊಬ್ಬನು ಎಲ್ಲಾ ದಿವಸಗಳನ್ನೂ

ವಿಶೇಷವೆಂದೆಣಿಸುತ್ತಾನೆ; ಪ್ರತಿಯೊಬ್ಬನು ತನ್ನ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರಬೇಕು (ರೋಮಾ 14:2-5).

ಇವುಗಳು ಒಂದು ದುರ್ಬಲ ಮನಸ್ಸಾಕ್ಷಿಗೆ - ಸ್ವತಃ ಒಬ್ಬನ ಮನಸ್ಸಾಕ್ಷಿ ಅಥವಾ ಬೇರೆಯವರ ಮನಸ್ಸಾಕ್ಷಿಯಾಗಿರಬಹುದು - ಸಂಬಂಧಿಸಿದ್ದನ್ನು ಹೊರತು ಪಡಿಸಿದರೆ ಅಂತಹ ದೈನಂದಿನ ಬಾಹ್ಯ ವಿಷಯಗಳು ಸುವಾರ್ತೆಯ ಆತ್ಮೀಕ ತಿರುಳಿನ ಮೇಲೆ ಯಾವದೇ ಪರಿಣಾಮ ಹೊಂದಿರುವದಿಲ್ಲ. ಪೌಲನು ಹೇಳಿದ್ದೇನೆಂದರೆ "ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ; ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ" (ರೋಮಾ 14:17; NIV). ಆತನು ಹೀಗೆ ಸಹ ಬರೆದನು, "ಬಲವಿಲ್ಲದವರನ್ನು ಸಂಪಾದಿಸುವದಕ್ಕೆ ಅವರಿಗೆ ಬಲವಿಲ್ಲದವನಾದೆನು. ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರಾರಿಗೆ ಎಂಥೆಂಥವನಾಗಬೇಕೋ ಅಂಥಂಥವನಾಗಿದ್ದೇನೆ" (1 ಕೊರಿಂಥ 9:22).

ಗಲಾತ್ಯ 4:10 ಹಾಗೂ ಕೊಲೊಸ್ಸೆ 2:16, 17ರ ನಡುವೆ ಹೋಲಿಕೆ ಮಾಡುವದು ಕಣ್ಸೆಳೆಯುವಂಥದ್ದಾಗಿದೆ:

ಹೀಗಿರುವದರಿಂದ *ತಿಂದು ಕುಡಿಯುವ ವಿಷಯದಲ್ಲಿಯೂ ಹಬ್ಬ ಅಮವಾಸ್ಯೆ ಸಬ್ಬತು ಎಂಬಿವುಗಳ ವಿಷಯದಲ್ಲಿಯೂ ನಿಮ್ಮನ್ನು ದೋಷಿಗಳೆಂದು* ಯಾರೂ ಎಣಿಸಬಾರದು. ಇವು ಮುಂದೆ ಬರಬೇಕಾಗಿದ್ದ ಕಾರ್ಯಗಳ ಛಾಯೆಯಾಗಿವೆ; ಇವುಗಳ ನಿಜಸ್ವರೂಪವು ಕ್ರಿಸ್ತನೇ (ಒತ್ತಿ ಹೇಳಿದ್ದು ನನ್ನದು).

2 ಪೂರ್ವಕಾಲವೃತ್ತಾಂತದಿಂದ ಉಲ್ಲೇಖಿಸಲಾದ ಉದಾಹರಣೆಗಳೊಂದಿಗೆ ಅತ್ಯಂಥ ನಿಕಟವಾಗಿ ಸಮಾನಾರ್ಥವುಳ್ಳ ಹೊಸ ಒಡಂಬಡಿಕೆಯ ವಾಕ್ಯಭಾಗವು ಇದೇ ಆಗಿದೆ. ಪೌಲನು ಕಾಲಗಳನ್ನು ಹೆಸರಿಸಿದ್ದು ಹಳೆಯ ಒಡಂಬಡಿಕೆಯಲ್ಲಿ ವಾರಕ್ಕೊಮ್ಮೆ ("ಸಬ್ಬತ್ ದಿನ"), ಮಾಸಿಕ ("ಹುಣ್ಣಿಮೆ"), ಮತ್ತು ವಾರ್ಷಿಕ ("ಒಂದು ಜಾತ್ರೆ") ಆಚರಣೆಗಳೊಂದಿಗೆ ನಿಕಟವಾಗಿ ಏಕಕಾಲಿಕವಾಗಿರುತ್ತವೆ. ಅಷ್ಟುಮಾತ್ರವಲ್ಲದೆ, ಕೇವಲ "ಛಾಯೆಗಳಾಗಿವೆ" ಎಂಬ ಮಾತುಗಳು ನಮಗೆ ಹೇಳುವದೇನಂದರೆ ಈ ಆಚಾರಗಳೆಲ್ಲಾ ಮುಂದೆ ಬರಲಿದ್ದ ಸುವಾರ್ತೆಯ ಯುಗಕ್ಕೆ ಪ್ರವಾದನಾತ್ಮಕ ಚಿತ್ರಣ ಮಾತ್ರವೇ ಆಗಿದ್ದವೆಂಬುದೆ (ನೋಡಿರಿ ಇಬ್ರಿಯ 8:5; 10:1). ಇದು ಪೌಲನು ಅನ್ಯಧರ್ಮಿಯತೆಗೆ ಸಂಬಂಧಿಸಿದ ಯಾವ ಸಂಗತಿಯ ಬಗ್ಗೆಯಾಗಲಿ ಮಾತಾಡುತ್ತಿದ್ದನೆಂಬ ಸಾಧ್ಯತೆಯನ್ನು ನಿರ್ಣಾಯಕವಾಗಿ ಅಳಿಸಿ ಹಾಕುತ್ತದೆ. ಇಲ್ಲಿ ಸಮಸ್ಯೆಯು ಯೆಹೂದಿಮತವಾಗಿತ್ತು, ಅದನ್ನು ಯೆಹೂದಿ ಅಧಿಕ ಪ್ರಸಂಗಿಗಳು ಕ್ರೈಸ್ತೀಯ ಶಿಷ್ಯತ್ವಕ್ಕೆ ಒಂದು ಅಗತ್ಯತೆಯೆಂಬುದಾಗಿ ಸುವಾರ್ತೆಯೊಳಗೆ ತೂರಿಸುವದಕ್ಕೆ ಬಹಳ ಯಶಸ್ವಿಯಾಗಿದ್ದರು. ಇದೇ ಸುವಾರ್ತೆಯನ್ನು ಕೆಡಿಸುವಿಕೆಯಾಗಿದ್ದು ಅದೊಂದು ಸುವಾರ್ತೆಯೇ (ಶುಭಸುದ್ದಿ) ಅಲ್ಲ ಎಂಬುದಾಗಿ ಪೌಲನು ಹೇಳಿದನು (ಗಲಾತ್ಯ 1:6, 7).

**ವಚನ 11.** ಗಲಾತ್ಯದವರೊಳಗೆ ಇದ್ದ ಯೆಹೂದಿಕರಣಗೊಳ್ಳುವ ಒಲವುಗಳ ಬೆಳಕಿನಲ್ಲಿ, ಪೌಲನು ಹೀಗೆ ಹೇಳಿದನು, **ನಾನು ನಿಮಗೋಸ್ಕರ ಪ್ರಯಾಸಪಟ್ಟದ್ದು ನಿಷ್ಫಲವಾಯಿತೋ ಏನೋ ಎಂದು ನಿಮ್ಮ ವಿಷಯದಲ್ಲಿ ಭಯಪಡುತ್ತೇನೆ.** ಅವರು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದರ ಆಧಾರವಾಗಿರುವ ನೀತಿಗೋಸ್ಕರವಾಗಿ ಕ್ರಿಸ್ತನಲ್ಲಿ ಸಿಕ್ಕಿರುವ ಆತ್ಮೀಕ ಸ್ವಾತಂತ್ರ್ಯವನ್ನು ವಿನಿಮಯ ಮಾಡಿಕೊಳ್ಳುವರೋ ಎಂಬ ಕಳಕಳಿಯು ಆತನಲ್ಲಿತ್ತು. 2 ಕೊರಿಂಥ 6:1ರಲ್ಲಿ ಅದೇ ರೀತಿಯ ವಿಚಾರವು ಕಾಣಿಸಿಕೊಳ್ಳುತ್ತದೆ, ಅಲ್ಲಿ ಅಪೊಸ್ತಲನು

ಕೊರಿಂಥದ ವಿಶ್ವಾಸಿಗಳಿಗೆ "ನೀವು ಹೊಂದಿದ ದೇವರ ಕೃಪೆಯನ್ನು ವ್ಯರ್ಥ ಮಾಡಿಕೊಳ್ಳಬೇಡಿರಿ" ಎಂದು ಬುದ್ಧಿ ಹೇಳುತ್ತಾನೆ. ಒಬ್ಬ ವ್ಯಕ್ತಿಯು ಕ್ರಿಸ್ತನ ಸುವಾರ್ತೆಗೆ ವಿಧೇಯನಾಗಬಹುದು ಮತ್ತು ಅದನ್ನು ಅಲ್ಲಗಳೆಯುವಂಥ ರೀತಿಯಲ್ಲಿ ಜೀವಿಸಲೂ ಬಹುದಾಗಿದೆ - ಒಬ್ಬ ಯೆಹೂದಿಕರಣಗೊಳಿಸುವ ವ್ಯಕ್ತಿಯಾಗಿ ಅಥವಾ ಒಬ್ಬ ಸ್ವತಂತ್ರವಿಚಾರಿಯಾಗಿ ಆಗಿರಬಹುದು. ಇವೆರಡರಲ್ಲಿ ಯಾವ ಸ್ಥಿತಿಯಲ್ಲಿದ್ದರೂ ಸರಿಯೇ, ಆತನು ಕ್ರಿಸ್ತನಿಂದ "ಅಗಲಿ ಹೋದವರು" ಅಥವಾ "ಬೇರ್ಪಟ್ಟವರು" (NIV) ಆಗುವನು (ಗಲಾತ್ಯ 5:4).

ತಾನು "[ಗಲಾತ್ಯವರಿಗೋಸ್ಕರ] ಪ್ರಯಾಸಪಟ್ಟದ್ದು ನಿಷ್ಫಲವಾಯಿತೋ" ಎಂದು ಯೋಚಿಸುವದಕ್ಕೆ ಬಯಸಲಿಲ್ಲ. "ಪ್ರಯಾಸ" ಎಂಬುದಕ್ಕಿರುವ ಪದವು (κοπιάω, *kopiaō*) "ಕಠಿಣವಾಗಿ ದುಡಿ," "ಕಷ್ಟಪಡು," "ಪರಿಶ್ರಮಪಡು," ಅಥವಾ "ಹೋರಾಡು" ಎಂದರ್ಥವನ್ನು ಕೊಡುತ್ತದೆ. ಅದು ಒಬ್ಬನನ್ನು "ದಣಿವುಗೊಳ್ಳುವಂತೆ" ಅಥವಾ "ಬಳಲುವಂತೆ" ಮಾಡುವ ಕಠಿಣ ಕೆಲಸವನ್ನು ಸೂಚಿಸುತ್ತದೆ.[23] ಗಲಾತ್ಯದ ಸಭೆಗಳು ಪೌಲ ಹಾಗೂ ಬಾರ್ನಬರಿಂದ ಅವರ ಮೊದಲನೆಯ ಸುವಾರ್ತಾ ಪ್ರಯಾಣದ ವೇಳೆಯಲ್ಲಿ ಸ್ಥಾಪಿಸಲ್ಪಟ್ಟಿದ್ದವು (ಅಪೊಸ್ತಲರ ಕೃತ್ಯಗಳು 13; 14). ಈ ವ್ಯಕ್ತಿಗಳು ತಮಗೆ ಹಿಂಸೆಯುಂಟಾಗಿದ್ದಾಗ್ಯೂ ಸುವಾರ್ತೆಯನ್ನು ಸಾರುವದನ್ನು ನಿಲ್ಲಿಸಿರಲಿಲ್ಲ. ಲುಸ್ತ್ರದಲ್ಲಿ, ಪೌಲನಿಗೆ ಕಲ್ಲುಗಳಿಂದ ಹೊಡೆದು ಸಾಯುವದಕ್ಕೆ ಸಹ ಬಿಟ್ಟು ಹೋಗಲಾಗಿತ್ತು (ಅಪೊಸ್ತಲರ ಕೃತ್ಯಗಳು 14:19). ಖಂಡಿತವಾಗಿಯೂ, ಈ ವೈಯಕ್ತಿಕವಾದ ತ್ಯಾಗಗಳೆಲ್ಲವೂ "ವ್ಯರ್ಥವಾಗಿ" (εἰκῆ, *eikē*), ಅಂದರೆ, "ಉದ್ದೇಶವಿಲ್ಲದೆ"[24] ಹೋಗುವದು ಆತನಿಗೆ ಇಷ್ಟವಿರಲಿಲ್ಲ.

## ಗಲಾತ್ಯದವರ ವರ್ತನೆಯ ಕುರಿತು ಪೌಲನು ದಿಗ್ಭ್ರಮೆಗೊಂಡಿದ್ದು (4:12-20)

**[12]ಸಹೋದರರೇ, ನಾನು ನಿಮ್ಮ ಹಾಗೆ ಆದದ್ದರಿಂದ ನೀವು ನನ್ನ ಹಾಗೆ ಆಗಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ನೀವು ನನಗೇನೂ ಅನ್ಯಾಯಮಾಡಲಿಲ್ಲ. [13]ನನ್ನ ಶರೀರಕ್ಕೆ ಅಸೌಖ್ಯವಿದ್ದದರಿಂದ ನಾನು ನಿಮ್ಮಲ್ಲಿದ್ದು ಮೊದಲನೆಯ ಸರ್ತಿ ನಿಮಗೆ ಸುವಾರ್ತೆ ಸಾರಿದ್ದನ್ನು ನೀವು ಬಲ್ಲಿರಿ. [14]ನನ್ನ ಶರೀರದಲ್ಲಿ ನಿಮ್ಮ ಬೇಸರಿಕೆಗೆ ಆಸ್ಪದವಾದದ್ದನ್ನು ನೀವು ಹೀನೈಸಲಿಲ್ಲ, ಓಕರಿಸಲಿಲ್ಲ; ನನ್ನನ್ನು ದೇವದೂತನಂತೆ ಕ್ರಿಸ್ತ ಯೇಸುವಿನಂತೆ ಸೇರಿಸಿಕೊಂಡಿರಿ. [15]ಆಗ ನಮಗೆ ಶುಭವಾಯಿತೆಂದು ನೀವು ಅಂದುಕೊಂಡಿರಲ್ಲಾ; ಆ ಶುಭವು ಎಲ್ಲಿ ಹೋಯಿತು? ಸಾಧ್ಯವಾಗಿದ್ದರೆ ನಿಮ್ಮ ಕಣ್ಣುಗಳನ್ನಾದರೂ ಕಿತ್ತು ನನಗೆ ಕೊಡುತ್ತಿದ್ದಿರೆಂದು ನಿಮ್ಮನ್ನು ಕುರಿತು ಸಾಕ್ಷಿಹೇಳುತ್ತೇನೆ. [16]ಹೀಗಿರಲಾಗಿ ನಾನು ನಿಮಗೆ ಸತ್ಯವನ್ನು ಹೇಳುವದರಿಂದ ನಿಮಗೆ ಶತ್ರುವಾಗಿದ್ದೇನೋ? [17]ಅವರು ನಿಮ್ಮನ್ನು ಮೆಚ್ಚಿಸುವದಕ್ಕೆ ಆಸಕ್ತರಾಗಿದ್ದಾರೆ; ಆದರೆ ಒಳ್ಳೇ ಅಭಿಪ್ರಾಯದಿಂದ ಅಂಥವರಾಗಿರದೆ ನೀವು ತಮ್ಮನ್ನೇ ಮೆಚ್ಚಿಸುವವರಾಗಬೇಕೆಂದು ನಿಮ್ಮನ್ನು ಅಗಲಿಸುವದಕ್ಕೆ ಅಪೇಕ್ಷಿಸುತ್ತಾರೆ. [18]ನಾನು ನಿಮ್ಮ ಸಂಗಡ ಇರುವಾಗ ಮಾತ್ರವಲ್ಲದೆ ಯಾವಾಗಲೂ ಒಳ್ಳೇ ವಿಷಯದಲ್ಲಿ ನೀವು ಮೆಚ್ಚಿಸಿಕೊಳ್ಳುವದು ಒಳ್ಳೇದೇ. [19]ನನ್ನ ಪ್ರಿಯವಾದ ಮಕ್ಕಳೇ, ಕ್ರಿಸ್ತನ ಸಾರೂಪ್ಯವು ನಿಮ್ಮಲ್ಲಿ ಉಂಟಾಗುವ ತನಕ ನಿಮಗೋಸ್ಕರ ತಿರಿಗಿ ಪ್ರಸವವೇದನೆ ಪಡುತ್ತೇನೆ. [20]ನಿಮ್ಮ ವಿಷಯದಲ್ಲಿ ಏನು ಮಾಡಬೇಕೋ ನನಗೆ ತಿಳಿಯದು. ನಾನು ಈಗಲೂ ನಿಮ್ಮಲ್ಲಿದ್ದು ಬೇರೆ ರೀತಿಯಿಂದ ಮಾತಾಡುವದಕ್ಕೆ ಎಷ್ಟೋ ಆಶೆಪಡುತ್ತೇನೆ.**

4:12-20ರಲ್ಲಿ, ಪೌಲನು ಭಾವೋದ್ರಿಕ್ತಗೊಳಿಸುವ ಮನವಿಯೊಂದನ್ನು ಮಾಡಿದನು, ಅದು

1 ಮತ್ತು 2 ಅಧ್ಯಾಯಗಳಲ್ಲಿರುವಂತೆಯೇ ಹರ್ಷದಾಯಕವಾಗಿ ಆತ್ಮಚರಿತ್ರಾತ್ಮಕ ಆಗರುತ್ತದೆ. ಆತನು ಯಾವ "ಮಕ್ಕಳ" ವಿಷಯದಲ್ಲಿ "ಕ್ರಿಸ್ತನ ಸಾರೂಪ್ಯವು ನಿಮ್ಮಲ್ಲಿ ಉಂಟಾಗುವ ತನಕ [ಅವರೊಗೋಸ್ಕರ] ತಿರಿಗಿ ಪ್ರಸವವೇದನೆ" (4:19) ಪಡುವವನಾಗಿದ್ದನೋ ಅವರನ್ನು ಮನವೋಲಿಸುವವನಾಗಿ ಸಂಬೋಧಿಸುತ್ತಾನೆ. ರಬ್ಬಿ ಗಮಲಿಯೇಲನ ಉದಯೋನ್ಮುಖಿ ವಿದ್ಯಾರ್ಥಿಯಾಗಿದ್ದು (1:14; ಅಪೊಸ್ತಲರ ಕೃತ್ಯಗಳು 22:3) ಮತ್ತು "[ತನ್ನ] ಧರ್ಮದಲ್ಲಿ ಬಹು ಖಂಡಿತವಾದ ಮತವನ್ನನುಸರಿಸಿ" (ಅಪೊಸ್ತಲರ ಕೃತ್ಯಗಳು 26:5) ಜೀವಿಸಿದ್ದವನು ಆಗಿದ್ದ ಬೋಧಕನಾದ ಪೌಲನು, ಈಗ ನೋವಿಗೊಳಗಾಗುವವನು, ತನ್ನ ಮಾದರಿಯನ್ನು ಅನುಸರಿಸುವಂತೆ ಕ್ರಿಸ್ತ ನಂಬಿಕೆಯಲ್ಲಿ ತನಗೆ ಮಕ್ಕಳಾಗಿರುವವರನ್ನು ಅಂಗಲಾಚಿಸುವ ಸ್ಥಿತಿಗೆ ಬಂದಿದ್ದನು.

**ವಚನ 12.** ಅಪೊಸ್ತಲನು ತನ್ನ ಮನವಿಯನ್ನು ಈ ಮಾತುಗಳಿಂದ ಆರಂಭಿಸಿದನು: **ಸಹೋದರರೇ, ನಾನು ನಿಮ್ಮ ಹಾಗೆ ಆದದ್ದರಿಂದ ನೀವು ನನ್ನ ಹಾಗೆ ಆಗಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ.** NASBಯು ಇತರ ಹಲವಾರು ತರ್ಜುಮೆಗಳ ಜೊತೆಗೂಡಿ, ಕ್ರಿಯಾಪದವನ್ನು "ಆಗಬೇಕೆಂದು" ಅನುವಾದಿಸುತ್ತದೆ (ನೋಡಿರಿ NKJV; NIV; NRSV; NCV; ESV). ಹೇಗೂ, ಗ್ರೀಕ್ ವಾಕ್ಯದಲ್ಲಿ, γίνεσθε (*ginesthe*) ಎಂಬುದು γίνομαι (*ginomai*) ಎಂಬ ಪದದ ವರ್ತಮಾನ ಆಜ್ಞಾರ್ಥಕ ರೂಪವಾಗಿರುತ್ತದೆ ಮತ್ತು "ಆಗಿರಿ" ಎಂಬುದಾಗಿ ಸಮರ್ಪಕ ರೀತಿಯಲ್ಲಿ ಅನುವಾದಿಸಲ್ಪಡತಕ್ಕದ್ದು (ನೋಡಿರಿ KJV). ಜನರು ಈಗಾಗಲೇ ಏನಾಗಿದ್ದಾರೋ ಅದೇ ರೀತಿ ಆಗಿರುವದನ್ನು ಮುಂದುವರೆಸುವಂತೆ ಪೌಲನು ಪ್ರೋತ್ಸಾಹಿಸಿರುವ ಸಂಭವವಿಲ್ಲ, ಮತ್ತು ಅನುವಾದಕರ ಯೋಚನೆಯು ಅದೇ ಆಗಿರಬಹುದಾಗಿದೆ ಎಂಬ ವಾದವನ್ನು ಮಾಡಬಹುದು. ಹಾಗಿದ್ದರೂ, "ಇರುವದನ್ನು ಮುಂದುವರೆಸಿರಿ" ಎಂಬ ಅರ್ಥವಿರುವ ಅನೇಕ ಉದಾಹರಣೆಗಳು ಪೌಲನ ಬರಹಗಳಲ್ಲಿ ಕಾಣಿಸಿಕೊಳ್ಳುತ್ತವೆ: "ಆದದರಿಂದ ನನ್ನನ್ನು ಅನುಸರಿಸಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ" (1 ಕೊರಿಂಥ 4:16). "ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ" (1 ಕೊರಿಂಥ 11:1). "ದೇವರು ನಿಮಗೆ ಕ್ರಿಸ್ತನಲ್ಲಿ ಕ್ಷಮಿಸಿದನಲ್ಲಾ; ಆದದರಿಂದ ದೇವರ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ ಆತನನ್ನು ಅನುಸರಿಸುವವರಾಗಿರಿ" (ಎಫೆಸ 5:1). ಈ ವ್ಯಾಕರಣಾತ್ಮಕ ಬಳಕೆಯು ಯಾವಾಗ ಪೌಲನು "ನನ್ನನ್ನು ಅನುಸರಿಸುವವರಾಗಿರಿ" ಎಂದು ಹೇಳಿದಾಗ, ವಾಸ್ತವಿಕದಲ್ಲಿ ಆತನ ತಾತ್ಪರ್ಯವು "ನನ್ನನ್ನು ಅನುಸರಿಸುವದನ್ನು ನಿಲ್ಲಿಸದಿರಿ" ಎಂದಾಗಿತ್ತು.

ಪೌಲನ ಮಾದರಿಯನ್ನು ಅನುಸರಿಸುದು ಹೊಸ ಒಡಂಬಡಿಕೆಯಲ್ಲಿ ಪದೇ ಪದೇ ಕಾಣಿಸಿಕೊಳ್ಳುವ ಚರ್ಚೆಯಾಂಶವಾಗಿರುತ್ತದೆ.[25] ಪೌಲನಿಗೆ ಮಾದರಿಯು, ಆತನ ಸ್ವಂತ ಮಾದರಿಯೂ ಸೇರಿದಂತೆ ಅದು ಎಷ್ಟು ಶಕ್ತಿಯುಳ್ಳದ್ದೆಂದು ಗೊತ್ತಿತ್ತು. ಸುವಾರ್ತೆಯನ್ನು ಸಾರುವದು ಸ್ವತಃ ಶಕ್ತಿಶಾಲಿಯೇ ಆಗಿರುತ್ತದೆ, ಆದರೆ ಅದು ತಾನು ಬೋಧಿಸುವ ಪ್ರಕಾರವೇ ಜೀವಿಸುತ್ತಿರುವ ವ್ಯಕ್ತಿಯ ಸಜೀವ ಚಿತ್ರಣದೊಂದಿಗೆ ಶೃಂಗರಿಸಲ್ಪಟ್ಟರೆ ಅದು ಮತ್ತಷ್ಟು ಶಕ್ತಿಶಾಲಿಯಾಗುವದು. ಪೌಲನು ಯೇಸು ಕ್ರಿಸ್ತನಿಂದ ಸಂಪೂರ್ಣ ಅಧಿಕಾರ ಪಡೆದುಕೊಂಡಿದ್ದ ರಾಯಭಾರಿಯಾಗಿದ್ದನು. ಆತನ ಮಾತುಗಳು ದೇವರಿಂದ ಬಂದವುಗಳಾಗಿದ್ದರಿಂದ, ಅವುಗಳು ಅಧಿಕಾರಯುತವಾಗಿದ್ದದ್ದು ಮಾತ್ರವೇ ಆಗಿರಲಿಲ್ಲ, ಆದರೆ ಆತನ ಜೀವಿತ ಮತ್ತು ಮಾದರಿ ಸಹ ಅಧಿಕಾರಯುತವಾಗಿದ್ದವು. ಆತನು ಫಿಲಿಪ್ಪಿಯ ಸಭೆಗೆ ಬರೆದ ಮಾತುಗಳಿಂದ ಇದು ಸ್ಪಷ್ಟಗೊಳ್ಳುತ್ತದೆ: "ನೀವು ಯಾವದನ್ನು ನನ್ನಿಂದ ಕಲಿತು ಹೊಂದಿದಿರೋ ಮತ್ತು ಯಾವದನ್ನು

ನನ್ನಲ್ಲಿ ಕೇಳಿ ಕಂಡಿರೋ ಅದನ್ನೇ ಮಾಡುತ್ತಾ ಬನ್ನಿರಿ" (ಫಿಲಿಪ್ಪಿ 4:9).

ಪೌಲನು ಮುಂದುವರೆದು ಹೇಳಿದ್ದೇನೆಂದರೆ, **ನೀವು ನನಗೇನೂ ಅನ್ಯಾಯಮಾಡಲಿಲ್ಲ.** NASBಯು ಮೂಲ ಗ್ರೀಕ್ ವಾಕ್ಯದಲ್ಲಿ ಕಾಣಿಸಿಕೊಳ್ಳದ ಮಾತುಗಳನ್ನು ಇಟಾಲಿಕರಣಗೊಳಿಸುತ್ತದೆ. 12ನೇ ವಚನದಲ್ಲಿ, ಅದು ವಾಸ್ತವಿಕದಲ್ಲಿ ಹೀಗೆ ಹೇಳುತ್ತದೆ, "*ನಾನು ನಿಮ್ಮ ಹಾಗೆ ಆದದ್ದರಿಂದ ನೀವೂ ನನ್ನ ಹಾಗೆ* ಆಗಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ." ಪ್ರಾಚೀನ ಗ್ರೀಕ್ ಮತ್ತು ಇಬ್ರಿಯ ಎರಡರಲ್ಲೂ, "ಆಗಿರಬೇಕು" ಎಂಬುದು ಸ್ವಯಂವ್ಯಕ್ತವಾಗಿದ್ದು ಅನಾವಶ್ಯಕವಾಗುವ ವೇಳೆ ಕೈ ಬಿಡಲ್ಪಟ್ಟಿರುತ್ತದೆ. ಹೇಗೂ, ಅನುವಾದಕನು ಕೆಲವು ಸಾರಿ "ಆಗಿರಬೇಕು" ಎಂಬುದರ ಸಮಯ ಚೌಕಟ್ಟಿನ ಬಗ್ಗೆ ಸಂದೇಹವನ್ನು ಹಾಗೆಯೇ ಉಳಿಸಿಕೊಳ್ಳುವನು. ಅದು ಭೂತ, ವರ್ತಮಾನ, ಅಥವಾ ಭವಿಷ್ಯತ್ಕಾಲವೋ? ಅಷ್ಟುಮಾತ್ರವಲ್ಲದೆ, ಅದು ಭೂತಕಾಲವಾಗಿದ್ದರೆ, ಯಾವ ವಿಧವಾದ ಭೂತಕಾಲ ರೂಪವು ಇಲ್ಲಿ ವ್ಯಕ್ತಪಡಿಸಲ್ಪಟ್ಟಿದೆ?

ಇಲ್ಲಿ ವಾಕ್ಯಭಾಗವು ಅಕ್ಷರಶಃ ಹೀಗೆ ಹೇಳುತ್ತದೆ, "ನನ್ನ ಹಾಗೆ ಇರಿ, ಯಾಕೆಂದರೆ ನಾನು ಸಹ ನಿಮ್ಮಂತೆಯೇ ಇರುವೆನು." ಕಡೇ ಪದಗುಚ್ಛದಲ್ಲಿ ಕ್ರಿಯಾಪದದ ಕೊರತೆಯಿರುವದರಿಂದ, ಗ್ರೀಕ್ ವ್ಯಾಕರಣದ ನಿಯಮದಲ್ಲಿ ಅಗತ್ಯವಿರುವದೇನೆಂದರೆ, ಅರ್ಥವು ಬರುವ ರೀತಿಯಲ್ಲಿ ಅಲ್ಲಿ "ಆಗಿರಬೇಕು" ಎಂಬ ಯಾವದಾದರೂ ರೂಪದ ಪದವನ್ನು ಸೇರ್ಪಡೆಗೊಳಿಸಬೇಕಾಗಿರುತ್ತದೆ. ಯಾವ ರೂಪದ ಪದವನ್ನು ಆರಿಸಿಕೊಳ್ಳತಕ್ಕದ್ದು? ಪೌಲನು ತಾನು ಗಲಾತ್ಯದವರನ್ನು ಮೊದಲ ಬಾರಿಗೆ ಭೇಟಿ ಮಾಡಿದ ಕಾಲವನ್ನು ಮತ್ತು ಅವರು ಆತನನ್ನು ಸ್ವೀಕರಿಸಿಕೊಂಡಿದ್ದ ರೀತಿಯನ್ನು ನೆನಪಿಸಿಕೊಳ್ಳುತ್ತಿರುವನೋ, ಅಥವಾ ಬರೆಯುವ ಸಮಯಕ್ಕೆ ಹತ್ತಿರದಲ್ಲಿದ್ದಂಥ ಕಾಲವೊಂದನ್ನು ಯೋಚಿಸಿಕೊಂಡಿದ್ದನೋ? ವಾಸ್ತವಾಂಶವು ಏನೆಂದರೆ ಇದು ಒಟ್ಟಾರೆಯಾಗಿ ವ್ಯಾಖ್ಯಾನದ ಸಂಗತಿಯಾಗಿರುತ್ತದೆ, ಮತ್ತು ಹೀಗಿರುವದರಿಂದ, ವ್ಯಾಖ್ಯಾನಕಾರರು ಈ ವಚನದ ಕುರಿತು ಮಾಡುವ ಚರ್ಚೆಗಳು ಸ್ಪಷ್ಟವಾಗಿ ತೋರಿಸುವ ಪ್ರಕಾರ ನಾವು ತೀರ್ಮಾನವನ್ನು ಯಾವ ರೀತಿಯಲ್ಲಿಯೂ ಸುಲಭವಾಗಿರುವದಿಲ್ಲ. ನಾವು ಸನ್ನಿವೇಶದಲ್ಲಿ ಅಥವಾ ಪೌಲನು ಸಾಮಾನ್ಯವಾಗಿ ಅನುಸರಿಸುವ ದಾರಿ ಹಾಗೂ ಕಾರ್ಯಮಾಡುವ ವಿಧಾನದ ಬಗ್ಗೆ ನಮಗೆ ಗೊತ್ತಿರುವ ಸಂಗತಿಯಲ್ಲಿ, ನಾವು ಕೆಲವೊಂದು ಸುಳಿವುಗಳಿಗೆ ಹುಡುಕಾಡುವದೊಂದನ್ನೇ ಮಾಡಬಲ್ಲೆವು. R. Alan Coleನು ಈ ವಚನದ ಮೇಲಿನ ತನ್ನ ಚರ್ಚೆಯನ್ನು ಪರಿಚಯಿಸುತ್ತಾ, ಈ ಅಭಿಪ್ರಾಯವನ್ನು ತಿಳಿಸುತ್ತಾನೆ, "ಆರಂಭಿಕ ವಾಕ್ಯಖಂಡವು ಮೊದಲನೆಯ ಒಗಟು ಆಗಿದೆ. ಅಕ್ಷರಶಃ ಅದು ಹೀಗಿರುತ್ತದೆ 'ನನ್ನ ಹಾಗೆ ಇರಿ, ನಾನು ಸಹ ನಿಮ್ಮಂತೆಯೇ (ಆಗಿರುವವನಾಗಿ) ಇದ್ದೇನೆ'."[26]

ಈ ವ್ಯಾಕರಣದಲ್ಲಾಗಿರುವ ತಪ್ಪು ಪೌಲನ ಭಾವನಾತ್ಮಕ ಸ್ಥಿತಿಯ ಫಲಿತವಾಗಿರುವ ಸಾಧ್ಯತೆಯಿದೆ. ಅಂಥ ಕಾರಣಾಂಶಗಳು ಖಂಡಿತವಾಗಿಯೂ ಶೈಲಿಯ ಮೇಲೆ ಪರಿಣಾಮ ಬೀರುತ್ತವೆ, ಸಾರ್ವಜನಿಕ ಭಾಷಣದಲ್ಲಷ್ಟೆ ಅಲ್ಲ ಆದರೆ ಬರೆಯಲ್ಪಟ್ಟ ಪ್ರಸಂಗದಲ್ಲಿಯೂ ಸಂಭವಿಸಬಲ್ಲವು. ಮುಖ್ಯವಾಗಿ, ಪೌಲನು "ನನ್ನ ಹಾಗೆ ಇರಿ" ಎಂದು ಮೊರೆಯಿಡುವಂತೆ ಮಾಡಿದ್ದಕ್ಕೆ ಎರಡು ಕಾರಣಗಳನ್ನು ಮುಂಡಿಸಲಾಗಿರುತ್ತದೆ. (1) ಆತನು ಕ್ರಿಸ್ತ ನಂಬಿಕೆಯಲ್ಲಿ ತನಗೆ ಮಕ್ಕಳಾಗಿದ್ದ ಗಲಾತ್ಯದವರನ್ನು ತನ್ನನ್ನು ಅವರ ಮಾದರಿ ವ್ಯಕ್ತಿಯನ್ನಾಗಿ ಮಾಡಿಕೊಂಡು ಅನುಸರಿಸಬೇಕೆಂದು ಬೇಡಿಕೊಳ್ಳುತ್ತಿದ್ದಾನೆ. ಅವರನ್ನು ಯೆಹೂದಿಕರಣಗೊಳಿಸುವ ವ್ಯಕ್ತಿಗಳ ಮತಾಂತರಗೊಳಿಸುವ ಪ್ರಯತ್ನಗಳ ಆಮೀಷಕ್ಕೊಳಗಾಗಿ ಆತನಲ್ಲಿ ಅವರಿಗಿರುವ ದೃಢವಿಶ್ವಾಸವನ್ನು ಅಸಡ್ಡೆ ಮಾಡುವದು ಆತನಿಗೆ

ಇಷ್ಟವಿರಲಿಲ್ಲ. ಹೀಗೆ ಇರುವದಾದಲ್ಲಿ, ಪೌಲನು ತನ್ನ ಆತ್ಮೀಕ ಮಕ್ಕಳಿಗೆ ಯಥಾಃರೀತಿಯಂತೆ ಆತ್ಮೀಕ ತಂದೆಯಾಗಿ ತನ್ನ ಮಾದರಿ ಅನುಸರಿಸುವದನ್ನು ಮುಂದುವರೆಸುವಂತೆ ಬುದ್ಧಿಹೇಳುವವನಾಗಿದ್ದನು. (2) ಆತನು ಅವರಿಗೆ ತಿಳಿಯಪಡಿಸಲು ಪ್ರಯತ್ನಿಸುತ್ತಿರುವ ಎಚ್ಚರಿಕೆಗಳನ್ನು (ಪರಿಣಾಮಗಳನ್ನೊಳಗೊಂಡ) ಸ್ವೀಕರಿಸಿಕೊಳ್ಳುವದಕ್ಕೆ ತಡೆಯಾಗಬಲ್ಲ ಯಾವದೇ ವಿಘ್ನಗಳನ್ನು ತೊಲಗಿಸಿಕೊಳ್ಳಬೇಕೆಂಬುದು ಆತನ ಬಯಕೆಯಾಗಿತ್ತು. ವಿಷಯ ಹೀಗಿರುವದಾದಲ್ಲಿ, ಆತನು ಈ ವಿಧದಲ್ಲಿ ಹೇಳುವವನಾಗಿದ್ದನು, "ನಾವು ಮೊದಲ ಬಾರಿಗೆ ಭೇಟಿಯಾದ ವೇಳೆ ಹೇಗಿದ್ದೆನೋ ಹಾಗೆ ಇರುವವರಾಗಿರಿ, ನಾವು ಕ್ರಿಸ್ತನಲ್ಲಿ ಒಂದಾಗುವದನ್ನು ಪ್ರತಿರೋಧಿಸುವದಕ್ಕೆ ಯಾವದೇ ಜನಾಂಗೀಯ ಅಥವಾ ಪೂರ್ವ ಧರ್ಮಗಳ ಭಿನ್ನಾಭಿಪ್ರಾಯಗಳಿಗೆ ಅವಕಾಶ ಕೊಡಬೇಡಿರಿ."

ನಾವು ಯಾವ ಆಯ್ಕೆಯನ್ನು ಮಾಡಿಕೊಂಡರೂ ಸರಿಯೇ, ಪೌಲನ ಸಂದೇಶವಂತೂ ತಿರುಳಾತ್ಮಕವಾಗಿ ಒಂದೇ ಆಗಿತ್ತು. ಮಿಕ್ಕ ಎಲ್ಲಾ ಅನ್ಯಜನಾಂಗದ ಕ್ರೈಸ್ತರನ್ನು ಅಂಗೀಕರಿಸಿದ್ದಂತೆಯೇ ಗಲಾತ್ಯದವರನ್ನು ಸಹ ಯಾವಾಗಲೂ ಅಂಗೀಕರಿಸಿಕೊಂಡಿದ್ದನು, ಅವರು ದೇವರ ಮಕ್ಕಳಾಗಿ ಸ್ವೀಕರಿಸಿಕೊಳ್ಳಲ್ಪಟ್ಟದ್ದರ ಮತ್ತು ತಾನು ಸ್ವೀಕರಿಸಿಕೊಳ್ಳಲ್ಪಟ್ಟದ್ದರ ನಡುವೆ ಯಾವದೇ ಭೇದವನ್ನು ಮಾಡಿರಲಿಲ್ಲ. ಇದು ಸರಿ ಆಗಿರುವದಾದರೆ, ಎರಡನೆಯ ವಾಕ್ಯಖಂಡವನ್ನು "ಯಾಕೆಂದರೆ ನಾನು ಸಹ ನೀವು ಇದ್ದಂತೆಯೇ ಇದ್ದೆನು" ಎಂದು ಅನುವಾದಿಸಬಹುದು. "ಸರಳವಾಗಿ ಹೇಳುವದಾದರೆ, ನಾನು ಜನಾಂಗೀಯತೆ, ಪೂರ್ವ ಜೀವಿತ ಶೈಲಿ, ಶಾರೀರಿಕ ರೂಪ, ಅಥವಾ ಬೇರೆ ಯಾವ ವಿಷಯದಲ್ಲಿಯೇ ಆಗಲಿ ಭೇದವನ್ನು ಮಾಡಲಿಲ್ಲ."

ಅಪೊಸ್ತಲನು ಇನ್ನೂ ಹೇಳಿದ್ದೇನೆಂದರೆ, **ನೀವು ನನಗೇನೂ ಅನ್ಯಾಯಮಾಡಲಿಲ್ಲ.** ಈ ಹೇಳಿಕೆಯ ವಿಷಯದಲ್ಲಿ, Bruceನ ಅಭಿಪ್ರಾಯವು ವಿಶೇಷವಾಗಿ ಆಕರ್ಷಕವಾಗಿರುತ್ತದೆ. ಆತನು 2 ಕೊರಿಂಥ 6:11-13ರೊಂದಿಗೆ ಹೋಲಿಕೆ ಮಾಡುತ್ತಾನೆ, ಅಲ್ಲಿ ಪೌಲನು ಕೊರಿಂಥದಲ್ಲಿ ತಾನು ಪರಿವರ್ತನೆಗೆ ನಡಿಸಿದ್ದ ನಿಷ್ಠೆತಪ್ಪಿದವರಾದ ಕ್ರೈಸ್ತರೊಂದಿಗೆ, ತಂದೆಯು ತನ್ನ ಮಕ್ಕಳೊಂದಿಗೆ ಮಾತಾಡುವ ರೀತಿಯಲ್ಲಿ ತನ್ನ ಹೃದಯದಲ್ಲಿದ್ದದ್ದನ್ನೆಲ್ಲಾ ಅವರ ಮುಂದೆ ಹಂಚಿಕೊಂಡನು. ಆ ಸನ್ನಿವೇಶದಲ್ಲಿ, ಪೌಲನು ಕೊರಿಂಥದವರಿಗೆ ಅವರೊಳಗೆ ಒಬ್ಬನಿಗೂ ತಾನು ಅನ್ಯಾಯ ಮಾಡಲಿಲ್ಲ ಎಂದು ನಿಶ್ಚಯಗೊಳಿಸಿದನು (2 ಕೊರಿಂಥ 7:2), ಅದೇ ರೀತಿಯಲ್ಲಿಯೇ ಆತನು ಗಲಾತ್ಯದವರಿಗೆ ಅವರಲ್ಲಿ ಯಾವನೂ ತನಗೆ ಅನ್ಯಾಯ ಮಾಡಲಿಲ್ಲ ಎಂದು ನಿಶ್ಚಯವಾಗಿ ತಿಳಿಸಿದ್ದನು. Bruceನು ಹೀಗೆ ಮುಕ್ತಾಯಕ್ಕೆ ಬರುತ್ತಾನೆ, "ಸ್ನೇಹಿತರೊಳಗೆ ಎರಡೂ ಪಕ್ಷಗಳಲ್ಲಿಯೂ ಅನ್ಯಾಯವಾಗಿದೆ ಎಂಬ ಸಂದೇಹವು ಇರಲೇ ಕೂಡದು."[27]

J. B. Lightfootನು ಅಭಿಪ್ರಾಯ ಪಟ್ಟದ್ದೇನೆಂದರೆ ಈ ಮಾತುಗಳಿಗೆ ಕನಿಷ್ಠ ಎರಡು ಬೇರೆ ಬೇರೆ ಅರ್ಥಗಳು ಕೊಡಲ್ಪಟ್ಟಿವೆ: (1) "[ನೀವು] ಈ ಮುಂಚೆ ನನಗೆ ಎಂದಿಗೂ ಅವಿಧೇಯರಾಗಲಿಲ್ಲ; ಈಗ ನನಗೆ ಅವಿಧೇಯರಾಗದಿರಿ" ಮತ್ತು (2) "ನನಗೆ ವೈಯಕ್ತಿಕವಾಗಿ ದೂರು ಹೇಳಲು ಏನೂ ಇರುವದಿಲ್ಲ." ಎರಡನೆಯ ಅರ್ಥದ ಪರವಾಗಿ, ಅದು "ಸನ್ನಿವೇಶಕ್ಕೆ ಉತ್ತಮವಾಗಿ ಸರಿಹೊಂದುತ್ತದೆ" ಎಂಬುದಾಗಿ ಒಲವು ತೋರಿಸುತ್ತಾ, Lightfootನು ಸಲಹೆ ಮಾಡಿದ್ದೇನೆಂದರೆ "ನಿಜವಾದ ವಿವರಣೆಯು ಯಾವದೋ ಒಂದು ತಿಳಿಯದ ಪರಿಸ್ಥಿತಿಯಲ್ಲಿ ಅಡಗಿಕೊಂಡಿರುತ್ತದೆ . . . ಅದನ್ನೇ ಪೌಲನು ಪರೋಕ್ಷವಾಗಿ ಸೂಚಿಸುತ್ತಾನೆ."[28]

ಒಂದು ವಾಕ್ಯದ ಕುರಿತು ಅತ್ಯಂಥ ಕಡಿಮೆ ವಿವರಗಳು ನಮಗಿರುವದರಿಂದ ನಮ್ಮ

ವ್ಯಾಖ್ಯಾನದ ಕುರಿತು ಖಚಿತವಾಗಿರುವದಕ್ಕೆ ಆಗುವದಿಲ್ಲ. ಇಂಥ ಪರಿಸ್ಥಿತಿಗಳಲ್ಲಿ, ನಮ್ಮ ನಿರ್ಣಯಗಳು ಪರೀಕ್ಷಾರ್ಥಕವೆಂದು ಪರಿಗಣಿಸಲ್ಪಡುವವು. ಒಂದು ಸರಳವಾದ ಘೋಷಾತ್ಮಕ ವಾಕ್ಯಸಾಲು (ಇಲ್ಲಿರುವ ಪ್ರಕಾರವೇ) ಅಥವಾ ಅತ್ಯಂಥ ಸಾಮಾನ್ಯವಾಗಿರುವ ಚಿಕ್ಕ ಮಾತುಗಳು (ಅಥವಾ ಅವುಗಳಿಲ್ಲದಿರುವಿಕೆ, ಈ ವಚನದ ಮುಂಚಿನ ಭಾಗದಲ್ಲಿರುವ ಪ್ರಕಾರವೇ) ದೊಡ್ಡ ಸಮಸ್ಯೆಗಳನ್ನು ತಂದೊಡ್ಡಬಲ್ಲವು. ಪೌಲನ ಸರಳವಾದ ಹೇಳಿಕೆಯು ಇಲ್ಲಿ ಏಕೆ ಚರ್ಚೆಯಲ್ಲಿ ಕಾಣಿಸಿಕೊಳ್ಳುತ್ತದೆಂಬುದು ಅನಿಶ್ಚಿತವಾಗಿರುತ್ತದೆ. ಆತನು ಗಲಾತ್ಯದವರನ್ನು ಮೊದಲ ಬಾರಿಗೆ ಸಂಪರ್ಕಿಸಿದ್ದನ್ನು ಜ್ಞಾಪಿಸಿಕೊಳ್ಳುತ್ತಿರುವನೋ ಅಥವಾ ಬಹಳ ಇತ್ತೀಚಿನ ಘಟನೆಯನ್ನು ಕುರಿತು ಮಾತಾಡುತ್ತಿದ್ದಾನೋ (ಅದು ಅವನಿಗೂ ಅವರಿಗೂ ಬಹಳ ಚೆನ್ನಾಗಿ ಗೊತ್ತಿರುವಂಥ ಘಟನೆ, ಆದರೆ ಅದೇನೆಂಬುದನ್ನು ನಾವು ಕೇವಲ ಊಹೆಯನ್ನಷ್ಟೆ ಮಾಡಬಲ್ಲೆವು)?

ಪೌಲನ ಹೇಳಿಕೆಯ ಕುರಿತು ಬೇರೆಯವರು ಏನು ಬರೆದಿರುತ್ತಾರೆಂಬುದನ್ನು ಗಮನಿಸಿದ ಬಳಿಕ, ಇದರ ತಕ್ಷಣದಲ್ಲಿ ಬರುವ ವಚನಗಳಲ್ಲಿ ಉತ್ತರವು ಇರಬಹುದೆಂಬ ಸಲಹೆ ಮಾಡುವ ಒಲವು ನಮ್ಮಲ್ಲಿ ಬರಬಹುದು. ಪೌಲನು ಮೊದಲ ಬಾರಿಗೆ ಗಲಾತ್ಯದವರನ್ನು ಭೇಟಿ ಮಾಡಿದ್ದು ಆತನ ಉಲ್ಲೇಖದ ಆರಂಭಿಕ ಚೌಕಟ್ಟು ಆಗಿರುವದೆಂದು ಮತ್ತು ಅದಾದ ತಕ್ಷಣದಲ್ಲಿ ಕಾಣಿಸಿಕೊಳ್ಳುವಂಥದ್ದು ಆ ಚೌಕಟ್ಟಿನೊಳಗಿರುವ ಕಣ್ಣಿಗೆ ಕಟ್ಟಿದಂತೆ ಬಿಡಿಸಲಾಗಿರುವ ಚಿತ್ರ ಎಂದು ಭಾವಿಸಿಕೊಳ್ಳುವದಾದರೆ, ವಾಕ್ಯದಲ್ಲಿ ಸಮಸ್ಯೆಗಳೆಂದು ನಾವು ಗ್ರಹಿಸಿಕೊಂಡಿರುವವುಗಳೆಲ್ಲಾ ಸ್ವತಃ ಬಗೆಹರಿಸಿಕೊಳ್ಳಬಹುದಾಗಿದೆ, ವಾಕ್ಯದ ಹರಿವು ಸ್ವಾಭಾವಿಕ ಮತ್ತು ಅಷ್ಟಾಗಿ ಕ್ಲೀಷ್ಟಕರವಲ್ಲ ಎಂದು ಕಾಣಿಸಿಕೊಳ್ಳುವಂತೆ ಅವಕಾಶವಾಗುವದು.

ಈ ಪತ್ರಿಕೆಯೊಳಗೆ ಒಂದಕ್ಕಿಂತಲೂ ಅಧಿಕ ಸಾರಿ, ಪೌಲನು ಗಲಾತ್ಯದವರಿಗೆ ಕಠೋರ ಮತ್ತು ನೋವುದಾಯಕವೆಂದು ಎಣಿಸಿರಬಹುದಾದ ಗದರಿಕೆಯನ್ನು ಬಳಸಿದನು. ಒಟ್ಟಾರೆಯಾಗಿ, ಆತನು ಹೇಳಿದ್ದೇನೆಂದರೆ, "ನೀವು ಹೇಗೆ ಇದನ್ನು ಮಾಡಬಲ್ಲಿರಿ? ನಾನು ನಿಮಗೆ ಕರ್ತನಾದ ಯೇಸುವಿನ ಶಿಲುಬೆಯ ಮರಣದ ಕುರಿತು ಅಷ್ಟೊಂದು ಸ್ಪಷ್ಟವಾಗಿ ತೋರಿಸಿ ಕೊಟ್ಟ ಬಳಿಕವೂ ನೀವು ಅಷ್ಟೊಂದು ಮೂರ್ಖತನದಿಂದ ನಡೆದುಕೊಳ್ಳುವ ಧೈರ್ಯವನ್ನು ಹೇಗೆ ಮಾಡಿದಿರಿ!" (ನೋಡಿರಿ 3:1). ಯೇಸುವಿನ ಗಾಯಗಳಿಂದ ದೇವರ ಪ್ರೀತಿಯು ಹರಿಯುವದರ ಕಲ್ಪನೆಯನ್ನು ಮಾಡಿಕೊಂಡ ಬಳಿಕವೂ, ಆತನಿಂದ ವಿಮುಖರಾಗಿ ಧರ್ಮಶಾಸ್ತ್ರದ ನೊಗವನ್ನು ಹೊತ್ತುಕೊಳ್ಳಲು ಸಾಧ್ಯ? ಅವರನ್ನು ರಕ್ಷಿಸುವದರ ಬದಲಾಗಿ, ಧರ್ಮಶಾಸ್ತ್ರವು ಪುನಃ ಅವರನ್ನು ದಾಸತ್ವದೊಳಗೆ ನೂಕುವದು, ಅದು ಅವರು ಕ್ರಿಸ್ತನನ್ನು ಅರಿಯುವದಕ್ಕೆ ಮುನ್ನ ಇದ್ದ ದಾಸತ್ವಕ್ಕಿಂತ ಸ್ವಲ್ಪ ವ್ಯತ್ಯಾಸವಾಗಿರುತ್ತದಷ್ಟೆ. ಜೀವವನ್ನುಂಟು ಮಾಡುವದರ ಬದಲಾಗಿ, ಧರ್ಮಶಾಸ್ತ್ರವು ಅವರಿಗೆ ಮರಣವನ್ನು ಉಂಟು ಮಾಡುವದಾಗಿತ್ತು.

ಈ ಹಿನ್ನಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, 4:12ರಿಂದ 4:13-16ರ ನಡುವಿನ ಸಂಬಂಧವನ್ನು ಈ ಕೆಳಗಿನ ವಿಧದಲ್ಲಿ ಸರಳಾನುವಾದ ಮಾಡಬಹುದಾಗಿದೆ:

> ಸಹೋದರರೇ, ನಾನು ಗಲಾತ್ಯಕ್ಕೆ ಬಂದ ವೇಳೆ ಹೇಗಿದ್ದೆನೋ ನೀವೂ ಹಾಗೆಯೇ ಇರಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಯಾಕೆಂದರೆ ನಾವು ಯೆಹೂದ್ಯರು ಮತ್ತು ನೀವು ಅನ್ಯಜನರು ಆಗಿದ್ದಾಗ್ಯೂ, ನಾನು ಎಲ್ಲಾ ಭೇದಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳದೆ ನಿಮ್ಮಲ್ಲಿ ಒಬ್ಬನಾಗಿ ಇದ್ದೆನು. ನೀವು ನನಗೆ ಯಾವ ವಿಧದಲ್ಲಿಯೂ ತಪ್ಪು ಮಾಡಲಿಲ್ಲ, ಆದರೆ ಅದಕ್ಕೆ ತದ್ವಿರುದ್ಧವಾಗಿ, ನಿಮಗೆ ಗೊತ್ತಿದೆ, ನನ್ನ ಶಾರೀರಿಕ ಅಸೌಖ್ಯದ ಕಾರಣದಿಂದ ನಾನು ಮೊದಲು ನಿಮಗೆ ಸುವಾರ್ತೆಯನ್ನು ಸಾರಿದೆನು. ನನ್ನ ವ್ಯಾಧಿಯು ನಿಮಗೆ ಎಷ್ಟೊಂದು

ಹೇಸಿಗೆಕರವಾಗಿತ್ತೆಂದರೆ ನೀವು ನನ್ನನ್ನು ತಿರಸ್ಕರಿಸಬೇಕೆಂಬ ಶೋಧನೆಯನ್ನು ಎದುರಿಸಿದಿರಿ, ನೀವು ಹಾಗೆ ಮಾಡಲಿಲ್ಲ. ಬದಲಾಗಿ, ನಾನು ದೇವರಿಂದ ಬಂದ ದೂತನೋ ಎಂಬಂತೆ, ಅದಕ್ಕಿಂತ ಹೆಚ್ಚಾಗಿ, ನಾನು ಸ್ವತಃ ಕ್ರಿಸ್ತನೆನೋ ಎಂದು ತಿಳಿದು ನನ್ನನ್ನು ಸೇರಿಸಿಕೊಂಡಿರಿ! ನೀವು ಮುಂಚೆ ಅನುಭವಿಸಿದ ಅಂತಹ ಉಕ್ಕಿ ಹರಿಯುವ ಸಂತೋಷಕ್ಕೆ ಈಗ ಏನಾಯಿತು? ಯಾಕೆಂದರೆ ನೀವು ನನಗೆ ಮಾಡಿರಬಹುದಾಗಿದ್ದ ಯಾವದೇ ಉಪಕಾರವೂ ಅಷ್ಟೊಂದು ದೊಡ್ಡದಾಗಿರುತ್ತಿರಲಿಲ್ಲ ಎಂಬುದಕ್ಕೆ ನಾನು ಸಾಕ್ಷಿಯಾಗಿದ್ದೇನೆ. ವಾಸ್ತವಿಕದಲ್ಲಿ, ಸಾಧ್ಯವಾಗಿರುತ್ತಿದ್ದಲ್ಲಿ, ನೀವು ನಿಮ್ಮ ಸ್ವಂತ ಕಣ್ಣುಗಳನ್ನು ಕಿತ್ತು ನನಗೆ ಕೊಟ್ಟಿರುತ್ತಿದ್ದಿರಿ! ಇಷ್ಟೆಲ್ಲಾ ಆದ ಬಳಿಕವೂ, ನಿಮ್ಮನ್ನು ನಮ್ಮಿಂದ ಅಗಲಿಸುವದಕ್ಕೆ ಪ್ರಯತ್ನಿಸುವವರ ಕುರಿತಾಗಿ ನಾನು ಯಥಾರ್ಥವಾಗಿ ಹಂಚಿಕೊಳ್ಳುತ್ತಿರುವ ಕಾರಣಕ್ಕಾಗಿ ನಾನು ನಿಮಗೆ ವೈರಿಯಾಗಿ ಬಿಟ್ಟಿರುವೆನೋ?

ಸರ್ವಸಮ್ಮತವಾಗಿರುವಂತೆ, ಇದೊಂದೇ ಸರಳಾನುವಾದ ಇರುತ್ತದೆ, ಆದರೆ ಇದು ಮೂಲ ವಾಕ್ಯದಲ್ಲಿರುವ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ. ಪೌಲನ ವಾದದ ಹರಿವನ್ನು ಒಂದು ವಿಶಾಲವಾದ ಸನ್ನಿವೇಶದಲ್ಲಿ ವಿವೇಚಿಸುವದಾದರೆ ಸಹಾಯವಾಗುತ್ತದೆ. ಪೌಲನು 4:13–15ರಲ್ಲಿ ಹೇಳಿದ್ದೆಲ್ಲವೂ ಆತನು ಗಲಾತ್ಯದವರನ್ನು ಮೊದಲ ಬಾರಿಗೆ ಭೇಟಿಯಾದದ್ದರ ಜ್ಞಾಪಕೊಂದನ್ನು ಒಳಗೊಂಡಿರುವದಾಗಿರುತ್ತದೆ. 4:12ನೇ ವಚನವು ಸಹ ಆ ನೆನಪಿಸಿಕೊಳ್ಳುವಿಕೆಯ ಭಾಗವಾಗಿರುತ್ತದೆಂದು ತೋರುತ್ತದೆ. ಇದು ನಿಜವಾಗಿರುವದಾದರೆ, ಈ ವಚನದ ಉತ್ತಮವಾದ ಅನುವಾದವು ಈ ರೀತಿಯಲ್ಲಿರಬಲ್ಲದು ಏನೆಂದರೆ "ನಾನು ಹೇಗಿದ್ದೆನೋ [ನಾವು ಮೊದಲ ಬಾರಿ ಭೇಟಿಯಾದ ವೇಳೆ] ಹಾಗೆಯೇ ಇರಿ, ಯಾಕೆಂದರೆ ನಾನು ಸಹ ನಿಮ್ಮಂತೆಯೇ ಇದ್ದೆನು [ನೀವಿದ್ದ ರೀತಿಯಲ್ಲಿಯೇ ನಿಮ್ಮನ್ನು ಅನುಕರಿಸುವದರಲ್ಲಿ]." ಹಾಗಾದರೆ ತಕ್ಷಣದ ಪರಿಸ್ಥಿತಿಯ ವಿಷಯಕ್ಕೆ ಬರುವದಾದರೆ, ಯಾವ ಸ್ವಾಭಾವಿಕ ತಂದೆಯೂ ತನ್ನ ಪ್ರಿಯ ಮಕ್ಕಳನ್ನು ದಾರಿ ತಪ್ಪಿಸುವದಕ್ಕೆ ಅಥವಾ ಹಾನಿ ಮಾಡುವದಕ್ಕೆ ಎಂದೂ ಮನಸ್ಸುಳ್ಳವನಾಗಿರುವದಿಲ್ಲ ಎಂಬುದನ್ನು ಅರಿತುಕೊಂಡವರಾಗಿ, ಆತನನ್ನು ಪ್ರಸ್ತುತ ಸ್ಥಿತಿಯಲ್ಲಿ ಅಂಗೀಕರಿಸಿಕೊಳ್ಳಬೇಕೆಂದು ಪೌಲನು ಅವರನ್ನು ಬೇಡಿಕೊಳ್ಳುತ್ತಿರಬಹುದು. ಬದಲಾಗಿ ಒಬ್ಬ ಸ್ವಾಭಾವಿಕ ತಂದೆಯು ಯಾವಾಗಲೂ, ಯಾವದೇ ಕ್ರಿಯೆಯಲ್ಲಾಗಲಿ, ಅವರನ್ನು ಆಶೀರ್ವದಿಸಲು ಅಪೇಕ್ಷಿಸುತ್ತಾನೆ (ನೋಡಿರಿ ಲೂಕ 11:11–13; 1 ಕೊರಿಂಥ 4:14–16).

**ವಚನ 13.** ಪೌಲನು ಗಲಾತ್ಯದವರಿಗೆ **ನನ್ನ ಶರೀರಕ್ಕೆ ಅಸೌಖ್ಯವಿದ್ದದರಿಂದ ನಾನು ನಿಮ್ಮಲ್ಲಿದ್ದು ಮೊದಲನೆಯ ಸರ್ತಿ** [ಅವರಿಗೆ] **ಸುವಾರ್ತೆ ಸಾರಿದ್ದ**[ನು] ಎಂಬುದಾಗಿ ಜ್ಞಾಪಿಸುತ್ತಾನೆ. "ಅಸೌಖ್ಯ" ಎಂಬುದಕ್ಕೆ ಗ್ರೀಕ್ ಪದವು ἀσθένεια (*astheneia*) ಎಂದಾಗಿದ್ದು, ಅದರರ್ಥವು "ಬಲಹೀನತೆ," "ರೋಗ," ಅಥವಾ "ವ್ಯಾಧಿ" ಎಂದಾಗಿದೆ. ಪೌಲನಿಗಿದ್ದ ಅಸೌಖ್ಯವು ಯಾವ ಸ್ವಭಾವದ್ದಾಗಿತ್ತು? ಈ ಪ್ರಶ್ನೆಯು ಸಾಕಷ್ಟು ಊಹಾಪೋಹಗಳಿಗೆ ದಾರಿ ಮಾಡಿರುತ್ತದೆ, ಆದಾಗ್ಯೂ ಯಾವದೇ ಸಾಮಾನ್ಯವಾದ ಒಮ್ಮತಕ್ಕೆ ಬರಲಾಗಿರುವದಿಲ್ಲ. ಪ್ರಮುಖ ಅಭಿಪ್ರಾಯಗಳೆಂದರೆ ಆತನಿಗೆ ಮಲೇರಿಯ, ಮೂರ್ಛೆರೋಗ, ಕಣ್ಣಿಗೆ ಸಂಬಂಧಿಸಿದ ವ್ಯಾಧಿ ಇರಬಹುದು, ಅಥವಾ ಹಿಂಸೆಯಿಂದುಂಟಾಗಿದ್ದ ಪರಿಣಾಮಗಳು ಪುನಃ ಪುನಃ ಮರುಳಿಸುತ್ತಿರುವಿಕೆ ಆಗಿರಬಹುದಾಗಿದೆ. ಈ ಪ್ರತಿಯೊಂದು ಅಭಿಪ್ರಾಯಗಳ ಕುರಿತು ಸ್ವಲ್ಪ ಹೊತ್ತಿನಲ್ಲಿ ಚರ್ಚಿಸಲಾಗುವದು.

ಮೊದಲನೆಯದಾಗಿ, ಪೌಲನು ಮೊದಲನೆಯ ಸುವಾರ್ತಾ ಪ್ರಯಾಣದಲ್ಲಿ ಮಲೇರಿಯ

ರೋಗಕ್ಕೆ ತುತ್ತಾಗಿರಬಹುದು. William M. Ramsayನು ಅಭಿಪ್ರಾಯ ಪಟ್ಟಿದ್ದೇನೆಂದರೆ ಆತನಿಗೆ ಪಂಫುಲ್ಯದ ತಗ್ಗಿನ ಪ್ರದೇಶದಲ್ಲಿ ದೀರ್ಘಕಾಲಿಕ ಮಲೇರಿಯ ಸೊಂಕು ತಗುಲಿತ್ತು, ಅದು ಯೋಹಾನನಿಸಿಕೊಳ್ಳುವ ಮಾರ್ಕನು ಸುವಾರ್ತಾ ಕಾರ್ಯವನ್ನು ತೊರೆದು ಯೆರೂಸಲೇಮಿಗೆ ಹಿಂದಿರುಗಿ ಹೋದಂಥ ಸಂದರ್ಭದ ಹೊತ್ತಿನಲ್ಲಿ ಆಗಿತ್ತು (ಅಪೊಸ್ತಲರ ಕೃತ್ಯಗಳು 13:13). ಅದರ ಫಲಿತವಾಗಿ, ಪೌಲನು ಪಿಸಿದ್ಯದ ಅಂತಿಯೋಕ್ಯದಲ್ಲಿ ಉಪಶಮನವನ್ನು ಹುಡುಕಿದನು, ಅದು ಎತ್ತರದ ಮಟ್ಟದಲ್ಲಿದ್ದ ಸ್ಥಳವಾಗಿತ್ತು (ಅಪೊಸ್ತಲರ ಕೃತ್ಯಗಳು 13:14). Ramsayನು ಪದೇ ಪದೇ ಮಲೇರಿಯ ಜ್ವರವು ಕಾಣಿಸಿಕೊಳ್ಳುವದು ಹೇಗೆ ಆಶಕ್ತರನ್ನಾಗಿ ಮಾಡುತ್ತದೆ, ಒಬ್ಬನನ್ನು "ನಡುಗುವವನ್ನಾಗಿ ಮತ್ತು ಅಸಹಾಯಕತೆಯುಳ್ಳ ದುರ್ಬಲ ವ್ಯಕ್ತಿಯನ್ನಾಗಿ"[29] ಮಾಡಿ ಬಿಡುತ್ತದೆ ಎಂಬುದನ್ನು ಬಣ್ಣಿಸುತ್ತಾನೆ.

ಎರಡನೆಯದಾಗಿ, ಪೌಲನಿಗಿದ್ದ ಅಸೌಖ್ಯವು ಮೂರ್ಛೆರೋಗವಾಗಿರಬಹುದು. ಈ ಆಲೋಚನೆಯು ಮುಂದಿನ ವಚನದಲ್ಲಿರುವ ಕ್ರಿಯಾಪದವೊಂದರಿಂದ ಚಿಗುರೊಡೆಯುತ್ತದೆ, ಅದು "ಕಕ್ಕಿ ಬಿಡು" ಎಂಬ ಅರ್ಥವನ್ನು ಕೊಡುತ್ತದೆ (4:14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). Kenneth L. Bolesನು ಅದನ್ನು ಈ ವಿಧದಲ್ಲಿ ವಿವರಿಸಿದನು: "ಈ ಸ್ನೇಹಪರವಲ್ಲದ ಸಂಜ್ಞೆಯು ಮೂರ್ಛೆರೋಗದಂತಹ ಒಂದು ವಿಚಿತ್ರ ವರ್ತನೆಗೆ ಜವಾಬ್ದಾರವಾಗಿದೆ ಎಂದು ಭಾವಿಸಿಕೊಳ್ಳಲಾದ ಕೆಂಗಣ್ಣು ಅಥವಾ ದುರಾತ್ಮವನ್ನು ಓಡಿಸುವದಕ್ಕೆ ಬಳಸುವ ಸಾಮಾನ್ಯ ರೀತಿಯಾಗಿತ್ತು."[30]

ಮೂರನೆಯದಾಗಿ, ಪೌಲನು ಕಣ್ಣಿನ ಸಮಸ್ಯೆಗಳಿಂದ ಬಳಲುತ್ತಿರಬಹುದು, ಅವುಗಳು ಪ್ರಾಚೀನ ಜಗತ್ತಿನಲ್ಲಿ ಸರ್ವೇಸಾಮಾನ್ಯವಾಗಿದ್ದವು. ಅಪೊಸ್ತಲನಿಗೆ ನೋಡುವದಕ್ಕೆ ಕಷ್ಟವಾಗುತ್ತಿತ್ತೆಂಬುದನ್ನು ಹಲವಾರು ವಾಕ್ಯಭಾಗಗಳು ಸೂಚಿಸುತ್ತವೆ. ಆತನು ದಮಸ್ಕದಲ್ಲಿ ಯೇಸುವಿನ ದರ್ಶನದಿಂದಾಗಿ ಕಣ್ಣು ಕಾಣದಂತಾಗಿದ್ದವು ಮತ್ತು ಮೂರು ದಿನಗಳ ಕಾಲ ಅದೇ ಸ್ಥಿತಿಯಲ್ಲಿದ್ದನು (ಅಪೊಸ್ತಲರ ಕೃತ್ಯಗಳು 9:8, 9). ಅನನೀಯನು ಅವನಿಗೆ ಪುನಃ ದೃಷ್ಟಿ ಬರುವಂತೆ ಮಾಡಿದನಾದರೂ (ಅಪೊಸ್ತಲರ ಕೃತ್ಯಗಳು 9:17, 18), ಆ ಘಟನೆಯಿಂದಾಗಿ ಆತನು ಶಾಶ್ವತವಾದ ಗಾಯದ ಗುರುತುಗಳನ್ನು ಪಡೆದುಕೊಂಡಿದ್ದನೆಂಬುದಾಗಿ ಕೆಲವರು ಭಾವಿಸುತ್ತಾರೆ. ಅಪೊಸ್ತಲರ ಕೃತ್ಯಗಳು ಪುಸ್ತಕದೊಳಗೆ ಅನಂತರದಲ್ಲಿ, ಆತನಿಗೆ ಮಹಾ ಯಾಜಕನನ್ನು ಗುರುತು ಹಿಡಿಯುವದಕ್ಕಾಗಲಿಲ್ಲ (ಅಪೊಸ್ತಲರ ಕೃತ್ಯಗಳು 23:5). ಪ್ರಸ್ತುತ ಸನ್ನಿವೇಶದಲ್ಲಿ, ಗಲಾತ್ಯದವರು "ಸಾಧ್ಯವಾಗಿದ್ದರೆ [ತಮ್ಮ] ಕಣ್ಣುಗಳನ್ನಾದರೂ ಕಿತ್ತು ನನಗೆ ಕೊಡುತ್ತಿ [ದ್ದರು]" ಎಂಬುದಾಗಿ ಪೌಲನು ಹೇಳಿದನು (4:15). ಇಲ್ಲಿ ಬಳಸಿರುವ ಪದವು ಆತನಿಗಿದ್ದ ಸಮಸ್ಯೆಯು ಕಣ್ಣಿಗೆ ಸಂಬಂಧ ಪಟ್ಟಿರಬೇಕೆಂಬ ಸುಳಿವು ಕೊಡಬಹುದಾಗಿದೆ. ಅಂತಿಮವಾಘೆ, ಪೌಲನು ತನ್ನ ಪತ್ರಿಕೆಗಳನ್ನು ಒಬ್ಬ ಗುಮಾಸ್ತನಿಗೆ ಹೇಳಿಸಿ ಬರೆಯಿಸಿ ಮುಕ್ತಾಯದಲ್ಲಿನ ವಂದನೆಗಳನ್ನು ತನ್ನ ಸ್ವಂತ ಕೈಯಿಂದ ಬರೆಯುವದು ವಾಡಿಕೆಯಾಗಿತ್ತು (2 ಥೆಸಲೋನಿಕ 3:17). ಆತನು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ "ದೊಡ್ಡ ಅಕ್ಷರಗಳನ್ನು" ಬಳಸಿದ್ದು ಒತ್ತಿ ಹೇಳುವದಕ್ಕೋಸ್ಕರ ಆಗಿರಬಹುದಾದರೂ, ಆತನಿಗೆ ದೃಷ್ಟಿದೋಷವಿದ್ದ ಕಾರಣದಿಂದಾಗಿಯೇ ಆ ದೊಡ್ಡ ಅಕ್ಷರಗಳನ್ನು ಬರೆದಿರುವ ಸಾಧ್ಯತೆಯಿರುತ್ತದೆ (ಗಲಾತ್ಯ 6:11).

ನಾಲ್ಕನೆಯದಾಗಿ, ಪೌಲನ ಅಸೌಖ್ಯವು ಆತನಿಗುಂಟಾದ ಹಿಂಸೆಗೆ ಸಂಬಂಧಿಸಿರಬಹುದಾಗಿದೆ. ಆತನಿಗೆ ಲುಸ್ತ್ರದಲ್ಲಿ ಕಲ್ಲುಗಳಿಂದ ಹೊಡೆಯಲಾಗಿತ್ತು (ಅಪೊಸ್ತಲರ ಕೃತ್ಯಗಳು 14:19) ಮತ್ತು ಆತನ ಸುವಾರ್ತಾಸೇವೆಯ ಬದುಕಿನಲ್ಲಿ ವಿವಿಧ ರೀತಿಯ ದಂಡನೆಗಳನ್ನು ಅನುಭವಿಸಿದ್ದನು (2 ಕೊರಿಂಥ 11:23-27). ಈ ಅಭಿಪ್ರಾಯದ

ವಿಷಯದಲ್ಲಿರುವ ಸಮಸ್ಯೆಯು ಏನೆಂದರೆ ಕಲ್ಲುಗಳಿಂದ ಹೊಡೆಯಲ್ಪಡುವ ಘಟನೆಯು ಪೌಲನ ಸುವಾರ್ತಾ ಪ್ರಯಾಣದ ಅಂತ್ಯದ ವೇಳೆಯಲ್ಲಿ ಸಂಭವಿಸಿತ್ತು, ಆತನು ಗಲಾತ್ಯದಲ್ಲಿರುವ ಪಟ್ಟಣಗಳ ಮೂಲಕವಾಗಿ ಹಿಂದಿರುಗಿ ಬಂದು ಮುಂದೆ ಅಂತಿಯೋಕ್ಯಕ್ಕೆ ಹೋಗುವದಕ್ಕೆ ಮುನ್ನ ಇದು ಸಂಭವಿಸಿತ್ತು. ಅಷ್ಟುಮಾತ್ರವಲ್ಲದೆ, 2 ಕೊರಿಂಥ 11ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿರುವ ಬಹುಪಾಲು ವಿಪತ್ತುಗಳು ಅನಂತರದ ದಿನಾಂಕದಲ್ಲಿ, ಗಲಾತ್ಯದವರಿಗೆ ಪತ್ರಿಕೆಯು ಬರೆಯಲ್ಪಟ್ಟಾದ ನಂತರದಲ್ಲಿ ಸಂಭವಿಸಿರುವಂತೆ ತೋರುತ್ತದೆ.

ಒಂದು ಅಂತಿಮವಾದ ಅಭಿಪ್ರಾಯವೇನೆಂದರೆ ಪೌಲನು ಒಂದು ರೀತಿಯ ಮನೋವೈಜ್ಞಾನಿಕ ದುರ್ಬಲತೆಯಿಂದ ಬಳಲುತ್ತಿದ್ದನು ಎಂಬುದೆ. "ಶಾರೀರದಲ್ಲಿ" (σάρξ, *sarx*) ಅಥವಾ "ಮಾಂಸದಲ್ಲಿ" (KJV) ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ಅರ್ಥದ ಹಲವಾರು ಛಾಯೆಗಳನ್ನು ಹೊಂದಿದೆ. ಅದು ಒಂದು ಮನೋವೈಜ್ಞಾನಿಕವಾಗಿ ಅಥವಾ ಮನಃಪ್ರಕೃತಿಯ ಸಮಸ್ಯೆಯನ್ನು ಸೂಚಿಸಬಹುದಾಗಿದೆ, ಉದಾಹರಣೆಗೆ ಪಾಪದ ಕಡೆಗೆ ಸಹಜ ಒಲವು (ರೋಮಾ 6:19), ಭಯ, ಅಥವಾ ಕಳವಳ (2 ಕೊರಿಂಥ 7:5). ಪೌಲನು ಅಂತಹ ಸಂಕಷ್ಟಗಳಿಗೆ ಹೊರತಾದವನೇನೂ ಆಗಿರಲಿಲ್ಲವಾದರೂ (1 ಕೊರಿಂಥ 2:3; ಎಫೆಸ 6:19, 20), ಪ್ರಸ್ತುತ ಸನ್ನಿವೇಶವು ಅಂತಹ ಯಾವದೇ ವ್ಯಾಖ್ಯಾನವನ್ನು ತಳ್ಳಿ ಹಾಕುತ್ತದೆ.

ಆತನ ಅನಾರೋಗ್ಯವು ಏನೇ ಆಗಿದ್ದರೂ ಸರಿಯೇ, ಅದು ಗಲಾತ್ಯದವರಿಗೆ ಹೇಸಿಕೆ ಅನ್ನಿಸಿರಬಹುದಾಗಿದೆ, ಇದನ್ನು 4:14ನೇ ವಚನವು ಸ್ಪಷ್ಟಗೊಳಿಸುತ್ತದೆ. ಆ ಕ್ಷೇತ್ರದಲ್ಲಿ ಆರಂಭಿಕ ಸುವಾರ್ತಾ ಕೆಲಸವನ್ನು ನಡಿಸುವದಕ್ಕೆ ಅದು ಪೌಲನಿಗೆ ಹೇಗೆ ಪ್ರಚೋದಿಸಿತ್ತು? ಒಂದು ಸಾಧ್ಯತೆಯು ಏನೆಂದರೆ ಆತನು ಹೋಗಬೇಕೆಂದುಕೊಂಡಿದ್ದ ಸ್ಥಳವು ಗಲಾತ್ಯವನ್ನು ದಾಟಿ ಇದ್ದಿರಬಹುದು, ಆದರೆ ಆತನು ಅಲ್ಲಿಗೆ ಬಂದು ತಲುಪಿದ ವೇಳೆ ಅನಾರೋಗ್ಯಕ್ಕೊಳಗಾದನು ಮತ್ತು ಬೇರೆ ದಾರಿಯಿಲ್ಲದೆ ಆ ಸ್ಥಳದಲ್ಲಿ ಸಮಯವನ್ನು ಕಳೆಯುವಂತಾಗಿರಬಹುದು. ಪೌಲನು ಸುವಾರ್ತೆ ಸಾರಬೇಕೆಂದು ಬಹಳವಾಗಿ ವೈರಾಗ್ಯದಿಂದಿದ್ದ ಕಾರಣ, ಆತನು ಅನಾರೋಗ್ಯದ ಹಾಸಿಗೆಯನ್ನು ತನ್ನ ಪ್ರಸಂಗಪೀಠವಾಗಿ ಮಾಡಿಕೊಳ್ಳಬೇಕಾಗಿ ಬಂದರೂ ಸರಿಯೇ, ಕ್ರಿಸ್ತನಲ್ಲಿ ಸಿಕ್ಕುವ ರಕ್ಷಣೆಯ ಶುಭಸುದ್ದಿಯನ್ನು ಸಾರುವದಕ್ಕೆ ಸಿಕ್ಕ ಈ ಸದವಕಾಶವನ್ನು ಆತನು ಬಳಸಿಕೊಳ್ಳಲು ನಿರ್ಧರಿಸಿದನು.

**ವಚನ 14.** ಪೌಲನ **ಶರೀರದಲ್ಲಿ** ಗಲಾತ್ಯದವರಿಗೆ **ಬೇಸರಿಕೆಗೆ** (ಶೋಧನೆಗೆ) **ಆಸ್ಪದವಾದದ್ದಾಗಿತ್ತು**, ಅವರು ಆತನನ್ನು **ಹೀನೈಸಲಿಲ್ಲ, ಓಕರಿಸಲಿಲ್ಲ**. ಪೌಲನ ಶರೀರಿಕ ಅಸೌಖ್ಯವು ಅಥವಾ ತೋರಿಕೆಯು ಈ ಸಹೋದರರನ್ನು ನಿಜಕ್ಕೂ ಪರೀಕ್ಷೆಗೊಳಪಡಿಸಿತ್ತು. ಈ ಅಸೌಖ್ಯವು ಆ ಸಹೋದರರನ್ನು ಓಕರಿಸುವಂತೆ ಮಾಡಬಹುದೆಂದು ಆತನು ಗ್ರಹಿಸಿಕೊಂಡಿದ್ದನು. "ಶೋಧನೆ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ (πειρασμός, *peirasmos*) ಮತ್ತು ಯೇಸುವು ಹೇಗೆ ಪ್ರಾರ್ಥಿಸಬೇಕೆಂದು ನೀಡಿದ ಉಪದೇಶವನ್ನು ಕುರಿತು ತಿಳಿಸುವ ವೇಳೆ ಮತ್ತಾಯನು ಬಳಸಿದ ಪದ ಒಂದೇ ಆಗಿರುತ್ತದೆ: "ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು" (ಮತ್ತಾಯ 6:13).[31]

"ಹೀನೈಸು" (ἐξουθενέω, *exoutheneō*) ಎಂಬ ಪದವು "ಹಗೆತನದಿಂದ ಕಾಣುವದು," "ಕೀಳಾಗಿ ನೋಡು," "ಕ್ಷುಲ್ಲಕ ಎಂದೆಣಿಸು," ಮತ್ತು "ತಿರಸ್ಕರಿಸು" ಎಂಬುದಾಗಿ ವಿವಿಧ ರೀತಿಯಲ್ಲಿ ಅನುವಾದಿಸಲ್ಪಟ್ಟಿರುತ್ತದೆ. "ಓಕರಿಸು" (ἐκπτύω, *ekptuō*) ಎಂಬ ಪದವು ಇನ್ನೂ ಬಲವಾದ ಸೂಚ್ಯಾರ್ಥವೊಂದನ್ನು ಹೊಂದಿತ್ತು. ಅದರ ಅಕ್ಷರಶಃ ಅರ್ಥವು "ಕಕ್ಕಿ ಬಿಡು" ಎಂದಾಗಿದೆ; ಅಂಥ ಕ್ರಿಯೆಯೊಂದು "ಧಿಕ್ಕಾರದ ವ್ಯಕ್ತಪಡಿಸುವಿಕೆಯಾಗಿ" ಅಥವಾ "ವೈರತ್ವದ

ಆತ್ಮಗಳನ್ನು ಓಡಿಸುವ"[32] ಸಲುವಾಗಿ ಮಾಡಲ್ಪಡುವಂಥದ್ದಾಗಿದೆ. ಈ ಅಕ್ಷರಶಃ ಅರ್ಥವು ಪೌಲನ ಕಾಲದ ಹೊತ್ತಿಗೆ ಮರೆಯಾಗಿ ಒಂದು ಕೀಳ್ಭಾವನೆಯ ಭಾವನೆಗೆ ಬದಲಾಗಿರಬಹುದಾಗಿದೆ ಎಂಬುದಾಗಿ ಶಬ್ದಕೋಶ ತಜ್ಞರು ನಂಬುತ್ತಾರೆ. ಹಾಗಿದ್ದರೂ, ಸ್ಥಳೀಯ ಗ್ರೀಕ್ ಭಾಷಣಕಾರನು, ಆ ಪದವು ಬರೆಯಲ್ಪಡುತ್ತಿದ್ದರೂ ಸರಿಯೇ ಅಥವಾ ಉಚ್ಛರಿಸಲ್ಪಡುತ್ತಿದ್ದರೂ ಸರಿಯೇ, ಅದರ ಮೂಲ ಅರ್ಥವನ್ನು ಕಣ್ಣುಗಳ ಮುಂದೆ ಕಲ್ಪಿಸಿಕೊಳ್ಳದೆ ಇರುವದಕ್ಕೆ ಸಾಧ್ಯವಿರಲಿಲ್ಲ.

ಪೌಲನನ್ನು ತಿರಸ್ಕರಿಸುವದರ ಬದಲಾಗಿ, ಗಲಾತ್ಯದವರು ಆತನನ್ನು ಸಂತೋಷವಾಗಿ ಸೇರಿಸಿಕೊಂಡಿದ್ದರು - ವಾಸ್ತವಿಕದಲ್ಲಿ, ದೇವದೂತನಂತೆ ಸೇರಿಸಿಕೊಂಡಿದ್ದರು, ಇಲ್ಲಿ ἄγγελος (*angelos*) ಎಂಬುದನ್ನು "ಸಂದೇಶಕ" ಎಂದು ಅನುವಾದಿಸುವದಕ್ಕೆ ಸಾಧ್ಯವಿರುತ್ತದೆ, ಯಾಕೆಂದರೆ ಆ ಪದದ ಮೂಲಭೂತ ಅರ್ಥವು ಅದೇ ಆಗಿದೆ. *Angelos* ಪದವನ್ನು ಒಬ್ಬ ವ್ಯಕ್ತಿಯಿಂದ ಮತ್ತೊಂದು ವ್ಯಕ್ತಿಯ ಬಳಿಗೆ ಸಂದೇಶವೊಂದನ್ನು ಕೊಟ್ಟು ಕಳುಹಿಸಲಾಗುವ ಮನುಷ್ಯರಿಗೆ ಸಹ ಬಳಸಬಹುದಾಗಿದೆ. ಉದಾಹರಣೆಗೆ, ಆದಿಕಾಂಡ 32:3-6ರಲ್ಲಿ (LXX) ಈ ಪದವು ಕಾಣಿಸಿಕೊಳ್ಳುತ್ತದೆ, ಅಲ್ಲಿ ಯಾಕೋಬನು ತನ್ನ ಮನೆಯವರೆಲ್ಲರಿಗಿಂತ ಮುಂದಾಗಿ ಅಣ್ಣನಾದ ಏಸಾವನ ಬಳಿಗೆ ಸಂದೇಶಕರನ್ನು ಕಳುಹಿಸುತ್ತಾನೆ. ಲೂಕ 9:51-53ರಲ್ಲಿ, ಯೇಸುವು ತಾನು ಯೆರೂಸಲೇಮಿನ ಕಡೆಗೆ ಪ್ರಯಾಣಿಸುವ ವೇಳೆ ಸಮಾರ್ಯದ ಗ್ರಾಮವೊಂದರ ಜನರು ಆತನನ್ನು ಸೇರಿಸಿಕೊಳ್ಳಲು ಮನಸ್ಸುಳ್ಳವರಾಗಿದ್ದಾರೋ ಇಲ್ಲವೋ ಎಂಬುದನ್ನು ಕಂಡುಕೊಳ್ಳುವಂತೆ ಸಂದೇಶಕರನ್ನು ಕಳುಹಿಸುವ ಸಂದರ್ಭದಲ್ಲಿ ಈ ಪದವು ಕಾಣಿಸಿಕೊಳ್ಳುತ್ತದೆ. ಈ ಪದವನ್ನು ಸ್ನಾನಿಕನಾದ ಯೋಹಾನ ಹಾಗೂ ಇತರ ಪ್ರವಾದಿಗಳ ವಿಷಯದಲ್ಲಿರುವ ಪ್ರಕಾರವೇ, ಪ್ರೇರಿತ ಮನುಷ್ಯರನ್ನು ಸೂಚಿಸುವದಕ್ಕೆ ಬಳಸಲ್ಪಡಬಹುದು (ಮತ್ತಾಯ 11:7-10). *Angelos* ಬಹು ಸಾಮಾನ್ಯವಾಗಿ, ದೇವರ ನಿಯೋಗಿಗಳಾಗಿ ಸೇವೆ ಮಾಡುತ್ತಾ ಮಾನವ ರೂಪದಲ್ಲಿ ಕಾಣಿಸಿಕೊಳ್ಳುವ ಆತ್ಮ-ಜೀವಿಗಳನ್ನು ಸೂಚಿಸುತ್ತದೆ (ನೋಡಿರಿ ಇಬ್ರಿಯ 1:14; 13:2).

"ಒಬ್ಬ ದೇವದೂತನು" ಎಂಬುದನ್ನು, ಇಬ್ರಿಯ 1:14ರಲ್ಲಿ ಸೂಚಿಸಲ್ಪಟ್ಟಿರುವಂತೆ ಮಧ್ಯಸ್ಥಿಕೆಯ ಆತ್ಮೀಕ ಜೀವಿಯಾಗಿರುವಂಥ ಪರಲೋಕಿಕವಾದ ಸಂದೇಶಕ ಎಂದು ಅರ್ಥಮಾಡಿಕೊಳ್ಳುವದು ಅತ್ಯಂಥ ಸಹಜವಾಗಿರುತ್ತದೆ. ಆದದರಿಂದ, ಪೌಲನ ಆಲೋಚನೆಯಲ್ಲಿ ಒಂದು ಮುಂದುವರಿಕೆಯು ಕಂಡು ಬರುತ್ತದೆ: (1) ಗಲಾತ್ಯದವರು ಆತನನ್ನು ಕೇವಲ ಒಬ್ಬ ಮನುಷ್ಯನಂತಷ್ಟೇ ಕಾಣಲೂ ಇಲ್ಲ ಅಥವಾ ಆತನ ಅಸೌಖ್ಯತ್ಯೆಯನ್ನು ಅಸಹ್ಯಿಸಲೂ ಇಲ್ಲ. (2) ಬದಲಾಗಿ, ಅವರು ಆತನನ್ನು ಪರಲೋಕದಿಂದ ದೇವರು ಕಳುಹಿಸಿ ಕೊಟ್ಟಿರುವ ದೇವದೂತನೋ ಎಂಬಂತೆ ಸೇರಿಸಿಕೊಂಡರು. (3) ಅದಕ್ಕಿಂತ ಹೆಚ್ಚಾಗಿ, ಅವರು ಆತನನ್ನು ಅವರ ನಡುವೆ ಶರೀರಧಾರಿಯಾಗಿ ನಡೆದಾಡುತ್ತಿರುವ ಸ್ವತಃ **ಯೇಸುವಿನಂತೆ** ಸೇರಿಸಿಕೊಂಡರು.

**ವಚನ 15.** ಗಲಾತ್ಯದವರು ಆದರದಿಂದ ನೀಡಿದ ಸ್ವಾಗತವನ್ನು ಕುರಿತು ಆಲೋಚಿಸಿಕೊಂಡವನಾಗಿ, ಪೌಲನು ಹೀಗೆ ಕೇಳುತ್ತಾನೆ, **ಆಗ ನಮಗೆ ಶುಭವಾಯಿತೆಂದು ನೀವು ಅಂದುಕೊಂಡಿರಲ್ಲಾ; ಆ ಶುಭವು ಎಲ್ಲಿ ಹೋಯಿತು?** ಈ ನಿರ್ಣಾಯಕವಾದ ಪ್ರಶ್ನೆಯು ಪ್ರಸ್ತುತವಿರುವ ನೋವುದಾಯಕ ಸ್ಥಿತಿಯೊಳಗೆ ಆಘಾತಕರವಾದ ಮರುಪ್ರವೇಶವಾಗಿ ಕಾಣಿಸಿಕೊಳ್ಳುತ್ತದೆ. ಈ ಸಹೋದರರು ಅಂಜಿದವರಾಗಿ, ಈ ಯೆಹೂದಿಕರಣಗೊಳಿಸುವ ವ್ಯಕ್ತಿಗಳ ಕಾರಣದಿಂದಾಗಿ ಅವರು ಆರಂಭದಲ್ಲಿ ಆತನ ಕಡೆಗಿದ್ದ ಭಾವಗಳನ್ನು

ಹಿಮ್ಮೋಗಗೊಳಿಸಿಕೊಂಡಿದ್ದರೆಂದು ಪೌಲನು ಅರಿತುಕೊಂಡಿದ್ದನು. ಅಷ್ಟುಮಾತ್ರವಲ್ಲದೆ, ಅವರು ಧರ್ಮಶಾಸ್ತ್ರದ ದಾಸತ್ವವನ್ನು ಸ್ವೀಕರಿಸಿಕೊಂಡಿದ್ದು ತಮ್ಮ ಆತ್ಮೀಕ ಸಂತೋಷವನ್ನು ಅವರು ಕಳೆದುಕೊಳ್ಳುವಂತೆ ಮಾಡಿತ್ತು. "ಶುಭವಾಯಿತೆಂದು ಅಂದುಕೊಂಡದ್ದು" (μακαρισμός, *makarismos*) ಅಥವಾ "ಸಂತೋಷ" (NCV; CJB) ಎಂಬುದನ್ನು ಅನುವಾದಿಸಿರುವ ಪದವು, ಧನ್ಯನುಡಿಗಳಲ್ಲಿ (ಮತ್ತಾಯ 5:1-12) ಬಳಸಲ್ಪಟ್ಟಿರುವ "ಧನ್ಯರು" (μακάριος, *makarios*) ಎಂಬ ಪದಕ್ಕೆ ಸಂಬಂಧಿಸಿದ್ದಾಗಿದೆ.

ಒಂದು ಸಮಯದಲ್ಲಿ, ಗಲಾತ್ಯದವರು ಪೌಲನ ಕಡೆಗೆ ಬಹಳವಾದ ಪ್ರೀತಿಯನ್ನು ತೋರಿಸಿದ್ದರು, ಆತನು ಹೀಗೆ ಬರೆಯುತ್ತಾನೆ, **ಸಾಧ್ಯವಾಗಿದ್ದರೆ ನಿಮ್ಮ ಕಣ್ಣುಗಳನ್ನಾದರೂ ಕಿತ್ತು ನನಗೆ ಕೊಡುತ್ತಿದ್ದಿರೆಂದು ನಿಮ್ಮನ್ನು ಕುರಿತು ಸಾಕ್ಷಿಹೇಳುತ್ತೇನೆ.** "ಕಣ್ಣುಗಳು" ಎಂಬುದನ್ನು ಅತ್ಯಂಥ ಅಮೂಲ್ಯವಾದದ್ದೆಂಬುದಕ್ಕೆ ದೃಷ್ಟಾಂತವಾಗಿ ಬಳಸಲ್ಪಟ್ಟಿರುವ ಸಾಧ್ಯತೆಯಿದೆ. ಈ ಅರ್ಥನಿರೂಪಣೆಯು "ಕಣ್ಣುಗುಡ್ಡಿನಂತೆ" (ಧರ್ಮೋಪದೇಶಕಾಂಡ 32:10) ಮತ್ತು "ಕಣ್ಣುಗುಡ್ಡೆ" (ಕೀರ್ತನೆ 17:8; ನೋಡಿರಿ ಜ್ಞಾನೋಕ್ತಿ 7:2; ಜೆಕರ್ಯ 2:8) ಎಂಬ ಬೈಬಲಿನ ಮಾತುಗಳಿಂದ ಬೆಂಬಲಿಸಲ್ಪಟ್ಟಿರುತ್ತದೆ. ಗಲಾತ್ಯದ ಸಹೋದರರು ಆತನ ಮೇಲಿಟ್ಟಿರುವ ತಮ್ಮ ಪ್ರೀತಿಯ ನಿಮಿತ್ತವಾಗಿ ಏನೂ ಬೇಕಾದರೂ ತ್ಯಾಗ ಮಾಡಿರುತ್ತಿದ್ದರೆಂಬುದಾಗಿ ಪೌಲನು ಒತ್ತಿ ಹೇಳುತ್ತಿದ್ದಾನೆ.

ಪೌಲನು ಸಾಂಕೇತಿಕವಾಗಿ ಮಾತಾಡುತ್ತಿದ್ದನಾದರೂ, ಕ್ರಿ.ಶ. ಎರಡನೆಯ ಶತಮಾನದ ಗ್ರೀಕ್ ಲೇಖಕನಾದ Lucian ಎಂಬವನು ಒಬ್ಬ ಸ್ನೇಹಿತನಿಗೋಸ್ಕರ ಒಬ್ಬನು ಕಣ್ಣನ್ನು ತ್ಯಾಗ ಮಾಡಿದಂಥ ಒಂದು ಅಕ್ಷರಶಃ ಘಟನೆಯನ್ನು ಕುರಿತು ಬರೆಯುತ್ತಾನೆ. ಈ ಕಥೆಯು ಇಬ್ಬರು ಸ್ಕೈಥಿಯನ್ನರ ಕುರಿತಾಗಿತ್ತು. ಅವರಲ್ಲೊಬ್ಬನು Dandamis ಎಂಬವನು, ಇವನು ಸೆರೆಯಲ್ಲಿ ಇದ್ದ ತನ್ನ ಸ್ನೇಹಿತನಾದ Amizoces ಎಂಬವನನ್ನು ಬಿಡಿಸುವದಕ್ಕೋಸ್ಕರ ತನ್ನ ಕಣ್ಣುಗಳನ್ನು ಈಡು ಕೊಟ್ಟನು. ಬಿಡುಗಡೆಗೊಳಿಸಲ್ಪಟ್ಟ ಬಳಿಕ, Amizocesನು ಕುರುಡನಾಗಿದ್ದ ತನ್ನ ಸ್ನೇಹಿತನಾದ Dandamisನನ್ನು ನೋಡುವದಕ್ಕಾಗದೆ ವೇದನೆ ಪಟ್ಟನು, ಆದ್ದರಿಂದ ಆತನು ಸ್ವತಃ ತನ್ನ ಕಣ್ಣುಗಳನ್ನು ಕುರುಡು ಮಾಡಿಕೊಂಡು ಬಿಟ್ಟನು.[33]

**ವಚನ 16.** ಗಲಾತ್ಯದವರೊಂದಿಗೆ ತನಗಿದ್ದ ಸ್ನೇಹದ ಕುರಿತು ಒತ್ತಿ ಹೇಳಿದ ಬಳಿಕ, ಪೌಲನು ಅವರನ್ನು ಹೀಗೆ ಕೇಳುತ್ತಾನೆ, **ಹೀಗಿರಲಾಗಿ ನಾನು ನಿಮಗೆ ಸತ್ಯವನ್ನು ಹೇಳುವದರಿಂದ ನಿಮಗೆ ಶತ್ರುವಾಗಿದ್ದೇನೋ?** "ಸತ್ಯ" (ἀλήθεια, *alētheia*) ಎಂಬ ನಾಮಪದವು ಹೊಸ ಒಡಂಬಡಿಕೆಯಲ್ಲಿ ಪದೇ ಪದೇ ಕಾಣಿಸಿಕೊಳ್ಳುತ್ತದಾದರೂ, ಪೌಲನು ಬಳಸಿದ ಅದಕ್ಕೆ ಸಂಬಂಧಿಸಿದ "ಸತ್ಯವನ್ನು ಹೇಳುವದರಿಂದ" (ἀληθεύω, *alētheuō*) ಎಂಬುದು ಇಲ್ಲಿ ಮತ್ತು ಎಫೆಸ 4:15ರಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಅದನ್ನು "ಪ್ರಾಮಾಣಿಕವಾಗಿರುವದು" ಎಂಬುದಾಗಿ ಸಹ ಅನುವಾದಿಸಬಹುದಾಗಿದೆ. ತಾನು ಗಲಾತ್ಯದವರಿಗೆ ಸತ್ಯವನ್ನು ಸ್ಪಷ್ಟವಾಗಿ ತಿಳಿಸುತ್ತಿದ್ದಾನೆಂಬುದಾಗಿ ಪೌಲನು ವಾದಿಸುತ್ತಾನೆ; ಆತನು ಹೇಳುತ್ತಿರುವ ಮಾತುಗಳಲ್ಲಿ ಯಾವದೇ ಮರೆಯಾಗಿರುವ ಅರ್ಥಗಳನ್ನೂ ಹುಡುಕಕೂಡದಾಗಿತ್ತು. ಆತನು "ಕಳ್ಳತನದಿಂದ ಹೊಕ್ಕಿದ್ದ" (ನೋಡಿರಿ ಯೂದನು 4) ಜನರನ್ನು ಕುರಿತು ಮುಚ್ಚುಮರೆಯಿಲ್ಲದೆ ಹೇಳುವದು ಅಗತ್ಯವಾಗಿತ್ತು. ಈ ಯೆಹೂದಿಕರಣಗೊಳಿಸುವ ವ್ಯಕ್ತಿಗಳು ಸುವಾರ್ತೆಯೇ ಆಗಿರದಂತಹ ಬೇರೊಂದು ಸುವಾರ್ತೆಯನ್ನು ಸಾರುತ್ತಿದ್ದರು (ನೋಡಿರಿ ಗಲಾತ್ಯ 1:6, 7; 5:11, 12; 6:12, 13). ಗಲಾತ್ಯದ ಸಭೆಯೊಳಗೆ ಗೊತ್ತಾಗದಂತೆ ನುಸುಳಿ ಆತನ ಸೇವೆಯನ್ನು ಹಾಳುಮಾಡಿದ್ದ ಸುಳ್ಳು ಬೋಧಕರನ್ನು ದೃಢವಾಗಿ ವಿರೋಧ

ಮಾಡಿದನು.

**ವಚನ 17.** ಪೌಲನು ಯೆಹೂದಿಕರಣಗೊಳಿಸುವವರ ಬಗ್ಗೆ ಮಾತಾಡುವದನ್ನು ಮುಂದುವರೆಸುತ್ತಾನೆ, ಅವರು ಇಡೀ ಸಮಸ್ಯೆಯ ಮೂಲಕಾರಣರಾಗಿದ್ದರು: **ಅವರು ನಿಮ್ಮನ್ನು ಮೆಚ್ಚಿಸುವದಕ್ಕೆ ಆಸಕ್ತರಾಗಿದ್ದಾರೆ; ಆದರೆ ಒಳ್ಳೇ ಅಭಿಪ್ರಾಯದಿಂದ ಅಂಥವರಾಗಿರದೆ ನೀವು ತಮ್ಮನ್ನೇ ಮೆಚ್ಚಿಸುವವರಾಗಬೇಕೆಂದು ನಿಮ್ಮನ್ನು ಅಗಲಿಸುವದಕ್ಕೆ ಅಪೇಕ್ಷಿಸುತ್ತಾರೆ.** ವಚನದ ಮೊದಲನೆಯ ಭಾಗವನ್ನು ಈ ವಿಧದಲ್ಲಿ ಅನುವಾದಿಸಬಹುದಾಗಿದೆ: "ಅವರಿಗೆ ನಿಮ್ಮ ಮೇಲೆ ಅತ್ಯಾಸಕ್ತಿಯಿರುತ್ತದೆ, ಆದರೆ ಒಂದು ಒಳ್ಳೇ ವಿಧದಲ್ಲಿ ಅಲ್ಲ." NKJVಯು ಅದನ್ನು ಹೀಗೆ ಅನುವಾದಿಸಿರುತ್ತದೆ: "ಅವರು ಹುಮ್ಮಸ್ಸಿನಿಂದ ನಿಮ್ಮನ್ನು ಓಲೈಸಿಕೊಳ್ಳಲು ನೋಡುತ್ತಾರೆ, ಆದರೆ ಯಾವದೇ ಪ್ರಯೋಜನವೂ ಇರುವದಿಲ್ಲ." ಯೆಹೂದಿಕರಣಗೊಳಿಸುವವರು ತಮ್ಮ ಉಪದೇಶಗಳ ಕಡೆಗೆ ಅನುಯಾಯಿಗಳನ್ನು ಸೆಳೆಯುವದಕ್ಕೋಸ್ಕರ ಪ್ರತ್ಯೇಕವಾಗಿ ಮನೋಶಾಸ್ತ್ರೀಕವಾದ ಅಂಶದ ಬಳಕೆ ಮಾಡುತ್ತಿದ್ದರೆಂಬುದನ್ನು ಸನ್ನಿವೇಶವು ಸೂಚಿಸುತ್ತದೆ.

ವಚನದ ಎರಡನೆಯ ಭಾಗವಾದ, "ನಿಮ್ಮನ್ನು ಅಗಲಿಸುವದಕ್ಕೆ" (ἐκκλείω, *ekkleiō*) ಎಂಬುದು ಗ್ರೀಕ್ ವಾಕ್ಯದಲ್ಲಿ ಮೊದಲಿಗೆ ಬರುತ್ತದೆ. ಈ ಕ್ರಮಾನುಸಾರದಲ್ಲಿರುವ ಪದವು ಪದಗುಚ್ಛವನ್ನು ಒತ್ತಿ ಹೇಳುವಂತೆ ಮಾಡುತ್ತದೆ ಮತ್ತು ಪ್ರತ್ಯೇಕವಾಗಿ ಎಂಬ ವಿಚಾರಕ್ಕೆ ಇನ್ನಷ್ಟು ಪುಷ್ಟೀಯನ್ನು ಕೊಡುತ್ತದೆ. ಹೇಗೂ, ಗಲಾತ್ಯದವರನ್ನು ಯಾರಿಂದ ಅಗಲಿಸಲಾಗುತ್ತಿತ್ತೆಂಬುದರ ಕುರಿತು ಪೌಲನು ನಿರ್ದಿಷ್ಟವಾಗಿ ತಿಳಿಸುವದಿಲ್ಲ. ಅದು ಗಲಾತ್ಯದವರನ್ನು ತಮ್ಮ ಗುಂಪಿನ ಭಾಗವಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಂಥ ಧರ್ಮಶಾಸ್ತ್ರ-ಪಾಲಕರನ್ನು ಸೂಚಿಸುತ್ತದೋ? ಅದು ಒಟ್ಟಾರೆ ಸಭೆಯ ಅನ್ಯೋನ್ಯತೆಯಿಂದ ಅಗಲಿಸುವಿಕೆ ಆಗಿತ್ತೋ? ಅದು ಪೌಲ ಮತ್ತು ಆತನ ಬೋಧನೆ ಹಾಗೂ ಉಪದೇಶಗಳ ಪ್ರಭಾವದಿಂದ ಅಗಲಿಸುವಿಕೆಯಾಗಿತ್ತೋ?[34] ಈ ಕಡೇ ವಿಚಾರಕ್ಕೆ NIV ಬೆಂಬಲವನ್ನು ನೀಡುತ್ತದೆ, ಅದು ಒಂದು ವಸ್ತುವನ್ನು ಒದಗಿಸುತ್ತದೆ: "ನೀವು ಅವರಿಗಾಗಿ ಆಸಕ್ತಿಯನ್ನು ಹೊಂದುವಂತಾಗಬೇಕೆಂದು ನಿಮ್ಮನ್ನು *ನಮ್ಮಿಂದ* ಅಗಲಿಸಬೇಕು ಎಂಬುದು ಅವರ ಬಯಕೆಯಾಗಿದೆ" (ಒತ್ತಿ ಹೇಳಿದ್ದು ನನ್ನದು).

ಯೆಹೂದಿಕರಣಗೊಳಿಸುವವರು ಈ ಗಲಾತ್ಯದ ಅನ್ಯಜನರನ್ನು ಸಭೆಯಿಂದಾಗಲು ಅಥವಾ ಅವರ ಅನ್ಯೋನ್ಯತೆಯ ಬಳಗದಿಂದಾಗಲಿ ಅಗಲಿಸಬೇಕೆಂದು - ಕನಿಷ್ಠ ಶಾಶ್ವತವಾಗಿ ಅಗಲಿಸಬೇಕೆಂದಂತೂ - ಬಯಸಲಿಲ್ಲ. ಬದಲಾಗಿ, ಅವರ ಕೃತ್ಯಗಳು ಗಲಾತ್ಯದ ಕ್ರೈಸ್ತರು ಧರ್ಮಶಾಸ್ತ್ರದ ನೊಗವನ್ನು ಅಂಗೀಕರಿಸಿಕೊಳ್ಳುವಂತೆ ಬಲೆಗೆ ಬೀಳಿಸಿಕೊಳ್ಳುವ ಒಂದು ಸಂಚು ಆಗಿದ್ದವು. ಅವರು ತಮ್ಮನ್ನು "ಮೂಲ" ಕ್ರೈಸ್ತರೆಂದು ತೋರ್ಪಡಿಸಿಕೊಳ್ಳುತ್ತಾ, ಅವರು ನಿಜವಾದ, ಸುನ್ನತಿಯಾಗಿರುವ - ಅಬ್ರಹಾಮನ ನಿಜವಾದ ಮಕ್ಕಳು - ಯೆಹೂದ್ಯರು ಎಂಬುದಾಗಿ ಒತ್ತಿ ಹೇಳಿಕೊಳ್ಳುವವರಾಗಿದ್ದರು. ಯೇಸುವು ಶಾಸ್ತ್ರಿಗಳಿಗೂ ಫರಿಸಾಯರಿಗೂ ಹೀಗೆ ಹೇಳಿದನು, "ನೀವು ಒಬ್ಬನನ್ನು ನಿಮ್ಮ ಮತದಲ್ಲಿ ಸೇರಿಸಿಕೊಳ್ಳುವದಕ್ಕಾಗಿ ಭೂಮಿಯನ್ನೂ ಸಮುದ್ರವನ್ನೂ ಸುತ್ತಿಕೊಂಡು ಬರುತ್ತೀರಿ; ಅವನು ಸೇರಿದ ಮೇಲೆ ಅವನನ್ನು ನಿಮಗಿಂತ ಎರಡರಷ್ಟಾಗಿ ನರಕ ಪಾತ್ರನಾಗಮಾಡುತ್ತೀರಿ" (ಮತ್ತಾಯ 23:15). ಗಲಾತ್ಯ 1:8, 9ರಲ್ಲಿ ಪೌಲನು ನುಡಿದ ಮಾತುಗಳು ಕಷ್ಟಕರವಾಗಿರುವದಾದರೆ, ಖಂಡಿತವಾಗಿಯೂ ಅವುಗಳು ಅದೇ ಸನ್ನಿವೇಶದಲ್ಲಿ ಸ್ವತಃ ಕರ್ತನು ಮತ್ತಾಯ 23ರಲ್ಲಿ ಹೇಳಿದ ಮಾತುಗಳಿಗಿಂತ ಕಠೋರವಂತೂ ಆಗಿರುವದಿಲ್ಲ.

**ವಚನ 18.** ಯೆಹೂದಿಕರಣಗೊಳಿಸುವ ವ್ಯಕ್ತಿಗಳಲ್ಲಿದ್ದ ದಿಕ್ಕುತಪ್ಪಿಸಲ್ಪಟ್ಟಿದ್ದ ಮತ್ತು

ಅವರಿಂದ ದಾರಿ ತಪ್ಪಿಸಲ್ಪಟ್ಟಿದ್ದವರ ಆಸಕ್ತಿಯನ್ನು ವಿರೋಧಿಸುತ್ತಾ, ಪೌಲನು ಎಲ್ಲಾ ವಿಧವಾದ ಆಸಕ್ತಿಯು ಕೆಟ್ಟದ್ದಲ್ಲ ಎಂಬುದನ್ನು ಸ್ಪಷ್ಟಗೊಳಿಸುತ್ತಾನೆ: **ನಾನು ನಿಮ್ಮ ಸಂಗಡ ಇರುವಾಗ ಮಾತ್ರವಲ್ಲದೆ ಯಾವಾಗಲೂ ಒಳ್ಳೇ ವಿಷಯದಲ್ಲಿ ನೀವು ಮೆಚ್ಚಿಸಿಕೊಳ್ಳುವದು ಒಳ್ಳೇದೇ.** "ಮೆಚ್ಚಿಸಿಕೊಳ್ಳುವದು" ಎಂಬ ಪದಗುಚ್ಛವು ζηλόω (*zēloō*)[35] ಎಂಬ ರೂಪದ ಒಂದು ಪದದ ಅನುವಾದವಾಗಿದ್ದು ಇದು ಗ್ರೀಕ್ ಭಾಷೆಯಲ್ಲಿ ಆತ್ಮಾರ್ಥಕ ರೂಪದಲ್ಲಿ (ಅಂದರೆ, ಒಂದು ಸಂಗತಿಗಾಗಿ ಅಥವಾ ಒಬ್ಬನಿಗೆ ಸಂಬಂಧಪಟ್ಟಂತೆ ಕ್ರಿಯೆ ಮಾಡುವದು) ಅಥವಾ ಕರ್ಮಣಿ ಪ್ರಯೋಗದಲ್ಲಿ (ಅಂದರೆ, ಕ್ರಿಯೆ ಮಾಡಬೇಕಾಗಿರುವ) ಇರುತ್ತದೆ. ಹೇಗೂ, ಕರ್ಮಣಿಯಾಗಿ, ಈ ಪದದ ಅರ್ಥವು "ಆಸಕ್ತಿಯನ್ನು ಹೊಂದುವಂತೆ ನಡಿಸಲ್ಪಡಿರಿ" ಎಂದಾಗಿರಬಲ್ಲದು ಮತ್ತು ಆ ಮೂಲಕ ಒಂದು ಸಕ್ರಿಯ ಅರ್ಥವನ್ನು ಹೊಂದಿರಬಹುದಾಗಿದೆ: "ಆಸಕ್ತಿಯನ್ನು ತೋರ್ಪಡಿಸಿರಿ" ಅಥವಾ "ಅಸಕ್ತಿಯುಳ್ಳವರಾಗಿರಿ." ಆಂಗ್ಲದ ಬಹಳಷ್ಟು ತರ್ಜುಮೆಗಳು ಈ ಪದವನ್ನು ಕರ್ಮಣಿ ಪ್ರಯೋಗದಲ್ಲಿ ಅನುವಾದಿಸುತ್ತವಾದರೂ, ಕೆಲವೊಂದು ತರ್ಜುಮೆಗಳು ಅದನ್ನು ಕ್ರಿಯಾತ್ಮಕವಾಗಿ ಅನುವಾದಿಸುತ್ತವೆ. ಉದಾಹರಣೆಗೆ, NKJVಯಲ್ಲಿ "ಆಸಕ್ತಿಯುಳ್ಳವರಾಗಿರುವದು ಒಳ್ಳೇದು" ಎಂದಿರುತ್ತದೆ, ಮತ್ತು NIVಯಲ್ಲಿ "ಆಸಕ್ತಿಯಿಂದಿರುವದರಲ್ಲಿ ತಪ್ಪಿಲ್ಲ" ಎಂದಿರುತ್ತದೆ. ಈ ಕಾರ್ಯಸಾಧ್ಯವಾದ ಪರ್ಯಾಯಗಳು ಸನ್ನಿವೇಶಕ್ಕೆ ಉತ್ತಮವಾಗಿ ಸರಿಹೊಂದುವಂತೆ ಕಾಣಿಸುತ್ತವೆ. ಆದದರಿಂದ, ನಾವು ವಚನವನ್ನು ಈ ಕೆಳಗಿನಂತೆ ಓದಬಹುದಾಗಿದೆ: "ಒಳ್ಳೇದಕ್ಕಾಗಿ ಆಸಕ್ತಿಯಿಂದಿರುವದು ಯಾವಾಗಲೂ ಒಳ್ಳೇದೇ, ಮತ್ತು ನಾನು ನಿಮ್ಮೊಂದಿಗಿರುವಾಗ ಮಾತ್ರವೇ ಆಸಕ್ತಿಯಿಂದಿರುವದಲ್ಲ."

"ನಾನು ನಿಮ್ಮ ಸಂಗಡ ಇರುವಾಗ ಮಾತ್ರವಲ್ಲದೆ" ಎಂಬುದಕ್ಕೆ ತದ್ವಿರುದ್ಧವಾಗಿ, "ಯಾವಾಗಲೂ" ಎಂಬುದರ ಮೇಲೆ ವಿಶೇಷ ಒತ್ತು ಇರುತ್ತದೆ. 17 ಮತ್ತು 18 ವಚನಗಳಲ್ಲಿ, ಯಾವುದು ಒಳ್ಳೇದಲ್ಲ ಮತ್ತು ಯಾವುದು ಒಳ್ಳೇದು ಎಂಬುದರ ನಡುವೆ ಇನ್ನೊಂದು ವಿರುದ್ಧ ಹೋಲಿಕೆ ಮಾಡಲ್ಪಡುತ್ತದೆ. ಇದು NIVಯಲ್ಲಿನ ಅನುವಾದದಲ್ಲಿ ಪ್ರತಿಬಿಂಬಿಸಲ್ಪಟ್ಟಿರುತ್ತದೆ: "ಆ ಜನರು ನಿಮ್ಮನ್ನು ಓಲೈಸಿಕೊಳ್ಳಲು ಆಸಕ್ತರಾಗಿದ್ದಾರೆ, ಆದರೆ *ಒಳ್ಳೇದಕ್ಕೆ ಅಲ್ಲ* . . . ಉದ್ದೇಶವು *ಒಳ್ಳೇದು* ಆಗಿದ್ದರೆ ಆಸಕ್ತರಾಗಿರುವದರಲ್ಲಿ ತಪ್ಪಿಲ್ಲ . . ." (ಒತ್ತಿ ಹೇಳಿದ್ದು ನನ್ನದು). ಗಲಾತ್ಯದವರು ಪೌಲನನ್ನು ಮತ್ತು ಆತನು ಅವರಿಗೆ ಮೊದಲ ಸುವಾರ್ತಾ ಪ್ರಯಾಣದಲ್ಲಿ ಸಾರಿದ್ದ ಶುಭವಾರ್ತೆಯನ್ನು ಸಂತೋಷದಿಂದ ಅಂಗೀಕರಿಸಿಕೊಂಡಿದ್ದರು (ಅಪೊಸ್ತಲರ ಕೃತ್ಯಗಳು 13; 14). ಹೇಗೂ, ಆತನು ಅಲ್ಲಿಂದ ಹೊರಟು ಹೋದ ಬಳಿಕ, ಅವರು ನಿಷ್ಠೆಯನ್ನು ಬದಲಿಸಿಕೊಂಡು ಯೆಹೂದಿಕರಣಗೊಳಿಸುವವರ ಹಾಗೂ ಅವರ ಪಾಷಂಡ ಸಂದೇಶದ ಕಡೆಗೆ ತಿರುಗಿಕೊಂಡಿದ್ದರು, ಅದರಲ್ಲಿ ಧರ್ಮಶಾಸ್ತ್ರಕ್ಕೆ ದಾಸರಾಗುವದು ಸೇರಿತ್ತು. ಬದಲಾಗಿ, ಅವರು ನಿಜವಾದ ಸುವಾರ್ತೆಯ ವಿಷಯದಲ್ಲಿ, ಆತನ ಅನುಪಸ್ಥಿತಿಯಲ್ಲಿ ಸಹ ಯಾವಾಗಲೂ ಆಸಕ್ತರಾಗಿರಬೇಕೆಂಬುದು ಪೌಲನ ಬಯಕೆಯಾಗಿತ್ತು (ನೋಡಿರಿ ಫಿಲಿಪ್ಪಿ 1:27).

**ವಚನ 19.** ಪತ್ರಿಕೆಯಲ್ಲಿನ ಮುಂದಿನ ಎರಡು ವಚನಗಳು ಇಡೀ ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿನ ಬೇರೆ ಯಾವದೇ ವಾಕ್ಯಭಾಗದಲ್ಲಿ ಇಲ್ಲದ ರೀತಿಯಲ್ಲಿ ಲೇಖಕನ ಹೃದಯವನ್ನು ವ್ಯಕ್ತಪಡಿಸುತ್ತವೆ. ಈ ಮುಂಚೆ ಗಮನಿಸಿರುವ ಪ್ರಕಾರ, ಈ ಪತ್ರಿಕೆಯು ಅತ್ಯಂಥ ಭಾವನಾತ್ಮಕ ಸ್ಥಿತಿಯಲ್ಲಿ ಬರೆಯಲ್ಪಟ್ಟಿತ್ತು. ವಾಸ್ತವಿಕದಲ್ಲಿ, ಇದನ್ನು ಆಘಾತ ಮತ್ತು ದಿಕ್ಕು ತೋಚದಿರುವಿಕೆ (ಈ ಎರಡನೆಯದ್ದು 4:20ರಲ್ಲಿ ಪೌಲನು ಸ್ವತಃ ಬಳಸಿದ ಪದವಾಗಿರುತ್ತದೆ) ನಡುವಿನ ಒಂದು ಮನಃಸ್ಥಿತಿಯೊಳಗಿಂದ ಬರೆಯಲ್ಪಟ್ಟಿತ್ತೆಂಬುದಾಗಿ ಬಣ್ಣಿಸಬಹುದು. ಈ ಪತ್ರಿಕೆಯು ಪೌಲನು

ಬರೆದ ಅತ್ಯಂಥ ಆರಂಭಿಕ ಪತ್ರಿಕೆ ಮಾತ್ರವಲ್ಲದೆ ಮೊದಲ ಸುವಾರ್ತಾ ಪ್ರಯಾಣ ಹಾಗೂ ಯೆರೂಸಲೇಮಿನಲ್ಲಿ ನಡೆದ ಸಮಾಲೋಚನಾ ಸಭೆಯ ನಡುವಿನ ಕಾಲದಲ್ಲಿ (ಅಪೊಸ್ತಲರ ಕೃತ್ಯಗಳು 14:26 ಮತ್ತು 15:6ರ ನಡುವೆ) ಬರೆಯಲ್ಪಟ್ಟಿರುತ್ತದೆಂದು ನಾವು ಪರಿಗಣಿಸಿರುವದು ಸರಿಯೇ ಆಗಿರುವದಾದಲ್ಲಿ, ಪರಿಸ್ಥಿತಿಯ ಕುರಿತಾಗಿ ಹಲವಾರು ಅವಲೋಕನಗಳನ್ನು ಮಾಡಬಹುದಾಗಿದೆ.

ಪೌಲನು ಅತ್ಯಧಿಕವಾದ ತ್ಯಾಗಗಳು, ಕಠಿಣತೆಗಳು, ಮತ್ತು ಶ್ರಮೆಗಳನ್ನು ಹಾಯ್ದು ಬಂದಾಗ್ಯೂ - ಒಂದು ಸಾರಿ ಕಲ್ಲುಗಳಿಂದ ಹೊಡೆಯಲ್ಪಟ್ಟು ಸಾಯುವದಕ್ಕೆ ಸಹ ಬಿಡಲ್ಪಟ್ಟಿದ್ದನು (ಅಪೊಸ್ತಲರ ಕೃತ್ಯಗಳು 14:19) - ಆತನು ಮತ್ತು ಬಾರ್ನಬ ನಿಸ್ಸಂಶಯವಾಗಿಯೂ ಸಡಗರದಿಂದ ಅಂತಿಯೋಕ್ಯಕ್ಕೆ ಹಿಂದಿರುಗಿದ್ದರು. ಅವರು "ಅನ್ಯಜನರಿಗೆ ನಂಬಿಕೆಯ ಬಾಗಿಲನ್ನು ತೆರೆದದ್ದರ" ಆರಂಭಿಕ ಪರಿಶ್ರಮಗಳಲ್ಲಿ ಯಶಸ್ವಿಯಾಗಿದ್ದರು (ಅಪೊಸ್ತಲರ ಕೃತ್ಯಗಳು 14:27). ಅನಂತರದಲ್ಲಿ ಯೆಹೂದಿಕರಣಗೊಳಿಸುವವರು ಬಂದಿದ್ದರು (ಅಪೊಸ್ತಲರ ಕೃತ್ಯಗಳು 15:1). ಅವರು ಪೌಲನ ಮೊದಲ ಸುವಾರ್ತಾ ಪ್ರಯಾಣದ ವೇಳೆಯಲ್ಲಿ ಆತನು ಅನುಭವಿಸಿದ ಬಹಳಷ್ಟು ಶ್ರಮೆಗೆ ಪ್ರಚೋದನೆ ನೀಡಿದ್ದಂಥ ಅವಿಶ್ವಾಸಿಗಳಾದ ಯೆಹೂದ್ಯರಾಗಿರಲಿಲ್ಲ. ಬದಲಾಗಿ, ಅವರು ಯೆಹೂದಿ ಕ್ರೈಸ್ತರಾಗಿದ್ದರು, ಆರಂಭದಲ್ಲಿ ಸುವಾರ್ತೆ ಸಾರುವಿಕೆಯ ಪ್ರಯತ್ನಗಳು ದೇವರ ಹಳೆಯ ಒಡಂಬಡಿಕೆಯ ಜನರಿಗೆ ಸೀಮಿತವಾಗಿದ್ದಂಥ ಸಂದರ್ಭದಲ್ಲಿ ಪರಿವರ್ತನೆಗೊಂಡವರಾಗಿದ್ದರು. ಕೊರ್ನೇಲ್ಯನ ಪರಿವರ್ತನೆ ವಿಷಯದಲ್ಲಿ ಪೇತ್ರನು ಮಾಡಿದ ಸಮರ್ಥನೆಯನ್ನು ಆಲಿಸಿದ ಬಳಿಕ, ಆತನಿಗೆ ವಿರೋಧ ವ್ಯಕ್ತಪಡಿಸಿದ್ದವರು ಸಹ ಸತ್ಯವೇನೆಂಬುದನ್ನು ಗ್ರಹಿಸಿಕೊಂಡಿದ್ದರು ಮತ್ತು "ಹಾಗಾದರೆ ದೇವರು ಅನ್ಯಜನರಿಗೂ ಜೀವಕೊಡಬೇಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾನೆ ಎಂದು ದೇವರನ್ನು ಕೊಂಡಾಡಿದರು" (ಅಪೊಸ್ತಲರ ಕೃತ್ಯಗಳು 11:18).

ಹಾಗಿದ್ದರೂ, ಪೌಲನಿಗೆ (ಮತ್ತು ಪೇತ್ರನಿಗೆ) ಪ್ರಕಟಗೊಳಿಸಲ್ಪಟ್ಟಿದ್ದ ಸತ್ಯವು ಅನೇಕ ಯೆಹೂದಿ ಶಿಷ್ಯರಿಗೆ ಸ್ಪಷ್ಟವಾಗಿ ಅರ್ಥವಾಗಿರಲಿಲ್ಲ. ಅವರು ಕ್ರಿಸ್ತನಲ್ಲಿದ್ದ ಯೆಹೂದ್ಯರು ಹಾಗೂ ಅನ್ಯಜನರ ನಡುವೆ ಭಿನ್ನತೆ ಮಾಡುವದನ್ನು ಮುಂದುವರೆಸಿದರು ಮತ್ತು ಮೋಶೆಯಿಂದ ಕೊಡಲ್ಪಟ್ಟಿರುವ ಸುನ್ನತಿ ಮತ್ತು ಇತರ ನಿಯಮಗಳು ಈಗ ಅಪ್ರಸ್ತುತವಾಗಿವೆ ಎಂಬ ವಿಚಾರವನ್ನು ತಿರಸ್ಕರಿಸಿದರು. ಅನ್ಯಜನರಿಗಾಗಿ ಕ್ರಿಸ್ತನ ವಿಶೇಷ ನಿಯೋಗಿಯಾಗಿದ್ದ ಪೌಲನಿಗಾದರೋ, ಈ ಸತ್ಯಗಳು ಪರಿಪೂರ್ಣವಾಗಿ ಸ್ಪಷ್ಟಗೊಂಡಿದ್ದವು. ಯೆಹೂದಿಕರಣಗೊಳಿಸುವವರು ಆತನ ಸೇವೆಯನ್ನು ಹಾಳು ಮಾಡುತ್ತಿರುವ ರೀತಿಯನ್ನು ಕಂಡು ಆತನು ಕೋಪದಿಂದ ತುಂಬಿದ್ದನು.

ಆತನು ಏಕೆ ಆಘಾತಗೊಂಡವನಾಗಿ ಗಲಾತ್ಯದವರನ್ನು ನೇರವಾಗಿ "ಎಲೈ ಬುದ್ಧಿಯಿಲ್ಲದ ಗಲಾತ್ಯದವರೇ" (ಗಲಾತ್ಯ 3:1) ಎಂದು ಕರೆದನೆಂಬುದಕ್ಕೆ ಈ ಹಿನ್ನಲೆಗಳು ಉತ್ತರವನ್ನು ಕೊಡುತ್ತವೆ. ಇದು ಪತ್ರಿಕೆಯಲ್ಲಿ ಬಳಸಲಾಗಿರುವ ಏಕೈಕ ನೇರವಾದ ಸಂಬೋಧನೆಯಾಗಿರುತ್ತದೆ. ಪತ್ರಿಕೆಯಲ್ಲಿ ಅವರನ್ನು ಸಂಬೋಧಿಸುವದಕ್ಕಾಗಿ "ಸಹೋದದರೇ" (ἀδελφοί, *adelphoi*) ಎಂಬ ಪದವು ಒಂಭತ್ತು ಸಾರಿ ಬಳಸಲ್ಪಟ್ಟಿರುತ್ತದೆ.[36] 4:19ರಲ್ಲಿ, ಪೌಲನು ಗಲಾತ್ಯದವರನ್ನು **ನನ್ನ ಪ್ರಿಯವಾದ ಮಕ್ಕಳೇ** (τέκνα μου, *tekna mou*) ಎಂದು ಕರೆಯುತ್ತಾನೆ. ಇತರ ಪ್ರಾಚೀನ ಹಸ್ತಪ್ರತಿಗಳಲ್ಲಿ τεκνία μου (*teknia mou*)[37] ಎಂಬ ಪದಗಳನ್ನು ಹೊಂದಿರುತ್ತವೆ, ಅದನ್ನು "ನನ್ನ ಚಿಕ್ಕ ಮಕ್ಕಳೇ" (NKJV; NRSV; ESV)

ಅಥವಾ “ನನ್ನ ಪ್ರಿಯ ಮಕ್ಕಳೇ” (NIV; NLT; GNT) ಎಂದು ಅನುವಾದಿಸಬಹುದು. ಇಡೀ ಪತ್ರಿಕೆಯಲ್ಲಿ ಇದೊಂದೇ ಅಕ್ಕರೆಯನ್ನು ತೋರಿಸುವ ಪದವಾಗಿದೆ.

ಪೌಲನು ತನ್ನ ಆತ್ಮೀಕ ಮಕ್ಕಳನ್ನು ಬಹಳವಾಗಿ ಪ್ರೀತಿ ಮಾಡಿರಬೇಕಷ್ಟೆ. ಆತನು ಅವರ ನಡುವಿನ ಸಂಬಂಧವನ್ನು ತೋರಿಸುವದಕ್ಕೆ 19ನೇ ವಚನದಲ್ಲಿ ಬಳಸಿದ ಭಾಷೆಯು ಮನಃಸ್ಪರ್ಶಿಸುವಂತದ್ದು: . . . **ಕ್ರಿಸ್ತನ ಸಾರೂಪ್ಯವು ನಿಮ್ಮಲ್ಲಿ ಉಂಟಾಗುವ ತನಕ ನಿಮಗೋಸ್ಕರ ತಿರಿಗಿ ಪ್ರಸವವೇದನೆ ಪಡುತ್ತೇನೆ** [πάλιν ὠδίνω, *palin ōdinō*]. ಮಗುವಿಗೆ ಜನ್ಮ ನೀಡುವ ಪ್ರಕ್ರಿಯೆಯಲ್ಲಿದ್ದ ತಾಯಿ ಈ ಬಣ್ಣನೆಯು ಎಲ್ಲಾ ಶಾಸ್ತ್ರಗಳಲ್ಲಯೇ ಅತ್ಯಂಥ ಭಾವನಾತ್ಮಕವಾದ ಚಿತ್ರಣಗಳಲ್ಲೊಂದಾಗಿದೆ. ಇಲ್ಲಿನ ಬಣ್ಣನೆಯು ಕೊರಿಂಥದಲ್ಲಿನ ತನ್ನ “ಪ್ರಿಯ ಮಕ್ಕಳಿಗೆ” ತನ್ನನ್ನು ಅನುಸರಿಸುವಂತೆ ಪೌಲನು ಮಾಡುವ ಮನವಿಯನ್ನು ಜ್ಞಾಪಿಸುವದಾಗಿದೆ. ಆತನು ಬರೆದದ್ದೇನೆಂದರೆ,

> ನಿಮ್ಮನ್ನು ನಾಚಿಕೆಪಡಿಸುವದಕ್ಕಾಗಿ ಬರೆಯದೆ ನನ್ನ ಪ್ರಿಯ ಮಕ್ಕಳೆಂದು ಭಾವಿಸಿ ನಿಮಗೆ ಬುದ್ಧಿ ಹೇಳುವದಕ್ಕಾಗಿಯೇ ಈ ಮಾತುಗಳನ್ನು ಬರೆದಿದ್ದೇನೆ. ನಿಮಗೆ ಕ್ರಿಸ್ತನಲ್ಲಿ ಉಪಾಧ್ಯಾಯರು ಸಾವಿರಾರು ಮಂದಿ ಇದ್ದರೂ ತಂದೆಗಳು ಬಹುಮಂದಿ ಇಲ್ಲ; ನಾನೇ ನಿಮ್ಮನ್ನು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುವಿನಲ್ಲಿ ಪಡೆದೆನು. ಆದದರಿಂದ ನನ್ನನ್ನು ಅನುಸರಿಸಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ (1 ಕೊರಿಂಥ 4:14-16).

KJVಯು ಅವರನ್ನು ಅಪೊಸ್ತಲನು “ಪಡೆದನು” ಎಂದು ಹೇಳುತ್ತದೆ. ಆತನು ಫಿಲೆಮೋನನಿಗೆ ಬರೆದ ಪತ್ರಿಕೆಯಲ್ಲಿ, ಪೌಲನು ಅದೇ ರೀತಿಯಲ್ಲಿ ಒಬ್ಬ ವ್ಯಕ್ತಿಯನ್ನು ಕ್ರಿಸ್ತ ನಂಬಿಕೆಯಲ್ಲಿ ಬೆಳೆಸುವ ತನ್ನ ಪಾತ್ರದ ಕುರಿತಾಗಿ ಸಾಂಕೇತಿಕ ರೂಪದಲ್ಲಿ ಮಾತಾಡುತ್ತಾ “ಪಡೆದಿರುವ” ಎಂದು ಸೂಚಿಸುತ್ತಾನೆ. ಆತನು ಹೀಗೆ ಬರೆದನು, “ನಾನು ಸೆರೆಯಲ್ಲಿ ಪಡೆದಿರುವ ನನ್ನ ಮಗನಾದ ಓನೇಸಿಮನ ವಿಷಯದಲ್ಲಿ ನಿನ್ನನ್ನು ಬೇಡಿಕೊಳ್ಳುತ್ತೇನೆ” (ಫಿಲೆಮೋನ 10). ಅದೇ ವಿಧದಲ್ಲಿಯೇ, ಈ ಎರಡೂ ವಾಕ್ಯಭಾಗಗಳಲ್ಲಿ ಕಾಣಿಸಿಕೊಳ್ಳುವ ಕ್ರಿಯಾಪದವು, γεννάω (*gennaō*), ದೇವರು ಮತ್ತು ಪವಿತ್ರಾತ್ಮ ಇಬ್ಬರನ್ನೂ ಸೂಚಿಸಿ ಪದೇ ಪದೇ ಸಾಂಕೇತಿಕ ರೂಪದಲ್ಲಿ ಬಳಸಲ್ಪಟ್ಟಿರುತ್ತದೆ (ಯೋಹಾನ 1:13; 3:6, 8; ಇಬ್ರಿಯ 1:5; 5:5; 1 ಯೋಹಾನ 4:7; 5:1). ಕೆಲವು ಹೇಳಿಕೊಂಡಿರಬಹುದಾದಕ್ಕೆ ತದ್ವಿರುದ್ಧವಾಗಿ, *ಜೆನ್ನಾವೋ* ಕ್ರಿಯಾಪದವು ಒಬ್ಬ ಸ್ತ್ರೀಯಲ್ಲಾಗುವ ಪ್ರಸವವೇದನೆಯನ್ನು ಸೂಚಿಸುವದಕ್ಕೆ ಸಹ ಬಳಸಲಾಗುತ್ತದೆ, ಆದರೆ ಸಾಮಾನ್ಯವಾಗಿ ಕೇವಲ ಅಕ್ಷರಶಃ ಅರ್ಥದಲ್ಲಿ ಬಳಸಲ್ಪಡುತ್ತದೆ. ಉದಾಹರಣೆಗೆ, ಎಲಿಸಬೇತಳ ವಿಷಯದಲ್ಲಿ ಬಳಸಲ್ಪಟ್ಟಿದೆ (ಲೂಕ 1:13), ಮರಿಯಳು (ಮತ್ತಾಯ 1:16), ಮತ್ತು ಒಟ್ಟಾರೆ ಸ್ತ್ರೀಯರ ವಿಷಯದಲ್ಲಿ ಬಳಸಲ್ಪಟ್ಟಿರುತ್ತದೆ (ಲೂಕ 23:29). ಸ್ತ್ರೀಯರು “ಹೆರುವದಕ್ಕೆ” ಸಂಬಂಧ ಪಟ್ಟ ಪದವು ಬಹಳ ಸಾರಿ τίκτω (*tiktō*) ಎಂದಾಗಿದೆಯಾದರೂ, ಗ್ರೀಕ್ ಭಾಷೆಯ ಎರಡೂ ಪದಗಳು ಸ್ತ್ರೀಯರಿಗಾಗಿ ಬಳಸಲ್ಪಟ್ಟಿರುತ್ತವೆ. ಸ್ನಾನಿಕನಾದ ಯೋಹಾನನ ಜನನಕ್ಕೆ ಸಂಬಂಧ ಪಟ್ಟಂತೆ, ಒಂದೇ ವಚನದಲ್ಲಿ ಇವರೆಡೂ ಪದಗಳು ಪರ್ಯಾಯವಾಗಿ ಬಳಸಲ್ಪಟ್ಟಿರುತ್ತವೆ (ಲೂಕ 1:57). ಹೇಗೂ, ಕೂಸಿಗೆ ತಂದೆಯಾಗುವದರಲ್ಲಿ ಪುರುಷನೊಬ್ಬನ ಪಾತ್ರವು ಯಾವಾಗಲೂ *ಜೆನ್ನಾವೋ* ಎಂಬ ಪದದಿಂದ ವ್ಯಕ್ತಪಡಿಸಲ್ಪಡುತ್ತದೆ.

ಪೌಲನು 4:19ರಲ್ಲಿ ಬಳಸಿದ ಭಾಷೆಯಲ್ಲಿ ಕಣ್ಸೆಳೆಯುವ ಇನ್ನೊಂದು ಸಂಗತಿಯೆಂದರೆ, ಆತನು, ಒಬ್ಬ ಪುರುಷ ಲೇಖಕನಾಗಿ “ಪ್ರಸವವೇದನೆ” ಪಡುವ ಸ್ತ್ರೀಲಿಂಗದ ಚಿತ್ರಣವನ್ನು ಬಳಸಿದನು ಎಂಬುದೆ. ಇದು ವಚನದ ಮೊದಲನೆಯ ಭಾಗದಲ್ಲಿ ಆತನು ತನ್ನ “ಪ್ರಿಯವಾದ

ಮಕ್ಕಳೇ" ಎಂಬ ಆತನ ಸಂಬೋಧನೆಗೆ ಇನ್ನಷ್ಟು ಕೋಮಲತೆಯನ್ನು ಕೂಡಿಸುತ್ತದೆ. ಪೌಲನು ಬೇರೊಂದು ಕಡೆಯಲ್ಲಿ ಸ್ತ್ರೀಲಿಂಗದ ಚಿತ್ರಣವನ್ನು ಬಳಸುತ್ತಾನೆ: "ತಾಯಿಯು ತನ್ನ ಮಕ್ಕಳನ್ನು ಪೋಷಿಸುತ್ತಾಳೋ ಎಂಬಂತೆ ನಾವು ನಿಮ್ಮ ಮಧ್ಯದಲ್ಲಿ ವಾತ್ಸಲ್ಯದಿಂದ ನಡೆದುಕೊಂಡಿದ್ದೆವು. ನೀವು ನಮಗೆ ಅತಿ ಪ್ರಿಯರಾದ ಕಾರಣ ನಾವು ನಿಮ್ಮಲ್ಲಿ ಮಮತೆಯುಳ್ಳವರಾಗಿ . . . ನಿಮಗೋಸ್ಕರ ಪ್ರಾಣವನ್ನೇ ಕೊಡುವದಕ್ಕೆ ಸಂತೋಷಿಸುವವರಾದೆವು" (1 ಥೆಸಲೋನಿಕ 2:7, 8). ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿರುವ ವಾಕ್ಯಭಾಗವು ಇನ್ನು ಎಷ್ಟೋ ಕಣ್ಣಿಗೆ ಕಟ್ಟಿದಂತೆ ಇರುತ್ತೆ, ಮತ್ತು ಅದು ನಕಾರಾತ್ಮಕವಾದ ಭಾವೋದ್ವೇಗದಿಂದ ಬರೆಯಲ್ಪಟ್ಟಿರುವ ಕಾರಣದಿಂದ ಇನ್ನಷ್ಟು ಹೆಚ್ಚು ಎದ್ದು ಕಾಣುವಂತೆ ನಿಲ್ಲುತ್ತದೆ. ಕೆಲವು ವಚನಗಳ ನಂತರದಲ್ಲಿ, ಗಲಾತ್ಯ 4:27ರಲ್ಲಿ, ಪೌಲನು ಯೆಶಾಯ 54:1ರಲ್ಲಿನ ವಾಕ್ಯಭಾಗವನ್ನು ಉಲ್ಲೇಖಿಸುತ್ತಾನೆ, ಅದು ಜನನ ಪ್ರಕ್ರಿಯೆಯನ್ನು ಬಣ್ಣಿಸುವ ಎರಡು ಪದಗಳನ್ನು ಒಳಗೊಂಡಿರುತ್ತದೆ: *ಟಿಕ್ಟೋ* ("ಜನ್ಮ ಕೊಡು") ಮತ್ತು *ಓಡಿನೋ* ("ಪ್ರಸವದಲ್ಲಿರು" ಅಥವಾ "ಹೆರಿಗೆಯ ನೋವುಗಳನ್ನು ಅನುಭವಿಸು"). ಅವುಗಳ ಅಕ್ಷರಶಃ ಅನ್ವಯಿಕೆಯಲ್ಲಿ, ಎರಡೂ ಪದಗಳು ಕೇವಲ ಸ್ತ್ರೀಯರಿಗೆ ಬಳಸಲ್ಪಟ್ಟಿರುತ್ತವೆ, ಮತ್ತು ಎರಡನೆಯ ಪದವು ಅತ್ಯಂಥ ತೀಕ್ಷ್ಣವಾದ ನೋವನ್ನು ವ್ಯಕ್ತಪಡಿಸುವದಾಗಿದೆ.

ಇದೆಲ್ಲದರಿಂದ, ಅನೇಕರು ಚಿತ್ರಿಸಿರುವ ಪ್ರಕಾರ ಪೌಲನು ಭಾವವಿಲ್ಲದ ಬುದ್ಧಿವಂತನಾಗಿರಲಿಲ್ಲ ಎಂಬುದು ಸ್ಪಷ್ಟಗೊಳ್ಳತಕ್ಕದ್ದು. ಇನ್ನು ಕೆಲವರು ಭಾವಿಸಿಕೊಳ್ಳುವದೇನೆಂದರೆ, ಎಂದಿಗೂ ಮದುವೆಯನ್ನೇ ಮಾಡಿಕೊಂಡಿರದ ಅಪೊಸ್ತಲನಿಗೆ ಮಹಿಳೆಯರ ಬಗ್ಗೆ ಅರ್ಥಮಾಡಿಕೊಂಡವನಾಗಿರಲಿಲ್ಲ ಎಂಬುದೆ. ಆತನು ಮದುವೆ ಮತ್ತು ದಾಂಪತ್ಯದ ವಿಷಯದಲ್ಲಿ ಅನುಸರಿಸಿದ ಕ್ರಮದ ಕಾರಣದಿಂದಾಗಿ ಅವರು ಹೀಗೆ ಹೇಳುತ್ತಾರೆ. ಇನ್ನು ಕೆಲವರು ಹೆಂಡತಿಯರು ಅವರ ಗಂಡಂದಿರಿಗೆ ಅಧೀನರಾಗಿರಬೇಕೆಂಬ ಆತನ ಬೋಧನೆಯ ಕಾರಣದಿಂದ ಬೇಸರಗೊಳ್ಳುತ್ತಾರೆ (ನೋಡಿರಿ 1 ಕೊರಿಂಥ 14:34, 35; ಎಫೆಸ 5:22-24; 1 ತಿಮೊಥೆ 2:11-15; ತೀತನಿಗೆ 2:3-5; 1 ಪೇತ್ರ 3:1-6).

ಗಲಾತ್ಯ 4:19, 20 ವಚನಗಳನ್ನು ಪೌಲನ ಆತ್ಮದಲ್ಲಿದ್ದ ಭಯಂಕರವಾದ ತಳಮಳವನ್ನು ಗ್ರಹಿಸಿಕೊಳ್ಳದೆ ಓದುವ ಯಾರೇ ಆಗಲಿ ಸಮಸ್ಯೆಯನ್ನು ತನ್ನ ಹೃದಯದಲ್ಲಿ ಹುಡುಕಿಕೊಳ್ಳಬೇಕೇ ಹೊರತು, ಪೌಲನ ಹೃದಯದಲ್ಲಿ ಅಲ್ಲ. ಇದು ಇಡೀ ಹೊಸ ಒಡಂಬಡಿಕೆಯಲ್ಲಿಯೇ ಅತ್ಯಂಥ ಗಹನವಾದ ಭಾವನಾತ್ಮಕ ವಾಕ್ಯಭಾಗಗಳಲ್ಲೊಂದಾಗಿದೆ. ಆತನು ಸುವಾರ್ತೆ ಸಾರುವದರಲ್ಲಿ ಪಟ್ಟಂಥ ಸಕಲ ಪ್ರಯಾಸವನ್ನು, ನಿರ್ದಿಷ್ಟವಾಗಿ ಆತನು ಪರಿವರ್ತನೆಗೊಳ್ಳಲು ಸಹಾಯ ಮಾಡಿದವರೊಳಗೆ "ಕ್ರಿಸ್ತನ ಸಾರೂಪ್ಯವು ಉಂಟಾ[ಗುತ್ತಿದ್ದ]"ದಕ್ಕಿಂತಲೂ ಬೇರೊಂದು ಉದ್ದೇಶಕ್ಕೆ ಮುಖ್ಯತ್ವ ಕೊಡಲ್ಪಡುವದನ್ನು ಪೂರ್ಣವಾಗಿ ಗ್ರಹಿಸಿಕೊಂಡದ್ದರಿಂದ ಪೌಲನಲ್ಲಿ ಆ ಉದ್ವೇಗವು ಉಂಟಾಗಿತ್ತು.

ದೇವರು ಭೂಲೋಕದಲ್ಲಿ ಕಾಣಿಸಿಕೊಂಡ ತನ್ನ ಮಗನಾದ ನಜರೇತಿನ ಯೇಸುವಿನ ಮೂಲಕವಾಗಿ ತನ್ನನ್ನು ಪ್ರಕಟಗೊಳಿಸಿಕೊಳ್ಳುವದರಲ್ಲಿ ಆತನಿಗಿದ್ದ ನಿತ್ಯವಾದ ಉದ್ದೇಶವು, "ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ" ಆಗಿತ್ತು (ಕೊಲೊಸ್ಸೆ 1:27). ಪೌಲನು ಈ ಮಾತನ್ನು ಬೇರೊಂದು ಸ್ಥಳದಲ್ಲಿನ ಕ್ರೈಸ್ತರಿಗೆ ಹೇಳಿದ್ದನು, ಆದರೆ ಗಲಾತ್ಯದವರಿಗೆ ಅದೇ ನಿರೀಕ್ಷೆಯನ್ನು ಪರಿಚಯಿಸಲಾಗಿತ್ತು. ಅವರು ಸುವಾರ್ತೆಯನ್ನು ನಂಬಿದ್ದರು ಮತ್ತು ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರು. ಅವರು "ಪ್ರಭಾವದ ನಿರೀಕ್ಷೆ"ಯನ್ನು ಬಲ್ಲವರಾಗಿದ್ದರು, ಯಾಕೆಂದರೆ ಈ ಸಾರಭೂತವಾದ ಸಿದ್ಧಾಂತವನ್ನು ತನ್ನ ಬೋಧನೆಯಿಂದ

ಎಂದಾದರೂ ಕೈ ಬಿಟ್ಟಿರುವದಕ್ಕೆ ಸಾಧ್ಯವೇ ಇರಲಿಲ್ಲ.[38] ಹೇಗೂ, ಗಲಾತ್ಯದವರು ತಮ್ಮ ಮೇಲೆ ಧರ್ಮಶಾಸ್ತ್ರವನ್ನು ಹೇರಿಕೆ ಮಾಡುತ್ತಿದ್ದವರಿಂದ ಮರಳಾಗಿ ಯೇಸುವಿನಲ್ಲಿದ್ದ ಅವರ ನಿರೀಕ್ಷೆಯಿಂದ ತಪ್ಪಿ ಹೋಗಿದ್ದರು.

ಈ ಹೊಸದಾಗಿ ಪರಿವರ್ತನೆಗೊಂಡವರಲ್ಲಿ ಕ್ರಿಸ್ತನ ಸಾರೂಪ್ಯದ ಕೊರತೆಯು ಇತ್ತು. ಆತ್ಮೀಕ ಬೆಳವಣಿಗೆಯಲ್ಲಿ ವೈಯಕ್ತಿಕ ನಿರ್ಮಲತೆ ಹಾಗೂ ಪರಿಶುದ್ಧತೆ; ಬೇರೆಯವರ ಕಡೆಗೆ ಸಕ್ರಿಯವಾದ, ಪ್ರೀತಿಯುಳ್ಳ ಕಾಳಜಿ ತೋರುವ ಮೂಲಕವಾಗಿ ಅವರಿಗೋಸ್ಕರ ಜೀವಿಸುವದು; ನಾಶನದಲ್ಲಿರುವವರನ್ನು ಸಂಧಿಸುವದರಲ್ಲಿ ದೇವರ ಉದ್ದೇಶ ಮತ್ತು ಚಿತ್ತಕ್ಕೆ ಸಮರ್ಪಿತರಾಗಿರುವದು; ಮತ್ತು ಕ್ರಿಸ್ತನ ಧ್ಯೇಯಕ್ಕೋಸ್ಕರ ಶ್ರಮೆಗಳನ್ನು ಅನುಭವಿಸುವದು ಇತ್ಯಾದಿಗಳಂತಹ ಪರಿಮಾಣಗಳನ್ನೊಳಗೊಂಡಿರುತ್ತದೆ. ಅದಕ್ಕೆ ಒಬ್ಬನ ವಾತ್ಸಲ್ಯಗಳನ್ನು "ಮೇಲಿರುವವುಗಳ" ಮೇಲೆ ಇಡುವದರ (ಕೊಲೊಸ್ಸೆ 3:1, 2) ಮತ್ತು ಒಬ್ಬನನ್ನು ಪರಿಶುದ್ಧ ಜೀವಿತವನ್ನು ನಡಿಸದಂತೆ ದೂರಕ್ಕೆ ಕೊಂಡೊಯ್ಯುವಂಥವುಗಳಿಂದ ವಿಮುಖರಾಗುವದರ ಅಗತ್ಯವಿರುತ್ತದೆ. ಕ್ಲುಪ್ತವಾಗಿ ಹೇಳುವದಾದರೆ, ಕ್ರೈಸ್ತನು ತನ್ನೊಳಗೆ ಕ್ರಿಸ್ತನ ಸಾರೂಪ್ಯವನ್ನು ಹೊಂದಿರುವದರಲ್ಲಿ, "ಕೆಟ್ಟುಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದ" (ಲೂಕ 19:10) ಯೇಸುವಿನ ಜೀವಿತಕ್ಕೆ ಸ್ಫೂರ್ತಿ ಮತ್ತು ದಿಕ್ಕನ್ನು ತೋರಿಸಿದಂಥ ಎಲ್ಲವೂ ಅಡಕವಾಗಿರುತ್ತದೆ.

ಪೌಲನು ತನ್ನ ಸೇವೆಯನ್ನು ನಡಿಸಬೇಕೆಂದು ಇಟ್ಟುಕೊಂಡಿದ್ದ ಆಳವಾದ, ಧಹಿಸುವಂಥ ತೀವ್ರಾಸಕ್ತಿಯು ಯೇಸುವಿನ ಆತ್ಮ ಮತ್ತು ಮಹಿಮೆಯ ಪ್ರತಿಫಲನವಾಗಿತ್ತು, ಯೇಸುವು ಬೇರೆಯವರನ್ನು ರಕ್ಷಿಸುವದಕ್ಕೋಸ್ಕರ ತನ್ನನ್ನು ಮನಃಪೂರ್ವಕವಾಗಿ ಒಪ್ಪಿಸಿಕೊಂಡನು. ತಾನು ಹಾಗೂ ಇತರ ಅಪೊಸ್ತಲರು "ಹೊಸ ಹೊಸ ಒಡಂಬಡಿಕೆ"ಯ ಸೇವಕರಾಗಿದ್ದು, ಹಳೆಯ ಒಡಂಬಡಿಕೆಯ ಸೇವಕನಾಗಿದ್ದ ಮೋಶೆಗೆ ತದ್ವಿರುದ್ಧವಾದವರು ಎಂಬುದಾಗಿ ಕೊರಿಂಥದವರಿಗೆ ಹೇಳುತ್ತಾನೆ. ಆತನು ಹೀಗೆ ಹೇಳಿದನು, "ನಾವೆಲ್ಲರೂ ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರಾಗಿ ಮಾರ್ಪಡುತ್ತಿದ್ದೇವೆ . . ." (2 ಕೊರಿಂಥ 3:18; NIV1984).[39] ಮೋಶೆಯ ವಿಷಯದಲ್ಲಾದರೋ, ಪ್ರಭಾವವು ಮಂದವಾಗುತ್ತಾ ಸಾಗಿತು ಮತ್ತು, ಮುಸುಕಿನ ಅಡಿಯಲ್ಲಿ ಅದು ಮರೆಯಾಗಿ ಹೋಯಿತು. ಹೇಗೂ, ಅಪೊಸ್ತಲರು ಕ್ರಿಸ್ತನ ಸಂದೇಶವನ್ನು ಹೆಚ್ಚೆಚ್ಚು ಸಾರಿದಂತೆ, ಅವರು ಇನ್ನಷ್ಟು ಅಧಿಕವಾಗಿ ಆತನ ಸ್ವರೂಪವುಳ್ಳವರಾಗಿ "ಮಾರ್ಪಟ್ಟರು" (μεταμορφόω, *metamorphoō*) ಅಥವಾ "ರೂಪಾಂತರಿಸಲ್ಪಟ್ಟರು." ಈ ಸಂದೇಶವನ್ನು ಸಾರುವದರಲ್ಲಿ ಅವರಿಗಿದ್ದ ಗುರಿಯು ಯಾವುದಾಗಿತ್ತು? "ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಯಾಗಿರುವನು" ಎಂಬದೇ!

ಪೌಲನಿಗೆ ಪ್ರಿಯರಾದ ಗಲಾತ್ಯದ ಮಕ್ಕಳಲ್ಲಿ, ಆತ ಸಾರೂಪ್ಯವು ರೂಪಗೊಳ್ಳುವದನ್ನು ಭಂಗಪಡಿಸಲಾಗುತ್ತಿತ್ತು. ಆದದರಿಂದ, ಆತನು ಅವರಲ್ಲಿ ಕ್ರಿಸ್ತನ ಸಾರೂಪ್ಯವು ಉಂಟಾಗುವಂತಾಗುವದಕ್ಕಾಗಿ ಪುನಃ ಪ್ರಸವವೇದನೆಯನ್ನು ಅನುಭವಿಸುವದಕ್ಕೆ ಮನಸ್ಸುಳ್ಳವನಾಗಿದ್ದನು. ಒಂದು ಬೋಧನಾ ಪ್ರವಾಸವನ್ನು ಕೈಗೊಂಡು ಜನರನ್ನು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸುವದು ಒಂದು ಸಂಗತಿಯಾಗಿರುತ್ತದೆ, ಅದರಲ್ಲಿ ಹೊಸ ಜನ್ಮವು ಸೇರಿರುತ್ತದೆ. ಕ್ರಿಸ್ತನು ಆಜ್ಞಾಪಿಸಿರುವದನ್ನೆಲ್ಲಾ "ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿ" ಸಂರಕ್ಷಿಸುವದೇ ಅತ್ಯಂಥ ಭಿನ್ನವಾದ ಸಂಗತಿಯಾಗಿರಬಲ್ಲದು (ಮತ್ತಾಯ 28:20). ಈ ಶಿಷ್ಯರನ್ನಾಗಿ ಮಾಡುವ ಪ್ರಕ್ರಿಯೆಯ ಮೂಲಕವಾಗಿ, ಪರಿವರ್ತನೆಗೊಂಡವರು, "ಪ್ರಭಾವದ

ನಿರೀಕ್ಷೆ"ಯನ್ನು ಹೊಂದಿಕೊಂಡವರು ಮತ್ತು ಅವರಿಂದ ಸ್ಫೂರ್ತಿಗೊಂಡವರಾಗಿ ಜೀವಿಸುವ ಕ್ರಿಸ್ತನಿಗೆ ಕೋಶಗಳಾಗುತ್ತಾರೆ.

**ವಚನ 20.** ಪೌಲನು ತನ್ನ ವೈಯಕ್ತಿಕ ಮನವಿಯನ್ನು ಮುಕ್ತಾಯಗೊಳಿಸುತ್ತಾ ಹೀಗೆ ಹೇಳುತ್ತಾನೆ, **ನಿಮ್ಮ ವಿಷಯದಲ್ಲಿ ಏನು ಮಾಡಬೇಕೋ ನನಗೆ ತಿಳಿಯದು. ನಾನು ಈಗಲೂ ನಿಮ್ಮಲ್ಲಿದ್ದು ಬೇರೆ ರೀತಿಯಿಂದ ಮಾತಾಡುವದಕ್ಕೆ ಎಷ್ಟೋ ಆಶೆಪಡುತ್ತೇನೆ.** Oklahomaದ ಪ್ರಸಿದ್ಧ ಹಾಸ್ಯಕಲಾಕಾರನಾದ Will Rogersನು ತಾನು ಸುದ್ದಿಪತ್ರಿಕೆಗಳಲ್ಲಿ ಏನು ಓದುತ್ತಾನೋ ಅದಷ್ಟೇ ಆತನಿಗೆ ಗೊತ್ತಿದ್ದದ್ದು ಎಂದು ಹೇಳಿದದ್ದಕ್ಕೆ ಪರಿಚಿತನಾಗಿರುತ್ತಾನೆ. ಇಂದು ಅನೇಕ ಜನರು, ತಾನು ಮಾತಾಡುತ್ತಿರುವ ವಿಷಯವು ಅವರಿಗೆ ಹೇಗೆ ಗೊತ್ತು ಎಂದು ಕೇಳಿದಾಗ, ಅದನ್ನು ಅವರು ಒಂದು ಪುಸ್ತಕದಲ್ಲಿ ಅಥವಾ ಅಂತರ್ಜಾಲದಲ್ಲಿ ಓದಿದೆವು ಎಂದು ಉತ್ತರಿಸುತ್ತಾರೆ. ಪ್ರಾಚೀನ ಜನರ ವಿಷಯದಲ್ಲಾದರೋ, ಪರಿಸ್ಥಿತಿಯು ಬಹಳ ವ್ಯತ್ಯಾಸವಾಗಿರುತ್ತಿತ್ತು: ಅವರು ನಂಬಿಕೆಯಿಟ್ಟಿದ್ದ ಲಿಖಿತ ದಸ್ತಾವೇಜುಗಳಿಗೆ ಒಂದು "ಸಜೀವ ಸಾಕ್ಷಿಯ" ಆಧಾರವು ಇದ್ದಿರುವ ಸಾಧ್ಯತೆ ಎಂದಿಗೂ ಇರದಿರಬಹುದಿತ್ತು. ಹೇಗೂ, ಈ ವಾಸ್ತವಾಂಶವು ಪೌಲನು ಇಲ್ಲಿ ಹೇಳುತ್ತಿರುವ ಸಂಗತಿಗೆ ಸಂಬಂಧವನ್ನು ಹೊಂದಿರುವಂತೆ ತೋರುವದಿಲ್ಲ. ಬದಲಾಗಿ, ಈ ಮುಂಚೆ ಪೌಲನು ಗಲಾತ್ಯದವರನ್ನು ಭೇಟಿಯಾಗಿದ್ದ ವೇಳೆ, ಅವರ ನಡುವೆ ಒಂದು ಬಲವಾದ, ವಾತ್ಸಲ್ಯದ ಸಂಬಂಧವು ರೂಪಗೊಂಡಿತ್ತು ಎಂಬುದಕ್ಕೆ ಸ್ಪಷ್ಟವಾಗಿ ಗೊತ್ತಾಗುತ್ತದೆ (4:15). ಆತನು ಪುನಃ ಅವರೊಂದಿಗೆ ಇರುವದಕ್ಕೆ ಸಾಧ್ಯವಾಗುವದಾದರೆ, ಪರಿಸ್ಥಿತಿಯು ವ್ಯತ್ಯಾಸವಾಗಿರುವದೆಂದು ಆತನ ನಂಬಿಕೆಯಾಗಿತ್ತು. ಅವರು ಮತ್ತೊಂದಾವರ್ತಿ ಆತನು ತೀವ್ರಾಸಕ್ತಿಯಿಂದ "ಮಾತಾಡುವದನ್ನು" ಕೇಳಿಸಿಕೊಂಡರೆ, ಆತನ ಮೇಲೆ ಅವರಿಗೆ ಈ ಮುಂಚೆ ಇದ್ದ ಪ್ರೀತಿಯ ಹುರುಪನ್ನು ಪುನಃ ಎದ್ದೇಳುವಂತೆ ಮಾಡುವದಕ್ಕೆ ಶಕ್ತನಾಗಬಹುದಿತ್ತು. ಆತನು ಅವರ ನಡುವೆ ಇರುವದಾದರೆ, ಆತನು ಬರೆದಿದ್ದಂಥ ಪ್ರತಿಯೊಂದು ಬುದ್ಧಿವಾದ, ಪ್ರತಿಯೊಂದು ಎಚ್ಚರಿಕೆ, ಪ್ರತಿಯೊಂದು ಗದರಿಕೆಗಳು ತಂದೆಯೊಬ್ಬನು ತನ್ನ ಆತ್ಮೀಕ ಮಕ್ಕಳ ಮೇಲಿಟ್ಟಿರುವ ಪ್ರೀತಿಯ ನಿಮಿತ್ತವಾಗಿಯೇ ಎಂಬುದನ್ನು ಗ್ರಹಿಸಿಕೊಳ್ಳುವಂತೆ ಅವರಿಗೆ ಸಹಾಯವಾಗುತ್ತಿತ್ತು (ನೋಡಿರಿ 2 ಯೋಹಾನ 12; 3 ಯೋಹಾನ 4, 13, 14).

## ಹಾಗರಳು ಮತ್ತು ಸಾರಳ ಸಾಂಕೇತಿಕ ನಿರೂಪಣೆ (4:21-31)

**[21]ಧರ್ಮಶಾಸ್ತ್ರಾಧೀನರಾಗುವದಕ್ಕೆ ಮನಸ್ಸುಳ್ಳವರೇ, ಧರ್ಮಶಾಸ್ತ್ರಕ್ಕೆ ಕಿವಿಗೊಡುವದಿಲ್ಲವೋ? ನನಗೆ ಹೇಳಿರಿ. [22]ಅದರಲ್ಲಿ ಬರೆದಿರುವದೇನಂದರೆ, ಅಬ್ರಹಾಮನಿಗೆ ಇಬ್ಬರು ಮಕ್ಕಳಿದ್ದರು; ಒಬ್ಬನು ತೊತ್ತಿನಿಂದ ಹುಟ್ಟಿದವನು, ಒಬ್ಬನು ಧರ್ಮಪತ್ನಿಯಿಂದ ಹುಟ್ಟಿದವನು. [23]ತೊತ್ತಿನ ಮಗನು ಸ್ವಾಭಾವಿಕವಾಗಿ ಹುಟ್ಟಿದನು. ಧರ್ಮಪತ್ನಿಯ ಮಗನೋ ವಾಗ್ದಾನದ ಫಲವಾಗಿ ಹುಟ್ಟಿದನು. [24]ಈ ಸಂಗತಿಗಳು ಉಪಮಾನವಾಗಿವೆ; ಹೇಗಂದರೆ, ಆ ಇಬ್ಬರು ಸ್ತ್ರೀಯರು ಎರಡು ಒಡಂಬಡಿಕೆಗಳೇ. ಒಂದು ಒಡಂಬಡಿಕೆ ಸೀನಾಯಿ ಪರ್ವತದಿಂದ ಉತ್ಪನ್ನವಾಗಿ ದಾಸತ್ವದಲ್ಲಿರಬೇಕಾದ ಮಕ್ಕಳನ್ನು ಹೆರುವಂಥದು; ಅದೇ ಹಾಗರ್. [25]ಹಾಗರ್ ಅಂದರೆ ಅರಬಸ್ಥಾನದಲ್ಲಿರುವ ಸೀನಾಯಿ ಪರ್ವತ. ಅವಳು ಈಗಿನ ಯೆರೂಸಲೇಮ್ ಎಂಬವಳಿಗೆ ಸರಿಬೀಳುತ್ತಾಳೆ; ಹೇಗಂದರೆ, ಈಕೆ ತನ್ನ ಮಕ್ಕಳ ಸಹಿತ ದಾಸತ್ವದಲ್ಲಿದ್ದಾಳೆ. [26]ಆದರೆ ಮೇಲಣ ಯೆರೂಸಲೇಮ್ ಎಂಬವಳು ಸ್ವತಂತ್ರಳು, ಇವಳೇ ನಮಗೆ ತಾಯಿ. [27]ಹೆರದ ಬಂಜೆಯೇ, ಆನಂದವಾಗಿರು, ಪ್ರಸವವೇದನೆಯಿಲ್ಲದವಳೇ, ಸ್ವರವೆತ್ತಿ ಕೂಗು;**

**ಗಂಡನುಳ್ಳವಳಿಗಿಂತ ಗಂಡ ಬಿಟ್ಟವಳಿಗೆ ಮಕ್ಕಳು ಹೆಚ್ಚು ಎಂದು ಬರೆದದೆಯಲ್ಲಾ. [28]ಸಹೋದರರೇ, ನಾವು ಇಸಾಕನಂತೆ ವಾಗ್ದಾನದ ಫಲವಾಗಿ ಹುಟ್ಟಿದ ಮಕ್ಕಳಾಗಿದ್ದೇವೆ. [29]ಆದರೆ ಪೂರ್ವದಲ್ಲಿ ಸ್ವಾಭಾವಿಕವಾಗಿ ಹುಟ್ಟಿದವನು ದೇವರಾತ್ಮ ಬಲದಿಂದ ಹುಟ್ಟಿದವನನ್ನು ಹಿಂಸೆಪಡಿಸಿದಂತೆಯೇ ಈಗಲೂ ಅದೆ. [30]ಆದರೂ ಶಾಸ್ತ್ರವು ಏನು ಹೇಳುತ್ತದೆ? ದಾಸಿಯನ್ನೂ ಅವಳ ಮಗನನ್ನೂ ಹೊರಗೆ ಹಾಕು; ದಾಸಿಯ ಮಗನು ಧರ್ಮಪತ್ನಿಯ ಮಗನೊಂದಿಗೆ ಎಷ್ಟು ಮಾತ್ರಕ್ಕೂ ಬಾಧ್ಯನಾಗಬಾರದೆಂದು ಹೇಳುತ್ತದೆ. [31]ಸಹೋದರರೇ, ನಾವು ದಾಸಿಯ ಮಕ್ಕಳಲ್ಲ, ಆ ಧರ್ಮಪತ್ನಿಯ ಮಕ್ಕಳೇ ಎಂದು ತಿಳುಕೊಳ್ಳಿರಿ.**

**ವಚನ 21.** ಪೌಲನು ಹೀಗೆ ಹೇಳುವದರ ಮೂಲಕ ಆರಂಭಿಸುತ್ತಾನೆ, **ಧರ್ಮಶಾಸ್ತ್ರಾಧೀನರಾಗುವದಕ್ಕೆ ಮನಸ್ಸುಳ್ಳವರೇ, ಧರ್ಮಶಾಸ್ತ್ರಕ್ಕೆ ಕಿವಿಗೊಡುವದಿಲ್ಲವೋ?** ಗಲಾತ್ಯದವರು ಯೆಹೂದಿಕರಣಗೊಳಿಸುವ ವ್ಯಕ್ತಿಗಳಿಂದ ದಾರಿ ತಪ್ಪಿಸಲ್ಪಟ್ಟಿದ್ದರಿಂದ ಮತ್ತು ಮೋಶೆಯ ಧರ್ಮಶಾಸ್ತ್ರದ ಮೇಲೆ ತಮ್ಮ ನಂಬಿಕೆಯನ್ನು ನೆಲೆಗೊಳಿಸುತ್ತಿದದರಿಂದ, ಅವರು ಅನುಸರಿಸುವ ದಾರಿಗಳು ತಪ್ಪಾಗಿರುತ್ತವೆಂಬುದನ್ನು ತೋರಿಸುವದಕ್ಕೆ ಪೌಲನು ಈಗ ತನ್ನ ಪ್ರಮುಖ ಸಾಕ್ಷಿಯ ಕಡೆಗೆ ತಿರುಗಿಕೊಳ್ಳುತ್ತಾನೆ. ಈ ಸಾಕ್ಷಿಯು ಸ್ವತಃ "ಧರ್ಮಶಾಸ್ತ್ರ"ವೇ ಆಗಿತ್ತು. ಆತನು ತನ್ನ ಮಾತುಗಳನ್ನು ಯೆಹೂದಿಕರಣಗೊಳಿಸುವವರನ್ನು ಉದ್ದೇಶಿಸಿ ಹೇಳದೆ ಗಲಾತ್ಯದವರನ್ನು ಉದ್ದೇಶಿಸಿ ಹೇಳಿದನು. ನಿರ್ದಿಷ್ಟವಾಗಿ, ಯೆಹೂದಿಕರಣಗೊಳಿಸುವವರ ಪ್ರಭಾವಕ್ಕೊಳಗಾಗಿದ್ದಂಥ ಈ ಸಭೆಗಳಲ್ಲಿನ ಅನ್ಯಜನಾಂಗದ ಸದಸ್ಯರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದನು. ಈ ಸಹೋದರರು ಬಿದ್ದುಹೋಗಿದಕ್ಕೆ ಅವರಲ್ಲಿದ್ದ ಕೆಲವೊಂದು ಸ್ವಭಾವತಃ ಗುಣಸ್ವಭಾವ ದೋಷಗಳು ಕಾರಣವಾಗಿದ್ದವೆಂಬುದಾಗಿ ಊಹಿಸಿಕೊಳ್ಳಕೂಡದು. ಬಹುಶಃ ಅವರು ಸುಲಭವಾಗಿ ಅತ್ತ ಕಡೆಗೆ ವಾಲಿರಬಹುದು; ಕೆಲವರು ಅವರನ್ನು ಚಂಚಲರು ಎಂದು ಸಹ ಚಿತ್ರಿಸಿದರು. ಹೇಗೂ, ಅವರ ಬಹಳ ಇತ್ತೀಚಿನ ಮಾರ್ಗದರ್ಶಕರಾಗಿದ್ದ ಯೆಹೂದಿಕರಣಗೊಳಿಸುವವರ ಮನವೊಲಿಸುವ ಪ್ರಭಾವವನ್ನು ಹಗುರವಾಗಿ ಪರಿಗಣಿಸಕೂಡದು. ಅವರು ದೇವರ ಮೂಲ ವಾಕ್ಯವಾದ ಧರ್ಮಶಾಸ್ತ್ರವನ್ನು ಸಾರುವದಾಗಿ ಹೇಳಿಕೊಂಡರು. ಗಲಾತ್ಯವರು ತಾವು ದೇವರನ್ನು ಮೆಚ್ಚಿಸಬೇಕಾದರೆ ಈ ರೀತಿಯಾಗಿ ತಮ್ಮ ದಾರಿಯನ್ನು ಸರಿಪಡಿಸಿಕೊಳ್ಳುವದು ಅವಶ್ಯಕವೆಂಬ ಮನವರಿಕೆ ಮಾಡಿಕೊಂಡಿದ್ದರೆಂಬ ಒಂದೇ ಕಾರಣದಿಂದಾಗಿ "ಧರ್ಮಶಾಸ್ತ್ರಾಧೀನ"ರಾಗಲು ಬಯಸಿದ್ದರು.

ನಿಸ್ಸಂದೇಹವಾಗಿ, ಸ್ವತಃ ಪೌಲನೇ ತನ್ನ ಬೋಧನೆಗಳಲ್ಲಿ ಕೆಲವೊಂದನ್ನು ಧರ್ಮಶಾಸ್ತ್ರಾಧಾರದ ಮೇಲೆ ಮಾಡಿದ್ದನಷ್ಟೆ. ಪೌಲನು ಧರ್ಮಶಾಸ್ತ್ರದಿಂದ ನಿಮಗೆ ಬೋಧಿಸದೆ ಇರುವ ಸಂಗತಿಯು ಇನ್ನೂ ಎಷ್ಟೋ ಇರುತ್ತದೆಂಬುದಾಗಿ ಮಧ್ಯದಲ್ಲಿ ಬಂದ ಯೆಹೂದಿಕರಣಗೊಳಿಸುವ ವ್ಯಕ್ತಿಗಳು ಗಮನಕ್ಕೆ ತಂದಿದ್ದರು, ಇದರಿಂದ ಗಲಾತ್ಯದವರು ಪೌಲನಲ್ಲಿ (ಈಗ ಅವರ ನಡುವೆ ಆತನು ಇರಲಿಲ್ಲವಷ್ಟೆ) ಇಟ್ಟಿದ್ದ ಭರವಸವು ಎಷ್ಟೊಂದು ಅಲುಗಾಡಿತ್ತೆಂದರೆ ಅದು ನಂಬಿಕೆಯ ಬಿಕ್ಕಟ್ಟನ್ನೇ ಸೃಷ್ಟಿಸಿತ್ತು. ಅಂತೂ, "ಬರಬೇಕಾದ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೆ" (ಯೋಹಾನ 4:22) ಎಂದು ಸ್ವತಃ ಯೇಸುವು ಹೇಳಲಿಲ್ಲವೇ? ಪೌಲನು ಈ ಮಾತುಗಳನ್ನೇ ಯಥಾಃರೀತಿಯಾಗಿ ಗಲಾತ್ಯದವರಿಗೆ ಹೇಳಿರಬಹುದಿತ್ತೆಂದು ಸಲಹೆ ಮಾಡುವದು ಇದರ ತಾತ್ಪರ್ಯವಲ್ಲ. ಹೇಗೂ, ಒಬ್ಬ ಪ್ರೇರಿತ ಅಪೊಸ್ತಲನಾಗಿ, ಆತನು ಅಂಥ ಉಲ್ಲೇಖಗಳನ್ನು ಪ್ರೇರಣೆಯ ಮುಖಾಂತರವಾಗಿ ತಿಳಿದಿರುವದಕ್ಕೆ ಸಾಧ್ಯವಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 20:35; 1 ಕೊರಿಂಥ 11:23–25; 15:3–8; ಗಲಾತ್ಯ 1:11, 12).

“ಕೇಳಿಸಿಕೋ” (ἀκούω, *akouō*) ಎಂಬುದಕ್ಕಿರುವ ಗ್ರೀಕ್ ಪದವನ್ನು “ಆಲಿಸು” (KJV; NKJV) ಎಂದು ಸಹ ಅನುವಾದಿಸಬಹುದಾಗಿದೆ. ಅನೇಕ ಸಂದರ್ಭಗಳಲ್ಲಿ, ಶಾಸ್ತ್ರಗಳನ್ನು ಮಾತಾಡುತ್ತಿರುವದಾಗಿ ಚಿತ್ರಿಸಲಾಗಿರುತ್ತದೆ, ಉದಾಹರಣೆಗೆ “ಶಾಸ್ತ್ರದ ಮಾತು ಹೀಗೆ ನೆರವೇರಿತು” (ಯಾಕೋಬ 2:23) ಮತ್ತು “. . . ಶಾಸ್ತ್ರದಲ್ಲಿ ಉಂಟಲ್ಲವೇ” (ಯೋಹಾನ 7:42) ಎಂಬ ಮಾತುಗಳಲ್ಲಿ ಅದನ್ನು ಕಾಣುತ್ತೇವೆ. ಶಾಸ್ತ್ರದ ಸ್ವರವು ಜೀವಿಸುವ ಸಾಕ್ಷಿಯ ಸ್ವರದಷ್ಟೇ ಸ್ಪಷ್ಟವಾಗಿ ಕೇಳಿಸುವದಾಗಿತ್ತು, ಬಹುಶಃ ಪ್ರಾಚೀನ ಸಮಯಗಳಲ್ಲಿ ಶಾಸ್ತ್ರಗಳನ್ನು ಗಟ್ಟಿಯಾಗಿ ಎಲ್ಲರಿಗೂ ಕೇಳಿಸುವಂತೆ ಓದಲಾಗುತ್ತಿತ್ತೆಂಬ ಕಾರಣದಿಂದ ಇರಬಹುದು. ಧರ್ಮಶಾಸ್ತ್ರವನ್ನು ಪ್ರಸ್ತಾಪಿಸುವ ಮೂಲಕ, ಪೌಲನು “ನಿಮ್ಮ ಪ್ರಮುಖ ಸಾಕ್ಷಿಯನ್ನು ಕರೆಯಿರಿ. ನಿಮ್ಮ ಪರವಾಗಿ ಆತನು ಏನನ್ನು ಹೇಳುವನೆಂದು ಕೇಳಿಸಿಕೊಳ್ಳೋಣ. ವಾಸ್ತವಿಕದಲ್ಲಿ, ಆತನು ನಮ್ಮ ಪ್ರಮುಖ ಸಾಕ್ಷಿಯಾಗಿದ್ದಾನೆ ಎಂಬದು ನಿಮಗೆ ಸ್ವಲ್ಪದರಲ್ಲಿಯೇ ತಿಳಿದು ಬರುವದು” ಎಂದು ಅವರಿಗೆ ಸವಾಲು ಹಾಕುತ್ತಿದ್ದಾನೆ. “ಧರ್ಮಶಾಸ್ತ್ರ”ವು ಕೇವಲ ಆಜ್ಞೆಗಳಷ್ಟೆ ಆಗಲಿ ಅಥವಾ ಕಾನೂನಿನ ಕಟ್ಟಳೆಗಳು ಹಾಗೂ ನಿಮಯಗಳ ಸಂಗ್ರಹವಾಗಿದ್ದು, ಅದನ್ನು ಮೀರಿದ್ದರಿಂದಾಗಿ ದಂಡ ಅಥವಾ ದಂಡನೆಗಳು ಜಾರಿಗೆ ಬಂದವು ಎಂಬುದಕ್ಕಿಂತಲೂ ಅಧಿಕವಾಗಿತ್ತೆಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು.

“ಧರ್ಮಶಾಸ್ತ್ರ” (νόμος, *nomos*) *ಎಂಬುದು ಎರಡು ಸಾರಿ ಪ್ರಸ್ತಾ*ಪಿಸಲ್ಪಟ್ಟಿದೆ: “*ಧರ್ಮಶಾಸ್ತ್ರಾ*ಧೀನರಾಗುವದಕ್ಕೆ ಮನಸ್ಸುಳ್ಳವರೇ, *ಧರ್ಮಶಾಸ್ತ್ರ*ಕ್ಕೆ ಕಿವಿಗೊಡುವದಿಲ್ಲವೋ? ನನಗೆ ಹೇಳಿರಿ” (ಒತ್ತಿ ಹೇಳಿದ್ದು ನನ್ನದು). ಆಂಗ್ಲದಲ್ಲಿ ಅದು ಮೊದಲ ಬಾರಿಗೆ ಕಾಣಿಸಿಕೊಳ್ಳುವ ವೇಳೆ, ಗ್ರೀಕ್ ಭಾಷೆಯಲ್ಲಿ ಸಹ ಇರುವ ಪ್ರಕಾರ, ಅಲ್ಲಿ “the” ಎಂಬ ನಿರ್ದಿಷ್ಟ ಗುಣವಾಚಿಯು ಇರುವದಿಲ್ಲ. ಇದರ ನಿಮಿತ್ತವಾಗಿ, ಪೌಲನು ಇಲ್ಲಿ ಒಟ್ಟಾರೆಯಾಗಿ ಒಂದು ಕಾನೂನಿನ ಅಥವಾ ಕ್ರಿಯೆಗಳಿಂದ ಸಿಕ್ಕುವ ನೀತಿವಂತಿಕೆಯ ವ್ಯವಸ್ಥೆಯೊಂದರ ಬಗ್ಗೆ ಮಾತಾಡುತ್ತಿದ್ದಾನೆಂದು ಕೆಲವರು ಅನುಮಾನಿಸುತ್ತಾರೆ. ಹೇಗೂ, ಗ್ರೀಕ್ ಭಾಷೆಯಲ್ಲಿ ಒಂದು ನಾಮಪದದ ತಕ್ಷಣವೇ ಉಪಸರ್ಗವು ಬರುವದಾದಲ್ಲಿ ಅಕ್ಷರವು ಅನುಪಸ್ಥಿತವಾಗಿದ್ದರೂ ಸಾಮಾನ್ಯವಾಗಿ ಅದನ್ನು ನಿರ್ದಿಷ್ಟ ಗುಣವಾಚಿ ಎಂದು ಪರಿಗಣಿಸಲಾಗುತ್ತದೆ. ಆದದರಿಂದ, ಮೂಲ ವಾಕ್ಯದಲ್ಲಿ “ಧರ್ಮಶಾಸ್ತ್ರಾಧೀನ” ಎಂದು ಇರುತ್ತದಾದರೂ, ಪೌಲನು ಇಲ್ಲಿ ಒಟ್ಟಾರೆಯಾಗಿ ಧರ್ಮಶಾಸ್ತ್ರ ಅಥವಾ ಕಾನೂನಿನ ವ್ಯವಸ್ಥೆಯೊಂದರ ಕುರಿತು ಮಾತಾಡುತ್ತಿದ್ದಾನೆಂದು ಹೇಳುವ ಅವಶ್ಯಕತೆಯಿಲ್ಲ.

ಅಷ್ಟುಮಾತ್ರವಲ್ಲದೆ, 21ನೇ ವಚನದಲ್ಲಿ ಎರಡನೆಯ ಸಾರಿ ಕಾಣಿಸಿಕೊಳ್ಳುವ “ಧರ್ಮಶಾಸ್ತ್ರ” ಎಂಬುದು ಆದಿಕಾಂಡ ಪುಸ್ತಕದಲ್ಲಿನ ಶಾಸ್ತ್ರಗಳನ್ನು ಸೂಚಿಸುತ್ತದೆಂಬುದು ಸ್ಪಷ್ಟವಾಗಿರುತ್ತದೆ, ಆ ಶಾಸ್ತ್ರಗಳು ಅಬ್ರಹಾಮ, ಆತನ ಇಬ್ಬರು ಪುತ್ರರ (ಇಸಾಕ ಮತ್ತು ಇಸ್ಮಾಯೇಲ), ಮತ್ತು ಅವರ ತಾಯಂದಿರ (ಸಾರಳು ಹಾಗೂ ಹಾಗರಳು) ಬಗ್ಗೆ ತಿಳಿಸುತ್ತವೆ. ಸನ್ನಿವೇಶವು ಈ “ಧರ್ಮಶಾಸ್ತ್ರ” Torah ಆಗಿರುತ್ತದೆಂಬ ವ್ಯಾಖ್ಯಾನವನ್ನೇ ಹೊರತು ಬೇರೆ ಇನ್ನಾವ ವ್ಯಾಖ್ಯಾನಕ್ಕೂ ಅವಕಾಶವನ್ನು ಕೊಡುವದಿಲ್ಲ. ಎರಡನೆಯ ಸಾರಿ ಕಾಣಿಸಿಕೊಳ್ಳುವ “ಧರ್ಮಶಾಸ್ತ್ರ” ಎಂಬುದು ಸ್ಪಷ್ಟವಾಗಿ ಶಾಸ್ತ್ರಗಳನ್ನು ಸೂಚಿಸುವದಾಗಿರುತ್ತದಾದ್ದರಿಂದ, ಮೊದಲನೆಯ ಸಾರಿ ಕಾಣಿಸಿಕೊಳ್ಳುವ ಪದವು ಸಹ ಅದನ್ನೇ ಸೂಚಿಸಬೇಕೆಂಬುದು ತಾರ್ಕಿಕವಾದದ್ದಷ್ಟೇ. ಖಂಡಿತವಾಗಿಯೂ, ಯಾವ ವ್ಯಾಕರಣಾತ್ಮಕ ನಿಯಮವು ಇದಕ್ಕೆ ತಡೆಯೊಡ್ಡಲಾರದು.

ನಿಷ್ಕೃಷ್ಟವಾಗಿ ಹೇಳುವದಾದರೆ, ಗಲಾತ್ಯದವರು ಯಾವ “ಧರ್ಮಶಾಸ್ತ್ರ”ಕ್ಕೆ

ಕಿವಿಗೊಡಬೇಕೆಂದು ಪೌಲನ ಬಯಕೆಯಾಗಿತ್ತೋ ಅದು ನಿಜಕ್ಕೂ ಧರ್ಮಶಾಸ್ತ್ರವೇ ಆಗಿರಲಿಲ್ಲ, ಹಾಗಿದ್ದರೂ ಆತನು ಬಳಸಿದ ಪದವು ಇಂದಿನ ಜನಪ್ರಿಯ ಬಳಕೆಯಲ್ಲಿರುವ ಪದಕ್ಕಿಂತ ಅಥವಾ ಹೊಸ ಒಡಂಬಡಿಕೆಯ ಇತರ ಪ್ರೇರಿತ ಲೇಖಕರು ಮತ್ತು ಸ್ವತಃ ಯೇಸುವೇ ಬಳಸಿದ ಪದಕ್ಕಿಂತ ಬೇರೆ ಆಗಿರಲಿಲ್ಲ. ಅವರು ಮಾತಾಡಿದ ಪ್ರಕಾರವೇ, ನಾವು ಸಹ "ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಪುಸ್ತಕಗಳು" ಎಂದು ಮಾತಾಡುತ್ತೇವೆ; ಮತ್ತು ನಾವು ಹಳೆಯ ಒಡಂಬಡಿಕೆಯನ್ನು "ಧರ್ಮಶಾಸ್ತ್ರ" ಎಂದು ಮತ್ತು ಹೊಸ ಒಡಂಬಡಿಕೆಯನ್ನು "ಸುವಾರ್ತೆ" ಎಂದು ಕರೆಯುತ್ತೇವೆ. ನಮ್ಮ ವಾಕ್ಯಭಾಗದ ಈ ವಿಭಾಗದಲ್ಲಿ ನಮ್ಮ ಮುಖ್ಯ ಒತ್ತು ನಿರ್ದಿಷ್ಟವಾಗಿ ಆದಿಕಾಂಡ 16-21ರಲ್ಲಿರುವ ಪ್ರಥಮ ಗ್ರಂಥ ಪಂಚಕದಲ್ಲಿನ ಕಥಾರೂಪ ಭಾಗದ ಮೇಲೆಯೇ ಆಗಿರುತ್ತದೆ. ಇಬ್ರಿಯ ಪದವಾಗಿರುವ תּוֹרָה (*torah*) ಎಂಬುದು NASBಯಲ್ಲಿ ಹೆಚ್ಚುಕಡಿಮೆ ಇನ್ನೂರು ಸಾರಿ "ಧರ್ಮಶಾಸ್ತ್ರ" ಎಂದು ಅನುವಾದಿಸಲ್ಪಟ್ಟಿದೆ, ಆದರೆ ಅದರ ಸರಿಯಾದ ಅರ್ಥವು "ಉಪದೇಶ"[40] ಅಥವಾ "ಬೋಧನೆ"[41] ಹೊರತು ಮೋಶೆಯ ಧರ್ಮಶಾಸ್ತ್ರ ಎಂಬುದರಲ್ಲಿರುವಂತೆ "ಧರ್ಮಶಾಸ್ತ್ರ" ಎಂದಲ್ಲ.

ಪೌಲನು 4:21-31ರಲ್ಲಿ ಪೌಲನು ಮಾಡಿದ ಬಳಕೆಯು ಆರಂಭದಲ್ಲಿ ರಬ್ಬಿ ವ್ಯವಸ್ಥೆಯ ಯೆಹೂದಿಮತದ ಪೌರಸ್ತ್ಯ ಯೋಚನಾ ನಮೂನೆಗಳ ಪರಿಚಯವಿಲ್ಲದವರಿಗೆ ನಿಗೂಢವೆನಿಸಬಹುದು. ಪೌಲನು ಗಮಲಿಯೇಲನ ಪಾದಗಳ ಬಳಿಯಲ್ಲಿ ಕುಳಿತುಕೊಂಡು ಕಲಿತಿದ್ದನೆಂಬುದನ್ನು (ಅಪೊಸ್ತಲರ ಕೃತ್ಯಗಳು 22:3) ಮತ್ತು, ಈ ವಿಧವಾದ ವಾಗ್ವಾದವು ನಮಗೆ ವಿಚಿತ್ರವೆನಿಸಬಹುದಾದರೂ, ಆತನ ಕಾಲದ ರಬ್ಬಿಗಳೊಳಗೆ ಇದು ಸರ್ವಸಾಮಾನ್ಯವಾಗಿತ್ತದೆಂಬುದನ್ನು ನೆನಪಿಸಿಕೊಳ್ಳುತಕ್ಕದ್ದು.

**ವಚನ 22.** ಪೌಲನು ಶಾಸ್ತ್ರಗಳಿಂದ ಆಯ್ದುಕೊಂಡ ತನ್ನ ಸಾಂಕೇತಿಕ ನಿರೂಪಣೆಯ ಬೋಧನೆಯನ್ನು ಪರಿಚಯಿಸುವವನಾಗಿ ಹೀಗೆ ಹೇಳಿದನು, **ಅದರಲ್ಲಿ ಬರೆದಿರುವದೇನಂದರೆ, ಅಬ್ರಹಾಮನಿಗೆ ಇಬ್ಬರು ಮಕ್ಕಳಿದ್ದರು; ಒಬ್ಬನು ತೊತ್ತಿನಿಂದ ಹುಟ್ಟಿದವನು, ಒಬ್ಬನು ಧರ್ಮಪತ್ನಿಯಿಂದ ಹುಟ್ಟಿದವನು**. ಈ ಹೇಳಿಕೆಯು ಸಹ ಆದಿ**ಕಾಂಡ** 16-21ರಲ್ಲಿನ ಕಥಾರೂಪದ ಭಾಗದ ಮೇಲೆ ಆಧಾರವಾಗಿರುತ್ತದೆ, ಅದು ಹಾಗರಳೆಂಬ "ದಾಸಿ"ಯು ಇಸ್ಮಾಯೇಲ ಎಂಬ ಪುತ್ರನಿಗೆ ಜನ್ಮ ಕೊಡುವದರ ಕುರಿತಾದ ಕಥೆಯನ್ನು ತಿಳಿಸುತ್ತದೆ. ಅಲ್ಲದೆ ಅದು ಸಾರಳು ಎಂಬ "ಸ್ವತಂತ್ರಳ" ಕುರಿತು ಸಹ ಹೇಳುತ್ತದೆ, ಅವಳು ತನ್ನ ಮಗನಾದ ಇಸಾಕನಿಗೆ ಜನ್ಮ ನೀಡಿದಳು. ಆತನು ಆಕೆಯ ಮುಪ್ಪನ ಪ್ರಾಯದಲ್ಲಿ ಹುಟ್ಟಿದಂಥ, ದೀರ್ಘಕಾಲದಿಂದ-ಕಾಯುತ್ತಿದ್ದಂಥ ವಾಗ್ದಾನ ಮಾಡಲ್ಪಟ್ಟ ಮಗನಾಗಿದ್ದನು.

**ವಚನ 23.** ಅಪೊಸ್ತಲನು ಇಬ್ಬರು ಪುತ್ರರ ನಡುವೆ ವಿರುದ್ಧ ಹೋಲಿಕೆ ಮಾಡುತ್ತಾನೆ: **ತೊತ್ತಿನ ಮಗನು ಸ್ವಾಭಾವಿಕವಾಗಿ ಹುಟ್ಟಿದನು. ಧರ್ಮಪತ್ನಿಯ ಮಗನೋ ವಾಗ್ದಾನದ ಫಲವಾಗಿ ಹುಟ್ಟಿದನು.** ಇಸ್ಮಾಯೇಲನು ಸಂಪೂರ್ಣವಾಗಿ ಸಹಜವಾದ ಮಾನವ ಸಂತಾನೋತ್ಪತ್ತಿ ದಾರಿಯಿಂದ, ಅಬ್ರಹಾಮ ಮತ್ತು ಹಾಗರಳ ನಡುವಿನ ಲೈಂಗಿಕ ಸಂಬಂಧದ ಮೂಲಕವಾಗಿ ಹುಟ್ಟಿದವನಾಗಿದ್ದನು, ಆ ಹಾಗರಳನ್ನು ಈ ಉದ್ದೇಶಕ್ಕಾಗಿಯೇ ಅಬ್ರಹಾಮನಿಗೆ ಕೊಟ್ಟಿದ್ದಳು. ತಾಂತ್ರಿಕವಾಗಿ ಮಾತಾಡುವದಾದರೆ, ಇಸಾಕನು ಸರಿಯಾಗಿ ಅದೇ ವಿಧದಲ್ಲಿಯೇ ಸಾರಳಿಗೆ ಜನಿಸಿದ್ದನೆಂಬುದಾಗಿ ಕಾಣಿಸುತ್ತದೆ. ಹೇಗೂ, ಮಾನವ ರೀತಿಯಲ್ಲಿ ನೋಡುವದಾದರೆ ಯಾವದೇ ನಿರೀಕ್ಷೆಯೇ ಇಲ್ಲದಂಥ ಸ್ಥಿತಿಯಿದ್ದರೂ, ಅಬ್ರಹಾಮನು ನಿರೀಕ್ಷೆಯಲ್ಲಿ ವಿಶ್ವಾಸಿಸುವವನಾಗಿ ನಂಬಿಕೆಯ ಒಂದು ದೊಡ್ಡ ಜಿಗಿತವನ್ನು ತೆಗೆದುಕೊಂಡನೆಂಬುದೇ ನಿರ್ಣಾಯಕವಾದ ವ್ಯತ್ಯಾಸವಾಗಿರುತ್ತದೆ (ರೋಮಾ 4:18). ಆತನು

ಗಮನಕ್ಕೆ ತೆಗೆದುಕೊಂಡ ವಾಸ್ತವಾಂಶವು ಏನೆಂದರೆ

> . . . ಅವನು ಹೆಚ್ಚುಕಡಿಮೆ ನೂರು ವರುಷದವನಾಗಿದ್ದು ತನ್ನ ದೇಹವು ಆಗಲೇ ಮೃತಪ್ರಾಯವಾಯಿತೆಂದೂ ಸಾರಳಿಗೆ ಗರ್ಭಕಾಲ ಕಳೆದುಹೋಯಿತೆಂದೂ ಯೋಚಿಸಿದಾಗ್ಯೂ ಅವನ ನಂಬಿಕೆಯು ಕುಂದಲಿಲ್ಲ. ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ. ದೇವರನ್ನು ಘನಪಡಿಸುವವನಾಗಿ ಆತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ಸಮರ್ಥನೆಂದು ಪೂರಾ ಭರವಸವಿಟ್ಟು ದೃಢನಂಬಿಕೆಯುಳ್ಳವನಾದನು (ರೋಮಾ 4:19-21).

ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ವಿವರಿಸುತ್ತಾನೆ,

> ಅಬ್ರಹಾಮನು ಪ್ರಾಯಮೀರಿದವನಾಗಿದ್ದರೂ - ಮತ್ತು ಸಾರಳು ಸಹ ಬಂಜೆಯಾಗಿದ್ದರೂ - ನಂಬಿಕೆಯಿಂದಲೇ ಒಬ್ಬ ತಂದೆಯಾಗುವದಕ್ಕೆ ಶಕ್ತನಾಗಿದ್ದನು ಯಾಕೆಂದರೆ ವಾಗ್ದಾನಮಾಡಿದ ದೇವರನ್ನು ಆತನು ನಂಬಿಗಸ್ತನೆಂದು ಪರಿಗಣಿಸಿದನು. ಹೀಗೆ ಮೃತಪ್ರಾಯನಾಗಿದ್ದ ಒಬ್ಬ ವ್ಯಕ್ತಿಯಿಂದಲೇ ಆಕಾಶದ ನಕ್ಷತ್ರಗಳಂತೆಯೂ ಕಡಲ ತೀರದ ಮರಳಿನಂತೆಯೂ ಅಸಂಖ್ಯಾತವಾದ ಸಂತತಿಯವರು ಉಂಟಾದರು (ಇಬ್ರಿಯ 11:11, 12; NIV1984).[42]

ನಾವು ಗಲಾತ್ಯ 4:23, ರೋಮಾ 4:18-21, ಮತ್ತು ಇಬ್ರಿಯ 11:11, 12ರಲ್ಲಿರುವ ಆಯಾ ಸನ್ನಿವೇಶಗಳನ್ನು ಆಲೋಚಿಸುವದಾದರೆ ಕೆಲವೊಂದು ಸತ್ಯಗಳು ಸ್ಪಷ್ಟವಾಗುತ್ತವೆ. (1) "ಸ್ವಾಭಾವಿಕವಾಗಿ ಹುಟ್ಟಿದ" ಇಸ್ಮಾಯೇಲನ ಜನನಕ್ಕೆ ತದ್ವಿರುದ್ಧವಾಗಿ, ಇಸಾಕನು "ವಾಗ್ದಾನದ ಫಲವಾಗಿ" ಹುಟ್ಟಿದ್ದನು (ಗಲಾತ್ಯ 4:23). (2) ನಿರೀಕ್ಷೆಯೇ ಇಲ್ಲದ ಸ್ಥಿತಿಯಲ್ಲಿ, ಅಬ್ರಹಾಮನಂತೂ ನಿರೀಕ್ಷೆಯಿದ್ದನು ಮತ್ತು "ತಾನು ಅನೇಕ ಜನಾಂಗಗಳಿಗೆ ಮೂಲಪಿತೃವಾಗುವೆನೆಂದು . . . ನಂಬಿದನು" (ರೋಮಾ 4:18). (3) ಅಬ್ರಹಾಮನು ದೇವರಲ್ಲಿ ಹಾಗೂ ಆತನ ವಾಗ್ದಾನದಲ್ಲಿ ನಂಬಿಕೆಯಿಟ್ಟಿದ್ದ ನಿಮಿತ್ತವಾಗಿ, ಆತನು "ಒಬ್ಬ ತಂದೆಯಾಗುವದಕ್ಕೆ ಶಕ್ತನಾಗಿ" ಮತ್ತು "ಆಕಾಶದ ನಕ್ಷತ್ರಗಳಂತೆಯೂ ಕಡಲ ತೀರದ ಮರಳಿನಂತೆಯೂ ಅಸಂಖ್ಯಾತವಾದ ಸಂತತಿಯವರ"ನ್ನು ಹೊಂದುವವನಾಗಿ ಮಾಡಲ್ಪಟ್ಟನು (ಇಬ್ರಿಯ 11:11, 12; NIV1984).

ಇಸಾಕನ ಜನನದಲ್ಲಿ ಯೇಸುವಿನ ಜನನಕ್ಕೆ ಹೋಲಿಸಬಹುದಾದ ಒಂದು "ಅದ್ಭುತಕರ" ಸಂಗತಿಯು ಕೆಲಸ ಮಾಡಿತ್ತೋ? ನಾವು "ಅದ್ಭುಕರವಾದದ್ದನ್ನು" ವಿವರಿಸುವ ಸಾಹಸಕ್ಕೆ ಕೈ ಹಾಕುವದಿಲ್ಲ; ಆದರೆ ಗಲಾತ್ಯ 4:29 ಹೇಳುವದೇನೆಂದರೆ ಇಸಾಕನು "ದೇವರಾತ್ಮಬಲದಿಂದ" (τὸν κατὰ πνεῦμα, *ton kata pneuma*) ಹುಟ್ಟಿದರೆ, ಇಸ್ಮಾಯೇಲನಾದರೋ "ಸ್ವಾಭಾವಿಕವಾಗಿ" (ὁ κατὰ σάρκα, *ho kata sarka*) ಹುಟ್ಟಿದನು ಎಂಬುದೆ.

ಇದಕ್ಕೆ ಸಂಬಂಧ ಪಟ್ಟಂತೆ ವಿಶೇಷವಾಗಿ ಆಸಕ್ತಿಕರವಾದದ್ದೇನೆಂದರೆ ಸ್ವಾಭಾವಿಕವಾದ ಶಾರೀರಿಕ ಜನನ ಮತ್ತು ಕ್ರೈಸ್ತೀಯ ಹೊಸ ಜನನದ ನಡುವಿನ ವ್ಯತ್ಯಾಸವನ್ನು ವ್ಯಕ್ತಪಡಿಸುವದಕ್ಕೆ ಯೇಸುವು ನಿಕೊದೇಮನ ಸಂಗಡ ನಡಿಸಿದ ಸಂಭಾಷಣೆಯಲ್ಲಿ ಬಳಸಿದ ಭಾಷೆಯೇ ಆಗಿರುತ್ತದೆ: "ದೇಹದಿಂದ ಹುಟ್ಟಿದ್ದು [ἐκ τῆς σαρκὸς, *ek tēs sarkos*] ದೇಹವೇ; ಆತ್ಮನಿಂದ ಹುಟ್ಟಿದ್ದು [ἐκ τοῦ πνεύματος, *ek tou pneumatos*] ಆತ್ಮವೇ" (ಯೋಹಾನ 3:6). ಅನುವಾದಕರು ಆಂಗ್ಲದಲ್ಲಿ ಕಾಣಿಸಿಕೊಳ್ಳುವ ಕಡೇ ಪದಗುಚ್ಛದಲ್ಲಿ ಮೊದಲ ಸಾರಿ ಕಾಣಿಸಿಕೊಳ್ಳುವ "ಆತ್ಮ" ಎಂಬುದಕ್ಕೆ ದೊಡ್ಡ "S"ನ್ನು ಸೇರ್ಪಡೆಗೊಳಿಸಿರುತ್ತಾರೆ ಆದರೆ

ಎರಡನೆಯ ಪದಕ್ಕೆ ಹಾಗೆ ಸೇರಿಸಿರುವದಿಲ್ಲ. ಇದು ಸರಿಯಾದದ್ದೇ ಆಗಿರುತ್ತದೆ, ಯಾಕೆಂದರೆ ಯೇಸುವು ವಿವರಿಸುತ್ತಿದ್ದ ಸಂಗತಿಯು ಏನೆಂದರೆ, ಸೃಷ್ಟಿಯ ಮತ್ತು ಸಂತಾನೋತ್ಪತ್ತಿಯ ಕ್ರಮದಲ್ಲಿ, ಜೀವವು ತನ್ನ ಪ್ರಕಾರವಾದ ಜೀವಕ್ಕೆ ಜನ್ಮ ಕೊಡುವದಾಗಿದೆ (ಆದಿಕಾಂಡ 1:21-25). ನಿಕೊದೇಮನು ಕೇವಲ ಶಾರೀರಿಕ ಜನನವನ್ನು ಕುರಿತು ಮಾತ್ರವೇ ಯೋಚಿಸುತ್ತಿದ್ದನೆಂಬುದು ಸ್ಪಷ್ಟವಾಗಿರುತ್ತದೆ (ಯೋಹಾನ 3:4). ಯೇಸುವು ಆತನಿಗೆ ಹೊಸ ಜನ್ಮದ ಕುರಿತು, *"ನೀರಿನಿಂದಲೂ ಆತ್ಮನಿಂದಲೂ"* (ἐξ ὕδατος καὶ πνεύματος, *ex hudatos kai pneumatos*) *ಹುಟ್ಟುವ*ದರ ಕುರಿತಾಗಿ ಕಲಿಸುವ ಪ್ರಕ್ರಿಯೆಯಲ್ಲಿದ್ದನು (ಯೋಹಾನ 3:5; ಒತ್ತಿ ಹೇಳಿದ್ದು ನನ್ನದು). ಈ "ಹೊಸ ಸೃಷ್ಟಿ" (ಗಲಾತ್ಯ 6:15; KJV) ಈಗ, ನಂಬಿಕೆಯ ಮೂಲಕವಾಗಿ ದೇವರ ಮಗುವಾಗಿರುವನು (3:26-29). ಆತನು ಮಗನ ಆತ್ಮನನ್ನು ಪಡೆದುಕೊಂಡಿರುತ್ತಾನೆ (4:5, 6; ಅಪೊಸ್ತಲರ ಕೃತ್ಯಗಳು 2:38; ರೋಮಾ 8:9, 10), ಮತ್ತು ಆತನು ತನ್ನ ನೂತನ, ಅಂತರ್ಗತವಾಗಿರುವ ಸ್ವಭಾವಕ್ಕನುಗುಣವಾಗಿ ನಡೆದುಕೊಳ್ಳಬೇಕೆಂದು ಅಪೇಕ್ಷಿಸಲಾಗುತ್ತದೆ (ಗಲಾತ್ಯ 5:16, 17).

ಇಸಾಕನ ಜನ್ಮವನ್ನು ಸಾಕಾರಗೊಳಿಸುವದರಲ್ಲಿ ಆತ್ಮನು ಭಾಗಿಯಾಗಿದ್ದನೆಂಬುದರಲ್ಲಿ ಸಂಶಯವೇ ಇರುವದಿಲ್ಲ. ಅಷ್ಟುಮಾತ್ರವಲ್ಲದೆ, ಹೊಸ ಒಡಂಬಡಿಕೆಯು ಕ್ರೈಸ್ತನೊಬ್ಬನು "ನೀರಿನಿಂದಲೂ ಆತ್ಮನಿಂದಲೂ" ಹುಟ್ಟುವದರ ಕುರಿತಾಗಿ ಹೇಳುವದನ್ನು ಗಂಭೀರವಾಗಿ ತೆಗೆದುಕೊಳ್ಳುವ ಯಾವನೇ ಆಗಲಿ ವ್ಯಕ್ತಿಯ ಹೃದಯದಲ್ಲಾಗುವ ಬದಲಾವಣೆಯು ಪವಿತ್ರಾತ್ಮನ ನಿಮಿತ್ತದಿಂದಲೇ ಆಗಿದೆ ಎಂಬುದನ್ನು ಗುರುತಿಸುವವನಾಗಿದ್ದಾನೆ. ವಾಸ್ತವಿಕದಲ್ಲಿ, ದೇವರ ಆತ್ಮನೇ ಆ ವ್ಯಕ್ತಿಯ ಸ್ವಭಾವದಲ್ಲಿ ಬದಲಾವಣೆಯನ್ನು ತರುವಂಥ ಹುಟ್ಟಿಸುವ ಮಧ್ಯವರ್ತಿಯಾಗಿರುತ್ತಾನೆ ಮತ್ತು ಆತನು "ಮರಣದಿಂದ ಪಾರಾಗಿ ಜೀವಕ್ಕೆ ಸೇರಿ"ದವನಾಗುವಂತೆ ಮಾಡುವವನಾಗಿರುತ್ತಾನೆ (ಯೋಹಾನ 5:24). ಹೇಗೂ, ಇಸಾಕನ ಜನನದಲ್ಲಿ ಆತ್ಮನು ಕಾರ್ಯಮಾಡಿದವನಾಗಿದ್ದನು ಮತ್ತು ಕ್ರೈಸ್ತನ ಹೊಸ ಜನ್ಮ ಸಂಭವಿಸುವಂತೆ ಕ್ರಿಯೆ ಮಾಡುವವನಾಗಿರುವನು - ಮತ್ತು ಯೇಸುವಿನ ಜನ್ಮದಲ್ಲಿ ಸಹ ಹುಟ್ಟಿಸುವ ಮಧ್ಯವರ್ತಿ (ಲೂಕ 1:34, 35) - ಆಗಿದ್ದನಾದ್ದರಿಂದ, ಈ ಮೂರು ಸಂಭವಗಳು ಸಹ ಒಂದೇ ಮಟ್ಟದಲ್ಲಿ ಅಥವಾ ಒಂದೇ ವಿಧವಾದ ಫಲಿತಗಳೊಂದಿಗೆ ಇರುತ್ತವೆಂದು ಪರಿಗಣಿಸಬಹುದೆಂದು ಹೇಳುವದಕ್ಕೆ ನಾವು ಸಂಕೋಚ ಪಡುತ್ತೇವೆ.

ಖಂಡಿತವಾಗಿಯೂ, ಇಸಾಕನ ಜನನವನ್ನಾಗಲಿ ಅಥವಾ ಕ್ರೈಸ್ತನ ಜನನವನ್ನಾಗಲಿ ಯೇಸುವಿನ ಜನನದೊಂದಿಗೆ ಹೋಲಿಕೆ ಮಾಡುವದಕ್ಕೆ ಸಾಧ್ಯವಿಲ್ಲ, ಅಂತೂ, ಆತನು μονογενής τοῦ θεοῦ (*monogenēs tou Theou*), "ದೇವರ ಒಬ್ಬನೇ ಮಗ" ಆಗಿರುತ್ತಾನಷ್ಟೆ. ಒಂದು ವಾಕ್ಯಭಾಗದಲ್ಲಿ, ಆತನು μονογενής θεός (*monogenēs Theos*), "ಏಕಪುತ್ರನೂ ಸ್ವತಃ ದೇವರೂ" ಎಂದು ಸಹ ಕರೆಯಲ್ಪಟ್ಟಿದ್ದಾನೆ (ಯೋಹಾನ 1:18). ದೇವತ್ವದ ನಿಖರವಾದ ಸ್ವಭಾವವೇನೆಂದು ನಾವು ಗ್ರಹಿಸಲಾರೆವು, ಆದರೆ ಯೇಸುವಿನ ಜನನವು ಒಂದು ರೀತಿಯಲ್ಲಿ ವಿಶಿಷ್ಟವಾಗಿತ್ತೆಂಬುದನ್ನಂತೂ ಬಲ್ಲೆವು. ವಾಸ್ತವಿಕದಲ್ಲಿ, Walter Bauerನ ಶಬ್ದಕೋಶವು *ಮೊನೊಜೆನೇಸ* ಎಂಬುದಕ್ಕೆ "ಏಕೈಕ" ಅಥವಾ "ವಿಶಿಷ್ಟ (ಪ್ರಕಾರದಲ್ಲಿ)" ಎಂದು ಅರ್ಥನಿರೂಪಣೆ ಮಾಡುತ್ತದೆ. ಆ ಪದವು "ಆತನ ಪ್ರಕಾರ ಅಥವಾ ವರ್ಗದಲ್ಲಿ ಇರುವವನು ಆತನೊಬ್ಬನೇ"[43] ಎಂದು ಸೂಚಿಸುತ್ತದೆ. ಯೇಸುವಿನ ಜನನ ರೀತಿಯಲ್ಲಿ ಬೇರೊಂದು ಈ ಹಿಂದೆ ಇರಲೇ ಇಲ್ಲ, ಮುಂದೆಯೂ ಇರುವದಿಲ್ಲ.

ಉಲ್ಲೇಖಿಸಲಾಗಿರುವ ವಾಕ್ಯಭಾಗದ ಆಧಾರದಲ್ಲಿ, ಇಸಾಕನು ಸಾರಳ ಗರ್ಭದಲ್ಲಿಡಲ್ಪಟ್ಟ

ಅಬ್ರಹಾಮನ ಸಂತಾನವಾಗಿ ಹುಟ್ಟಿದ್ದನೆಂಬುರಲ್ಲಿ ಯಾವದೇ ಸಂದೇಹವಿಲ್ಲ. ಈ ಅರ್ಥದಲ್ಲಿ, ಆತನ ಜನ್ಮವು - ಆತನ ಹೆತ್ತವರ ವಯಸ್ಸು ಮತ್ತು ಸಾರಳು ಈ ಮುಂಚೆ ಬಂಜೆಯಾಗಿದ್ದಳೆಂಬ ಕಾರಣದಿಂದಾಗಿ ಅಸ್ವಾಭಾವಿಕವಾಗಿತ್ತಾದರೂ - ಒಂದು ಸಹಜವಾದ ಶಾರೀರಿಕ ಜನನವಾಗಿತ್ತು. ಹಾಗಿದ್ದರೂ, ಆತನ ಜನ್ಮಕ್ಕೆ ಕಾರಣವು ದೇವರ ವಾಗ್ದಾನದಲ್ಲಿ ಆತನ ತಂದೆಯು ಇಟ್ಟಿದ್ದ ನಂಬಿಕೆಯೇ ಆಗಿತ್ತದೆಂದು ಹೇಳಲಾಗಿರುತ್ತದೆ. ದೇವರ ವಾಕ್ಯಕ್ಕೆ ಪ್ರತ್ಯುತ್ತರವಾಗಿ ನಂಬಿಕೆಯು ಕೆಲಸ ಮಾಡುವಾಗ, ಏನು ಬೇಕಾದರೂ ಸಂಭವಿಸಬಲ್ಲದೋ? ಅಂತೂ, ಸ್ವತಃ ಯೇಸುವು "ದೇವರಿಗೆ ಎಲ್ಲವು ಸಾಧ್ಯವೇ" ಎಂದು ಹೇಳಿದನಲ್ಲವೇ (ಮತ್ತಾಯ 19:26)?

**ವಚನಗಳು 24-26.** ಪೌಲನು ಈ ವಿಭಾಗವನ್ನು ಅರ್ಥನಿರೂಪಣೆ ಮಾಡುವದಕ್ಕಾಗಿ ಬೀಗದ ಕೈಯನ್ನು ಕೊಡುವವನಾಗಿ ಹೀಗೆ ಬರೆದನು, **ಈ ಸಂಗತಿಗಳು ಉಪಮಾನವಾಗಿವೆ.** ಇಲ್ಲಿ ಬಳಸಲಾಗಿರುವ ಸಂಯುಕ್ತ ಪದವು ἀλληγορέω (*allēgoreō*), ಅದು ἄλλος (*allos*, "ಬೇರೆ") ಮತ್ತು ἀγορεύω (*agoreuō*, "ಸಾರ್ವಜನಿಕವಾಗಿ ಮಾತಾಡು" ಅಥವಾ "ಜನತಾ ಸಭೆಯಲ್ಲಿ ಮಾತಾಡು") ಎಂಬ ಪದಗಳನ್ನೊಳಗೊಂಡಿರುತ್ತದೆ. ಇದು ಅಪ್ಪಟ ಗ್ರೀಕ್ ಪದವಾಗಿದೆ; ಇದರ ಮೂಲೋತ್ಪತ್ತಿಯು ಶಾಸ್ತ್ರೀಯ ಕಾಲದಲ್ಲಿ ಇದ್ದದ್ದಾಗಿದ್ದು ಆ ಕಾಲದಲ್ಲಿ ಜನರು ಸಾರ್ವಜನಿಕ ಸಭೆಯಲ್ಲಿ, ಬಹುಶಃ ಜನತಾ ಸಭೆಯಲ್ಲಿ ಮಾತಾಡುತ್ತಿದ್ದರು. ಈ ಪದವು "ಬೇರೊಂದು ರೀತಿಯಲ್ಲಿ ಮಾತಾಡುವದು" ಅಥವಾ "ಒಂದು ಸಂಗತಿಯನ್ನು ಮತ್ತೊಂದು ವಿಧದಲ್ಲಿ ಹೇಳುವದು," ಅಂದರೆ "ಸಾಂಕೇತಿಕವಾಗಿ ಮಾತಾಡುವದು" ಎಂಬುದಕ್ಕೆ ಸಂಬಂಧಪಟ್ಟಂತೆ ತನ್ನ ಬಹಳಷ್ಟು ಮೂಲ ಅರ್ಥವನ್ನು ಉಳಿಸಿಕೊಂಡಿರುತ್ತದೆ. ಒಂದು ಸಾಂಕೇತಿಕ ನಿರೂಪಣೆಯು ಒಂದು ರೀತಿಯ ಸಾಮ್ಯವಿದ್ದಂತೆ, ಸಾಂಕೇತಿಕವಾಗಿ ಮಾತಾಡಲಾಗಿರುವ ಒಂದು ಪಾಠವಾಗಿರುತ್ತದೆ.

4:24-26ರಲ್ಲಿ ಈಗಾಗಲೇ ಅಬ್ರಹಾಮನ ಕುಟುಂಬದ ಇತಿಹಾಸವನ್ನು ಸಾಭಿತುಪಡಿಸದವನಾಗಿ, ಪೌಲನು ಒಂದು ಸಾಂಕೇತಿಕ ನಿರೂಪಣೆಯ ಅನ್ವಯಿಕೆಯನ್ನು ಮಾಡುವದಕ್ಕೆ ಸಾಗುತ್ತಾನೆ:

> **ಹೇಗಂದರೆ, ಆ ಇಬ್ಬರು ಸ್ತ್ರೀಯರು ಎರಡು ಒಡಂಬಡಿಕೆಗಳೇ. ಒಂದು ಒಡಂಬಡಿಕೆ ಸೀನಾಯಿ ಪರ್ವತದಿಂದ ಉತ್ಪನ್ನವಾಗಿ ದಾಸತ್ವದಲ್ಲಿರಬೇಕಾದ ಮಕ್ಕಳನ್ನು ಹೆರುವಂಥದು; ಅದೇ ಹಾಗರ್. ಹಾಗರ್ ಅಂದರೆ ಅರಬಸ್ಥಾನದಲ್ಲಿರುವ ಸೀನಾಯಿ ಪರ್ವತ. ಅವಳು ಈಗಿನ ಯೆರೂಸಲೇಮ್ ಎಂಬವಳಿಗೆ ಸರಿಬೀಳುತ್ತಾಳೆ; ಹೇಗಂದರೆ, ಈಕೆ ತನ್ನ ಮಕ್ಕಳ ಸಹಿತ ದಾಸತ್ವದಲ್ಲಿದ್ದಾಳೆ. ಆದರೆ ಮೇಲಣ ಯೆರೂಸಲೇಮ್ ಎಂಬವಳು ಸ್ವತಂತ್ರಳು, ಇವಳೇ ನಮಗೆ ತಾಯಿ.**

ಆರಂಭದಲ್ಲಿ, ಪೌಲನು ಐತಿಹಾಸಿಕ ಘಟನೆಗಳನ್ನು ಸಾಂಕೇತಿಕವಾಗಿ ಅನ್ವಯಿಕೆ ಮಾಡುವದು ಅಚ್ಚರಿಯಾಗಿ ಕಾಣಿಸಬಹುದು. ಯೆಹೂದಿಕರಣಗೊಳಿಸುವವರಿಗೆ ಇದು ಆಘಾತ ನೀಡಿತ್ತೆಂಬುದರಲ್ಲಿ ಸಂಶಯವೇ ಇಲ್ಲ![44] ನಾವು ಹೀಗೆ ಕೇಳಬಹುದು, "ಹಾಗರಳು (ಸಾರಳ ದಾರಿಯಾಗಿದ್ದ ಐಗುಪ್ತದ ಹೆಂಗಸು) ತನ್ನ "ದಾಸತ್ವದಲ್ಲಿರಬೇಕಾದ ಮಕ್ಕಳ'ನ್ನು (ಯೆಹೂದ್ಯರು) ಹೊಂದಿರುವ 'ಈಗಿನ ಯೆರೂಸಲೇಮ'ನ್ನು (ಯೆಹೂದ್ಯರ ರಾಜಧಾನಿ) ಪ್ರತಿನಿಧಿಸುವವಳೆಂದು ಪೌಲನು ಹೇಗೆ ಹೇಳುವದಕ್ಕೆ ಸಾಧ್ಯ? ಯೆಹೂದ್ಯರು ಹೇಗೆ ಇಸ್ಮಾಯೇಲನಿಂದ (ಅರಬ್ಬರ ಮೂಲಜನಕ) ಪ್ರತಿನಿಧಿಸಲ್ಪಡುವದಕ್ಕೆ ಸಾಧ್ಯ?" ಪೌಲನ ಸಾಂಕೇತಿಕ ನಿರೂಪಣೆಯನ್ನು

ಅರ್ಥಮಾಡಿಕೊಳ್ಳಬೇಕಾದರೆ, ಆತನು ಮಾಡಿದ ಅನ್ವಯಿಕೆಯನ್ನು ನಾವು ಒಪ್ಪಿಕೊಳ್ಳತಕ್ಕದ್ದು.

ಪೌಲನು ಎರಡು ಒಡಂಬಡಿಕೆಗಳನ್ನು ಪ್ರತಿನಿಧಿಸುವಂತೆ ಅಬ್ರಹಾಮನ ಕುಟುಂಬ ಸದಸ್ಯರನ್ನು ಬಳಕೆ ಮಾಡುತ್ತಿದ್ದಾನೆ. (1) ಹಾಗರಳು ಧರ್ಮಶಾಸ್ತ್ರದ ಒಡಂಬಡಿಕೆಯನ್ನು ಪ್ರತಿನಿಧಿಸುತ್ತಾಳೆ, ಅದು ಸೀನಾಯಿ ಪರ್ವತದಲ್ಲಿ ಕೊಡಲ್ಪಟ್ಟಿತು. (2) ಸಾರಳು ವಾಗ್ದಾನದ ಒಡಂಬಡಿಕೆಯನ್ನು ಪ್ರತಿನಿಧಿಸುತ್ತಾಳೆ. ಈ ವಾಗ್ದಾನವು ಅಬ್ರಹಾಮನಿಗೆ ಆತನ ಸಂತಾನ ಅಥವಾ ಸಂತತಿಯ ವಿಷಯದಲ್ಲಿ ಮಾಡಲ್ಪಟ್ಟಿತು; ಅದು ಧರ್ಮಶಾಸ್ತ್ರವಿಲ್ಲದೆ, ಕೃಪೆಯಿಂದಲೇ ಆಗಿತ್ತು. (3) ಆತನು ದೇವರ ಹಳೆಯ ಒಡಂಬಡಿಕೆಯ ಜನರಾದ ಇಸ್ರಾಯೇಲ್ಯರನ್ನು ಪ್ರತಿನಿಧಿಸುವದಕ್ಕೆ ಹಾಗರಳ ಮಗನಾದ ಇಸ್ಮಾಯೇಲನನ್ನು ಬಳಸಿದನು. (4) ಇಸಾಕನು ದೇವರ ಹೊಸ ಒಡಂಬಡಿಕೆಯ ಜನರಾದ, ಆತನ ನಂಬಿಕೆಯ ಹೊಸ ಇಸ್ರಾಯೇಲ್ಯರನ್ನು, ಅಂದರೆ ಕ್ರೈಸ್ತರನ್ನು ಪ್ರತಿನಿಧಿಸುತ್ತಾನೆ (3:26-29).

ಹಾಗರಳು ಸಾರಳ ದಾಸಿಯಾಗಿದ್ದಳು, ಒಬ್ಬ ಅಡಿಯಾಳು ಆಗಿದ್ದಳು. ಆದುದರಿಂದ, ಪ್ರಾಚೀನ ಪದ್ಧತಿಗನುಗುಣವಾಗಿ, ಈ ದಾಸಿಯಾಗಿರುವ ತಾಯಿಗೆ ಹುಟ್ಟಿದ ಮಗನಾದ, ಇಸ್ಮಾಯೇಲನು ಸಹ ಒಬ್ಬ ದಾಸನಾಗಿದ್ದನು. ಹಾಗರಳು ಮತ್ತು ಇಸ್ಮಾಯೇಲ ಇವರಿಬ್ಬರು ಏಕೆ ಸೀನಾಯ್ ಪರ್ವತ, ಯೆರೂಸಲೇಮ್, ಮತ್ತು ಯೆಹೂದ್ಯರನ್ನು ಪ್ರತಿನಿಧಿಸುವಂತೆ ಬಳಸಲ್ಪಟ್ಟಿದ್ದಾರೆ? ಸೀನಾಯಿ ಪರ್ವತದಲ್ಲಿಯೇ ಮೋಶೆಯ ಮೂಲಕವಾಗಿ ಇಸ್ರಾಯೇಲರಿಗೆ ಧರ್ಮಶಾಸ್ತ್ರವು ಕೊಡಲ್ಪಟ್ಟಿತ್ತು. ಯೆರೂಸಲೇಮ್ ಯೆಹೂದ್ಯರ ಪರಿಶುದ್ಧ ಪಟ್ಟಣವಾಗಿದ್ದು, ಅವರಲ್ಲಿ ಅನೇಕರು ಈಗಲೂ ಧರ್ಮಶಾಸ್ತ್ರಕ್ಕೆ ನಿಷ್ಠೆ ತೋರಿಸುತ್ತಾರೆ. ಧರ್ಮಶಾಸ್ತ್ರಕ್ಕೆ, ಸೀನಾಯಿ ಪರ್ವತದಲ್ಲಿ ಕೊಡಲ್ಪಟ್ಟ ಒಡಂಬಡಿಕೆಗೆ ಅಧೀನರಾಗಿರುವವರು, ಪಾಪದ ದಾಸತ್ವದಲ್ಲಿದ್ದ ಜನರಾಗಿದ್ದರು. *ಈ ಸಹವಾಸಗಳಲ್ಲಿ ದಾಸತ್ವವು ಸಾಮಾನ್ಯವಾದ ಜೋಡನೆ ಆಗಿರುತ್ತದೆ.*

ಅಬ್ರಹಾಮನ ಹೆಂಡತಿಯಾದ ಸಾರಳು, ಅನೇಕ ವರ್ಷಗಳಿಂದ ಬಂಜೆಯಾಗಿದ್ದಾಗ್ಯೂ ಇಸಾಕನಿಗೆ ಜನ್ಮ ಕೊಟ್ಟಿದ್ದಳು. ದೇವರು ಅಬ್ರಹಾಮನಿಗೆ ಮಾಡಿದ್ದ ವಾಗ್ದಾನದ ಫಲವಾಗಿ ಆತನು ಹುಟ್ಟಿದ್ದನು. ಸ್ವತಂತ್ರನಾಗಿ ಹುಟ್ಟಿದ ಕುಮಾರನಾಗಿದ್ದು, ಇಸಾಕನು ಅಬ್ರಹಾಮನಿಗೆ ಬಾಧ್ಯಸ್ಥನಾಗಿದ್ದನು. ಆದದರಿಂದ, ಪೌಲನು ಹೊಸ ಒಡಂಬಡಿಕೆ, ಕ್ರೈಸ್ತರಿಗೆ, ಮತ್ತು ಪರಲೋಕದ ಯೆರೂಸಲೇಮಿಗೆ ಸಂಕೇತಗಳಾಗಿ ಸಾರಳನ್ನು ಮತ್ತು ಇಸಾಕನ್ನು ಬಳಸಿದನು. ಯೇಸುವಿನಲ್ಲಿಟ್ಟ ವಿಧೇಯತೆಯುಳ್ಳ ನಂಬಿಕೆಯ ಮೂಲಕವಾಗಿ, ಕ್ರೈಸ್ತರು ಅವರ ಪಾಪಗಳಿಂದ ಬಿಡಿಸಲ್ಪಟ್ಟಿರುತ್ತಾರೆ ಮತ್ತು ಈಗ ಅವರು ಪುತ್ರರು ಹಾಗೂ ದೇವರಿಗೆ ಬಾಧ್ಯರು ಆಗಿರುತ್ತಾರೆ (4:6, 7). *ಈ ಸಹವಾಸಗಳಲ್ಲಿ ಸ್ವಾತಂತ್ರ್ಯ, ಪುತ್ರತ್ವ, ಮತ್ತು ಬಾಧ್ಯತೆಗಳು ಸಾಮಾನ್ಯ ಜೋಡನೆಗಳಾಗಿವೆ.*

4:25ರಲ್ಲಿ "ಸರಿಬೀಳುತ್ತಾಳೆ" (συστοιχέω, *sustoicheō*) ಎಂದು ಅನುವಾದಿಸಲ್ಪಟ್ಟಿರುವಂಥದ್ದರ ಅರ್ಥವು "ಅದೇ ಪಂಕ್ತಿಗೆ ಸೇರಿದ"[45] ಎಂದಾಗಿರುತ್ತದೆ. ಅದಕ್ಕೆ ಸರಿಬೀಳುವ ಭಾಗಗಳನ್ನು ಎರಡು ಪಂಕ್ತಿಗಳಲ್ಲಿರುವ ಮೂಲಕ Lightfootನು ಈ ಸಾಂಕೇತಿಕ ನಿರೂಪಣೆಗೆ ಒಂದು ವೀಕ್ಷಣ ಸಾಧನವನ್ನು ಒದಗಿಸುತ್ತಾನೆ. ಮೊದಲನೆಯದು ಅಕ್ಷರಶಃ ಅಥವಾ ಭೂಲೋಕದ ಅರ್ಥವನ್ನು ಕೊಡುತ್ತದೆ; ಎರಡನೆಯದು, ಸಾಂಕೇತಿಕ ಅಥವಾ ಆತ್ಮೀಕವಾದ ಅರ್ಥವನ್ನು ಕೊಡುತ್ತದೆ.

| *ಭೂಲೋಕದ ಅರ್ಥ* | *ಆತ್ಮೀಕ ಅರ್ಥ* |
|---|---|
| ಹಾಗರು, ದಾಸಿಯು | ಸಾರಳು, ಸ್ವತಂತ್ರಳು |
| ಇಸ್ಮಾಯೇಲ, ಶರೀರಸಂಬಂಧದ ಮಗು | ಇಸಾಕ, ವಾಗ್ದಾನದ ಮಗು |
| ಹಳೆಯ ಒಡಂಬಡಿಕೆ | ಹೊಸ ಒಡಂಬಡಿಕೆ |
| ಭೂಲೋಕದ ಯೆರೂಸಲೇಮ ಇತ್ಯಾದಿ | ಪರಲೋಕದ ಯೆರೂಸಲೇಮ ಇತ್ಯಾದಿ.[46] |

ಈ ಆಲೋಚನೆಯನ್ನು ವಿವರಿಸುತ್ತಾ, James Burton Coffmanನು ಸಾಂಕೇತಿಕ ನಿರೂಪಣೆಯನ್ನು ಈ ವಿಧದಲ್ಲಿ ದೃಶ್ಯೀಕರಿಸುತ್ತಾನೆ:

| *ಯೆಹೂದಿಮತ* | *ಕ್ರೈಸ್ತತ್ವ* |
|---|---|
| ದಾಸಿ, ಹಾಗರಳು | ಸ್ವತಂತ್ರಳು, ಸಾರಳು |
| ಇಸ್ಮಾಯೇಲ, ದಾಸಿಯ ಮಗನು | ಇಸಾಕ, ಸ್ವತಂತ್ರಳ ಮಗನು |
| ಸ್ವಾಭಾವಿಕ ಜನನ | ವಾಗ್ದಾನದಿಂದ ಅಸ್ವಾಭಾವಿಕ ಜನನ |
| ಸೀನಾಯಿ ಪರ್ವತ, ಧರ್ಮಶಾಸ್ತ್ರ | ಚೀಯೋನ್ ಪರ್ವತ, ಪರಲೋಕದ ಒಡಂಬಡಿಕೆ |
| ಭೂಲೋಕದ ಯೆರೂಸಲೇಮ | ಪರಲೋಕದ ಯೆರೂಸಲೇಮ |
| ದಾಸತ್ವ | ಸ್ವತಂತ್ರ |
| ಆರಂಭದಲ್ಲಿ ಫಲಭರಿಯ, ಆದರೆ ಬಳಿಕ: ಸ್ವಲ್ಪ ಕಡಿಮೆಯಾದ ಸಂತಾನ | ಆರಂಭದಲ್ಲಿ ಬಂಜೆತನ, ಆದರೆ ಬಳಿಕ: ಅಸಂಖ್ಯಾದ ಸಂತಾನ |
| ಹಿಂಸಕರು | ಹಿಂಸೆಗೊಳಗಾದವರು |
| ವಾಗ್ದಾನದಿಂದ ಹೊರಕ್ಕೆ ಹಾಕಲ್ಪಟ್ಟವರು | ವಾಗ್ದಾನದ ಬಾಧ್ಯಸ್ಥರು |
| ಯೆಹೂದ್ಯರು, ಶರೀರಸಂಬಂಧದ ಇಸ್ರಾಯೇಲ್ಯರು, ದಾಸತ್ವದಲ್ಲಿರುವವರು | ಕ್ರೈಸ್ತರು, ಆತ್ಮೀಕ ಇಸ್ರಾಯೇಲ್ಯರು, ಸ್ವತಂತ್ರರು[47] |

**ವಚನ 27.** ಪೌಲನು ತನ್ನ ವಾದವನ್ನು ಮತ್ತಷ್ಟು ಮುಂದುವರೆಸುವದಕ್ಕಾಗಿ ಇದಾದ ಬಳಿಕ ಯೆಶಾಯ 54:1ನ್ನು ಉಲ್ಲೇಖಿಸುತ್ತಾನೆ:

> **ಹೆರದ ಬಂಜೆಯೇ, ಆನಂದವಾಗಿರು, ಪ್ರಸವವೇದನೆಯಿಲ್ಲದವಳೇ, ಸ್ವರವೆತ್ತಿ ಕೂಗು; ಗಂಡನುಳ್ಳವಳಿಗಿಂತ ಗಂಡ ಬಿಟ್ಟವಳಿಗೆ ಮಕ್ಕಳು ಹೆಚ್ಚು ಎಂದು ಬರೆದದೆಯಲ್ಲಾ.**

ಆದಿಕಾಂಡದ ಕಥನದಲ್ಲಿ, ಹಾಗರಳು ಶೀಘ್ರದಲ್ಲಿ ಆಬ್ರಹಾಮನ ಮಗುವಿಗೆ ತಾಯಿಯಾದಳು. ಸೀನಾಯಿ ಪರ್ವತದಲ್ಲಿ ಒಡಂಬಡಿಕೆಯು ಸ್ಥಾಪಿಸಲ್ಪಟ್ಟಾಗ, ಅದು ಶೀಘ್ರದಲ್ಲಿಯೇ ಆ ಒಡಂಬಡಿಕೆಯ ಅನೇಕ ಸಾವಿರ ಪುತ್ರರಿಗೆ ಜನ್ಮ ನೀಡಿತ್ತು: ಇಸ್ರಾಯೇಲಿನ ಇಡೀ ಜನಾಂಗ. ಅದಕ್ಕೆ ತದ್ವಿರುದ್ಧವಾಗಿ, ಸಾರಳು ಬಂಜೆಯಾಗಿದ್ದಳು ಮತ್ತು ಇಸಾಕನಿಗೆ ಜನ್ಮ ಕೊಡುವದಕ್ಕೆ ಆಕೆಗೆ ತೊಂಭತ್ತು ವಯಸ್ಸಾಗುವ ವರೆಗೂ ಕಾಯಬೇಕಾಗಿತ್ತು. ಇದೇ ರೀತಿಯಲ್ಲಿಯೇ, ವಾಗ್ದಾನದ ಒಡಂಬಡಿಕೆಯು ಪ್ರಕಟನೆಗೊಳ್ಳಲು ಅನೇಕ ವರ್ಷಗಳು ಬೇಕಾಗಿದ್ದವು.

ಆತನ "ಸಂತಾನ"ದ ಮೂಲಕವಾಗಿ ಎಲ್ಲಾ ಜನಾಂಗಗಳಿಗೂ ಆಶೀರ್ವಾದವುಂಟಾಗುವದೆಂದು ಅಬ್ರಹಾಮನಿಗೆ ಮಾಡಿದ ವಾಗ್ದಾನವು ಕಾಯಬೇಕಾಗಿತ್ತು. ಪೌಲನ ಪ್ರಕಾರವಾಗಿ, ವಾಗ್ದಾನ ಮತ್ತು ಸೀನಾಯಿ ಪರ್ವತದಲ್ಲಿ ಧರ್ಮಶಾಸ್ತ್ರವು

ಕೊಡಲ್ಪಡುವದರ ನಡುವೆ 430 ವರ್ಷಗಳು ಗತಿಸಿದ್ದವು; ಮತ್ತು "ಸಂತಾನ" ಆಗಿದ್ದಂಥ "ಕ್ರಿಸ್ತನು" (3:16) ಬರುವದಕ್ಕೆ ಮುಂಚೆ ಇನ್ನೂ 1,440 ವರ್ಷಗಳಾಗಿದ್ದವು. ಒಟ್ಟಿನಲ್ಲಿ, ಅಲ್ಲಿ ಅಂದಾಜು ಎರಡು ಸಹಸ್ರ ವರ್ಷಗಳ ಕಾಲ ಕಾಯುವ ಅವದಿಯಿತ್ತು. ಸಾರಳ ಹಾಗೆಯೇ, ದೇವರ ಜನರು ಕ್ರಿಸ್ತನ ಪರಲೋಕಾರೋಹಣದ ನಂತರದ ಮೊದಲ ಪಂಚಾಶತ್ತಮದಂದು ಪವಿತ್ರಾತ್ಮನು ಸುರಿಸಲ್ಪಡುವದರೊಂದಿಗೆ ಸುವಾರ್ತೆಯ ಮುಂಜಾನೆಯು ಉದಯವಾಗುವ ತನಕ ಬಹಳಷ್ಟು ಕಾಲದ ತನಕ ಕಾಯಬೇಕಾಗಿತ್ತು. ಆಗ ಮಾತ್ರವೇ ಅದರ ಮೊದಲ ಆತ್ಮೀಕ ಸಂತಾನವು ಹುಟ್ಟಿತ್ತು; ಅ ದಿನದಲ್ಲಿ "ಸುಮಾರು ಮೂರುಸಾವಿರ ಜನರು" ನೀರಿನಿಂದಲೂ ಆತ್ಮನಿಂದಲೂ ಹುಟ್ಟಿದವರಾದರು (ಅಪೊಸ್ತಲರ ಕೃತ್ಯಗಳು 2:38, 41).

ಇದು ಕೇವಲ ಆರಂಭವಷ್ಟೆ ಆಗಿತ್ತು. ಆ ಕಾಲದಲ್ಲಿ ಯೆಹೂದ್ಯರು ರೋಮನ್ ಸಾಮ್ರಾಜ್ಯದುದ್ದಕ್ಕೂ ಚದುರಿ ಹೋಗಿದ್ದರಾದರೂ, ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಬರೆಯಲ್ಪಟ್ಟಿರುವ ಪ್ರಕಾರ, ಯೆಹೂದಿ ಕ್ರೈಸ್ತರ ಸಂಖ್ಯೆಯು ತೀವ್ರಗತಿಯಲ್ಲಿ ಅನೇಕ ಸಾವಿರುಗಳಿಗೆ ಏರಿತ್ತು (ಅಪೊಸ್ತಲರ ಕೃತ್ಯಗಳು 21:20). ಯೆಹೂದಿ ಅಧಿಕಾರಿಗಳು, ವಿಶೇಷವಾಗಿ ಹೊಸ ನಂಬಿಕೆಯಲ್ಲಿ ಅನ್ಯಜನಾಂಗದ ವಿಶ್ವಾಸಿಗಳು ಸಮೂಹ ಸಮೂಹವಾಗಿ ಸೇರ್ಪಡೆಗೊಳಿಸಲ್ಪಡುವದನ್ನು ಕಂಡಾಗ, ಅವರು ಬಹಳವಾಗಿ ಭಯ ಮತ್ತು ಹೊಟ್ಟೆಕಿಚ್ಚಿನಿಂದ ತುಂಬಿ ಹಿಂಸೆಗಳಿಗೆ ಪ್ರಚೋದನೆಯನ್ನು ಕೊಟ್ಟರು. ಇದು ಸಹ, ಮುಂದಾಗಿ ಕಾಣಲ್ಪಟ್ಟದ್ದಾಗಿತ್ತು. ಪೌಲನು ಯೆಶಾಯನ ಪುಸ್ತಕದಿಂದ ಉಲ್ಲೇಖಿಸಿದನು, "ಹೆರದ ಬಂಜೆಯೇ, ಆನಂದವಾಗಿರು, ಪ್ರಸವವೇದನೆಯಿಲ್ಲದವಳೇ, ಸ್ವರವೆತ್ತಿ ಕೂಗು; ಗಂಡನುಳ್ಳವಳಿಗಿಂತ ಗಂಡ ಬಿಟ್ಟವಳಿಗೆ ಮಕ್ಕಳು ಹೆಚ್ಚು" (ಗಲಾತ್ಯ 4:27; ನೋಡಿರಿ ಯೆಶಾಯ 54:1). ಅಂತಿಮವಾಗಿ, ಹೊಸ ಒಡಂಬಡಿಕೆಯ ಮಕ್ಕಳು - ಅಬ್ರಹಾಮನ ಆತ್ಮೀಕ ಮಕ್ಕಳು (ಗಲಾತ್ಯ 3:26-29), "ದೇವರ ಇಸ್ರಾಯೇಲ್ಯರು" (6:16) - ಹಳೆಯ ಸೀನಾಯಿಗೆ ಸಂಬಂಧಿಸಿದ ಒಡಂಬಡಿಕೆಯ ಮಕ್ಕಳಿಇಂತ ಅತ್ಯಧಿಕವಾಗುವರು, ಇದನ್ನು ಸುವಾರ್ತೆಯ ಯುಗದ ಮೊದಲ ಪಂಚಾಶತ್ತಮ ದಿನದಿಂದ ಮೊದಲ್ಗೊಂಡ ಇತಿಹಾಸವು ಸಾಭಿತು ಪಡಿಸಿರುತ್ತದೆ.

**ವಚನ 28.** ಪೌಲನು ತನ್ನ ಸಾಂಕೇತಿಕ ಅರ್ಥನಿರೂಪಣೆಯ ಅನ್ವಯಿಕೆಯನ್ನು ಗಲಾತ್ಯದವರ - ಮತ್ತು ಮುಂಬರುವ ವರ್ಷಗಳಲ್ಲಿನ ಎಲ್ಲಾ ಕ್ರೈಸ್ತರ - ಸ್ಥಿತಿಗೆ ಅಳವಡಿಸುತ್ತಾನೆ. ಆತನು ಹೀಗೆ ಹೇಳಿದನು, **ಸಹೋದರರೇ, ನಾವು ಇಸಾಕನಂತೆ ವಾಗ್ದಾನದ ಫಲವಾಗಿ ಹುಟ್ಟಿದ ಮಕ್ಕಳಾಗಿದ್ದೇವೆ.** ಇಸಾಕನ ಜನನವು ಅಬ್ರಹಾಮನಿಗೆ ಆತನ ಮತ್ತು ಸಾರಳಿಗೆ ಒಬ್ಬ ಪುತ್ರನು ಜನಿಸುವನೆಂದು ದೇವರು ಮಾಡಿದ ವಾಗ್ದಾನದ ಫಲಿತವಾಗಿ ಸಂಭವಿಸಿತ್ತು. ಅದೇ ರೀತಿಯಲ್ಲಿ, ನಿನ್ನ "ಸಂತಾನ"ದ (ಕ್ರಿಸ್ತನ) ಮುಖಾಂತರವಾಗಿ, ಜನಾಂಗಗಳೆಲ್ಲರೂ ಆಶೀರ್ವದಿಸಲ್ಪಡುವರು ಎಂದು ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನದ ಫಲಿತವಾಗಿ ಗಲಾತ್ಯದ "ಸಹೋದರರು" ಹೊಸ ಜನ್ಮವನ್ನು ಅನುಭವ ಮಾಡಿದ್ದರು. ವಾಗ್ದಾನವು "ಮೇಲಣ ಯೆರೂಸಲೇಮ್" (4:26) ಆಗಿರುವ ಸಾರಳಿಂದ ಪ್ರತಿನಿಧಿಸಲ್ಪಟ್ಟಿರುವ ಒಡಂಬಡಿಕೆಯ ಕಡೆಗೆ ನಡಿಸುತ್ತದೆ. ಕ್ರೈಸ್ತರು ಹೊಸ ಒಡಂಬಡಿಕೆಯ ಪುತ್ರರು ಮತ್ತು ಆತ್ಮೀಕ, ನಿತ್ಯವಾದ "ಪರಲೋಕದ ಯೆರೂಸಲೇಮ್"ನ, "ಚೀಯೋನ್ ಪರ್ವತ," "ಜೀವಸ್ವರೂಪನಾದ ದೇವರ ಪಟ್ಟಣ"ದ ಜನರಾಗಿರುತ್ತಾರೆ" (ಇಬ್ರಿಯ 12:22, 23).

ಇಸಾಕನು ಅಬ್ರಹಾಮ ಮತ್ತು ಸಾರಳಿಗೆ ಹುಟ್ಟಿದ ಸ್ವತಂತ್ರ ಪುತ್ರನಾಗಿದ್ದನು. ಸ್ವತಂತ್ರ ಸ್ತ್ರೀಯ ಮಕ್ಕಳಾಗಿ, ಕ್ರೈಸ್ತರು ಸಹ, ಅನೇಕ ವಿಷಯಗಳಲ್ಲಿ ಸ್ವತಂತ್ರರಾಗಿರುತ್ತಾರೆ. ನಾವು ಯಾವವುಗಳಿಂದ ಸ್ವತಂತ್ರರೆಂದರೆ . . .

ಶಾರೀರಿಕ ಸಂತಾನಕ್ಕೆ ಸಂಬಂಧಿಸಿದ ಯಾವದೇ ನಿಯಮದಿಂದ (ಮತ್ತಾಯ 3:9);
ಕೇವಲ "ಮನುಷ್ಯರು ಕಲ್ಪಿಸಿದ ಕಟ್ಟಳೆಗಳು" ಮಾತ್ರವೇ ಆಗಿರುವ ಯಾವದೇ ಮಾನವ ಸಂಪ್ರದಾಯಗಳನ್ನು ಕೈಕೊಂಡು ನಡೆಯಬೇಕೆಂಬ ಹಂಗಿನಿಂದ (ಮತ್ತಾಯ 15:1-3, 8, 9);
ಪಾಪದ ಪರಿಣಾಮಗಳು, ಅಪರಾಧ, ಮತ್ತು ದಬ್ಬಾಳಿಕೆಗಳಿಂದ (ರೋಮಾ 6:7, 18; 7:23);
ಮರಣಕ್ಕೆ ಭಯಪಡುವ ಸಾರ್ವತ್ರಿಕ ಮಾನವ ಬಂಧನದಿಂದ (ಇಬ್ರಿಯ 2:14, 15);
ಯಾವ ಮನುಷ್ಯನೂ ಹೊತ್ತುಕೊಳ್ಳಲು ಶಕ್ತನಾಗದಂತಹ ಧರ್ಮಶಾಸ್ತ್ರದ ನೊಗದಿಂದ (ಗಲಾತ್ಯ 5:1; ಅಪೊಸ್ತಲರ ಕೃತ್ಯಗಳು 15:10);
ಯೇಸುವು ನಮಗೋಸ್ಕರ ಶಾಪವಾಗುವ ಮೂಲಕವಾಗಿ ಮಾತ್ರವೇ ಸಾಧ್ಯವಿರುವಂಥ ವಿಮೋಚನೆಯ ಮುಖಾಂತರವಾಗಿ ಧರ್ಮಶಾಸ್ತ್ರದ ಶಾಪದಿಂದ ಸ್ವತಂತ್ರರು (ಗಲಾತ್ಯ 3:13).

ಕರ್ತನು ತಾನೇ ಹೇಳಿದ್ದೇನೆಂದರೆ, "ಆದದರಿಂದ ಮಗನು ನಿಮ್ಮನ್ನು ಬಿಡುಗಡೆಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವದು" (ಯೋಹಾನ 8:36).

ವಿಮೋಚನೆಯ ಒಂದು ಅಂಶವು ಕೇವಲ ಎದುರುನೋಡುವಿಕೆಯಲ್ಲಿ ಮಾತ್ರವೇ ನಮ್ಮದಾಗಿರುತ್ತದೆ. ಭೂಲೋಕದಲ್ಲಿರುವ ವಿಮೋಚಿಸಲ್ಪಡದೆ ಇರುವವರಿಗೆ ಸಮಾನವಾಗಿ, ರೋಮಾ 8:23ರ ಪ್ರಕಾರ "ಪ್ರಥಮ ಫಲವಾಗಿರುವ ಪವಿತ್ರಾತ್ಮವರವನ್ನು ಹೊಂದಿದ ನಾವಾದರೂ ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರುನೋಡುತ್ತಾ ನಮ್ಮೊಳಗೆ ನರಳುತ್ತೇವೆ" (ನೋಡಿರಿ ರೋಮಾ 8:18-25). ನಾವು ಈಗಾಗಲೇ "ಪುತ್ರರ ಪದವಿಯನ್ನು" ಹೊಂದಿರುವವರು ಮತ್ತು ಅದರ ಪರಿಣಾಮವಾಗಿ "ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ" ಹೊಂದಿದ್ದೇವಾದರೂ (ಗಲಾತ್ಯ 4:5, 6), ನಾವು ಈಗಲೂ ದೈಹಿಕ ನೋವನ್ನು ಮತ್ತು ಶ್ರಮೆಗಳನ್ನು ಭೂಲೋಕದಲ್ಲಿ ವಿಮೋಚಿಸಲ್ಪಡದೆ ಇರುವವರ ರೀತಿಯಲ್ಲಿಯೇ ಅನುಭವಿಸುತ್ತೇವೆ. ಪೌಲನು ಎಫೆಸದಲ್ಲಿರುವ ಕ್ರೈಸ್ತರಿಗೆ ಹೀಗೆ ಬರೆದನು, "ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ" (ಎಫೆಸ 1:7). ಹಾಗಿದ್ದರೂ, ಅದೇ ಪತ್ರಿಕೆಯಲ್ಲಿ, ಈ ಸಹೋದರರಿಗೆ ಆತನು ಬುದ್ಧಿವಾದ ಹೇಳಿದ್ದೇನೆಂದರೆ, "ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ" (ಎಫೆಸ 4:30). ಈ "ವಿಮೋಚನೆಯ ದಿನ" ಎಂಬುದು "ಕರ್ತನ ದಿನ," ಅಥವಾ ನ್ಯಾಯತೀರ್ಪಿನ ದಿನ ಎಂಬುದು ಸ್ಪಷ್ಟವಾಗಿರುತ್ತದೆ. ಆ ದಿನದಲ್ಲಿ, "ಸಮಾಧಿಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ[ರು] . . . ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದು" (ಯೋಹಾನ 5:28, 29; NIV). ಆ ಕಾಲದಲ್ಲಿ, ಕರ್ತನು ಪುನಃ ಬರುವಾಗ, ಆತನು "ದೀನಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರಪಡಿಸು ವದಕ್ಕೆ ಶಕ್ತನಾಗಿದ್ದು ಪ್ರಭಾವವುಳ್ಳ ತನ್ನ ದೇಹಕ್ಕೆ ಸಾರೂಪ್ಯವಾಗುವಂತೆ

ಮಾಡುವನು" (ಫಿಲಿಪ್ಪಿ 3:21; NKJV). ಪುನರುತ್ಥಾನದ ವೇಳೆಯಲ್ಲಿಯೇ ಅಂತಿಮವಾಗಿ "ನಮ್ಮ ದೇಹದ ವಿಮೋಚನೆಯು" (ರೋಮಾ 8:23) ಸಂಭವಿಸುತ್ತದೆ ಮತ್ತು ನಾವು "ದೇವರ ಮಕ್ಕಳಿಗಿರುವ ಮಹಿಮಕರವಾದ ಸ್ವತಂತ್ರತೆಯೊಳಗೆ ಕರೆದೊಯ್ಯಲ್ಪಡುವೆವು" (ರೋಮಾ 8:21; NIV1984).

ಗಲಾತ್ಯ 4:28ನೇ ವಚನವು ಈಗಾಗಲೇ ಪೌಲನು ಹೇಳಿರುವಂಥದ್ದರ ಒಂದು ಸಂಕ್ಷಿಪ್ತವಾದ ಮರುಮಂಡನೆಯಾಗಿರುತ್ತದೆ: "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ . . . ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ" (3:26-29). ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನದ ಫಲಿತವಾಗಿ ಕ್ರಿಸ್ತನ ರಕ್ತದ ಮೂಲಕವಾಗಿ ಒಂದು ಕೃಪೆಯ ಹೊಸ ಒಡಂಬಡಿಕೆಯು ಸ್ಥಾಪಿಸಲ್ಪಟ್ಟಿತು (ಲೂಕ 22:20; ಇಬ್ರಿಯ 8:10-12). ಇದು ಸೀನಾಯಿ ಪರ್ವತದಲ್ಲಿ ಕೊಡಲ್ಪಟ್ಟ ಧರ್ಮಶಾಸ್ತ್ರದ ಒಡಂಬಡಿಕೆಗೆ ಎದ್ದು ಕಾಣುವಷ್ಟು ತದ್ವಿರುದ್ಧವಾಗಿ ನಿಲ್ಲುತ್ತದೆ, ಆ ಒಡಂಬಡಿಕೆಯು ರದ್ದುಗೊಳಿಸಲ್ಪಟ್ಟಿತಷ್ಟೆ (ಇಬ್ರಿಯ 8:13; 10:9, 10).

**ವಚನ 29.** ಸಾಂಕೇತಿಕ ನಿರೂಪಣೆಯಲ್ಲಿ ಇಬ್ಬರು ಪುತ್ರರಿಗಿರುವ ತದ್ವಿರುದ್ಧವಾದ ಪಾತ್ರಗಳು ಇನ್ನಷ್ಟು ವಿಸ್ತರಿಸಲ್ಪಡುತ್ತವೆ. ಹಾಗರಳ ("ದಾಸಿ") ಕುಮಾರನಾಗಿದ್ದ ಇಸ್ಮಾಯೇಲನು, **ಸ್ವಾಭಾವಿಕವಾಗಿ ಹುಟ್ಟಿದವನು**. ಅದಕ್ಕೆ ತದ್ವಿರುದ್ಧವಾಗಿ, ಸಾರಳ ("ಸ್ವತಂತ್ರಳ") ಮಗನಾಗಿದ್ದನು ಇಸಾಕನು, **ದೇವರಾತ್ಮ ಬಲದಿಂದ ಹುಟ್ಟಿದ**ವನಾಗಿದ್ದನು. ಆ ದಿನಗಳಲ್ಲಿ, ಇಸ್ಮಾಯೇಲು ಇಸಾಕನನ್ನು **ಹಿಂಸೆಪಡಿಸಿದ**ನು (διώκω, *diōkō*). ಈ ಮಾತುಗಳು ಹಳೆಯ ಒಡಂಬಡಿಕೆಯಲ್ಲಿ ಕಾಣಿಸಿಕೊಳ್ಳುವದಿಲ್ಲ, ಆದರೆ ಈ ಉಲ್ಲೇಖವು ಇಸಾಕನಿಗೆ ಸ್ತನ್ಯಪಾನವನ್ನು ಬಿಡಿಸುವದನ್ನು[48] ಕೊಂಡಾಟ ಮಾಡುವ ಸಂದರ್ಭದಲ್ಲಿನ ಘಟನೆಗಳಿಗೆ ಸಂಬಂಧಿಸಿರುವಂತೆ ಕಾಣುತ್ತದೆ. ಆ ಸಂದರ್ಭದಲ್ಲಿ, "ಐಗುಪ್ತ್ಯಳಾದ ಹಾಗರಳಲ್ಲಿ ಅಬ್ರಹಾಮನಿಗೆ ಹುಟ್ಟಿದ ಮಗನು ನಗುವದನ್ನು [ಹಾಸ್ಯಮಾಡುವದನ್ನು] ಸಾರಳು ಕಂಡಳು" (ಆದಿಕಾಂಡ 21:9). "ಹಾಸ್ಯಮಾಡುವದು" (צָחַק, *tsachaq*) ಎಂಬು ದಕ್ಕಿರುವ ಇಬ್ರಿಯ ಪದಕ್ಕೆ ವಿವಿಧ ಅರ್ಥಗಳಿರಬಲ್ಲವು, ಅದು ಸನ್ನಿವೇಶದ ಮೇಲೆ ಆಧಾರವಾಗಿರುತ್ತದೆ. ಅದರ ಅರ್ಥವು "ನಗುವದು" ಅಥವಾ "ಆಡುವದು"[49] ಎಂದಾಗಿರಬಲ್ಲದು; ಆದರೆ ಕೆಲವೊಂದು ಸಂದರ್ಭಗಳಲ್ಲಿ ಅದಕ್ಕೆ ನಕಾರಾತ್ಮಕ ಅರ್ಥವಿರುತ್ತದೆ, ಬೇರೆಯವರನ್ನು "ತಮಾಷೆ" ಅಥವಾ "ಹಾಸ್ಯ" ಮಾಡಬೇಕೆನ್ನುವಂತಹ ಕೇಡೆಣಿಸುವ ಸೂಚ್ಯಾರ್ಥವು ಇರಬಲ್ಲದು (ನೋಡಿರಿ ಆದಿಕಾಂಡ 39:14; 2 ಪೂರ್ವಕಾಲವೃತ್ತಾಂತ 30:10).[50] ಇಸಾಕನಿಗೆ ಚಿಕ್ಕ ಬಾಲಕನಾಗಿ ಸ್ತನ್ಯಪಾನ ಬಿಡಿಸುವ ವೇಳೆ ಇಸ್ಮಾಯೇಲನು ಹದಿನಾರು ಅಥವಾ ಹದಿನೇಳು ವಯಸ್ಸಿನವನಾಗಿದ್ದನು.[51] ನೋವುಕರವಾದ ಪ್ರಕೋಪ ಅಥವಾ "ಹಿಂಸೆ" ಎಂಬಷ್ಟರ ಮಟ್ಟಿಗೆ ಹೇಳಲ್ಪಟ್ಟಿರುವ ಹಾಸ್ಯ ಮಾಡುವಿಕೆಯು ಹೇಗಿದ್ದಿರಬಹುದೆಂಬುದನ್ನು ನೋಡುವದಕ್ಕೆ ಕಲ್ಪನೆಯ ಅಗತ್ಯವಿರುತ್ತದೆ. ಅಲ್ಲಿ ಯಾವ ರೀತಿಯಲ್ಲಿ ಹಾಸ್ಯ ಮಾಡಲ್ಪಟ್ಟಿದ್ದರೂ ಸರಿಯೇ, ಆ ಪರಿಸ್ಥಿತಿಯನ್ನು ಸೂಚಿಸುವದಕ್ಕೆ ಪ್ರೇರಿತ ಅಪೊಸ್ತಲರು ಬಳಸಿದ ಪದವು "ಹಿಂಸೆ" ಎಂದಾಗಿರುತ್ತದೆ.

ಇಸ್ಮಾಯೇಲನು ಇಸಾಕನನ್ನು ಹಿಂಸಿಸಿದ ಪ್ರಕಾರವೇ, **ಈಗಲೂ ಅದೆ.** ಆತನು ಗಲಾತ್ಯದವರಿಗೆ ಬರೆಯುವ ವೇಳೆ ಈ ಮಾತುಗಳು ಆತನ ಸ್ವಂತ ಪರಿಸ್ಥಿತಿಗಂತೂ ವಿಶೇಷವಾಗಿ ಅನ್ವಯಿಕೆಯಾಗಿರಬಹುದಾಗಿದೆ. ಪತ್ರಿಕೆಯು ಮೊದಲನೆಯ ಸುವಾರ್ತಾ ಪ್ರಯಾಣವನ್ನು ಮುಕ್ತಾಯಗೊಳಿಸಿದ ಬಳಿಕವಷ್ಟೆ, ಇನ್ನೂ ಪೌಲ ಮತ್ತು ಬಾರ್ನಬರು ಸಿರಿಯದ

ಅಂತಿಯೋಕ್ಯದಲ್ಲಿರುವ ವೇಳೆ (ಅಪೊಸ್ತಲರ ಕೃತ್ಯಗಳು 14:26-28), ಕ್ರಿ.ಶ. 48-49ರಷ್ಟು ಆರಂಭದಲ್ಲಿಯೇ ಬರೆಯಲ್ಪಟ್ಟಿರುವದಾದರೆ, ಪೌಲನು ಲುಸ್ತ್ರದಲ್ಲಿ ಕಲ್ಲೆಸೆತದಿಂದಾಗಿ ಹೊಂದಿದ ಗಾಯಗಳು ಇನ್ನೂ ಗುಣವಾಗುವ ಹಂತದಲ್ಲಿದ್ದವು ಎಂದಾಗುತ್ತದೆ. ಆ ಪ್ರಯಾಣದ ಆರಂಭದ ಹತ್ತಿರದಲ್ಲಿ, ಕುಪ್ರದ್ವೀಪದ ಪಶ್ಚಿಮ ಕರಾವಳಿ ಭಾಗದಲ್ಲಿರುವ ಪಾಫೋಸ ಎಂಬ ಸ್ಥಳದಲ್ಲಿ "ಸುಳ್ಳುಪ್ರವಾದಿಯೂ ಮಂತ್ರವಾದಿಯೂ ಆಗಿದ್ದ ಬಾರ್‌ಯೇಸು ಎಂಬ ಒಬ್ಬ ಯೆಹೂದ್ಯ ಮನುಷ್ಯನು" ಮಿಶನರಿಗಳನ್ನು ವಿರೋಧಿಸಿದ್ದನು (ಅಪೊಸ್ತಲರ ಕೃತ್ಯಗಳು 13:6-12).

ಪಿಸಿದ್ಯದ ಅಂತಿಯೋಕ್ಯದಲ್ಲಿ, ನಂಬಿಕೆಯಿಲ್ಲದ ಯೆಹೂದ್ಯರಲ್ಲಿ ಒಂದು ಮಾದರಿಯು ಅಭಿವೃದ್ಧಿಗೊಳ್ಳಲಾರಂಭಿಸಿತ್ತು. ಪೌಲ ಮತ್ತು ಬಾರ್ನಬರು ಬೋಧಿಸುವದನ್ನು ಕೇಳಿಸಿಕೊಳ್ಳಲು ಜನರ ಗುಂಪು ಕೂಡಿ ಬರುತ್ತಿದೆ ಎಂಬ ಸುದ್ದಿಯನ್ನು ಕೇಳಿದ ಕೂಡಲೆ, ಹೊಟ್ಟೆಕಿಚ್ಚುಗೊಂಡ ವ್ಯಕ್ತಿಗಳು "ತಮ್ಮ ಮತಕ್ಕೆ ಸೇರಿದ್ದ ಕುಲೀನ ಸ್ತ್ರೀಯರನ್ನೂ ಊರಿನ ಪ್ರಮುಖರನ್ನೂ ಪ್ರೇರಿಸಿ ಪೌಲ ಬಾರ್ನಬರ ಮೇಲೆ ಹಿಂಸೆಯನ್ನು ಎಬ್ಬಿಸಿ ಅವರನ್ನು ತಮ್ಮ ಮೇರೆಯಿಂದ ಆಚೆಗೆ ಅಟ್ಟಿದರು" (ಅಪೊಸ್ತಲರ ಕೃತ್ಯಗಳು 13:42-50). ಇಕೋನ್ಯದಲ್ಲಿ, ಈ ಇಬ್ಬರು ಮಿಶನರಿಗಳು ಕೂದಲೇಳೆಯ ಅಂತರದಲ್ಲಿ ಕಲ್ಲೆಸೆದಿಂದ ತಪ್ಪಿಸಿಕೊಂಡಿದ್ದರು (ಅಪೊಸ್ತಲರ ಕೃತ್ಯಗಳು 14:1-6). ಲುಸ್ತ್ರದಲ್ಲಿರುವ ವೇಳೆ, ಪೌಲನಿಗೆ ಆ ಅದೃಷ್ಟವಿರಲಿಲ್ಲ; ಯಾಕೆಂದರೆ ಅಲ್ಲಿ "ಅಂತಿಯೋಕ್ಯದಿಂದಲೂ ಇಕೋನ್ಯದಿಂದಲೂ ಯೆಹೂದ್ಯರು ಬಂದು ಜನರನ್ನು ಪ್ರೇರೇಪಿಸಿ ಪೌಲನನ್ನು ಕೊಲ್ಲುವದಕ್ಕೆ ಕಲ್ಲೆಸೆದು ಅವನು ಸತ್ತನೆಂದು ಭಾವಿಸಿ ಊರಹೊರಕ್ಕೆ ಎಳೆದುಬಿಟ್ಟರು" (ಅಪೊಸ್ತಲರ ಕೃತ್ಯಗಳು 14:19).

ಇಸ್ಮಾಯೇಲನು ಇಸಾಕನನ್ನು ಹಿಂಸೆ ಪಡಿಸಿದ್ದು ನಂಬಿಕೆಯಿಲ್ಲದ ಯೆಹೂದ್ಯರು ಪೌಲನನ್ನು ನಿರ್ದಯವಾಗಿ ಹಿಂಸಿಸಿದ್ದಕ್ಕೆ ಸಮಾನಾರ್ಥದಲ್ಲಿರುತ್ತದೆ. ಜನಾಂಗೀಯವಾಗಿ ಪೌಲನು ಸ್ವತಃ ಒಬ್ಬ ಯೆಹೂದ್ಯನಾಗಿ ಮತ್ತು ತಪ್ಪಾದ ವೈರಾಗ್ಯದಿಂದಾಗಿ ಕ್ರೈಸ್ತರನ್ನು ಹಿಂಸಿಸಿದ್ದನಾದರೂ, ಕ್ರಮೇಣದಲ್ಲಿ ಆತನು ಹೊಸ ಜನ್ಮವನ್ನು ಅನುಭವಿಸಿದ್ದನು. ಈಗ ಆತನು ಕ್ರೈಸ್ತರೊಳಗೆ, "ದೇವರಾತ್ಮ ಬಲದಿಂದ ಹುಟ್ಟಿದವ"ರಲ್ಲಿ (ಗಲಾತ್ಯ 4:29) ಒಬ್ಬನೆಂದು ಎಣಿಸಲ್ಪಟ್ಟಿದ್ದನು. ಆತನು ಕ್ರಿಸ್ತನಲ್ಲಿದ್ದನು, ಅಲ್ಲಿ ಯೆಹೂದ್ಯನು ಮತ್ತು ಅನ್ಯಜನಾಂಗದವನು ಎಂಬ ಭೇದವು ತೊಲಗಿಸಲ್ಪಡುತ್ತದೆ. ಆತನು ಪರಿವರ್ತನೆಗೊಂಡದ್ದರ ಫಲಿತವಾಗಿ, ಈ ಹಿಂದೆ ಹಿಂಸಿಸುವವನಾಗಿದ್ದವನು ಹಿಂಸೆಗೆ ಒಳಗಾಗಿದ್ದನು. ಆತನು "ಸ್ವಾಭಾವಿಕವಾಗಿ ಹುಟ್ಟಿದ" ಅಣ್ಣನಿಂದ ಅಪಹಾಸ್ಯಕ್ಕೊಳಗಾದ ಇಸಾಕನ ಪಾತ್ರವನ್ನು ವಹಿಸಿಕೊಂಡಿದ್ದನು. ಪೌಲನ ಹಾಗೆಯೇ (5:11), ಗಲಾತ್ಯದ ಕ್ರೈಸ್ತರು ಯೇಸುವಿನಲ್ಲಿ ನಂಬಿಕೆಯಿಟ್ಟಿದ್ದರ ನಿಮಿತ್ತವಾಗಿ ಹಿಂಸೆಗೆ ಗುರಿಯಾಗಿದ್ದರು (3:4).

**ವಚನ 30.** ಈ ವಚನವು ಒಂದು ಪ್ರಶ್ನೆಯನ್ನು ಮುಂದಿಡುತ್ತದೆ **ಆದರೂ ಶಾಸ್ತ್ರವು ಏನು ಹೇಳುತ್ತದೆ?** ಉತ್ತರವು ಒಂದು ರೀತಿಯಲ್ಲಿ ಸಡಿಲಾಗಿ, ಆದಿಕಾಂಡ 21:10ರಿಂದ ಉಲ್ಲೇಖಿಸಲಾಗಿದೆ: **ದಾಸಿಯನ್ನೂ ಅವಳ ಮಗನನ್ನೂ ಹೊರಗೆ ಹಾಕು; ದಾಸಿಯ ಮಗನು ಧರ್ಮಪತ್ನಿಯ ಮಗನೊಂದಿಗೆ ಎಷ್ಟು ಮಾತ್ರಕ್ಕೂ ಬಾಧ್ಯನಾಗಬಾರದೆಂದು ಹೇಳುತ್ತದೆ**. ಮೂಲ ವಾಕ್ಯದಲ್ಲಿ, ಸಾರಳು ತನ್ನ ವಿರೋಧಿಯಾದ ಹಾಗರಳ ಮಗನಾದ ಇಸ್ಮಾಯೇಲನು ಇಸಾಕನನ್ನು ಕೆಣಕುವದನ್ನು ನೋಡಿ ಕೋಪಗೊಂಡು ಈ ಮಾತುಗಳನ್ನು ಹೇಳಿರುವಂತೆ ಉಲ್ಲೇಖಿಸಲಾಗಿದೆ. ಈ ರೀತಿಯಾಗಿ ಕೆಟ್ಟ ವರ್ತನೆಯು ಇಸಾಕನಿಗೆ ಸ್ತನ್ಯಪಾನ ಬಿಡಿಸುವ ಕಾರ್ಯಕ್ರಮವನ್ನು ಕೊಂಡಾಡುವ ಸಂದರ್ಭದಲ್ಲಿ ನಡೆದದ್ದು ಪರಿಸ್ಥಿತಿಗಳನ್ನು ಇನ್ನಷ್ಟು ಹದಗೆಡಿಸಿತ್ತು.

ಮಾನವ ರೀತಿಯಲ್ಲಿ ಅವಲೋಕಿಸುವದಾದರೆ, ಸಾರಳು ಇಟ್ಟ ಬೇಡಿಕೆಯು ಕ್ರೂರ ಹಾಗೂ ಅನ್ಯಾಯದ ದಂಡನೆ ಎಂಬಂತೆ, ಹದಿಹರೆಯದ ಹುಡುಗನೊಬ್ಬನ ವರ್ತನೆಗೆ ಅನುಗುಣಕ್ಕೆ ಬಹಳ ದೂರವೆನಿಸುವ ದಂಡನೆ ಎಂಬಂತೆ ಕಾಣಿಸುತ್ತದೆ. ಅಬ್ರಹಾಮನ ಪ್ರತಿಕ್ರಿಯೆಯನ್ನು ನೋಡುವಾಗ, ಆತನ ಭಾವಗಳು ನಮ್ಮಂತೆಯೇ ಆಗಿದ್ದವೆಂಬುದು, ಆದಾಗ್ಯೂ ಎಷ್ಟೋ ಹೆಚ್ಚು ವೈಯಕ್ತಿಕವಾಗಿದ್ದವೆಂಬುದು ಗೊತ್ತಾಗುತ್ತದೆ. ನಾವು ಹೀಗೆ ಓದುತ್ತೇವೆ, "ಮಗನ ದೆಸೆಯಿಂದ ಈ ಮಾತು ಅಬ್ರಹಾಮನಿಗೆ ಬಹುದುಃಖವನ್ನು ಹುಟ್ಟಿಸಿತು" (ಆದಿಕಾಂಡ 21:11).

ಅಬ್ರಹಾಮನ ಪ್ರತಿಕ್ರಿಯೆಯು ಸರಿಯಾದದ್ದೆಂದು ತೋರುವ ರೀತಿಯಲ್ಲಿಯೇ, ಸರ್ವಶಕ್ತ ದೇವರು ಸ್ವತಃ ತನ್ನದೇ ಆಗಿರುವ ಯೋಜನೆ ಮತ್ತು ಉದ್ದೇಶವನ್ನು ಹೊಂದಿದ್ದನು - ಇಸಾಕ ಮತ್ತು ಆತನ ಸಂತತಿಯವರಿಗೆ ಮಾತ್ರವೇ ಆಗಿರಲಿಲ್ಲ, ಆದರೆ ಇಸ್ಮಾಯೇಲ ಮತ್ತು ಆತನ ಸಂತತಿಯವರಿಗಾಗಿಯೂ ಹೊಂದಿದ್ದನು. ಅಬ್ರಹಾಮನು ಇಸ್ರಾಯೇಲ್ ಜನಾಂಗದ ಮೂಲಪಿತೃವಾಗಿರಬೇಕೆಂದು ಮಾತ್ರವೇ ಅಲ್ಲ, ಆದರೆ "ಅನೇಕ ಜನಾಂಗಗಳಿಗೆ ಮೂಲ ಪಿತೃವಾಗಿ" (ಆದಿಕಾಂಡ 17:5) ಇರಬೇಕೆಂದು ನೇಮಿಸಲ್ಪಟ್ಟಿದ್ದನು. ಈ ವಾಗ್ದಾನದ ಆಧಾರದಲ್ಲಿಯೇ ಅಬ್ರಹಾಮನ ಹೆಸರು "ಅಬ್ರಾಮ" ("ಘಣತೆಗೇರಿಸಲ್ಪಟ್ಟ ತಂದೆ") ಎಂಬುದರಿಂದ "ಅಬ್ರಹಾಮ" ("ಬಹುಜನರಿಗೆ ಪಿತೃ") ಎಂಬುದಾಗಿ ಮಾರ್ಪಡಿಸಲ್ಪಟ್ಟಿತು.

ಅಬ್ರಹಾಮನಿಗೆ ತೊಂಭತ್ತೊಂಭತ್ತು ವಯಸ್ಸಾಗಿದ್ದ ವೇಳೆ ಈ ಹೆಸರು ಬದಲಾಯಿಸುವಿಕೆಯು ಸಂಭವಿಸಿತು. ಈ ಸಂದರ್ಭದಲ್ಲಿ, ದೇವರು ಆತನಿಗೆ ಭೇಟಿ ಕೊಟ್ಟು ಹೇಳಿದ್ದೇನೆಂದರೆ, ಮುಂದಿನ ವರ್ಷ ಇದೇ ವೇಳೆಯಲ್ಲಿ ಸಾರಳು ಒಬ್ಬ ಮಗನಿಗೆ ಜನ್ಮ ನೀಡುವಳು ಎಂಬುದೆ, ಆಗ ಆಕೆಯ ವಯಸ್ಸು ಎಂಬತ್ತೊಂಭತ್ತು ಆಗಿತ್ತು. ಸಂಶಯಪಟ್ಟವನಾಗಿ, "ಅಬ್ರಹಾಮನು ಅಡ್ಡಬಿದ್ದು ನಕ್ಕು" ಹೀಗೆ ಹೇಳಿದನು, "ಇಷ್ಮಾಯೇಲನಿದ್ದಾನಲ್ಲಾ, ಅವನೇ ನಿನ್ನ ದಯೆಹೊಂದಿ ಬಾಳಲಿ" (ಆದಿಕಾಂಡ 17:17, 18). ದೇವರು ಇಸ್ಮಾಯೇಲನನ್ನು ನೆನಪಿಟ್ಟುಕೊಂಡಿದ್ದನು, ಯಾಕೆಂದರೆ ಆತನು ಹೀಗೆ ಹೇಳಿದನು, "ಇಷ್ಮಾಯೇಲನ ವಿಷಯದಲ್ಲಿ ನೀನು ಮಾಡಿದ ಬಿನ್ನಹವನ್ನು ಕಿವಿಗೊಟ್ಟು ಕೇಳಿದ್ದೇನೆ. ಅವನನ್ನೂ ಆಶೀರ್ವದಿಸಿದ್ದೇನೆ; ಅವನನ್ನು ಅಭಿವೃದ್ಧಿಮಾಡಿ ಅವನಿಗೆ ಅತ್ಯಧಿಕವಾದ ಸಂತಾನವನ್ನು ಕೊಡುವೆನು. ಅವನು ಹನ್ನೆರಡು ಮಂದಿ ಅರಸರನ್ನು ಪಡೆಯುವನು; ಅವನಿಂದ ದೊಡ್ಡ ಜನಾಂಗವಾಗುವಂತೆ ಮಾಡುವೆನು" (ಅದಿಕಾಂಡ 17:20).

ಈ ಹಂತದಲ್ಲಿ, ದೇವರು ಅಬ್ರಹಾಮನಿಗೆ ಅಪ್ಪಣೆಕೊಟ್ಟು ಹೀಗೆ ಹೇಳಿದನು, "ಮಗನ ಮತ್ತು ದಾಸಿಯ ದೆಸೆಯಿಂದ ನಿನಗೆ ಕರಕರೆಯಾಗಬಾರದು; ಸಾರಳು ಹೇಳಿದಂತೆಯೇ ಮಾಡು; ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರು" (ಆದಿಕಾಂಡ 21:12). ಅಬ್ರಹಾಮನು ದೇವರಿಗೆ ವಿಧೇಯನಾದನು ಮತ್ತು ಹಾಗರಳು ಹಾಗೂ ಇಸ್ಮಾಯೇಲನನ್ನು ದೂರವಾಗಿ ಕಳುಹಿಸಿ ಬಿಟ್ಟನು (ಆದಿಕಾಂಡ 21:14). ಹೀಗೆ ಮಾಡಿದ್ದರಿಂದ ಇಸಾಕನು ಸುರಕ್ಷಿತನಾಗಿರುವನೆಂಬ ನಿಶ್ಚಯತೆಯು ಸಾರಳಿಗೆ ಸಿಕ್ಕಿತ್ತು ಮತ್ತು ಅಬ್ರಹಾಮನ ಸ್ವಾಸ್ತ್ಯಕ್ಕೆ ಇಸಾಕನನ್ನು ಏಕೈಕ "ಬಾಧ್ಯಸ್ಥ"ನನ್ನಾಗಿ ಸ್ಥಿರಪಡಿಸಿತ್ತು (ಆದಿಕಾಂಡ 24:36; 25:5, 6). ಇಸ್ಮಾಯೇಳನು ಆತನ ಜೊತೆಯಲ್ಲಿ ಬಾಧ್ಯಸ್ಥನಾಗುವದಿಲ್ಲ.

ಈ ಉದಾಹರಣೆಯು ಗಲಾತ್ಯದ ಕ್ರೈಸ್ತರಿಗೆ ಯಾವ ಆತ್ಮೀಕ ಸತ್ಯವನ್ನು ಮುಂದಿಟ್ಟಿತ್ತು? ಸ್ವಾಭಾವಿಕವಾಗಿ ಹುಟ್ಟಿದ ಯೆಹೂದ್ಯರಿಗೆ (ಇಸ್ಮಾಯೇಲನಿಂದ ಪ್ರತಿನಿಧಿಸಲ್ಪಟ್ಟವರು) ದೇವರ ರಾಜ್ಯದಲ್ಲಿ ಬಾಧ್ಯತೆಯು ಇರುವದಿಲ್ಲ ಎಂಬುದನ್ನು ಪೌಲನು ಒತ್ತಿ ಹೇಳುತ್ತಿದ್ದಾನೆ. ಬದಲಾಗಿ,

ಹೊಸ ಒಡಂಬಡಿಕೆಯ ಅಡಿಯಲ್ಲಿ ದೇವರಾತ್ಮಬಲದಿಂದ ಹುಟ್ಟಿರುವ (ಇಸಾಕನಿಂದ ಪ್ರತಿನಿಧಿಸಲ್ಪಟ್ಟಿರುವವರು) *ಕ್ರೈಸ್ತರಿಗೆ* ಮಾತ್ರವೇ ಇರುತ್ತದೆ. Robert L. Johnsonನ ಪ್ರಕಾರವಾಗಿ, "ಪೌಲನು ತಿಳಿಸುವ ಅಂಶವು ಏನೆಂದರೆ ಈ ಬಾಧ್ಯತೆಯು ಅಬ್ರಹಾಮನ ಆತ್ಮೀಕ ಸಂತತಿಗೆ ಮಾತ್ರವೇ ಸೇರಿರುತ್ತದೆ. ಸ್ವಾಭಾವಿಕ ಮತ್ತು ಆತ್ಮೀಕ, ದಾಸತ್ವ [ಮತ್ತು] ಸ್ವತಂತ್ರತೆಗಳ ನಡುವೆ ಯಾವದೇ ರಾಜಿ ಇರುವದಿಲ್ಲ. ಧರ್ಮಶಾಸ್ತ್ರ ಮತ್ತು ಸುವಾರ್ತೆ ಒಟ್ಟಿಗೆ ಇರುವದಕ್ಕೆ ಸಾಧ್ಯವಿಲ್ಲ."[52]

**ವಚನ 31.** ಪೌಲನು ಈ ವಿಧದಲ್ಲಿ ಮುಕ್ತಾಯಗೊಳಿಸುತ್ತಾನೆ, **ಸಹೋದರರೇ, ನಾವು ದಾಸಿಯ ಮಕ್ಕಳಲ್ಲ, ಆ ಧರ್ಮಪತ್ನಿಯ ಮಕ್ಕಳೇ ಎಂದು ತಿಳುಕೊಳ್ಳಿರಿ.** ಕ್ರೈಸ್ತರು ಸೀನಾಯಿ ಪರ್ವತದಲ್ಲಿ ಕೊಡಲ್ಪಟ್ಟ ಒಡಂಬಡಿಕೆಯ, ಅಂದರೆ ಧರ್ಮಶಾಸ್ತ್ರದ ಪುತ್ರರಲ್ಲ ಎಂಬುದನ್ನು ಆತನು ಒತ್ತಿ ಹೇಳುತ್ತಿದ್ದಾನೆ. ಆತನು ಈ ರೀತಿಯಾಗಿ ಹೇಳಿದ್ದು ಇದೇ ಮೊದಲ ಸಾರಿ ಆಗಿರಲಿಲ್ಲ, ಕಡೆಯ ಸಾರಿಯೂ ಆಗುವದಿಲ್ಲ. ಆತನು ಧರ್ಮಶಾಸ್ತ್ರಕ್ಕೆ ಅಂಟಿಕೊಂಡಿರುವದರಿಂದ ಆಗುವಂಥ ವಿನಾಶಕರ ಪರಿಣಾಮಗಳ ಕುರಿತಾಗಿ ಗಲಾತ್ಯದವರಿಗೆ ಬರೆದ ಪತ್ರಿಕೆಯೊಳಗೆ ಇನ್ನು ಅನೇಕ ಹೇಳಿಕೆಗಳನ್ನು ನೀಡಿರುತ್ತಾನೆ:

ಯೆಹೂದಿಕರಣಗೊಳಿಸುವವರು ಉಪದೇಶಿಸುತ್ತಿದ್ದದ್ದು "ಬೇರೆ ಸುವಾರ್ತೆ" (1:6), ಮಾರ್ಪಡಿಸಲ್ಪಟ್ಟ ಸುವಾರ್ತೆ (1:7) ಆಗಿತ್ತು.

ಪೌಲನು ಸಹೋದರರ ಎದುರಿನಲ್ಲಿ ಪೇತ್ರನಿಗೆ ಹೀಗೆ ಹೇಳಿದನು, "ಕರ್ಮಮಾರ್ಗದಿಂದ ನೀತಿಯುಂಟಾಗುವದಾದರೆ," ದೇವರ ಕೃಪೆಯು ನಿರರ್ಥವಾಗುತ್ತದೆ ಮತ್ತು "ಕ್ರಿಸ್ತನು ಮರಣವನ್ನು ಹೊಂದಿದ್ದಕ್ಕೆ ಕಾರಣವೇ ಇಲ್ಲ" (2:21).

"ನೇಮನಿಷ್ಠೆಗಳನ್ನು ಆಧಾರಮಾಡಿಕೊಳ್ಳುವವರೆಲ್ಲರೂ ಶಾಪಾಧೀನರಾಗಿದ್ದಾರೆ" (3:10).

"ಕ್ರಿಸ್ತನಂಬಿಕೆಯು ಕಾಲ ಬರುವದಕ್ಕೆ ಮೊದಲು ನಾವು . . . ಧರ್ಮಶಾಸ್ತ್ರದ ಕೈಕೆಳಗೆ ಕಾವಲಲ್ಲಿ ಮುಚ್ಚಲ್ಪಟ್ಟಿದ್ದೆವು. ಹೀಗಿರಲಾಗಿ ಧರ್ಮಶಾಸ್ತ್ರವು ನಮ್ಮನ್ನು ಕಾಯುವ ಆಳಿನಂತಾಗಿದೆ; . . . ಕ್ರಿಸ್ತನಲ್ಲಿಗೆ ಸೇರುವ ತನಕ ಅದು ನಮ್ಮನ್ನು ಕಾಯುತ್ತದೆ. ಆದರೆ ಕ್ರಿಸ್ತ ನಂಬಿಕೆಯು ಬಂದಿರಲಾಗಿ ನಾವಿನ್ನು ಕಾಯುವವನ ಕೈಕೆಳಗಿರುವವರಲ್ಲ" (3:23-25).

"ಹಾಗೆಯೇ ನಾವು ಸಹ ಬಾಲಕರಾಗಿದ್ದಾಗ ಲೋಕದವರ ಬಾಲಬೋಧೆಗೆ ಅಧೀನರಾಗಿದ್ದೆವು. ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ . . . ಬಂದನು" (4:3-5).

"ಹೀಗಿರುವಲ್ಲಿ ಇನ್ನು ನೀನು ದಾಸನಲ್ಲ, ಮಗನಾಗಿದ್ದೀ. ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ" (4:7).

"ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲ್ಲಿ ತಿರಿಗಿ ಸಿಕ್ಕಿಕೊಳ್ಳಬೇಡಿರಿ" (5:1).

ಯಾವನು "ಕರ್ಮಗಳಿಂದ ನೀತಿವಂತರಾಗಬೇಕೆಂದಿರುತ್ತಾರೋ" ಅವನು

“ಕ್ರಿಸ್ತನಿಂದ ಅಗಲಿ ಹೋದ”ವನು ಮತ್ತು “ಕೃಪಾಶ್ರಯದೊಳಗಿಂದ ಬಿದ್ದುಹೋದ”ವನು (5:4).

“ಆದರೆ ನೀವು ಆತ್ಮನಿಂದ ನಡಿಸಿಕೊಳ್ಳುವವರಾದರೆ ನೇಮನಿಷ್ಠೆಗಳಿಗೆ ಅಧೀನರಲ್ಲ” (5:18).

ಪೌಲನು ಹೇಳಿದ್ದೇನೆಂದರೆ “ನಾವು ದಾಸಿ*ಯ* ಮಕ್ಕಳಲ್ಲ, *ಆ* ಧರ್ಮಪತ್ನಿಯ ಮಕ್ಕಳೇ” (ಒತ್ತಿ ಹೇಳಿದ್ದು ನನ್ನದು). ಗ್ರೀಕ್ ವಾಕ್ಯದಲ್ಲಿರುವ ಪ್ರಕಾರವೇ, NASBಯಲ್ಲಿ “ದಾಸಿ” ಎಂಬುದಕ್ಕೆ ನಿರ್ದಿಷ್ಟ ಗುಣವಾಚಿ ಇರುವದಿಲ್ಲ; ಆದರೆ “ಧರ್ಮಪತ್ನಿ” ಎಂಬುದರ ಮುಂದೆ ನಿರ್ದಿಷ್ಟ ಗುಣವಾಚಿಯು ಇರುತ್ತದೆ. ಮೊದಲನೆಯ ಸಂದರ್ಭದಲ್ಲಿ ವಿಧ ಅಥವಾ ಗುಣದ ಕುರಿತು ತಿಳಿಸಲ್ಪಟ್ಟರೆ, ಎರಡನೆಯದರಲ್ಲಿ ಗುರುತು ವ್ಯಕ್ತಪಡಿಸಲ್ಪಟ್ಟಿರುತ್ತದೆ. ಸರಳವಾಗಿ ಹೇಳುವದಾದರೆ, “ಕ್ರೈಸ್ತರು ಒಬ್ಬ ದಾಸಿ*ಯಂತಹ ಯಾವದೇ* ಸ್ತ್ರೀಯ ಮಕ್ಕಳಲ್ಲ, ಆದರೆ ಬದಲಾಗಿ ಸ್ವತಂತ್ರಳಾಗಿ (ಸಾರಳು) *ಇರುವವಳ* ಮಕ್ಕಳಾಗಿದ್ದಾರೆ.” ಪೌಲನು ಬಳಸಿರುವ ಪದಗಳು ಹಾಗರಳನ್ನು ಕಡಿಮೆಯಾದವಳನ್ನಾಗಿ ಮಾಡುತ್ತದೆ ಮತ್ತು ಸಾರಳನ್ನು ಘನತೆ ಹಾಗೂ ಸ್ಥಾನದಲ್ಲಿ ಉನ್ನತಕ್ಕೇರಿಸುತ್ತದೆ.[53]

ಸಾಂಕೇತಿಕ ನಿರೂಪಣೆಯ ಅರ್ಥವು ಎರಡು ಒಡಂಬಡಿಕೆಗಳ ನಡುವೆ ನಿಲ್ಲುತ್ತದೆ. ಕ್ರೈಸ್ತರಾಗಿ, ದೇವರ ಮಕ್ಕಳಾಗಿ ಸ್ವೀಕರಿಸಿಕೊಳ್ಳಲ್ಪಟ್ಟದ್ದಕ್ಕಾಗಿ ನಮ್ಮ ಮೂಲವಾಗಲಿ ಅಥವಾ ಪುತ್ರಸ್ವೀಕಾರವಾಗಲಿ ಧರ್ಮಶಾಸ್ತ್ರದ ಋಣಕ್ಕೊಳಪಟ್ಟಿಲ್ಲ. ಕ್ರಿಸ್ತನಲ್ಲಿ, ಯೆಹೂದಿ ಅಥವಾ ಅನ್ಯಜನಾಂಗದವನು, ಸುನ್ನತಿ ಅಥವಾ ಸುನ್ನತಿಯಿಲ್ಲದಿರುವಿಕೆ, ದಾಸನು ಅಥವಾ ಸ್ವತಂತ್ರನು ಎಂಬ ಭೇದಗಳಿರುವದಿಲ್ಲ.[54] ಕ್ರಿಸ್ತನಲ್ಲಿ ಇರುವವರು ಹೊರುವದಕ್ಕಾಗದಂತಹ ಧರ್ಮಶಾಸ್ತ್ರದ ನೊಗದಿಂದ ಸ್ವತಂತ್ರರು (5:1), ಅಪರಾಧನಿರ್ಣಯದಿಂದ ಸ್ವತಂತ್ರರು (ರೋಮಾ 8:1, 2), ಮತ್ತು ಧರ್ಮಶಾಸ್ತ್ರದಿಂದ ಬರುವ ಶಾಪದಿಂದ ಸ್ವತಂತ್ರರು (ಗಲಾತ್ಯ 3:13). ಕುರಿಯಾದಾತನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟಿರುವವರೆಲ್ಲರೂ ದೇವರಿಂದ ವಿಮೋಚಿಸಲ್ಪಟ್ಟವರಾಗಿದ್ದಾರೆ ಮತ್ತು ದೇವರಾತ್ಮನು ಅವರೊಳಗೆ ವಾಸಿಸುವವನಾಗಿದ್ದಾನೆ.

ಯೇಸುವು ಸಮಾರ್ಯದ ಸ್ತ್ರೀಗೆ ಹೇಳಿದ್ದೇನೆಂದರೆ “ಬರಬೇಕಾದ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೆ” (ಯೋಹಾನ 4:22). ಹೇಗೂ, ರಕ್ಷಣೆಯನ್ನುಂಟು ಮಾಡುವ ಯಾವದೇ ಶಕ್ತಿಯು ಯೆಹೂದ್ಯರಿಂದಾಗಲಿ, ಯೆಹೂದಿಮತ, ಅಥವಾ ಧರ್ಮಶಾಸ್ತ್ರದಿಂದಾಗಲಿ ಬರುತ್ತದೆಂಬುದು ಈ ಹೇಳಿಕೆಯ ಅರ್ಥವಾಗಿರುವದಿಲ್ಲ. ಬದಲಾಗಿ, ರಕ್ಷಕನನ್ನು ಈ ಲೋಕದೊಳಗೆ ಬರಮಾಡುವದಕ್ಕಾಗಿ ದೇವರು ಇಸ್ರಾಯೇಲ್ಯರನ್ನು ತನ್ನ ಸಾಧನವಾಗಿ ಆರಿಸಿಕೊಂಡನು. ರಕ್ಷಣೆಯು ಯೇಸುವಿನಲ್ಲಿ ಮಾತ್ರವೇ ಸಿಕ್ಕುವದಾಗಿತ್ತು. ಧರ್ಮಶಾಸ್ತ್ರವು ನಿತ್ಯಜೀವದ ಕುರಿತು ಸಾಕ್ಷಿ ಹೇಳಿತು, ಆದರೆ ಅದು ಜೀವವನ್ನು ಒದಗಿಸುವದಕ್ಕೆ ಶಕ್ತವಾಗಲಿಲ್ಲ; ಯಾಕೆಂದರೆ ಆ ಜೀವವನ್ನು ಕ್ರಿಸ್ತನಲ್ಲಿ ಮಾತ್ರವೇ ಹೊಂದಿಕೊಳ್ಳಬಹುದಾಗಿದೆ.[55]

## ಅನ್ವಯಿಸುವಿಕೆ

### ಪೌಲನ ಅತ್ಯಾಸಕ್ತಿಯ ಮನವಿ (4:1-20)

ಪೌಲನು 4ನೇ ಅಧ್ಯಾಯದಲ್ಲಿ ಧರ್ಮಶಾಸ್ತ್ರಕ್ಕೆ ನಿಷ್ಠೆ ತೋರಿಸುವದಕ್ಕಿಂತ ಕ್ರಿಸ್ತನಲ್ಲಿಡುವ ನಂಬಿಕೆಯು ಶ್ರೇಷ್ಠವಾದದ್ದೆಂಬ ತನ್ನ ಚರ್ಚೆಗೆ ಹೆಚ್ಚಿನದನ್ನು ಕೂಡಿಸುವ ವೇಳೆ, ಆತನ

ಸಾರಭೂತವಾದ ಸತ್ಯವನ್ನು ಸ್ವೀಕರಿಸಿಕೊಳ್ಳುವಂತೆ ತನ್ನ ವಾಚಕರನ್ನು ಒಡಂಬಡಿಸುವದಕ್ಕಾಗಿ ಆತನು ವಿವಿಧ ಕಾರ್ಯತಂತ್ರಗಳನ್ನು ಬಳಸಿದನು. ತರ್ಕವನ್ನು, ಭಾವವನ್ನು, ಮತ್ತು ಸಾಂಕೇತಿಕ ನಿರೂಪಣೆಗಳನ್ನು ಬಳಸುವವನಾಗಿ, ಆತನು ಗಲಾತ್ಯದಲ್ಲಿನ ಕ್ರೈಸ್ತರಿಗೆ ಅವರ ಪರಿಸ್ಥಿತಿಗಳನ್ನು ಮೌಲ್ಯಮಾಪನ ಮಾಡಿಕೊಂಡು ತಮ್ಮ ಜೀವಿತಗಳನ್ನು ಬದಲಾಯಿಸಿಕೊಳ್ಳುವಂತೆ ಬೇಡಿಕೊಂಡನು. ಅವರು ಧರ್ಮಶಾಸ್ತ್ರದಿಂದ ನೀತಿವಂತರೆಂಬ ನಿರ್ಣಯ ಹೊಂದುವದಕ್ಕೆ ಪ್ರಯತ್ನಿಸುವದರ ಬದಲಾಗಿ ಯೇಸುವಿನಲ್ಲಿಯೇ ಸಂಪೂರ್ಣ ವಿಶ್ವಾಸವಿಡಬೇಕೆಂಬುದು ಆತನ ಬಯಕೆಯಾಗಿತ್ತು.

*ಅವರು ಪುತ್ರರಾಗಿ ಸ್ವೀಕರಿಸಿಕೊಳ್ಳಲ್ಪಟ್ಟದ್ದಕ್ಕಾಗಿ ಆತನು ಸಂತೋಷ ಪಟ್ಟನು* (4:1-7). 3ನೇ ಅಧ್ಯಾಯದ ಸಾದೃಶ್ಯವನ್ನು ಮುಂದುವರೆಸುತ್ತಾ, ಪೌಲನು ಯೆಹೂದಿಮತವನ್ನು "ತಂದೆಯು ನೇಮಿಸಿದ ದಿನದವರೆಗೂ ಪಾಲಕರ ಮತ್ತು ಮನೆವಾರ್ತೆಯವರ ಕೈಕೆಳಗಿರುವ" ಒಂದು ಮಗುವಿಗೆ ಸಮಾನಗೊಳಿಸುತ್ತಾನೆ (4:2). ಕಾರ್ಯರೂಪದಲ್ಲಿ ನೋಡುವಾಗ, ಮಗುವು "ಬಾಲಕನಾಗಿರುವ ತನಕ ದಾಸನಂತೆ ಇರುವನೇ ಹೊರತು ಬೇರೆಯಿಲ್ಲ" (4:1). ಹೇಗೂ, ಪರಲೋಕದ ತಂದೆಯು ನಿಗದಿ ಪಡಿಸಿದ್ದ ದಿನವು ಬಂದಿತ್ತು, ಮತ್ತು ಆತನು "ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತ" ತನ್ನ ಮಗನನ್ನು ಕಳುಹಿಸಿ ಕೊಟ್ಟನು (4:4, 5a). ಯೇಸು ಕ್ರಿಸ್ತನ ಮೂಲಕವಾಗಿ ಸಿಕ್ಕ ವಿಮೋಚನೆಯ ಫಲಿತವು ಪುತ್ರಸ್ವೀಕಾರವೇ ಆಗಿತ್ತು - ಅದು ಯೆಹೂದ್ಯರಿಗೂ ಅನ್ಯಜನರಿಗೂ ಒಂದೇ ರೀತಿಯಾಗಿತ್ತು (4:5b, 6). ಅಪೊಸ್ತಲನು ಒತ್ತಾಯಪೂರ್ವಕವಾಗಿ ಹೀಗೆ ಘೋಷಿಸುವ ಮೂಲಕ ಮುಕ್ತಾಯಗೊಳಿಸಿದನು, "ಹೀಗಿರುವಲ್ಲಿ ಇನ್ನು ನೀನು ದಾಸನಲ್ಲ, ಮಗನಾಗಿದ್ದೀ. ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ" (4:7).

*ಅವರು ಹಿಂಜರಿದ್ದದ್ದಕ್ಕಾಗಿ ಪ್ರಲಾಪಿಸುತ್ತಾನೆ* (4:8-11). ಗಲಾತ್ಯದಲ್ಲಿ ಪೌಲನ ಮೂಲಕ ಪರಿವರ್ತನೆಗೊಂಡವರಲ್ಲಿ ಅನೇಕರು ಈ ಮುಂಚೆ ಅನ್ಯಜನಾಂಗಕ್ಕೆ ಸೇರಿದ ವಿಗ್ರಹಾರಾಧಕರಾಗಿದ್ದರು. ಈ ಕಾರಣಕ್ಕಾಗಿಯೇ, ಈ ಪೂರ್ವಕಾಲದ ಜೀವನ ಶೈಲಿಯ ಕುರಿತು ಮಾತಾಡುವ ವೇಳೆ, ಆತನು ಈ ಮುಂಚೆ ಅವರು "ದೇವರ ಜ್ಞಾನವಿಲ್ಲದವರಾಗಿ ದೇವರಲ್ಲದವುಗಳಿಗೆ ಅಧೀನರಾಗಿದ್ದಿರಿ" ಎಂದು ಹೇಳುತ್ತಾನೆ (4:8). ಆತನು ಅವರಿಗೆ ಸುವಾರ್ತೆಯನ್ನು ಸಾರಿದ ವೇಳೆ (ಯೇಸು ಕ್ರಿಸ್ತನು ಶಿಲುಬೆಗೆ ಹಾಕಿಸಿಕೊಂಡವನಾಗಿ ಅವರಿಗೆ ಕಣ್ಣೆದುರಿನಲ್ಲಿ ವರ್ಣಿಸಲ್ಪಟ್ಟನು; 3:1), ಅವರು ನಂಬಿಕೆಯಲ್ಲಿ ಮತ್ತು ದೀಕ್ಷಾಸ್ನಾನ ಮಾಡಿಸಿಕೊಳ್ಳುವದರಲ್ಲಿ ಪ್ರತಿಕ್ರಿಯೆ ತೋರಿದ್ದರು, "ದೇವರ ಪುತ್ರರಾಗಿ"ದ್ದರು (3:26). ಅವರು ತಮ್ಮನ್ನು ರಕ್ಷಿಸಲಾಗದಂತಹ "ಕೆಲಸಕ್ಕೆ ಬಾರದ ದರಿದ್ರಬಾಲಬೋಧೆಗೆ" ಅಧೀನರಾಗುವರೆಂಬುದನ್ನು ನೆನೆದು ದಿಕ್ಕು ತೋಚದವನಾಗಿದ್ದನು (4:9). ಈ ಭಾಷೆಯಲ್ಲಿ ಯೆಹೂದಿಕರಣಗೊಳಿಸುವವರು ಅನ್ಯಜನಾಂಗದ ಕ್ರೈಸ್ತರ ಮೇಲೆ ಹೇರಬೇಕೆಂದು ನೋಡುತ್ತಿದ್ದ ಯೆಹೂದಿ ವಿಶೇಷ ದಿನಗಳು ಮತ್ತು ಕಾಲಗಳನ್ನು ಗೌರವಿಸುವದು ಸೇರಿತ್ತು (4:10). ಅವರಿಗೆ ಸುವಾರ್ತೆಯನ್ನು ಸಾರುವದಕ್ಕಾಗಿ ತನ್ನ ಪ್ರಾಣವನ್ನು ಅಪಾಯಕ್ಕೀಡು ಮಾಡಿಕೊಂಡಿದ್ದ ಅಪೊಸ್ತಲನು, ಅವರಿಗೋಸ್ಕರವಾಗಿ ತಾನು ಪಟ್ಟ ಪ್ರಯಾಸವು "ನಿಷ್ಫಲ" ಆಗಬಾರದೆಂದು ನಿರೀಕ್ಷಿಸಿದ್ದನಷ್ಟೇ (4:11).

*ಅವರು ತಮ್ಮ ಮಮತೆಯನ್ನು ನವೀಕರಿಸಿಕೊಳ್ಳಬೇಕೆಂದು ಬೇಡಿಕೊಂಡನು* (4:12-20). ಕ್ರಿಸ್ತ ನಂಬಿಕೆಯಲ್ಲಿ ಅವರ ತಂದೆಯಾಗಿ, ಪೌಲನು ತನ್ನ ಮಾದರಿಯನ್ನು ಅನುಸರಿಸಬೇಕೆಂದು ಗಲಾತ್ಯದವರನ್ನು ಬೇಡಿಕೊಂಡನು (4:12). ತನಗಿದ್ದ ಓಕರಿಕೆ ತರಿಸುವ ಅನಾರೋಗ್ಯದ

ಹೊರತಾಗಿಯೂ ಅವರು ಆತನಿಗೆ ನೀಡಿದ ಅದ್ಧೂರಿಯಾದ ಸ್ವಾಗತವನ್ನು, ಅವರು ಆತನನ್ನು "ದೇವದೂತನಂತೆ" ಅಥವಾ "ಕ್ರಿಸ್ತ ಯೇಸುವಿನಂತೆ" ಸಹ ಸೇರಿಸಿಕೊಂಡಿರೆಂಬುದನ್ನು ಜ್ಞಾಪಿಸಿಕೊಳ್ಳುತ್ತಾನೆ (4:13, 14). ಅವರು ಆತನಿಗೆ ತೋರಿಸಿದ ಶ್ರೇಷ್ಠವಾದ ಪ್ರೀತಿಯನ್ನು ಕುರಿತು ಅವರಿಗೆ ನೆನಪಿಸಿದನು, ಅವಶ್ಯಕವಿದ್ದಿದ್ದರೆ, ಅವರು ಆತನಿಗೋಸ್ಕರ ತಮ್ಮ "ಕಣ್ಣುಗಳನ್ನು" ಕಿತ್ತು ಕೊಡುತ್ತಿದ್ದರೆಂಬುದಾಗಿ ಹೇಳುತ್ತಾನೆ (4:15). ಪೌಲನು ಅವರನ್ನು ಯೆಹೂದಿಕರಣಗೊಳಿಸುವವರ ಸುಳ್ಳು ಬೋಧನೆಯನ್ನು ತಿರಸ್ಕರಿಸುವಂತೆ ಮತ್ತು ಕ್ರಿಸ್ತನಲ್ಲಿ ಅವರಿಗಿರುವ ಸಂತೋಷ ಹಾಗೂ ಆತನ ಮೇಲಿರುವ ಅವರ ಪ್ರೀತಿಯನ್ನು ನವೀಕರಿಸಿಕೊಳ್ಳುವಂತೆ ಬೇಡಿಕೊಂಡನು (4:16–18). ಆತನು ಅವರೊಂದಿಗೆ ಮುಖಾಮುಖಿಯಾಗಿ ಮಾತಾಡುವದಕ್ಕೆ ಸಾಧ್ಯವಾಗುವಂತೆ ತನ್ನ ಆತ್ಮೀಕ "ಮಕ್ಕಳ" ಜೊತೆಯಲ್ಲಿರಬೇಕೆಂದು ಹಂಬಲಿಸಿದನು. ಅವರಲ್ಲಿ ಕ್ರಿಸ್ತನ "ಸಾರೂಪ್ಯವು" ರೂಪಗೊಳ್ಳಬೇಕೆಂಬುದು ಆತನ ಗುರಿಯಾಗಿತ್ತು (4:19, 20).

*ಆತನು ಕ್ರಿಸ್ತನಲ್ಲಿ ಅವರಿಗಿರುವ ಸ್ವಾತಂತ್ರ್ಯವನ್ನು ದೃಷ್ಟಾಂತ ಪಡಿಸಿದನು* (4:21–31). ಗಲಾತ್ಯದವರು ಯೇಸು ಕ್ರಿಸ್ತನಲ್ಲಿ ಹೊಂದಿಕೊಂಡಿದ್ದ ಸ್ವಾತಂತ್ರ್ಯವನ್ನು ಕಣ್ಣಿಗೆ ಕಟ್ಟಿದಂತೆ ದೃಷ್ಟಾಂತೀಕರಿಸಿದನು. ಆತನು ಅಬ್ರಹಾಮನ ಇಬ್ಬರು ಮಕ್ಕಳಾದ ಇಸ್ಮಾಯೇಲ ಮತ್ತು ಇಸಾಕರ ಕುರಿತಾದ ಹಳೆಯ ಒಡಂಬಡಿಕೆಯ ಕಥೆಯ ಮೇಲೆ ಆಧಾರಿತವಾದ ಒಂದು ಸಾಂಕೇತಿಕ ನಿರೂಪಣೆಯನ್ನು ಬಳಸಿದನು. ಇಸ್ಮಾಯೇಲನು ಅಬ್ರಹಾಮನ ಮಗನಾಗಿದ್ದು "ದಾಸಿಯಾದ" ಹಾಗರಳಲ್ಲಿ ಹುಟ್ಟಿದ್ದನು. ಆಕೆಯು ಮೋಶೆಗೆ ಸೀನಾಯಿ ಪರ್ವತದಲ್ಲಿ ಕೊಡಲ್ಪಟ್ಟ ಹಳೆಯ ಒಡಂಬಡಿಕೆಯನ್ನು ಮಾತ್ರವಲ್ಲದೆ ಭೂಲೋಕದ ಯೆರೂಸಲೇಮ್ ಪಟ್ಟಣವನ್ನು ಸೂಚಿಸುವವಳಾಗಿದ್ದಳು. ಇದಕ್ಕೆ ತದ್ವಿರುದ್ಧವಾಗಿ, ಇಸಾಕನು ಅಬ್ರಹಾಮನಿಗೆ "ಧರ್ಮಪತ್ನಿಯಾದ" ಸಾರಳಲ್ಲಿ ಹುಟ್ಟಿದ ಆತನ ಮಗನಾಗಿದ್ದನು. ಆಕೆಯು ಕ್ರಿಸ್ತನಿಂದ ಸ್ಥಾಪಿಸಲ್ಪಟ್ಟ ಹೊಸ ಒಡಂಬಡಿಕೆಗೆ ಮಾತ್ರವಲ್ಲದೆ ಪರಲೋಕದ ಯೆರೂಸಲೇಮಿಗೆ ಸಮಾನವಾಗಿರುತ್ತಾಳೆ (4:21–27).

ಇಸ್ಮಾಯೇಲನ ಹಾಗೆಯೇ, ಯೆಹೂದ್ಯರು ಸ್ವಾಭಾವಿಕ ವಿಧದಲ್ಲಿ ಹುಟ್ಟಿದವರಾಗಿದ್ದರು. ಹೇಗೂ, ಗಲಾತ್ಯದ ಕ್ರೈಸ್ತರು "ಇಸಾಕನಂತೆ" ಆಗಿದ್ದು ಆ ಮೂಲಕ "ವಾಗ್ದಾನದ ಫಲವಾಗಿ ಹುಟ್ಟಿದ ಮಕ್ಕಳಾಗಿದ್ದರು" (4:28). ದೇವರು ಒಬ್ಬ ಮಗನನ್ನು ಕೊಡುವೆನೆಂದು ಅಬ್ರಹಾಮ ಮತ್ತು ಸಾರಳಿಗೆ ಮಾಡಿದ್ದ ವಾಗ್ದಾನವನ್ನು, ಅವರು ಮಕ್ಕಳನ್ನು ಪಡೆಯುವದಕ್ಕಾಗದಷ್ಟು ವೃದ್ಧರು ಮತ್ತು ಆಕೆಯು ಬಂಜೆತನವುಳ್ಳವಳು ಆಗಿದ್ದಾಗ್ಯೂ ನೆರವೇರಿಸಿದ್ದನು. ಕ್ರೈಸ್ತರ ಹೊಸ, ಆತ್ಮೀಕ ಜನನವು, ನಿನ್ನ ಸಂತಾನದ (ಅಂದರೆ, ಕ್ರಿಸ್ತನ) ಮೂಲಕ ಎಲ್ಲಾ ಜನಾಂಗಗಳನ್ನು ಆಶೀರ್ವದಿಸುವೆನು ಎಂದು ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನದ ನೆರವೇರಿಕೆಯಾಗಿತ್ತು.

ಇಸ್ಮಾಯೇಲನಿಗೆ ಕಿರುಕುಳವನ್ನು ಕೊಟ್ಟ ಪ್ರಕಾರವೇ, ನಂಬಿಕೆಯಿಲ್ಲದ ಯೆಹೂದ್ಯರು ಸಹ ಸಭೆಗೆ ಕಿರುಕುಳವನ್ನು ಕೊಟ್ಟರು. ಸಾರಳು ಹಾಗರಳನ್ನು ಮತ್ತು ಇಸ್ಮಾಯೇಲನನ್ನು ಹೊರಕ್ಕೆ ಹಾಕಬೇಕೆಂದು ಅಬ್ರಹಾಮಿಗೆ ಬೇಡಿಕೊಂಡಳು; ದಾಸಿಯ ಮಗನು ಬಾಧ್ಯತೆಯಲ್ಲಿ ಪಾಲು ಹೊಂದದವನಾಗಿದ್ದನು. ಗಲಾತ್ಯದವರು ತಮ್ಮ ಮಧ್ಯದೊಳಗಿಂದ ಯೆಹೂದಿಕರಣಗೊಳಿಸುವ ವ್ಯಕ್ತಿಗಳನ್ನು ಓಡಿಸಬೇಕಾಗಿತ್ತು (4:29–31).

### “ಬಾಲಬೋಧೆ” (4:3, 9)

4ನೇ ಅಧ್ಯಾಯದಲ್ಲಿ, ಎರಡು ಸಾರಿ ಪೌಲನು “ಮೂಲಪಾಠಗಳ” ಕುರಿತಾಗಿ ಉಲ್ಲೇಖಿಸುತ್ತಾನೆ (4:3, 9; ESV). ಮೊದಲನೆಯ ಸಂದರ್ಭದಲ್ಲಿ, ಆ ಪದವು ಯಾವ ಧರ್ಮಶಾಸ್ತ್ರಕ್ಕೆ ಯೆಹೂದ್ಯರು ಅಧೀನರಾಗಿದ್ದರೋ ಅದನ್ನು ಸೂಚಿಸುತ್ತದೆ. ಎರಡನೆಯ ಸಾರಿ ಕಾಣಿಸಿಕೊಳ್ಳುವ ಪದವು ಅನ್ಯಜನರಿಗೆ ಸಂಬಂಧಿಸಿರುತ್ತದೆ, ಮತ್ತು ಅದಕ್ಕೆ ಎರಡು ಅರ್ಥಗಳಿರುತ್ತವೆ. “ಪುನಃ ಅದಕ್ಕೆ ತಿರುಗಿಕೊಳ್ಳುವದು” ಎಂಬ ಪದಗುಚ್ಛವು “ಬಾಲಬೋಧೆಯನ್ನು” ಅನ್ಯಧರ್ಮಿಯ ವಿಗ್ರಹಾರಾಧನೆಗೆ (ಗಲಾತ್ಯದವರು ಪೂರ್ವದಲ್ಲಿ ಅದನ್ನು ಮಾಡುತ್ತಿದ್ದವರು) ಮಾತ್ರವಲ್ಲದೆ ಧರ್ಮಶಾಸ್ತ್ರಕ್ಕೆ (ಯೆಹೂದಿಕರಣಗೊಳಿಸುವವರ ಪ್ರಭಾವಕ್ಕೊಳಗಾಗಿ ಅವರು ಅದನ್ನು ಸ್ವೀಕರಿಸಿಕೊಳ್ಳುವ ಹಂತದಲ್ಲಿದ್ದರು) ಸಹ ಸಂಬಂಧ ಪಡಿಸುತ್ತದೆ. ಇವರೆಡರಲ್ಲಿ ಯಾವದೂ ಅವರನ್ನು ರಕ್ಷಿಸುವ ಶಕ್ತಿಯನ್ನು ಹೊಂದಿರಲಿಲ್ಲ.

ಧರ್ಮಶಾಸ್ತ್ರವು ಕ್ರಿಸ್ತನು ಬರಲಿದ್ದ ಸಮಯದ ತನಕ ನಡಿಸುವದಕ್ಕೆ ಅವಶ್ಯಕವಾದ ಸಾಧನವಾಗಿತ್ತು. ಒಬ್ಬ ಮಗುವಿಗೆ ಅಸ್ಪಷ್ಟವಾದ ವಿಚಾರಗಳನ್ನು ಅರ್ಥಮಾಡಿಕೊಳ್ಳಬೇಕಾದ ಸ್ಪರ್ಶಿಸಬಲ್ಲಂಥ ಸಹಾಯಗಳ ಅಗತ್ಯವಿರುತ್ತದೆ. ನಾವು ಅನೇಕ ವೇಳೆ ನಮ್ಮ ಮಕ್ಕಳಿಗೆ ಕಲಿಸುವದಕ್ಕಾಗಿ ವೀಕ್ಷಣ ಸಾಧನಗಳನ್ನು ಬಳಸುತ್ತೇವೆ. ಇಸ್ರಾಯೇಲ್ಯರು ಕೂಸುತನದಲ್ಲಿರುವ ವೇಳೆ ಅವರೊಂದಿಗೆ ಸಂವಹನ ನಡಿಸುವದಕ್ಕೆ ದೇವರು ದೃಶ್ಯ ಚಿತ್ರಗಳನ್ನು ಬಳಸಿದನು ಮತ್ತು ಸಾಮ್ಯಗಳ ನಟಿಸಿ ತೋರಿಸಿದನು. ಇಂದು ಮಕ್ಕಳು ಮೂಲಭೂತ ಸಾಧನಗಳನ್ನು ಮತ್ತು ಕಲಿಕೆಯ ಪರಿಭಾಷೆಯನ್ನು ಕಲಿತುಕೊಳ್ಳಲು “ಪ್ರಾಥಮಿಕ ಶಾಲೆ”ಗೆ ಹೋಗುತ್ತಾರೆ: ಅವರು ಓದುವ, ಗಣೀತದ, ಮತ್ತು ಇತರ ಕ್ಷೇತ್ರಗಳ ಕೌಶಲವನ್ನು ಕಲಿತುಕೊಳ್ಳಬೇಕಾದರೆ ಮೊದಲು ಅಕ್ಷರಮಾಲೆಯನ್ನು ಮತ್ತು ಸಂಖ್ಯೆಗಳನ್ನು ತಿಳಿದುಕೊಳ್ಳತಕ್ಕದ್ದು. ಈ ಮೂಲಭೂತ ಸಂಗತಿಗಳಿಲ್ಲದೆ ಹೋದರೆ, ಶಿಕ್ಷಣದ ಇಡೀ ಪ್ರಕ್ರಿಯೆಯು ಅಸಾಧ್ಯವಾಗುತ್ತದೆ. ಮಗುವು ಈ ತತ್ವಗಳನ್ನು ಗ್ರಹಿಸಿಕೊಳ್ಳಲು ಶಕ್ತನಾದರೆ, ಆತನು “ಪ್ರೌಢ ಶಿಕ್ಷಣ”ಕ್ಕೆ ಸಾಗುತ್ತಾನೆ. ಅದೇ ರೀತಿಯಲ್ಲಿಯೇ, ಧರ್ಮಶಾಸ್ತ್ರವು ತನ್ನ ಉದ್ದೇಶವನ್ನು ನೆರವೇರಿಸಿತ್ತು; ಆದರೆ, ಕ್ರಿಸ್ತನು ಬಂದ ಬಳಿಕ, ಪುನಃ ಧರ್ಮಶಾಸ್ತ್ರದ ಕಡೆಗೆ ತಿರುಗಿಕೊಳ್ಳುವದಕ್ಕೆ ಕಾರಣವೇ ಇರಲಿಲ್ಲ.

### ವಿಮೋಚಕನಾದ ಯೇಸು (4:4, 5)

4:4, 5 ವಚನಗಳಲ್ಲಿ, ಪೌಲನು ಹೀಗೆ ಬರೆದನು, “ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಧೀನನಾಗಿಯೂ ಬಂದನು.” ಈ ಮಾತುಗಳು ಒತ್ತಿ ಹೇಳುವದೇನೆಂದರೆ, ಸರಿಯಾದ ಕಾಲದಲ್ಲಿಯೇ, ಮನುಷ್ಯನನ್ನು ಪಾಪದ ದಾಸತ್ವದೊಳಗಿಂದ ಬಿಡಿಸುವದಕ್ಕಾಗಿ ತನ್ನ ಮಗನನ್ನು ಭೂಮಿಗೆ ಕಳುಹಿಸಿ ಕೊಟ್ಟನು ಎಂಬುದೆ (ನೋಡಿರಿ ಯೋಹಾನ 8:31-36). ಇಬ್ರಿಯರಿಗೆ ಪತ್ರಿಕೆಯ ಲೇಖಕನು ಯೋಚನೆಯನ್ನು ಈ ಮಾತುಗಳಲ್ಲಿ ವ್ಯಕ್ತಪಡಿಸಿದನು:

> ಇದಲ್ಲದೆ ಮಕ್ಕಳು ರಕ್ತ ಮಾಂಸಧಾರಿಗಳಾಗಿರುವದರಿಂದ ಆತನೂ ಅವರಂತೆಯೇ ಆದನು. ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿಬಿಡುವದಕ್ಕೂ, ಮರಣಭಯದ ದೆಸೆಯಿಂದ ತಮ್ಮ ಜೀವಮಾನದಲ್ಲೆಲ್ಲಾ

ದಾಸತ್ವದೊಳಗಿದ್ದವರನ್ನು ಬಿಡಿಸುವದಕ್ಕೂ ಅವರಂತೆ ರಕ್ತಮಾಂಸಧಾರಿಯಾದನು (ಇಬ್ರಿಯ 2:14, 15).

ಆದದರಿಂದ ಕ್ರಿಸ್ತನು ಭೂಲೋಕದೊಳಗೆ ಬರುವಾಗ - [ದೇವರೇ,] ಯಜ್ಞನೈವೇದ್ಯಗಳು ನಿನಗೆ ಇಷ್ಟವಾಗಿರಲಿಲ್ಲ, ನನಗೆ ದೇಹವನ್ನು ಸಿದ್ಧಮಾಡಿಕೊಟ್ಟಿ (ಇಬ್ರಿಯ 10:5).

ಯೇಸು ಕ್ರಿಸ್ತನು ಒಂದೇ ಸಾರಿ ದೇಹ ಸಮರ್ಪಣೆಮಾಡಿ ದೇವರ ಚಿತ್ತವನ್ನು ನೆರವೇರಿಸಿದ್ದರಿಂದಲೇ ನಾವು ಶುದ್ಧರಾದೆವು (ಇಬ್ರಿಯ 10:10).

ಇವುಗಳು ಮತ್ತು ಇತರ ವಾಕ್ಯಭಾಗಗಳಿಂದ, ಮನುಷ್ಯನ ವಿಮೋಚನೆಯನ್ನು ಜಾರಿಗೆ ತರಬೇಕಾದರೆ ಯೇಸುವು ಶರೀರಧಾರಿಯಾಗಿ ಸಾಯುವದು ಅಗತ್ಯವಿತ್ತದೆಂಬುದು ಸ್ಪಷ್ಟವಾಗುತ್ತದೆ.[56] ಇದು ದೇವರು "ಅನಾದಿಕಾಲದಿಂದ ಮಾಡಿದ ಸಂಕಲ್ಪದ" ನೆರವೇರಿಕೆಯಾಗಿತ್ತು (ಎಫೆಸ 3:11). ಹೀಗಿದ್ದರೂ, ಆತನು ಗೆತ್ಸೇಮನೆಯಲ್ಲಿ ಅನುಭವಿಸಿದ ಮಾನಸಿಕ ತಳಮಳವನ್ನು ಯೋಚಿಸುವಾಗ ಹೃದಯವು ಕಿತ್ತು ಬರುವಂತಾಗುತ್ತದೆ. ಆತನು ತನ್ನ ಮುಂದಿನ ಗಮ್ಯತೆಯನ್ನು ತಿಳಿದವನಾಗಿ ಹೋರಾಟವನ್ನು ಅನುಭವಿಸಿದನು ಆದರೆ ಅದೇ ವೇಳೆಯಲ್ಲಿ ದೇವರಿಗೆ ಅಸಾಧ್ಯವಾದದ್ದು ಯಾವದೂ ಇಲ್ಲವೆಂದು ಬಲ್ಲವನಾಗಿದ್ದನು. ಆತನು ಬಹಳ ಆಸಕ್ತಿಯಿಂದ "ಸಾಧ್ಯವಾದರೆ ಆ ಗಳಿಗೆ ತನ್ನನ್ನು ಬಿಟ್ಟುಹೋಗುವಂತೆ" ಮಾಡಬೇಕೆಂದು ದೇವರನ್ನು ಪ್ರಾರ್ಥಿಸಿದನು. ಆತನು "ಅಪ್ಪಾ, ತಂದೆಯೇ, ನಿನಗೆ ಎಲ್ಲವೂ ಸಾಧ್ಯ; ಈ ಪಾತ್ರೆಯನ್ನು ನನ್ನಿಂದ ತೊಲಗಿಸು; ಆದರೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ" ಎಂದು ಕೂಗಿದನು (ಮಾರ್ಕ 14:36). ಆತನ ವೇದನೆಯು ಎಷ್ಟೊಂದು ತೀಕ್ಷ್ಣವಾಗಿತ್ತೆಂದರೆ "ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು" (ಲೂಕ 22:44).

ಯೇಸುವು ತಂದೆಯ ಚಿತ್ತವನ್ನು ಮಾಡಬೇಕೆಂದು ಬಯಸಿದನು ಮತ್ತು ಹಾಗೆ ಮಾಡುವ ಮೂಲಕವಾಗಿ ಪೋಷಣೆಯನ್ನು ಸಹ ಪಡೆಯುವವನಾಗಿದ್ದನು (ಯೋಹಾನ 4:31-34); ಆದಾಗ್ಯೂ, ಬೇರೆ ಯಾವ ಸಂದರ್ಭದಲ್ಲಿಯೂ ಇಲ್ಲದ ರೀತಿಯಲ್ಲಿ, ಈ ವೇಳೆ ಆತನ ಚಿತ್ತವು ಇಲ್ಲಿ ತಂದೆಯ ಚಿತ್ತಕ್ಕೆ ವಿರುದ್ಧವಾಗಿ ಪರೀಕ್ಷಿಸಲ್ಪಟ್ಟಿತ್ತು. ಆತನ ವ್ಯಕ್ತಿತ್ವದ ಮತ್ತು ಗುಣದ ಭಾಗವಾಗಿ ಮಾರ್ಪಟ್ಟಿದ್ದ ಈ ದೇಹದಲ್ಲಿ ಜೀವಿಸಿದವನಾಗಿ, ಆತನಿಗೆ ಸ್ವಲ್ಪ ಹೊತ್ತಿನಲ್ಲಿ ಸಂಭವಿಸಲಿದ್ದ ಸಂಗತಿಯನ್ನು ಬಯಸುವದಕ್ಕೆ ಸಾಧ್ಯವಾಗಲಿಲ್ಲ. ದೈವಸಂಭೂತನಾಗಿ, ಯೇಸುವು ತನ್ನ ಚಿತ್ತವನ್ನು ತಂದೆಯ ಚಿತ್ತದೊಂದಿಗೆ ಐಕ್ಯಗೊಳಿಸಿಕೊಳ್ಳಲು ಸಂತೋಷಿಸಿದನು; ಆದರೆ, ಮನುಷ್ಯನಾಗಿ, ಆತನ ಮಾನವ ಸ್ವಭಾವಕ್ಕೆ ಸಂಬಂಧಪಟ್ಟದ್ದೆಲ್ಲವೂ ದೈವಿಕ ಚಿತ್ತವೆಂದು ಆತನಿಗೆ ಗೊತ್ತಿದ್ದ ಸಂಗತಿಯಿಂದ ತಪ್ಪಿಸಿಕೊಳ್ಳಲು ಯಾವದಾದರೂ ದಾರಿಯನ್ನು ಮಾಡಬೇಕೆಂದು ಕೂಗುತ್ತಿತ್ತು. ಗೆತ್ಸೇಮನೆ ತೋಟದಲ್ಲಿಯೇ ಯೇಸುವು ತನ್ನ ಚಿತ್ತವನ್ನು ತ್ಯಾಗ ಮಾಡಿ ತಂದೆಯ ಚಿತ್ತಕ್ಕೆ ಒಪ್ಪಿಸಿಕೊಟ್ಟಾಗ ಯೇಸುವಿನ ಆತ್ಮವು ಆತನ ಜೀವಿತದ ಸರ್ವೋಚ್ಛ ಜಯವನ್ನು ಗಳಿಸಿತು: "ಆದರೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ" (ಮಾರ್ಕ 14:36). ಆ ಸ್ಥಳದಲ್ಲಿಯೇ, ಮಾನವ ರೂಪದಲ್ಲಿದ್ದ ದೇವಕುಮಾರನು "ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು . . . ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು" (ಇಬ್ರಿಯ 5:8, 9).

**ವೇದಿಕೆಯನ್ನು ಸಿದ್ಧಗೊಳಿಸುವದು (4:4)**[57]

ಶಾಸ್ತ್ರಗಳನ್ನು ಗಮನವಿಟ್ಟು ಓದುವ ವಾಚಕನಿಗಾದರೋ, ಅಬ್ರಹಾಮನ ಸಂತಾನ ಅನುಭವಿಸಿದ ಸಂಕಷ್ಟಗಳು ಅನೇಕ ವಿಧವಾದವುಗಳೆಂದು ಮತ್ತು ಅನೇಕ ಸಾರಿ ನೋವುಕರವೆಂದು ತೋರಬಹುದು, ಅನೇಕ ಸಾರಿ ವಿನಾಶಕಾರಿಯಾಗಿ ಸಹ ಕಾಣಿಸುತ್ತದೆ; ಆದರೆ ದೇವರ ಉಪದೇಶದಲ್ಲಿ, ಎಲ್ಲವೂ ಉದ್ದೇಶಭರಿತವಾಗಿದ್ದವು. ಐಗುಪ್ತದಲ್ಲಿ ಇಸ್ರಾಯೇಲ್ ಜನಾಂಗದ ಜನ್ಮವಾದದ್ದು ಅರಣ್ಯದಲ್ಲಿನ ಅಲೆದಾಟಗಳಲ್ಲಿ ಅದರ ದುಃಖಕರ, ನಂಬಿಕೆಯಿಲ್ಲದ ಇತಿಹಾಸಕ್ಕೆ ದಾರಿ ಮಾಡಿತ್ತು. ನ್ಯಾಯಸ್ಥಾಪಕರ ಅಡಿಯಲ್ಲಿ ಅದರ ಇಚ್ಛಾಪೂರ್ವಕ ಕಾಲವು ಆರಂಭಿಕ ಅರಸರ ಸುವರ್ಣ ಯುಗಕ್ಕೆ ನಡಿಸಿತ್ತು. ಬಹಳಷ್ಟು ಅರಸರ ಆಳ್ವಿಕೆಯ ವೇಳೆಯಲ್ಲಿ ಇಸ್ರಾಯೇಲ್ಯರ ಭಕ್ತಿಹೀನತೆಯು ಅವರನ್ನು ಅಶ್ಯೂರ್ಯದಲ್ಲಿ ಹಾಗೂ ಬಾಬೆಲಿನಲ್ಲಿ ಚದುರಿ ಹೋಗುವಂತೆ ಮಾಡಿತ್ತು ಮತ್ತು ಬಳಿಕ ಜೆರುಬ್ಬಾಬೆಲ, ಎಜ್ರನು, ಮತ್ತು ನೆಹಮೀಯರ ನಾಯಕತ್ವದ ಅಡಿಯಲ್ಲಿ ಸಂಭ್ರಮದಿಂದ ಸ್ವದೇಶಕ್ಕೆ ಮರಳಿ ಬರುವಂತಾಗಿತ್ತು. ಮಹಾ ಅಲೆಗ್ಸಾಂಡರನ ನಾಯಕತ್ವದಲ್ಲಿ ಮಕೆದೋನ್ಯರನ್ನು ಜಯಿಸಿದ್ದು (ಮತ್ತು ಅದಾದ ನಂತರದಲ್ಲಿ ಉಂಟಾದ ಸಾಂಸ್ಕೃತಿಕ, ಭಾಷೆಯ, ಮತ್ತು ಧಾರ್ಮಿಕ ಬದಲಾವಣೆಗಳು) ಸಿರಿಯಾ ಮತ್ತು ಐಗುಪ್ತದ ಅರಸರ ಕೈಗಳಲ್ಲಿ ಶ್ರಮೆಗಳುಂಟಾಗುವಂತೆ ಮಾಡಿತ್ತು. ಮಹಿಮಕರವಾದ, ಆದರೆ ಬಹಳ ಕ್ಲುಪ್ತವಾಗಿದ್ದ, ಸ್ವಾತಂತ್ರವು ಮಕಬ್ಬಿಯರ ನಾಯಕತ್ವದಲ್ಲಿ ದೊರೆತು Pompey ಮತ್ತು ರೋಮನ್ನರ ಆಕ್ರಮಣದಿಂದಾಗಿ ನಿರೀಕ್ಷೆಗೆ ತಣ್ಣೀರು ಎರಚಿದಂತಾಗಿತ್ತು. ಈ ಎಲ್ಲಾ ತೀವ್ರವಾದ ಬದಲಾವಣೆಗಳು, ಹತ್ತಿರದ ಹಾಗೂ ದೂರದ ಜನರಲ್ಲೆಲ್ಲಾ ಪರಸ್ಪರ ಘರ್ಷಣೆಯನ್ನು ತಂದಿಟ್ಟು, ನಂಬಿಗಸ್ತರಾಗಿ ಉಳಿದಿದ್ದ ಶೇಷ ಜನರಲ್ಲಿ "ಇಸ್ರಾಯೇಲ್ ಜನರನ್ನು ಸಂತೈಸುವಿಕೆ" ಮತ್ತು "ಯೆರೂಸಲೇಮಿನ ಬಿಡುಗಡೆಯನ್ನು" ಕುರಿತಾದ ನಿರೀಕ್ಷೆಯನ್ನು ತೀವ್ರಗೊಳಿಸುವಂತದ್ದಾಗಿತ್ತು (ಲೂಕ 2:25, 38).

ಅಬ್ರಹಾಮನ ಮೊಮ್ಮಗನಾದ ಯಾಕೋಬನಿಗಾಗಲಿ (ಇಸ್ರಾಯೇಲ್) ಅಥವಾ ಆತನ ಹೆಸರಿನಿಂದ ಕರೆಯಲ್ಪಡುವ ಜನಾಂಗಕ್ಕಾಗಲಿ ದೇವರು ಅವರ ವಿಷಯದಲ್ಲಿ ಏನು ಮಾಡುತ್ತಿರುವನೆಂಬುದು ಗೊತ್ತಿರಲಿಲ್ಲ. ಅಷ್ಟೇ ಅಲ್ಲದೆ, ಐಗುಪ್ತಕ್ಕೆ ವಲಸೆ ಹೋದ ಎಪ್ಪತ್ತು ಮಂದಿ ವಂಶಜರಿಂದ ಅದು ಒಂದು ಜನಾಂಗವಾಗಿ ಜನ್ಮ ತಾಳುವದಕ್ಕೆ ಮುನ್ನವೇ, "ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು" (ಎಫೆಸ 3:9) ದೇವರ ನಿತ್ಯವಾದ ಉದ್ದೇಶದ ಮೇರೆಗೆ ಆಕಾರಕ್ಕೆ ಬರಲಾರಂಭಿಸಿತ್ತು. ಐಗುಪ್ತವು ನಿರ್ದಿಷ್ಟವಾದ ಉದ್ದೇಶಕ್ಕಾಗಿ ಬಳಸಲ್ಪಟ್ಟ ಪ್ರಕಾರವೇ, ನಂತರದಲ್ಲಿ ಒಂದಾದ ಮೇಲೊಂದರಂತೆ ಬರುವ ದೇಶಗಳನ್ನು ದೇವರು ಇತರ ಉದ್ದೇಶಗಳಿಗೋಸ್ಕರ ಬಳಸಲಿದ್ದನು. ಉತ್ತರದಲ್ಲಿದ್ದ ಇಸ್ರಾಯೇಲ್ ದೇಶವನ್ನು ಅಶ್ಶೂರಕ್ಕೆ ಸೆರೆಯಾಗಿ ಹೋಗುವದು ಒಂದು ಭಯಂಕರವಾದ ಹೊಡೆತವಾಗಿತ್ತು, ದಕ್ಷಿಣದ ಯೆಹೂದ ರಾಜ್ಯಕ್ಕೆ ಸಹ ಅದೊಂದು ಭಯಂಕರ ಹೊಡೆತವಾಗಿತ್ತು. ಹೇಗೂ, ಈ ದುರಂತಕರವಾದ ಸೋಲಿನಿಂದ ಸಹ ದೇವರ ಜನರು ವಿಗ್ರಹಾರಾಧನೆ ಮತ್ತು ಆತನಿಗೆ ಅವಿಧೇಯತೆಯನ್ನು ತೋರಿಸುವದರಿಂದಾಗುವ ಭಯಾನಕ ಪರಿಣಾಮಗಳ ಕುರಿತಾಗಿ ಪಾಠವನ್ನು ಕಲಿತುಕೊಳ್ಳಲಿಲ್ಲ. ಆದದರಿಂದ, ಯೆಹೂದಕ್ಕೆ ನೆಬೂಕದ್ನೆಚ್ಚರನಿಂದ ನಾಶನಕ್ಕೊಳಗಾಗಬೇಕೆಂಬ ತೀರ್ಪಯ ಉಂಟಾಗಿತ್ತು; ಯೆರೂಸಲೇಮ್ ಮತ್ತು ಅದರ ದೇವಾಲಯ ನಾಶವಾದವು, ಮತ್ತು ಜನರನ್ನು ಸೆರೆಯಾಳುಗಳಾಗಿ ಇರುವದಕ್ಕಾಗಿ ಬಾಬೆಲಿಗೆ ಕರೆದೊಯ್ಯಲಾಯಿತು. ಈ ಘಟನೆಗಳು ಯೆಹೂದ್ಯರಲ್ಲಿ ಹತಾಶೆಯನ್ನು ತುಂಬಿಸಿದ್ದವು, ಆದರೆ ಈ ಸಮಯದಲ್ಲಿ ಕೊನೆಗೂ ಪಾಠವನ್ನು ಕಲಿತುಕೊಳ್ಳಲಾಗಿತ್ತು. ಇದಾದ ಮೇಲೆ ಇನ್ನೆಂದೂ

ಅವರಲ್ಲಿ ವಿಗ್ರಹಾರಾಧನೆಯ ಪಾಪವು ಇರುವದಾಗಿ ನಾವು ಓದುವದೇ ಇಲ್ಲ.

ಸೆರೆವಾಸದ ವೇಳೆ, ದಾನಿಯೇಲನು ನಾಲ್ಕು ಸಾಮ್ರಾಜ್ಯಗಳ - ಬಾಬೆಲ, ಮೇದ್ಯ-ಪರ್ಸಿಯ, ಮಕೆದೋನಿಯ, ಮತ್ತು ರೋಮನ್ - ಮತ್ತು ಕಾಲವು ಪರಿಪೂರ್ಣವಾಗುವದಕ್ಕಾಗಿ ಮತ್ತು ಮೆಸ್ಸೀಯನ ಬರೋಣಕ್ಕಾಗಿ ವೇದಿಕೆಯನ್ನು ಸಿದ್ಧಗೊಳಿಸುವದರಲ್ಲಿ ಈ ಪ್ರತಿಯೊಂದು ಸಾಮ್ರಾಜ್ಯವು ನಿರ್ವಸಲಿದ್ದ ಪಾತ್ರದ ಕುರಿತಾಗಿ ಗಮನಾರ್ಹವಾದ ರೀತಿಯಲ್ಲಿ ಪ್ರವಾದನೆಯನ್ನು ನುಡಿದನು (ದಾನಿಯೇಲ 2:26-45). ಮೊದಲನೆಯ ಸಾಮ್ರಾಜ್ಯವಾದ ಬಾಬೆಲ್, ಯೆರೂಸಲೇಮಿನಲ್ಲಿದ್ದ ದೇವಾಲಯವನ್ನು ನಾಶಗೊಳಿಸಿದ್ದರ ಕಾರಣದಿಂದಾಗಿ, ಸೆರೆವಾಸದಲ್ಲಿದ್ದ ಯೆಹೂದ್ಯರು ಸಭಾಮಂದಿರಗಳಲ್ಲಿ ಕೂಡಿ ಬರುವದಕ್ಕೆ ಆರಂಭಿಸಿದರು. ಈ ಹೊಸ ಸಂಸ್ಥಾಪನೆಯು ಮೆಡಿಟೆರ್ರೇನಿಯದ ಕಣಿವೆ ಮತ್ತು ಅದರಾಚೆಯ ಪ್ರದೇಶಗಳುದ್ದಕ್ಕೂ ದೇವರ ವಾಕ್ಯವು ಸಂರಕ್ಷಿಸಲ್ಪಟ್ಟಿತು. ಸಂಪ್ರದಾಯದ ಪ್ರಕಾರವಾಗಿ, ಹತ್ತು ಮಂದಿ ಯೆಹೂದಿ ಗಂಡಸರು ಆರಾಧನೆಗೋಸ್ಕರ ಒಂದಾಗಿ ಕೂಡಿ ಬರಬಹುದಾದ ಯಾವದೇ ಸ್ಥಳದಲ್ಲಿ ಆಗಲಿ, ಶಾಸ್ತ್ರಗಳನ್ನು ಅಧ್ಯಯನ ಮಾಡಿ ಅದರ ಜ್ಞಾನವನ್ನು ಹೊರಗಡೆಯಲ್ಲಿ ಹರಡಿಸಲಾಗುತ್ತಿತ್ತು. ಸಭಾಮಂದಿರಗಳು ಯೆಹೂದಿ ಜೀವನ ಶೈಲಿಯನ್ನು ಸಂರಕ್ಷಿಸಿದ್ದು ಮಾತ್ರವೇ ಆಗಿರಲಿಲ್ಲ ಆದರೆ ಯೆಹೂದಿ ಜೀವನ ಶೈಲಿಯಲ್ಲಿನ ಕಟ್ಟಳೆಗಳು ಮತ್ತು ಅತ್ಯುನ್ನತವಾದ ನೈತಿಕ ಮಾನದಂಡಗಳ ಕಡೆಗೆ ಆಕರ್ಷಿತರಾಗುತ್ತಿದ್ದ ಅನ್ಯಧರ್ಮಿಯರ ಮೇಲೆಯೂ ಪ್ರಭಾವವನ್ನು ಬೀರಿತ್ತು.

ದಾನಿಯೇಲನಿಂದ ಪ್ರವಾದಿಸಲ್ಪಟ್ಟ ಎರಡನೆಯ ಸಾಮ್ರಾಜ್ಯವು ಮೇದ್ಯ ಮತ್ತು ಪರ್ಸಿಯನ್ನರದ್ದಾಗಿತ್ತು. ಈ ಸ್ಥಿತ್ಯಂತರದ ಕುರಿತಾಗಿ ದಾನಿಯೇಲ 5:30, 31ರಲ್ಲಿ ಬಣ್ಣಿಸಲ್ಪಟ್ಟಿದೆ: "ಅದೇ ರಾತ್ರಿಯಲ್ಲಿ ಕಸ್ದೀಯ ರಾಜನಾದ ಬೇಲ್ಶಚ್ಚರನು ಕೊಲ್ಲಲ್ಪಟ್ಟನು. ಮೇದ್ಯಯನಾದ ದಾರ್ಯಾವೆಷನು ರಾಜ್ಯವನ್ನು ತೆಗೆದುಕೊಂಡನು. ಅವನ ವಯಸ್ಸು ಹೆಚ್ಚು ಕಡಿಮೆ ಅರುವತ್ತೆರಡು."

ಮೇದ್ಯರು ಮತ್ತು ಪರ್ಸಿಯದವರು ನಂಟು ಉಳ್ಳವರು ಮತ್ತು ಮಿತ್ರಪಡೆಗಳಾಗಿದ್ದರು. ಅವರನ್ನು ದಾನಿಯೇಲನು ಒಂದೇ ಸಾಮ್ರಾಜ್ಯವಾಗಿ ಕಾಣುತ್ತಾನೆ, ಅದು 8:20ರಿಂದ ಸ್ಪಷ್ಟವಾಗುತ್ತದೆ: "ನೀನು ನೋಡಿದ ಎರಡು ಕೊಂಬಿನ ಟಗರು ಮೇದ್ಯ ಮತ್ತು ಪಾರಸಿಯ ರಾಜ್ಯ." ಯೆಹೂದ್ಯರ ಇತಿಹಾಸದಲ್ಲಿ ಪರ್ಸಿಯದವರು ನಿರ್ವಹಿಸಿದ ಪ್ರಮುಖ ಪಾತ್ರವು ಅವರನ್ನು ಬಿಡುಗಡೆಗೊಳಿಸಿ ಸ್ವದೇಶಕ್ಕೆ ಹೋಗುವಂತೆ ಮತ್ತು ಯೆರೂಸಲೇಮಿನಲ್ಲಿ ದೇವಾಲಯದ ಮರುನಿರ್ಮಾಣ ಮಾಡುವಂತೆ ಕೋರೇಷನು ಹೊರಡಿಸಿದ ರಾಜಾಜ್ಞೆಯನ್ನೊಳಗೊಂಡಿತ್ತು (ಎಜ್ರನು 1:1, 2).

ದಾನಿಯೇಲನು ಮುಂತಿಳಿಸಿದ ಮೂರನೆಯ ಸಾಮ್ರಾಜ್ಯವು ಮಕೆದೋನ್ಯದವರದ್ದಾಗಿತ್ತು, ಅದು "ಗ್ರೀಕ್ ರಾಜ್ಯ" ಎಂದು ಕರೆಯಲ್ಪಟ್ಟಿದೆ; ಅದು ಮೇದ್ಯ ಮತ್ತು ಪರ್ಸಿಯ ರಾಜ್ಯಗಳನ್ನು ಪ್ರತಿನಿಧಿಸುವ ಟಗರನ್ನು ಹೊಡೆದುರುಳಿಸುವ "ಹೋತ" ಎಂಬುದಾಗಿ ಬಣ್ಣಿಸಲ್ಪಟ್ಟಿದೆ (ದಾನಿಯೇಲ 8:21). ಎರಡನೆಯ Philipನ ಕಾಲದ ತನಕವೂ, ಮಕೆದೋನ್ಯವು ಗ್ರೀಕ್ ಗೋತ್ರಗಳ ಇತಿಹಾಸದಲ್ಲಿ ಅಷ್ಟಾಗಿ ಮಹತ್ವಪೂರ್ಣವಲ್ಲದ ಪಾತ್ರವನ್ನು ನಿರ್ವಹಿಸಿತ್ತು. ಹೇಗೂ, ಫಿಲಿಪ್ಪನು ಗಮನಾರ್ಹವಾದ ರೀತಿಯಲ್ಲಿ ಒಬ್ಬ ಚಾಣಾಕ್ಷ ರಾಜಕಾರಣಿ ಮತ್ತು ಅಂಜಿಕೆಯಿಲ್ಲದ ಮಿಲಿಟರಿ ಸೇನಾನಾಯಕನಾಗಿದ್ದನು. ಆತನು ಮೊದಲು ತನ್ನ ದೇಶ ಬಾಂಧವರನ್ನು ಒಂದು ಶಕ್ತಿಶಾಲಿ ಮಿಲಿಟರಿ ಶಕ್ತಿಯಾಗಿ ಒಗ್ಗೂಡಿಸಿದನು ಮತ್ತು ಬಳಿಕ ದಕ್ಷಿಣದ ದಿಕ್ಕಿನಲ್ಲಿದ್ದ ತನ್ನ ಗ್ರೀಕ್ ಸಂಬಂಧಿಕರನ್ನು ಜಯಿಸಿಕೊಂಡನು. ಫಿಲಿಪ್ಪನು ಅಲೆಗ್ಸಾಂಡರನೆಂಬ

ಹುಡುಗನಿಗೆ ತಂದೆಯಾದನು, ಮತ್ತು ಆ ಬಾಲಕನಿಗೆ ಲಭ್ಯವಿರುವ ಅತ್ಯುತ್ತಮವಾದ ಉಪದೇಶಕನು ದೊರಕುವಂತೆ ಮಾಡಿದನು, ಆತನು ಯಾರೆಂದರೆ ಸುಪ್ರಸಿದ್ಧ ತತ್ವಜ್ಞಾನಿಯಾದ ಅರಿಸ್ಟಾಟಲ್ ಎಂಬವನು. ಈ ಮೂಲಕ ಆತನು ಬಾಲಕನಿಗೆ ಸಾಧ್ಯವಾದಷ್ಟು ಅತ್ಯುತ್ತಮ ಶಿಕ್ಷಣ ಸಿಕ್ಕುವಂತೆ ಮಾಡಿದನು. ಕೆಲವು ಸಾರಿ ಆತನ ಲಂಗುಲಗಾಮಿಲ್ಲದ ಕೋಪದ ಮತ್ತು ಕೆಟ್ಟ ವರ್ತನೆಯ ಕಾರಣದಿಂದಾಗಿ "ಬಾರ್ಬರಿಯನ್ ಫಿಲಿಪ್ಪ" ಎಂದು ಕರೆಯಲ್ಪಡುತ್ತಿದ್ದನು, ಹೀಗಿದ್ದರೂ ಫಿಲಿಪ್ಪನು ಅಥೇನೆಯ ಸರ್ವೋಚ್ಚವಾದ ಸಂಸ್ಕೃತಿಯಿಂದ ಪ್ರಭಾವಿತನಾಗಿದ್ದನು ಮತ್ತು ಆತನ ಕಾಲದಲ್ಲಿದ್ದ ಅತ್ಯಂಥ ಶ್ರೇಷ್ಠ ಸಾಹಿತ್ಯ ವ್ಯಕ್ತಿಗಳನ್ನು ತನ್ನ ಆಸ್ಥಾನಕ್ಕೆ ಆಮಂತ್ರಿಸಿದ್ದನು. ಈ ಮನುಷ್ಯನ ಕುರಿತಾಗಿ ಇನ್ನೂ ಬಹಳಷ್ಟನ್ನು ಹೇಳಬಹುದಾಗಿದೆ, ಆದರೆ ಆತನು ನಿರ್ವಹಿಸಿದ ಪ್ರಮುಖವಾದ ಪಾತ್ರದಲ್ಲಿ ಆತನ ಕಾಲದ ಅತ್ಯಂಥ ಶಕ್ತಿಶಾಲಿ ಮಿಲಿಟರಿ ಯಂತ್ರವನ್ನು ಒಂದುಗೂಡಿಸುವದು ಸೇರಿತ್ತು. ಆತನು ಹತ್ಯೆಗೈಯಲ್ಪಟ್ಟ ಬಳಿಕ, ಆತನ ಮಿಲಿಟರಿ ಯಂತ್ರವು ಹೋಲಿಸಲಿಕ್ಕಾಗದಷ್ಟು ಅಧಿಕ ಪ್ರಸಿದ್ಧನಾದ ಆತನ ಮಗನ ಕೈಯಲ್ಲಿ ಬಿದ್ದಿತ್ತು, ಆತನು ಮುಂದೆ "ಮಹಾ ಅಲೆಗ್ಸಾಂಡರ್" ಎಂದು ಖ್ಯಾತಿ ಹೊಂದಿದನು. ಅಲೆಗ್ಸಾಂಡರ್ ಮುಂದೆ ಪರ್ಸಿಯದವರನ್ನು ಜಯಿಸುವವನಾಗಿದ್ದನು, ಆ ಸಾಮ್ರಾಜ್ಯವು ಆ ಕಾಲದ ತನಕ ಆ ದಿನದ ಅಪರಾಜಿತವಾದ ಅತಿ ದೊಡ್ಡ-ಶಕ್ತಿ ಎಂದು ಪರಿಗಣಿಸಲ್ಪಟ್ಟಿತ್ತು.

ಮೆಸ್ಸೀಯನ ಯುಗದ ಉದಯಕ್ಕೆ ದಾರಿಯನ್ನು ಸಿದ್ಧಪಡಿಸುವಂತೆ ಸಹಾಯವಾಗುವ ಹಾಗೆ ನಾಗರೀಕ ಜಗತ್ತಿನಲ್ಲಿ ಬದಲಾವಣೆಗಳನ್ನು ತರುವಕ್ಕೋಸ್ಕರ ಈ ಯೌವನಸ್ಥನನ್ನು ಉಪಯೋಗಿಸುವದು ನಿಶ್ಚಯವಾಗಿಯೂ ದೇವರ ಯೋಜನೆಯ ಭಾಗವಾಗಿತ್ತು. ಇದು ಸಂಭವಿಸಿದ ಮಹತ್ವಪೂರ್ಣವಾದ ವಿಧಗಳಲ್ಲೊಂದು ಗ್ರೀಕ್ ರಾಷ್ಟ್ರೀಯತೆ, ಗ್ರೀಕ್ ಭಾಷೆ, ಮತ್ತು ಸಂಸ್ಕೃತಿಗಳನ್ನು ಅಭಿವೃದ್ಧಿಗೊಳಿಸಿದ್ದೇ ಆಗಿರುತ್ತದೆ. ಈ ಜೀವನದ ರೀತಿಯು ಅಲೆಗ್ಸಾಂಡರನು ಗಳಿಸಿದ ಮಿಲಿಟರಿ ವಿಜಯಗಳಿಂದಾಗಿಯೇ ಹರಡಿಕೊಂಡಿತ್ತು. ಈ ಜಯಗಳ ಮೂಲಕವಾಗಿ, ಹೆಚ್ಚು ಕಡಿಮೆ ಮೆಡಿಟೆರ್ರೇನಿಯನ್ನಿನ ಪೂರ್ವ ಭಾಗವೆಲ್ಲಾ ಮತ್ತು ಭಾರತದಷ್ಟು ದೂರದ ದೇಶಗಳು ಸಹ ಈ ಗಮನಾರ್ಹವಾದ ಯೌವನಸ್ಥನ ಪ್ರಭಾವದ ಅನುಭವ ಮಾಡಿದವು. ಇಬ್ರಿಯ ಶಾಸ್ತ್ರಗಳು ಗ್ರೀಕ್ ಭಾಷೆಯಲ್ಲಿ ಅನುವಾದಿಸಲ್ಪಟ್ಟಿದ್ದು (ಸ್ಪಷ್ಟವಾಗಿರುವಂತೆ ಆತನ ಹೆಸರನ್ನು ಹೊಂದಿದ್ದ ಅಲೆಗ್ಸಾಂದ್ರಿಯ, ಐಗುಪ್ತದಲ್ಲಿ ಆಗಿತ್ತು[58]) ಮತ್ತು ಈ ಶಾಸ್ತ್ರಗಳು ಅನುವಾದಿಸಲ್ಪಟ್ಟ ಕೊಯಿನೆ (ಸಾಮಾನ್ಯ) ಗ್ರೀಕ್ ಭಾಷೆಯ ಅಭಿವೃದ್ಧಿ ಇವೆರಡೂ ಅಲೆಗ್ಸಾಂಡರನಿಂದಲೇ ಸಾಧ್ಯವಾಗಿತ್ತದೆಂದು ಪರೋಕ್ಷವಾಗಿ ಹೇಳಬಹುದಾಗಿದೆ. ಅನ್ಯಧರ್ಮಿಯ ಜಗತ್ತು ಮಾತ್ರವಲ್ಲ ಆದರೆ ದೇಶದಲ್ಲೆಲ್ಲಾ ಇದ್ದಂಥ ಚದುರಿಸಲ್ಪಟ್ಟಿದ್ದ ಯೆಹೂದ್ಯರ ಸಭಾಮಂದಿರಗಳಲ್ಲಿ ಸಹ ಕೊಯಿನೆ ಗ್ರೀಕ್ ಭಾಷೆಯನ್ನು ಬಳಸುವಂತಾದವು, ಅದು ಮುಂದೆ ಸುವಾರ್ತೆಗಳು ಮತ್ತು ಹೊಸ ಒಡಂಬಡಿಕೆಯ ಇತರ ಪುಸ್ತಕಗಳು ಬರೆಯಲ್ಪಡುವ ಮೂಲ ಭಾಷೆಯಾಗಲಿತ್ತು.

ಅಲೆಗ್ಸಾಂಡರನಿಗೆ ಖಾಸಗಿ ಉಪದೇಶಕನಾಗಿ ಅರಿಸ್ಟಾಟಲ್ ನಿರ್ವಹಿಸಿದ ಪಾತ್ರವು ಗ್ರೀಕ್ ರಾಷ್ಟ್ರೀಯತೆಯು ಅಭಿವೃದ್ಧಿಗೊಳ್ಳುವದರಲ್ಲಿ ಒಂದು ಗಮನಾರ್ಹವಾದ ಅಂಶವಾಗಿತ್ತು. ಈ ಶ್ರೇಷ್ಠ ತತ್ವಜ್ಞಾನಿಯು, "ಮೊನಾರ್ಕೀ" ಮತ್ತು "ಕೊಲೊನೀಸ್" ಎಂಬ ಬಿರುದುಳ್ಳ ಎರಡು ಪ್ರಬಂಧಗಳನ್ನು ನಿರ್ದಿಷ್ಟವಾಗಿ ಅಲೆಗ್ಸಾಂಡರನಿಗೆ ಬರೆದನು. ಗಮನಿಸತಕ್ಕದ್ದೇನೆಂದರೆ, ಮಕೆದೋನ್ಯರು ಗ್ರೀಕ್ ಭಾಷೆಯನ್ನಾಡುತ್ತಿದ್ದರಾದರೂ, ಬಹಳಷ್ಟು ಗ್ರೀಕ್ ಗೋತ್ರದವರ ರೀತಿಯಲ್ಲಿ ಇವರು ಇನ್ನೂ ರಾಜಕೀಯ ತತ್ವಗಳನ್ನು ಒಪ್ಪಿದವರಾಗಿರಲಿಲ್ಲ. ಅವರು ತಮ್ಮ

ಪ್ರಭುಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು, ಆದರೆ ಆಯ್ಕೆಯಾದ ಮೇಲೆ, ಈ ಪ್ರಭುಗಳು ಅರಸರ ಶಕ್ತಿ ಮತ್ತು ಅಧಿಕಾರದಿಂದ ಕಾರ್ಯ ಮಾಡುತ್ತಿದ್ದರು. ಆತನ ತಂದೆಯಾದ ಎರಡನೆಯ ಫಿಲಿಪ್ಪನು ಆಳ್ವಿಕೆ ಮಾಡಿದ ಪ್ರಕಾರವೇ, ಅಲೆಗ್ಸಾಂಡರನು ಸಹ ಮಾಡಿದನು. ವಾಸ್ತವಿಕದಲ್ಲಿ, ಆತನು ಯಾವ ಲಿಬ್ಯದಲ್ಲಿ ಒಬ್ಬ ದೇವರೆಂದು ಘೋಷಿಸಲ್ಪಟ್ಟಿದ್ದನೋ, ಆ ಲಿಬ್ಯದಲ್ಲಿ ಅಮ್ಮೋನನ ದೈವೋಕ್ತಿಗಳ ಸಲಹೆಯನ್ನು ಕೇಳಿದ ಬಳಿಕ, ಆತನು ಅವನ ಮುಂಚೆಯಾಗಲಿ ಅಥವಾ ನಂತರದಲ್ಲಾಗಲಿ ಬೇರೆ ಯಾರೊಬ್ಬರೂ ಇಲ್ಲದ ವಿಧದಲ್ಲಿ ಒಬ್ಬ ಮಹಾರಾಜ ಆದನು. ವಾಸ್ತವದಲ್ಲಿ ಆತನು ಮೂಡಣ ದಿಕ್ಕಿನಲ್ಲಿ ಜಯಿಸಿಕೊಂಡಿದ್ದ ಜನರಿಂದ ಆರಾಧಿಸಲ್ಪಡುತ್ತಿದ್ದನು.

ಮೆಡಿಟೆರ್ರೇನಿಯದ ಕಣಿವೆಯಲ್ಲಿ ಗ್ರೀಕರು ಸ್ಥಾಪಿಸಿದ್ದಷ್ಟು ವಸಾಹತುಗಳನ್ನು ಬೇರೆ ಯಾವ ಜನರೂ ಸ್ಥಾಪಿಸಿರಲಿಲ್ಲ. ಕ್ರಿ.ಪೂ. ಎಂಟನೆಯ ಶತಮಾನದಷ್ಟು ಆರಂಭದಿಂದಲೂ, ಮುಂದಿನ ಮುನ್ನೂರು ವರ್ಷಗಳ ಕಾಲ ಅವರು, ಈ ಮಹಾ ಸಾಗರದ ಸುತ್ತಲೂ (ಫ್ರಾನ್ಸ್, ಇತಾಲ್ಯ, ಉತ್ತರ ಆಫ್ರಿಕಾ, ಮತ್ತು ಆಸ್ಯ ಸೀಮೆಗಳಲ್ಲಿ) ವಸಾಹತುಗಳ ನಿರ್ಮಾಣವನ್ನು ಮುಂದುವರೆಸಿದರು. ಅವರು ಆ ಪ್ರಾಂತ್ಯದ ಬಹುಪಾಲು ದ್ವೀಪಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿದರು. ವಾಸ್ತವಿಕದಲ್ಲಿ, ಪ್ರಾಚೀನ ಬರಹಗಾರರಲ್ಲಿ ಒಬ್ಬನು, ಈ ಕರಾವಳಿಯ ಪ್ರದೇಶಗಳಲ್ಲಿ ಗ್ರೀಕರು ನೆಲೆಗೊಂಡಿರುವದನ್ನು ಕರೆಯ ಸುತ್ತಲು ಇರುವ ಕಪ್ಪೆಗಳಿಗೆ ಹೋಲಿಕೆ ಮಾಡಿದ್ದನು.[59] ಅರಿಸ್ಟಾಟಲನು ಮತ್ತು ಆತನ ವಿದ್ಯಾರ್ಥಿಯಾಗಿದ್ದ ಅಲೆಗ್ಸಾಂಡರನು ವಸಾಹತುಗಳ ಪ್ರಯೋಜನ ಮತ್ತು ಶಕ್ತಿಯ ಬಗ್ಗೆ ಬಹಳ ಚೆನ್ನಾಗಿ ಅರಿತುಕೊಂಡಿದ್ದರು, ವಾಣಿಜ್ಯ ಮತ್ತು ರಾಜಕೀಯ ಕಾರಣಗಳಿಗಾಗಿ ಮಾತ್ರವೇ ಅಲ್ಲ ಆದರೆ ಗ್ರೀಕ್ ಭಾಷೆ ಮತ್ತು ಸಂಸ್ಕೃತಿಯ ಹರಡುವಿಕೆಗೆ ಸಹ ಆಗಿತ್ತು. ಅಲೆಗ್ಸಾಂಡರನು ಎಲ್ಲೆಲ್ಲಾ ತನ್ನ ವಿಜಯಗಳನ್ನು ವಿಸ್ತರಿಸಿದನೋ, ಆತನು ಸ್ಥಾಪಿಸಿದ ಪಟ್ಟಣಗಳು ವ್ಯಾಯಾಮ ಶಾಲೆ, ನಾಟಕ ಶಾಲೆ, ಸಂಗೀತ ಶಾಲೆ ಮತ್ತು ಆಲೋಚನಾ ಕೊಠಡಿಗಳಂತಹ ಗ್ರೀಕ್ ಸಂಪ್ರದಾಯಿಕ ಪ್ರತಿಷ್ಠಾನಗಳನ್ನು ಒಳಗೊಂಡಿರುವಂತೆ ನೋಡಿಕೊಂಡನು. ಈ ವಸಾಹತುಗಳು ಬಳಿಕ ಗ್ರೀಕೀಕರಣದ ಆ ಮಹಾ ಸಾಂಸ್ಕೃತಿಕ ಮತ್ತು ಭಾಷಾ ಪ್ರಕ್ರಿಯೆಗೆ ಹೊಳೆಯುವ ಸ್ಥಳಗಳಾದವು. ಈ ವಿಧದಲ್ಲಿ, ಮೂಡಣದಲ್ಲಿನ ದೇಶಗಳು ರಕ್ಷಣೆಯ ಕುರಿತಾದ ಮೆಸ್ಸೀಯನ ಸಂದೇಶದ ಆಗಮನಕ್ಕೆ ಸಿದ್ಧಗೊಂಡವು ಎಂಬುದು ನಿಶ್ಚಯವಾಗಿಯೂ ಆಕಸ್ಮಿಕವಾಗಿರಲಿಲ್ಲ. ಇಡೀ ನಾಗರೀಕ ಜಗತ್ತಿನಲ್ಲಿ ಹೊಸ ಒಡಂಬಡಿಕೆಯ ಬರಹಗಳು ಕೊಯಿನೆ ಗ್ರೀಕ್ ಭಾಷೆಯಲ್ಲಿ ಹರಿದಾಡುತ್ತಿದ್ದವು, ಇಂದಿಗೂ ನಮ್ಮ ಮಧ್ಯದಲ್ಲಿ ಅವುಗಳಿರುತ್ತವೆ.

ದಾನಿಯೇಲನು ಪ್ರವಾದಿಸಿದ ನಾಲ್ಕನೆಯ ಸಾಮ್ರಾಜ್ಯವು ರೋಮನ್ ಸಾಮ್ರಾಜ್ಯವಾಗಿತ್ತು. ಅಗಸ್ಟಸ್ ಸೀಜರನ ಕಾಲದ ಹೊತ್ತಿಗೆ, ಆತನ ಆಳ್ವಿಕೆಯ ಅವದಿಯಲ್ಲಿಯೇ ಯೇಸುವು ಹುಟ್ಟಿದ್ದನಷ್ಟೆ, ಈ "ಕಾಲವು ಪರಿಪೂರ್ಣ" ಆಗುವದಕ್ಕಾಗಿ (4:4) ಇತರ ಮಹತ್ವಪೂರ್ಣವಾದ ಸಿದ್ಧತೆಗಳು ಮಾಡಲ್ಪಟ್ಟಿದ್ದವು. ರೋಮನ್ ಸಾಮ್ರಾಜ್ಯವು ಶತಮಾನಗಳ ಹಿಂದೆಯೇ ಗ್ರೀಕರನ್ನು ಎದುರುಗೊಂಡಿದ್ದರು ಮತ್ತು ಅವರ ವ್ಯಾಪಕವಾದ ಸಾಂಸ್ಕೃತಿಕ ಪ್ರಭಾವವನ್ನು ಸ್ವೀಕರಿಸಿಕೊಂಡಿದ್ದರು. ರೋಮನ್ನಿನ ವಾಸ್ತುಶಿಲ್ಪ, ಪದ್ಯ, ಮತ್ತು ಸಾಹಿತ್ಯವು ಗ್ರೀಕರನ್ನು ಅನುಕರಿಸುವದರೊಂದಿಗೆ ಆರಂಭಗೊಂಡಿತ್ತು. ಕ್ರಿ.ಪೂ. 146ರಲ್ಲಿ ಕೊರಿಂಥವನ್ನು ರೋಮನ್ನರು ವಶಪಡಿಸಿಕೊಂಡು ಇಡೀ ನಗರವನ್ನು ಹೆಚ್ಚು ಕಡಿಮೆ ಧ್ವಂಸಗೊಳಿಸಿದ ವೇಳೆ, ಅವರು ಅತ್ಯುತ್ತಮ ಶಿಲ್ಪಕೃತಿಗಳಂತಹ ಅಮೂಲ್ಯವಾದ ವಸ್ತುಗಳನ್ನು ಮಾತ್ರವೇ ತಮ್ಮ ದೇಶಕ್ಕೆ ಕೊಂಡೊಯ್ಯಲಿಲ್ಲ, ಆದರೆ ಆ ನಗರವು ಯಾವ ಕನ್ನಡಿಗಳಿಗೆ

ಭಿನ್ನತೆಯನ್ನು ಹೊಂದಿತ್ತೋ ಆ ಕನ್ನಡಿಗಳನ್ನು ಸಹ ತೆಗೆದುಕೊಂಡು ಹೋದರು (ನೋಡಿರಿ 1 ಕೊರಿಂಥ 13:12). ಅವರು ಕೊರಿಂಥದಲ್ಲಿ ಸುಪ್ರಸಿದ್ಧವಾಗಿದ್ದ ತಾಮ್ರದಿಂದ ತಯಾರಿಸಿದ ಯಾವದೇ ವಸ್ತುವನ್ನು, ಮಾತ್ರವಲ್ಲದೆ ಬಹಳಷ್ಟು ಸಂಖ್ಯೆಯಲ್ಲಿ ಗುಲಾಮರನ್ನು ತೆಗೆದುಕೊಂಡು ಹೋದರು. ಈ ಗುಲಾಮರು ಗ್ರೀಕ್ ಭಾಷೆಯಲ್ಲಿ ತಮ್ಮ ಪುತ್ರರಿಗೆ ಪರಿಣಿತಿಯನ್ನು ಹೊಂದಲು ಉಪದೇಶಿಸಲು ಉಪದೇಶಕರನ್ನಾಗಿ ಬಳಸಿಕೊಳ್ಳಬಹುದಾದ ವ್ಯಕ್ತಿಗಳಾಗಿದ್ದರು.[60]

ರೋಮನ್ ಸಾಮ್ರಾಜ್ಯವು, ಮೆಡಿಟೆರ್ರೇನಿಯ ಜಗತ್ತಿನ ಪ್ರಬಲ ಶಕ್ತಿಯಾಗಿ ಮಾರ್ಪಟ್ಟ ಬಳಿಕ, ರೋಮನ್ ಗ್ರೀಕೀಕರಣಕ್ಕಿಂತಲೂ ಅತ್ಯಧಿಕವಾಗಿ ಮೆಸ್ಸೀಯನ ಬರೋಣದ ಸುತ್ತಲಿನ ಪರಿಸ್ಥಿತಿಗಳಿಗೆ ಕೊಡುಗೆಯನ್ನು ನೀಡಿತ್ತು. ರೋಮ್ ಯೋಚಿಸುವವರು ಕಡಿಮೆಯಿರುವ ಆದರೆ ಕ್ರಿಯೆ ಮಾಡುವವರು ಅಧಿಕವಾಗಿರುವಂಥ ಒಂದು ದೇಶವಾಗಿತ್ತು. ಅದರ ಮುಖ್ಯ ಗಮನವು ಕಾರ್ಯರೂಪದ್ದಾಗಿತ್ತು. ಅದರ ಸ್ವಂತ ನಾಗರೀಕ ಯುದ್ಧಗಳು ಮುಕ್ತಾಯಗೊಂಡ ಬಳಿಕ ಮತ್ತು ಅಧಿಕಾರವು Octavianನ ಕೈಗಳಲ್ಲಿ ಏಕೀಕರಿಸಲ್ಪಟ್ಟ ಬಳಿಕ (ಆತನು Caesar Augustus ಎಂದು ಹೆಚ್ಚು ಪರಿಚಿತನಾಗಿರುತ್ತಾನೆ; ನೋಡಿರಿ ಲೂಕ 2:1). ರೋಮಿನ ಮಿಲಿಟರಿ ಶಕ್ತಿಗಳು ಮೆಡಿಟೆರ್ರೇನಿಯನ್ನಿನ ಪ್ರಾಂತ್ಯವನ್ನು ಜಯಿಸಿಕೊಂಡಿತು ಮತ್ತು ಅಗೆಯನ್ ಸಮುದ್ರದಲ್ಲಿ ಸಮುದ್ರ ಕಳ್ಳರ ಹಾವಳಿಯಿಲ್ಲದಿದ್ದರಿಂದ, ರೋಮಿನ ಅಧಿಕಾರವನ್ನು ಈ ಸಾಗರದ ಗಡಿಗಳಲ್ಲಿರುವ ಎಲ್ಲಾ ದೇಶಗಳ ಮೇಲೆ ವಿಸ್ತರಿಸಿತು, ಮತ್ತು ಸುದೀರ್ಘವಾದ ಮತ್ತು ಸ್ಥಿರವಾದಂಥ ಪ್ರಶಾಂತ ಕಾಲಕ್ಕೆ ಆರಂಭವನ್ನು ಒದಗಿಸಿತ್ತು, ಆ ಕಾಲವು *ಪಾಕ್ಸ್ ಅಗಸ್ಟಸ್,* ಅಥವಾ ಅಗಸ್ಟಸ್ ಸಮಾಧಾನ ಎಂದು ಪರಿಚಿತವಾಗಿರುತ್ತದೆ. Augustusನ ಆಳ್ವಿಕೆಯ ವೇಳೆಯಲ್ಲಿಯೇ ಸಾಮ್ರಾಜ್ಯದಲ್ಲಿ ಅಷ್ಟೊಂದು ಮಹತ್ವವಲ್ಲದ, ಮೆಡಿಟೆರ್ರೇನಿಯನ್ ಸಮುದ್ರದಿಂದ ಅಷ್ಟೇನೂ ದೂರವಲ್ಲದ ಮೂಲೆಯೊಂದರಲ್ಲಿ “ಸಮಾಧಾನ ಪ್ರಭು” ಹುಟ್ಟಿದ್ದನು.

ಮಾನವ ಇತಿಹಾಸದಲ್ಲಿ ಈ ದೇವರು-ಮಾನವ ಮತ್ತು ವಿಮೋಚಕನ ಆಗಮನಕ್ಕೆ ರೋಮಿನ ಸುವರ್ಣ ಯುಗಕ್ಕಿಂತಲೂ ಹೆಚ್ಚು ಸೂಕ್ತವಾದ ಕಾಲವು ಬೇರೊಂದು ಇರುವದಕ್ಕೆ ಸಾಧ್ಯವಿತ್ತೋ? (1) ಸಾಮ್ರಾಜ್ಯದಲ್ಲಿ ವ್ಯಾಪಾರವು, ಸಮುದ್ರದ ಮೂಲಕವಾಗಿ ವಾಣಿಜ್ಯ ಹಡಗುಗಳಲ್ಲಿ ಆಗಲಿ ಅಥವಾ ಅದರ ಉತ್ತಮವಾಗಿ ಸಂಘಟಿಸಲ್ಪಟ್ಟಿದ್ದ ಹೆದ್ದಾರಿ ವ್ಯವಸ್ಥೆಯ ಮೂಲಕವಾಗಿ ಭೂ ಪ್ರಯಾಣದಿಂದಾಗಲಿ ಪ್ರಯಾಣಿಸುವದಕ್ಕೆ ದೊಡ್ಡ ಸದವಕಾಶಗಳನ್ನು ಒದಗಿಸಿತ್ತು. (2) ಪ್ರಾಂತ್ಯಗಳಲ್ಲಿ ಬೇರೆ ಬೇರೆ ಭಾಷೆಗಳು ಮತ್ತು ಉಪಭಾಷೆಗಳು ಇದ್ದವಾದರೂ, ಸಾಮ್ರಾಜ್ಯವು ಗ್ರೀಕ್ ಭಾಷೆಯನ್ನು ಸಾಮಾನ್ಯ ಸಂವಹನ ಸಾಧನವಾಗಿ ಬಳಸುತ್ತಿತ್ತು. (3) ರೋಮನ್ ಪೌರತ್ವವನ್ನು ಖರೀದಿಸುವದಕ್ಕೆ ಶಕ್ತರಾಗಿರುವವರಿಗೆ ಮತ್ತು ಸಾಂದರ್ಭಿಕವಾಗಿ ಅನುಕೂಲ ಹೊಂದಿರುವವರಿಗೆ ಕೊಡಲ್ಪಡುತ್ತಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 22:27, 28). (4) ರೋಮನ್ ಕಾನೂನು ಪ್ರಗತಿ ಹೊಂದಿತ್ತು, ಅದರಲ್ಲಿ ನ್ಯಾಯವಿಚಾರಣೆ ಮತ್ತು ಮೇಲ್ಮನವಿ ಅಂತಹ ಅಂಶಗಳಿದ್ದವು (ನೋಡಿರಿ ಅಪೊಸ್ತಲರ ಕೃತ್ಯಗಳು 25:11, 12). (5) ರೋಮನ್ ಸಾಮ್ರಾಜ್ಯವು ತನ್ನ ಧೊರೆತನದಲ್ಲಿದ್ದ ಸ್ಥಳೀಯ ಸಂಸ್ಕೃತಿಗಳು ಮತ್ತು ಧರ್ಮಗಳ ಬಗ್ಗೆ ಸಹಿಷ್ಣುತೆಯನ್ನು ಹೊಂದಿತ್ತು, ಸಾಮಾನ್ಯವಾಗಿ ತಾನು ಗೆದ್ದುಕೊಂಡ ಜನರಿಗೆ ತಮ್ಮ ಸ್ಥಳೀಯ ದೊರೆಗಳನ್ನು ಅಥವಾ ಆಶ್ರಿತ ರಾಜರನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ಕೊಡುತ್ತಿತ್ತು. ಇವುಗಳು ಸ್ವತಃ ದೇವರಿಂದ ಉಂಟು ಮಾಡಲ್ಪಟ್ಟ ಸದೃಢವಾದ ಆಶೀರ್ವಾದಗಳಾಗಿದ್ದವು ಎಂಬುದು ಯಾರಿಗೂ ಗೊತ್ತಿರಲಿಲ್ಲ, ಆತನು ದಾವೀದನ ಕುಮಾರನು ಬರುವದಕ್ಕಾಗಿ ವೇದಿಕೆಯನ್ನು ಸಿದ್ಧಗೊಳಿಸುತ್ತಿದ್ದನಷ್ಟೆ.

ಯೇಸುವಿನ ಆಪ್ತವಲಯದಲ್ಲಿನ ಶಿಷ್ಯರಿಗೆ ಸಹ ಈ ಅದೃಶ್ಯವಾದ, ಆತ್ಮೀಕ ರಾಜ್ಯದ

ಸ್ವಭಾವವನ್ನು ಗ್ರಹಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಯೆಹೂದ್ಯರು - ಶಾಸ್ತ್ರೀಗಳು ಮತ್ತು ಫರಿಸಾಯರು ಸಹ, ಅವರ ಮಾನವ ಸಂಪ್ರದಾಯಗಳ ಅವಶೇಷಗಳಲ್ಲಿ ಮುಳುಗಿ ಹೋದವರಾಗಿದ್ದು - ತಮ್ಮ ಎದುರಿನಲ್ಲಿ "ಕಾಲವು ಪರಿಪೂರ್ಣ" ಆಗುತ್ತಿದೆ ಎಂಬುದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿತ್ತು? ಮೆಸ್ಸೀಯನ ದಿನಗಳು ಬಂದು ಬಿಟ್ಟಿವೆ ಮತ್ತು ದೇವರ ರಾಜ್ಯವು ನಜರೇತಿನ ಯೇಸುವಿನಲ್ಲಿ ಈಗಾಗಲೇ ಇರುತ್ತದೆ ಎಂಬುದನ್ನು ಅವರು ಹೇಗೆ ಗ್ರಹಿಸಲು ಸಾಧ್ಯವಿತ್ತು (ಲೂಕ 17:21)? ಈ ಬದಲಾವಣೆಗಳೆಲ್ಲವೂ "ಕರ್ತನಿಗಾಗಿ ದಾರಿಯನ್ನು ಸಿದ್ಧ" ಮಾಡುವದಕ್ಕೆ ದೇವರ ಹಸ್ತಗಳ ಕೆಲಸವಾಗಿತ್ತದೆಂಬುದನ್ನು ಅವರು ಹೇಗೆ ಊಹಿಸಿಕೊಂಡಿರಲು ಸಾಧ್ಯ (ಮಾರ್ಕ 1:3; NIV)?

## ಪುತ್ರ ಪದವಿಯ ಆಶೀರ್ವಾದಗಳು (4:6, 7)

ಕ್ರಿಸ್ತನಲ್ಲಿ ಕ್ರೈಸ್ತನಿಗಿರುವ ಸ್ಥಾನದ ಕುರಿತಾಗಿ ಪೌಲನು ಚರ್ಚಿಸಿದ ವೇಳೆ, ಆತನು ಈ ಭರವಸೆ ನೀಡುವ ಸತ್ಯವನ್ನು ಮುಂದಿಟ್ಟನು: "ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು" (4:6). ಆತನು ಮುಂದುವರೆದು ನಾವು ಪುತ್ರರಾಗಿರುವ ನಿಮಿತ್ತವಾಗಿ, ಈಗ ನಾವು "ದೇವರ ಮೂಲಕ ಬಾಧ್ಯ[ರು]" ಆಗಿದ್ದೇವೆ ಎಂದು ಹೇಳುತ್ತಾನೆ (4:7).

ದೇವರು ನಮಗೆ ಸ್ವರ್ಗೀಯ ವೈಭವದ ಮತ್ತು ಸುಖಾನಂದದ ಮಂಡಲ ಕುರಿತ ಜ್ಞಾನವನ್ನು ತೆರೆದಿಟ್ಟಿದ್ದಾನೆ, ಅದು ನಮಗೆ ಊಹಿಸಿಕೊಳ್ಳಲು ಸಾಮರ್ಥ್ಯವಿರುವ ಯಾವದೇ ಸಂಗತಿಯನ್ನು ಮೀರಿ ಹೋಗುವಂಥದ್ದಾಗಿದೆ. ಬಡವರು, ಮಣ್ಣಿನ ಅಂಧ ಜೀವಿಗಳಾಗಿರುವ ನಾವು, ಬಹಳವಾಗಿ ಭೂಮಿಯ ಮೇಲೆ ದೃಷ್ಟಿಯಿಟ್ಟಿರುತ್ತೇವೆ ಮತ್ತು ಇಹಲೋಕದಲ್ಲಿರುವ ಕ್ಷಣಿಕ ಆಕರ್ಷಣೆಗಳನ್ನು ಅನುಭವಿಸಿ ನೋಡಬೇಕೆಂಬ ಮೋಹಕ್ಕೊಳಗಾಗಿರುತ್ತೇವೆ. ಶಾಸ್ತ್ರಗಳು "ಪರಲೋಕ" ಕುರಿತು ಮಾತಾಡುತ್ತವೆ ಆದರೆ ಬಹಳಷ್ಟು ಸಾರಿ "ಪ್ರಭಾವ" ಕುರಿತು ಉಲ್ಲೇಖಿಸುತ್ತವೆ. ಅಂತಹ ಭಾವನೆಗಳು ನಮಗೆ ಗ್ರಹಿಸಿಕೊಳ್ಳುವದಕ್ಕೆ ಇರುವಂಥ ಸಾಮರ್ಥ್ಯವನ್ನು ಮೀರಿದವುಗಳಾಗಿವೆ. ನಮ್ಮ ದೇವರ ರೀತಿಯಲ್ಲಿ ಅಷ್ಟೊಂದು ಅಪರಿಮಿತವಾಗಿ ಸರ್ವೋನ್ನತವಾದ ಹಾಗೂ ಘನತೆಗೇರಿಸಲ್ಪಟ್ಟ ಜೀವಿಯೊಬ್ಬನ ಕುರಿತು ಯೋಚನೆಗಳು ನಮ್ಮ ಸ್ವಾಭಾವಿಕ ಗ್ರಹಿಕೆಯನ್ನು ಮೀರಿದವುಗಳಾಗಿವೆ. ಹಾಗಿದ್ದರೂ, ದೇವರು "ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನು" (ಎಫೆಸ 3:20).

ನಾವು ದೇವರ ಯೋಚನೆಗಳನ್ನು ಸಂಪೂರ್ಣ ಅರಿತುಕೊಳ್ಳಬೇಕೆಂಬ ನಮ್ಮ ಅನ್ವೇಷಣೆಯನ್ನು ಕೈ ಬಿಡತಕ್ಕದ್ದೋ? ನಿಶ್ಚಯವಾಗಿಯೂ, ಎಫೆಸ 3:20ರಲ್ಲಿ ಪೌಲನು ಈ ರೀತಿಯಾಗಿ ಹೇಳುತ್ತಿಲ್ಲ. ಬಹುಶಃ ನಾವು ಯಥಾರ್ಥವಾಗಿ ನಮ್ಮನ್ನು ಹೀಗೆ ಕೇಳಿಕೊಳ್ಳಬೇಕು, "'ನಮ್ಮೊಳಗೆ ಕಾರ್ಯಸಾಧಿಸುವ' ಈ ಶಕ್ತಿ ಯಾವದು?" ಆ ಸನ್ನಿವೇಶದಲ್ಲಿ, ಪೌಲನ ಚರ್ಚೆಯಾಂಶವು ನಂಬಿಕೆಯ ಮೂಲಕವಾಗಿ ನಮಗೆ ಅನುಗ್ರಹಿಸಲ್ಪಟ್ಟು ನಮ್ಮೊಳಗೆ ಪವಿತ್ರಾತ್ಮನು ವಾಸಿಸುವಿಕೆ ಮತ್ತು ಆತ್ಮೀಕ ಜೀವನದ ಕುರಿತಾಗಿತ್ತಾದ್ದರಿಂದ, ಬಹುಶಃ ನಾವು "ಶಕ್ತಿ" ಎಂಬುದನ್ನು ದೊಡ್ಡ ಅಕ್ಷರದಿಂದ ಆರಂಭಿಸತಕ್ಕದ್ದೋ? ಎಫೆಸ 3:14-21ರಲ್ಲಿ, ಸಹೋದರರು ಕ್ರಿಸ್ತನ ಮಹಾ ಪ್ರೀತಿಯನ್ನು ಅರ್ಥಮಾಡಿಕೊಳ್ಳುವಂತೆ ಮತ್ತು ದೇವರ ಸಂಪೂರ್ಣತೆಯಿಂದ ತುಂಬಿಸಲ್ಪಡುವಂತೆ ಶಕ್ತಗೊಳಿಸಲ್ಪಡಬೇಕೆಂದು ಪ್ರಾರ್ಥನೆ ಮಾಡುವೆನೆಂಬುದರ ಕುರಿತು ಪೌಲನು ಹೇಳುತ್ತಾನೆ. ಪೌಲನು ಇಲ್ಲಿ ದೇವರ ಶಕ್ತಿಯ ಬಗ್ಗೆ

ಮಾತಾಡಿದನೋ ಅಥವಾ ಆತ್ಮನ ಶಕ್ತಿಯ ಬಗ್ಗೆ ಮಾತಾಡಿದನೋ? Francis Foulkesಉನ ಹೀಗೆ ಬರದನು, "ಪವಿತ್ರಾತ್ಮನು ವೈಯಕ್ತಿಕವಾಗಿ ವಾಸ ಮಾಡುವದರ ಮೂಲಕವಾಗಿಯೇ ಕ್ರೈಸ್ತೀಯ ಜೀವಿತಕ್ಕಾಗಿ ಬಲವು ಬರುತ್ತದೆಂಬುದು, ಹೊಸ ಒಡಂಬಡಿಕೆಯ ಬೋಧನೆಯ ನಿರಂತರವಾದ ಭಾವಿಸಿಕೊಳ್ಳುವಿಕೆ ಆಗಿರುತ್ತದೆ, ಅಥವಾ ನಿರ್ದಿಷ್ಟವಾದ ಒತ್ತು ಆಗಿದೆ."[61]

ನಿಸ್ಸಂದೇಹಕರವಾಗಿ, Foulkesನು ದೃಷ್ಟಿಕೋನವು ಸರಿಯಾಗಿರುತ್ತದೆ. ಒಂದೇ ಅಧ್ಯಾಯದ ಸನ್ನಿವೇಶದಲ್ಲಿ, ಪೌಲನು ನಮ್ಮೊಳಗೆ ಕ್ರಿಸ್ತನು, ದೇವರು ಮತ್ತು ಪವಿತ್ರಾತ್ಮನು ವಾಸಿಸುವದರ ಕುರಿತಾಗಿ ಮಾತಾಡಿದನು (ರೋಮಾ 8). ದೇವತ್ವದ ಪ್ರತಿಯೊಬ್ಬ ವಿಶಿಷ್ಟ ಸದಸ್ಯನು ಯಾವದೇ ನಿರ್ದಿಷ್ಟವಾದ ಪರಿಸ್ಥಿತಿಯಲ್ಲಿ ಏನು ಮಾಡುತ್ತಾನೆಂಬುದನ್ನು ನಾವು ವಿಶ್ಲೇಷಣೆ ಮಾಡಬೇಕೆಂಬುದಕ್ಕಾಗಿ ಈ ಭಾಷೆಯು ನಮಗೆ ಕೊಡಲ್ಪಡಲಿಲ್ಲ. ಮೂವರು ಒಂದೇ ಆಗಿರುವರೆಂದಂತೂ ಶಾಸ್ತ್ರಗಳು ನಮಗೆ ತಿಳಿಸುತ್ತವೆ, ದೇವರ ಗಣಿತದ ಕುರಿತಾಗಿ ಅವಿಶ್ವಾಸಿಯು ಯಾವ ಸಮಸ್ಯೆಯನ್ನು ಹೊಂದಿದ್ದರೂ ಸರಿಯೇ ಇದು ಬದಲಾಗುವದಿಲ್ಲ. ಈ ವಾಸ್ತವಾಂಶವೊಂದೇ ನಮ್ಮನ್ನು ಅಚ್ಚರಿ ಮತ್ತು ಭಯಭಕ್ತಿಯಿಂದ ತುಂಬಿಸತಕ್ಕದ್ದು. ನಾವು ಇಡೀ ಆತ್ಮೀಕ ಮಂಡಲದ[62] ದೇವರು ಮತ್ತು ತಂದೆಯು ನಮ್ಮನ್ನು ಪಾಪಗಳಿಂದ ಬಿಡಿಸುವದಕ್ಕಾಗಿ ತನ್ನ ವಿಶಿಷ್ಟವಾದ ಪ್ರಿಯ ಮಗನನ್ನು ಸಮರ್ಪಿಸಿದನು ಎಂಬುದಕ್ಕೆ ಇನ್ನಷ್ಟು ಆಶ್ಚರ್ಯಗೊಳ್ಳಬೇಕಾಗುತ್ತದೆ. ತರುವಾಯ, ಅದನ್ನು ಮೀರಿ, ಆತನು ನಮಗೆ "ಬೇರೊಬ್ಬ ಆದರಿಕನನ್ನು" ಕೊಟ್ಟನು (ಯೋಹಾನ 14:16; KJV) - ನಮ್ಮ ಸಂಗಡ ಇರಬೇಕೆಂದು ಮಾತ್ರವೇ ಅಲ್ಲ, ಆದರೆ ನಮ್ಮೊಳಗೆ ವಾಸಿಸಬೇಕೆಂದು ಸಹ ಕೊಟ್ಟನು. ಆದರಿಕನು ನಮ್ಮನ್ನು ಆತ್ಮೀಕ ಯೋಚನೆಗಳಿಗೆ ಮತ್ತು ಕೃತ್ಯಗಳಿಗೆ ಸ್ಪೂರ್ತಿಗೊಳಿಸುತ್ತಾನೆ ಮತ್ತು ಈಗಿನ ದುಷ್ಟ ಲೋಕದಲ್ಲಿ "ದೇಹದ ದುರಭ್ಯಾಸಗಳನ್ನು ನಾಶ ಮಾಡುವಂತೆ" ನಮ್ಮನ್ನು ಶಕ್ತಗೊಳಿಸುವನು (ರೋಮಾ 8:13).

ಸಕಲ ಮಾನವ ತರ್ಕ ಹಾಗೂ ವಾದಕ್ಕೆ ತದ್ವಿರುದ್ಧವಾಗಿ, ತಂದೆ, ಮಗ, ಮತ್ತು ಪವಿತ್ರಾತ್ಮರು ಖಂಡಿತವಾಗಿಯೂ ಒಂದೇ ಆಗಿರುತ್ತಾರೆ. ಅವರ ನಿತ್ಯವಾದ ಉದ್ದೇಶವು ಒಂದೇ ಆಗಿದೆ: ನಿರೀಕ್ಷೆಯಿಲ್ಲದಂತೆ ಪಾಪದಲ್ಲಿ ಕಳೆದು ಹೋಗಿರುವ ಜನರಿಂದ ತುಂಬಿರುವ ಲೋಕವನ್ನು ಬಿಡುಗಡೆಗೊಳಿಸಬೇಕು ಎಂಬುದೆ. ಯಾವದೋ ರೀತಿಯಲ್ಲಿ, ನಮ್ಮ ಪರಿಶುದ್ಧ ದೇವರು ನಮ್ಮನ್ನು ಪ್ರೀತಿಸಿದನು ಮತ್ತು ಆತನು ಕೊಡುವದಕ್ಕೆ ಶಕ್ತವಾಗಬಹುದಾದ ಅತ್ಯಂಥ ಶ್ರೇಷ್ಠವಾದ, ಅತಿ ಉದಾತ್ತವಾದ ವರದಾನವನ್ನು ಕೊಟ್ಟನು. ಆತನು ಇಂತಹ ತ್ಯಾಗವನ್ನು ಮಾಡುವದಕ್ಕೆ ಸಮರ್ಥನೆಂದು ನಮಗೆ ಯೋಚಿಸುವದಕ್ಕೂ ಆಗದಂತಹ ತ್ಯಾಗವೊಂದನ್ನು ಮಾಡಿದನು. ನಾವು ಹೀಗೆ ಪ್ರಾರ್ಥಿಸೋಣ, "ದೇವರೇ, ಹಿಂದೊಮ್ಮೆ ನಿನ್ನ ನಂಬಿಗಸ್ತ ದಾಸನಾದ ಮೋಶೆಯು ನಿಮ್ಮ ಮಹಿಮೆಯನ್ನು ನೋಡಿದ ರೀತಿಯಲ್ಲಿ, ನಾವು ನೋಡುವಂತಾಗುವ ಹಾಗೆ ಕೃಪೆಯನ್ನು ಮತ್ತು ಕರುಣೆಯನ್ನು ನಮಗೆ ಅನುಗ್ರಹಿಸು! ಮಾನವ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದ್ದಂಥ ನಿನ್ನ ಮಗನಾದ ಯೇಸುವಿನ ಮರ್ಮದ ಮಿನುಗು ನೋಟವಾದರೂ ನಮಗೆ ಸಿಕ್ಕುವಂತಾಗಲಿ, ಆತನು ಗಲಿಲಾಯದ ಕ್ರಿಸ್ತನು, ಆತನು ಸ್ವತಃ ನಿನ್ನ ಅಪರಿಮಿತವಾದ ಪ್ರೀತಿಯುಳ್ಳ ಹೃದಯದ ಪ್ರಕಟನೆಯ ಅವತಾರವಾಗಿದ್ದನು."

ಪುತ್ರ ಪದವಿಯ ಸವಲತ್ತುಗಳು ಮತ್ತು ವಿಶೇಷಾಧಿಕಾರಗಳು ಒಂದು ಘನತೆಯುಳ್ಳ ಸ್ಥಾನವಾಗಿರುತ್ತದೆಂದು ಶಾಸ್ತ್ರಗಳಲ್ಲಿ ನಿರಂತರವಾಗಿ ಎಣಿಸಲಾಗಿರುತ್ತದೆ. ಲೂಕ 15ರಲ್ಲಿರುವ ಸಾಮ್ಯದಲ್ಲಿನ ತಪ್ಪಿ ಹೋದ ಕುಮಾರನು, ಆತನು ತನ್ನನ್ನು ಬಹುವಾಗಿ ಕೆಡಿಸಿಕೊಂಡಿದ್ದರೂ ಮತ್ತು ಆತನ ತಂದೆ ಹಾಗೂ ಕುಟುಂಬಕ್ಕೆ ಅವಮಾನವನ್ನುಂಟು ಮಾಡಿದ್ದಾಗ್ಯೂ, ತಂದೆಯ

ಮನೆಗೆ ಹಿಂದಿರುಗಿ ಬಂದಾಗ ತೆರೆದ ಬಾಹುಗಳಿಂದ ಸೇರಿಸಿಕೊಳ್ಳಲ್ಪಟ್ಟನು. ಆತನಿಗೆ ಸನ್ಮಾನದ ಉಡುಪನ್ನು ತೊಡಿಸಲಾಯಿತು - ಆತನು ಅಷ್ಟೊಂದು ನಾಚಿಕೆಕರವಾಗಿ ನಡೆದುಕೊಂಡಿದ್ದನು ಎಂಬುದಕ್ಕಾಗಿ ಅಲ್ಲ, ಆದರೆ ಆತನು ಕೃತ್ಯಗಳು ಏನೇ ಆಗಿದ್ದರೂ ಆತನು ಒಬ್ಬ ಮಗನಾಗಿದ್ದನೆಂಬ ಕಾರಣಕ್ಕಾಗಿ ಆಗಿರುತ್ತದೆ. ಮಾನವ ಜನಾಂಗದ ಭ್ರಷ್ಟಗೊಂಡಿರುವ ಸದಸ್ಯರಾಗಿ, ಸಕಲ ಸೃಷ್ಟಿಯನ್ನು ಮಾಡಿದ ದೇವರ ಕುಟುಂಬದೊಳಗೆ ಸೇರಿಸಿಕೊಳ್ಳಲ್ಪಟ್ಟಿದ್ದೇವೆಂಬ ವಾಸ್ತವಾಂಶವು ನಮ್ಮನ್ನು ಆಳವಾಗಿ ಸ್ಪರ್ಶಿಸತಕ್ಕದ್ದು. ಆತನು ಅರ್ಥಮಾಡಿಕೊಳ್ಳಲಾಗದಂತಹ ಕೃಪೆಯ - ಅಂದರೆ, ಆತನ "ಏಕೈಕ ಮತ್ತು ವಿಶಿಷ್ಟ ಮಗನ [μονογενής, *monogenēs*]" ಶಿಲುಬೆಯ ಮರಣ (ಯೋಹಾನ 1:18; 3:16; CJB) - ಮೂಲಕವಾಗಿ ನಮ್ಮನ್ನು ಪುತ್ರರಾಗಿ ಸ್ವೀಕರಿಸಿಕೊಂಡನು.

ಮಿತಿಯುಳ್ಳ ಜೀವಿಗಳಾಗಿ, ನಮ್ಮ ಪರವಾಗಿ ಅಂಥ ಘೋರವಾದ ಯಜ್ಞವನ್ನು ಅರ್ಪಿಸುವ ರೀತಿಯಲ್ಲಿ ತಂದೆಯನ್ನು ಪ್ರೇರಿಸಿದ ದೈವಿಕ ಪ್ರೀತಿಯ ಕುರಿತು ಒಂದು ಕ್ಷಣಿಕ ಮಿನುಗು ನೋಟ, ಒಂದು ಮಬ್ಬಾದ ದೃಶ್ಯವನ್ನಷ್ಟೇ ಹೊರತು ಬೇರೆ ಇನ್ನೇನನ್ನೂ ಕಾಣುವದಕ್ಕೆ ಆಗುವದಿಲ್ಲ. ಆತನು ಶ್ರೇಷ್ಠವಾದ ಪ್ರೀತಿಯ ಕುರಿತಾದ ನಾವು ಮಿತಿಯುಳ್ಳ ನೋಟ ಹೊಂದಿದ್ದರೂ, ಅದು ನಮ್ಮ ಮನಸ್ಸನ್ನು ಸೆಳೆದುಕೊಳ್ಳುವದರಲ್ಲಿ ಹೇಗೆ ವಿಫಲವಾಗಲು ಸಾಧ್ಯ? ಅಂಥ ಪ್ರೀತಿಯು ನಮ್ಮನ್ನು ಸ್ಫೂರ್ತಿಗೊಳಿಸಿ ಅಂಥ ಸಾರ್ವಭೌಮನಿಗೂ ಆತನು ಯಾರಿಗಾಗಿ ತನ್ನ ಪ್ರಿಯ ಮಗನನ್ನು ಯಜ್ಞವಾಗಿ ಅರ್ಪಿಸಿದನೋ ಆ ಎಲ್ಲಾ ಜನರಿಗೂ ಪ್ರೀತಿ, ಕೃತಜ್ಞತೆ, ಭಕ್ತಿಯುಳ್ಳ ಸೇವೆಯನ್ನು ನಮ್ಮ ಸಾಮರ್ಥ್ಯಕ್ಕನುಗುಣವಾಗಿ ಮಾಡುವಂತೆ ನಡಿಸತಕ್ಕದ್ದು.

**ಆಧುನಿಕ-ದಿನದ ವಿಗ್ರಹಾರಾಧನೆ (4:8)**

ಇಪ್ಪತ್ತೊಂದನೆಯ ಶತಮಾನದಲ್ಲಿ ಜೀವಿಸುವಂಥ ಸದವಕಾಶ ಹೊಂದಿರುವವರು ಕಟ್ಟಿಗೆ ಅಥವಾ ಕಲ್ಲುಗಳಿಂದ ಮಾಡಿದ ಪ್ರತಿಮೆಗಳ ಮುಂದೆ ತಲೆ ಬಾಗುವ ಮತ್ತು ಪೂಜಿಸುವ ಶೋಧನೆಯಿಂದ ಪ್ರತಿರಕ್ಷಿತರಂತೆ ಕಾಣಿಸಬಹುದು. ಹೇಗೂ, ಪ್ರಾಚೀನ ಜಗತ್ತು - ಗ್ರೀಸ್ ಜಗತ್ತು, ಇದು ಲೋಕದ ಅತ್ಯಂಥ ಗಹನವಾದ ವಿಚಾರವಾದಿಗಳಲ್ಲಿ ಕೆಲವರಿಗೆ ಹುಟ್ಟು ನೀಡಿತ್ತಷ್ಟೆ - ವಿಗ್ರಹಾರಾಧನೆಯ ವ್ಯಸನಿಯಾಗಿತ್ತು.

ಕ್ರಿಸ್ತನಿಗೆ ಮುಂಚೆ ಇದ್ದ ಗ್ರೀಕರು ಸಹ ಅವರ ದೇವರುಗಳ ಪ್ರತಿಮೆಗಳು ನಿಜಕ್ಕೂ ದೇವರುಗಳೆಂದಾಗಲಿ, ಅಥವಾ ಅವರ "ನಿಜವಾದ" ದೇವರುಗಳು ಹಿಮದಿಂದ ಕೂಡಿದ ಓಲಂಪಸ್ ಪರ್ವತ ಶಿಖರಗಳಲ್ಲಿ ಜೀವಿಸುತ್ತಿದ್ದರೆಂದಾಗಲಿ ಸಹ ನಂಬಿರಲಿಲ್ಲ. ಬದಲಾಗಿ, ಪ್ರತಿಮೆಗಳು ಅವರ ದೃಷ್ಟಿಯಲ್ಲಿ ಆ ದೇವರುಗಳ ಪ್ರತಿಕೃತಿಗಳಾಗಿದ್ದವಷ್ಟೆ, ಅವರ ನಂಬಿಕೆಯ ಪ್ರಕಾರವಾಗಿ, ಈ ದೇವರುಗಳು ಬೇರೊಂದು ಆತ್ಮೀಕ ಮಂಡಲದಲ್ಲಿ ಜೀವಿಸುತ್ತಿದ್ದವು ಎಂದಾಗಿತ್ತು, ನಾವು ನಂಬುವಂತೆ "ಪರಲೋಕ" ಎಂಬಂತಹ ರೀತಿಯಲ್ಲಾಗಿರಲಿಲ್ಲ. ಈ ದೃಷ್ಟಿಯಿಂದ ನೋಡುವಾಗ, ಆ ಪ್ರತಿಮೆಗಳಿಗೂ ಇಂದು ನಮ್ಮ ದಿನದಲ್ಲಿರುವ ಕೆಲವೊಂದು ಸಭಾ ಕಟ್ಟಡಗಳಲ್ಲಿ ಸಿಕ್ಕುವ ಪ್ರತಿಮೆಗಳಿಗೂ ಯಾವದೇ ವ್ಯತ್ಯಾಸವಿರುವದಿಲ್ಲ. ಅಂಥ ಪ್ರತಿಮೆಗಳಿಗೆ ಧಾರ್ಮಿಕ ವಿಧಿಗಳಂತೆ ತೈಲಾಭಿಷೇಕ ಮಾಡಲಾಗುತ್ತದೆ, ಅವುಗಳ ಪಾದಗಳಿಗೆ ಮುದ್ದಿಡಲಾಗುತ್ತದೆ, ಮತ್ತು ಕೆಲವು ಪ್ರತಿಮೆಗಳಿಗೆ ಆಗಾಗ ಅಲಂಕೃತ ನಿಲುವಂಗಿಗಳನ್ನು ತೊಡಿಸಲಾಗುತ್ತದೆ.

ವಿಗ್ರಹಾರಾಧನೆಯ ವಿರುದ್ಧದ ಪ್ರಕರಣವು ಮಾನವನ ನಂಬಿಕೆ ಅಥವಾ

ಆರಾಧನೆಗೊಳಗಾಗುವ ಸುಳ್ಳು ವಸ್ತುಗಳು ಅಥವಾ ಅಸ್ತಿವಾರಗಳ ಮೇಲೆ ಆಧಾರವಾಗಿರುತ್ತದೆ, ಅದೊಂದು ಭೌತಿಕ ಅಥವಾ ಆತ್ಮೀಕ ಸ್ವಭಾವದ ವಸ್ತುವಾಗಿರಬಹುದು. ದೇವರನ್ನು ಹೊರತು ಪಡಿಸಿ ಬೇರೆ ಯಾವದರಲ್ಲಿಯೇ ಆಗಲಿ ಪ್ರೀತಿ ಮತ್ತು ವಿಶ್ವಾಸವನ್ನು ತೋರಿಸುವದಾದರೆ ಅದು ದೇವರಿಗೆ ಮಾತ್ರವೇ ಹಕ್ಕಿರುವಂಥದ್ದನ್ನು ದೋಚಿಕೊಂಡಂತಾಗುವದು. ವಿಗ್ರಹಾರಾಧನೆಯ ತಿರುಳು ಇದೇ ಆಗಿರುತ್ತದೆ.

ಉದಾಹರಣೆಗೆ, ಪ್ರಾಚೀನ ಗ್ರೀಕರು ನಂಬಿದ್ದೇನೆಂದರೆ ಆಕಾಶಕಾಯಗಳು (ಸೂರ್ಯ, ಚಂದ್ರ, ಮತ್ತು ಗ್ರಹಗಳು[63]) ಸ್ಥಿರವಾಗಿ ನಿಂತಿರುವ ನಕ್ಷತ್ರಗಳ ಬಳಿಗೆ ಅತ್ತಿಂದಿತ್ತ ಸುತ್ತಾಡುವ ಶಕ್ತಿಯನ್ನು ಹೊಂದಿದ್ದವು ಮತ್ತು ಮನುಷ್ಯರ ಗತಿಯ ಮೇಲೆ ಸಹ ಶಕ್ತಿಯನ್ನು ಹೊಂದಿದ್ದವು ಎಂಬುದೆ. ಇದು ನಮಗೆ ವಿಚಿತ್ರವೆನಿಸಬಹುದಾದರೂ, ಇಂದು ಅನೇಕರು ಭವಿಷ್ಯದಲ್ಲಿ ನಡೆಯುವ ಘಟನೆಗಳಿಗೆ ಸಂಬಂಧಿಸಿದಂತೆ ಒಳ್ಳೇದು ಅಥವಾ ಕೆಟ್ಟ ಸೂಚಕಗಳನ್ನು ತಿಳಿಯಲು ಸುದ್ದಿಪತ್ರಿಕೆಗಳಲ್ಲಿನ ಮತ್ತು ಅಂತರ್ಜಾಲದಲ್ಲಿನ ಜ್ಯೋತಿಷ್ಯಗಳನ್ನು ನೋಡುತ್ತಾರೆ. ಇವರು ಯೇಸುವಿನ ಜನನಕ್ಕೆ ಮುಂಚೆಯ ಶತಮಾನಗಳಷ್ಟು ಹಿಂದೆ ಜೀವಿಸಿದ್ದ ಗ್ರೀಕರಿಗಿಂತ ಯಾವ ರೀತಿಯಲ್ಲಾದರೂ ಕಡಿಮೆ ವಿಗ್ರಹಾರಾಧಕರೋ?

ಆಕಾಶಕಾಯಗಳನ್ನು ಪೂಜಿಸಬಾರದೆಂದು ದೇವರು ಇಸ್ರಾಯೇಲ್ಯರಿಗೆ ಎಚ್ಚರಿಕೆಯನ್ನು ಮಾತ್ರವೇ ಕೊಡಲಿಲ್ಲ, ಆದರೆ ಉಲ್ಲಂಘಿಸುವವರನ್ನು ಕಲ್ಲೆಸೆದು ಕೊಲ್ಲಬೇಕೆಂದು ಸಹ ಆಜ್ಞಾಪಿಸಿದನು (ಧರ್ಮೋಪದೇಶಕಾಂಡ 4:19; 17:1-5). ಅನಂತರದಲ್ಲಿ, ಇಸ್ರಾಯೇಲ್ಯರೊಳಗೆ ಧರ್ಮಶಾಸ್ತ್ರದ ಪುಸ್ತಕವು ಕಳೆದು ಹೋಗಿ ಅನೇಕ ವರ್ಷಗಳ ಕಾಲ ಮರೆತು ಹೋಗಲ್ಪಡುವಷ್ಟರ ಮಟ್ಟಿಗೆ ಮತಭ್ರಷ್ಟತೆಯು ಮುಂದುವರೆದ ವೇಳೆ, ಧರ್ಮಶಾಸ್ತ್ರವು ಸಿಕ್ಕ ಕೂಡಲೆ, ಅರಸನಾದ ಯೋಷಿಯನು ಯೆಹೂದದಲ್ಲಿ ಒಂದು ರಾಷ್ಟ್ರೀಯ ಸುಧಾರಣೆಯನ್ನೇ ಮಾಡಿದನು. ದೇವಾಲಯದಿಂದ ವಿಗ್ರಹಾರಾಧಕರಾದ ಯಾಜಕರನ್ನು ತೊಲಗಿಸುವದು ಮಾತ್ರವಲ್ಲ, ಆದರೆ "ಸೂರ್ಯಚಂದ್ರನಕ್ಷತ್ರಗಳೆನಿಸಿಕೊಳ್ಳುವ ಆಕಾಶಸೈನ್ಯಕ್ಕೂ ಧೂಪಸುಡುವದಕ್ಕಾಗಿ . . . ನೇಮಿಸಲ್ಪಟ್ಟ ಎಲ್ಲಾ ಪೂಜಾರಿಗಳನ್ನು" (2 ಅರಸು 23:5) ಸಹ ತೆಗೆದು ಹಾಕುವದು ಅವಶ್ಯಕವಾಗಿರುತ್ತದೆಂದು ಕಂಡನು.

ವಿಗ್ರಹಾರಾಧಕರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ (1 ಕೊರಿಂಥ 6:9, 10). ಸಭೆಯವರು ವಿಗ್ರಹಾರಾಧಕರೊಂದಿಗೆ ಅನ್ಯೋನ್ಯತೆಯನ್ನು ಇಟ್ಟುಕೊಳ್ಳಬಾರದೆಂದು ಪೌಲನು ಸ್ಪಷ್ಟವಾಗಿ ಹೇಳಿದನು (1 ಕೊರಿಂಥ 5:10, 11). "ಆಶಿಸುವದು" ಅಥವಾ "ಲೋಭ" (πλεονεξία, *pleonexia*)[64] ವಿಗ್ರಹಾರಾಧನೆಗೆ ಸಮವೆಂದು ಆತನು ಹೇಳಿದ್ದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುತ್ತೇವೆ (ಎಫೆಸ 5:5; ಕೊಲೊಸ್ಸೆ 3:5)? ಈ ಪಾಪಗಳಿಗಾಗಿ ಪಶ್ಚಾತ್ತಾಪ ಪಡುವದಕ್ಕೆ ವಿಫಲರಾಗುವವರಿಗೆ ದೇವಜನರೊಂದಿಗಿನ ಅನ್ಯೋನ್ಯತೆಯನ್ನು ನಿರಾಕರಿಸಬೇಕೆಂದು ಆತನ ಬೇಡಿಕೆಗೆ ನಾವು ಕಿವಿಗೊಡುತ್ತೇವೋ (1 ಕೊರಿಂಥ 5:11)? ಸಭೆಗಳು ಅನೇಕ ಸಾರಿ ದೇವರ ಈ ಆಜ್ಞೆಯನ್ನು ನಿರ್ಲಕ್ಷಿಸುತ್ತವೆ, ಆದರೆ ಅದು ಇರುವ ರೀತಿಯಲ್ಲಿಯೇ - ದೇವರ ಒಂದು ಆಜ್ಞೆಯಾಗಿಯೇ - ಉಳಿಯುತ್ತದೆ. ಅಷ್ಟುಮಾತ್ರವಲ್ಲದೆ, ಪೌಲನು "ಹೊಟ್ಟೆಯೇ ಅವರ ದೇವರು" ಆಗಿರುವಂಥ ಜನರ ಕುರಿತಾಗಿ (ಫಿಲಿಪ್ಪಿ 3:19; ನೋಡಿರಿ ರೋಮಾ 16:18) ಮತ್ತು "ದೇವರನ್ನು ಪ್ರೀತಿಸದೆ ಭೋಗಗಳನ್ನೇ ಪ್ರೀತಿಸುವವರೂ" (2 ತಿಮೊಥೆ 3:4) ಆಗಿರುವ ಜನರ ಕುರಿತಾಗಿ ಮಾತಾಡಿದನು. ರೋಮಾ 1:25ರಲ್ಲಿ ಅನ್ಯಜನರೊಳಗೆ ವ್ಯಾಪಕವಾಗಿದ್ದ ಪಾಪಗಳ ಕುರಿತಾಗಿ ಮಾತಾಡಿದನು, ಆತನು ವಿಗ್ರಹಾರಾಧಕರನ್ನು "ಸತ್ಯದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದುಕೊಂಡು

ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿವಸ್ತುಗಳನ್ನೇ ಪೂಜಿಸಿ ಸೇವಿಸುವವರಾದರು" ಎಂಬುದಾಗಿ ಬಣ್ಣಿಸುತ್ತಾನೆ.

*ಈ ವಾಕ್ಯಭಾಗಗಳ ಪ್ರಕಾರವಾಗಿ, ದೇವರ ಮನಸ್ಸಿಲ್ಲಿ, ನಮ್ಮ ಪ್ರೀತಿ ಅಥವಾ ವಿಶ್ವಾಸದ ಪ್ರತೀಕವಾಗಿ ಆತನನ್ನು ಹೊರತು ಪಡಿಸಿ ಬೇರೆ ಯಾವದಕ್ಕಾದರೂ ಸ್ಥಾನ ಕೊಟ್ಟರೆ ಅದು ವಿಗ್ರಹಾರಾಧನೆ ಆಗಿರುತ್ತದೆ.* ಕೆಲವು ವಿಧಗಳಲ್ಲಿ, ನಮ್ಮ ಭಕ್ತಿಯನ್ನು ಪಡೆಯುವ ಈ ಅಭೌತಿಕವಾದ ವಸ್ತುಗಳೆಲ್ಲಾ ಹೆಚ್ಚು ಅಪಾಯಕಾರಿ ಯಾಕೆಂದರೆ ಅವುಗಳನ್ನು ಅಪಾಯಕಾರಿ ಎಂದು ಕಾಣುವದಿಲ್ಲ. ಅವುಗಳು ನಮ್ಮ ಕಷ್ಟಗಳಲ್ಲಿ ಸಹಾಯ ಮಾಡುವದಕ್ಕೆ ಅಥವಾ ಯಾವದೋ ಆಶೀರ್ವಾದವನ್ನು ಕೊಡುವದಕ್ಕೆ ಹೇಗಾದರೂ ಶಕ್ತವಾಗುತ್ತವೆಂದು ನಿರೀಕ್ಷಿಸಿ "ಮೂಕ ವಿಗ್ರಹಗಳ" ಮುಂದೆ ತಲೆಬಾಗುವಂಥ ಮೂರ್ಖತನವು ಕಾಣಲ್ಪಡುವಂತೆ ಮಾಡುವದಿಲ್ಲ (ನೋಡಿರಿ ಯೆಶಾಯ 44). ನಾವು ಪ್ರಾಚೀನವಾದ ಅಕ್ಷರಶಃ ವಿಗ್ರಹಗಳಿಂದ ಮೋಸ ಹೋಗಲಾರದಷ್ಟು ಅತ್ಯಂಥ ಅತ್ಯಾಧುನಿಕತೆಯುಳ್ಳವರೆಂದು ಯೋಚಿಸುತ್ತೇವೆ; ಆದರೆ ಮೋಸಗೊಳಿಸುವ ತನ್ನ ಕಲೆಗಳಲ್ಲಿ ಸೈತಾನನು ಹೇಗೋ ನಮಗಿಂತ ಮುಂದಿರುತ್ತಾನೆ ಮತ್ತು ನಮ್ಮ ಅತ್ಯಂಥ ದುರ್ಬಲ ಅಂಶಗಳನ್ನು ಗುರಿಯಿಟ್ಟ, ನಮ್ಮ ಬಿದ್ದುಹೋಗಿರುವ ಮಾನವ ಸ್ವಭಾವದ ಅಕೀಲಿಸನ ಹಿಮ್ಮಡಿಯನ್ನು ಗುರಿಯಿಟ್ಟ ಅಗ್ನಿಬಾಣಗಳನ್ನು ಹೇಗೆ ಬಿಡಬೇಕೆಂದು ಚೆನ್ನಾಗಿ ಬಲ್ಲವನಾಗಿರುತ್ತಾನೆ.

ಶ್ರೀಮಂತನಿಗಾದರೋ, ಆಧುನಿಕ ಮನುಷ್ಯನ ಅತ್ಯಂಥ ಕುಟಿಲವಾದ ಹಾಗೂ ಅಪಾಯಕಾರಿ ವಿಗ್ರಹಗಳಲ್ಲೊಂದು ಎಂದರೆ ದುರಾಶಾಪರತೆಯೇ ಆಗಿರುತ್ತದೆ, ಅದು ಅನೇಕ ಸಾರಿ "ಯಶಸ್ಸು" ಎಂಬ ಮುಖವಾಡವನ್ನು ಧರಿಸಿಕೊಂಡಿರುತ್ತದೆ. ಕೊಲೊ 3:5ರಲ್ಲಿರುವ ದುರ್ಗುಣಗಳಲ್ಲಿ, "ಲೋಭ" ಅಥವಾ "ದುರಾಶೆ" (KJV), *ಪ್ಲೆಯೊನೆಕ್ಷಿಯಾ* ಎಂಬುದು, ಗ್ರೀಕ್ ವಾಕ್ಯದಲ್ಲಿ ಇದರ ಮುಂದೆ ಮಾತ್ರವೇ ನಿರ್ದಿಷ್ಟ ಗುಣವಾಚಿ ("the") ಇರುತ್ತದೆ. ಇದು ಆಂಗ್ಲ ತರ್ಜುಮೆಗಳಲ್ಲಿ ಕಾಣಿಸಿಕೊಳ್ಳುವದಿಲ್ಲವಾದರೂ, ಮೂಲ ಭಾಷೆಯಲ್ಲಿ ಇದು ಒಂದು ವೈಶಿಷ್ಟ್ಯವಾದ ವ್ಯಾಕರಣಾತ್ಮಕ ಮಹತ್ವಪೂರ್ಣತೆಯನ್ನು ಹೊಂದಿರುತ್ತದೆ; ಅದರ ಅರ್ಥವು ಒಂದು ರೀತಿಯಲ್ಲಿ "ಮತ್ತು ಆ ಪ್ರಮುಖ ದುರ್ಗುಣವೆಂದರೆ, ದುರಾಶೆಯೇ"[65] ಎಂದಾಗಿರುತ್ತದೆ. ಜೀವಿತದಲ್ಲಿ ನಮ್ಮ ಪರಿಸ್ಥಿತಿಯು ಏನೇ ಆಗಿದ್ದರೂ ಸರಿಯೇ, "ಬೇಕಾದದ್ದು ಒಂದೇ" (ಲೂಕ 10:42). ದೇವರಿಗೆ ಮತ್ತು ಆತನ ವಾಕ್ಯಕ್ಕೆ ಮಿಕ್ಕ ಎಲ್ಲದಕ್ಕಿಂತಲೂ ಉನ್ನತ ಸ್ಥಾನವನ್ನು ಕೊಡೋಣ.

## ವೈಯಕ್ತಿಕ ಅನುಭವದಿಂದ ಬೋಧಿಸುವದು (4:12-15)

ಪೌಲನು ಗಲಾತ್ಯದವರಿಗೆ ಬರೆಯುವ ವೇಳೆ, ಆತನು ತಾನು ಅವರೊಂದಿಗೆ ಹೊಂದಿದ್ದ ಅನುಭವಗಳನ್ನು ಜ್ಞಾಪಿಸಿಕೊಳ್ಳುತ್ತಾನೆ. ಆತನು ಗಲಾತ್ಯದವರಿಗೆ ಸುವಾರ್ತೆಯನ್ನು ಸಾರುವ ವೇಳೆ, ವೈಯಕ್ತಿಕವಾಗಿ ದುಸ್ಥಿತಿದ್ದಾಗ್ಯೂ ಅವರೊಂದಿಗೆ ತನ್ನನ್ನು ಗುರುತಿಸಿಕೊಂಡಿದ್ದನು, ಅವರು ಆತನನ್ನು ಆದರದಿಂದ ಸ್ವಾಗತಿಸಿದ್ದರು ಮತ್ತು ಆತನೊಂದಿಗೆ ನಿಕಟವಾದ ಸ್ನೇಹವನ್ನು ಬೆಳೆಸಿಕೊಂಡಿದ್ದರು (4:12-15). ಪೌಲನು ಕ್ರಿಸ್ತನಿಗೆ ಅವರು ಪೂರ್ಣ ಸಮರ್ಪಣೆಯನ್ನು ಪುನಃ ತೋರಿಸುವವರಾಗುವಂತೆ ಮಾಡುವದಕ್ಕಾಗಿ ತಮ್ಮಲ್ಲಿದ್ದ ಸಾಮಾನ್ಯ ಅನುಭವಗಳನ್ನು ಬಳಸಿದನು.

ನಾನೊಂದು ಸಾರಿ ಒಂದು ಸಂದೇಶವನ್ನು ಬೋಧಿಸಿದ ಬಳಿಕ, "ದೇವರ ವಾಕ್ಯದಲ್ಲಿ" ವೈಯಕ್ತಿಕ ಕಥೆಗಳಿಗೆ ಸ್ಥಳವಿಲ್ಲವಾದ್ದರಿಂದ ನನ್ನ ಸ್ವಂತ ಜೀವನದ ಅನುಭವಗಳನ್ನು

ಸೇರ್ಪಡೆಗೊಳಿಸಬಾರದು ಎಂಬುದಾಗಿ ನನಗೆ ಬುದ್ಧಿವಾದ ಹೇಳಲಾಯಿತು. ಆರಂಭದಲ್ಲಿ ನನಗೆ ಆಶ್ಚರ್ಯವೇನಿಸಿತ್ತೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಹೇಗೂ, ಸುವಾರ್ತೆಯು ಒಬ್ಬನ ಜೀವಿತದ ಮೇಲೆ ಹೇಗೆ ಪರಿಣಾಮ ಬೀರಿರುತ್ತದೆಂಬುದರ ಕುರಿತಾದ ವೈಯಕ್ತಿಕ ಸಾಕ್ಷಿಯು ಬೀರುವಷ್ಟು ಪ್ರಭಾವವನ್ನು ಬೇರೆ ಕೆಲವೇ ಸಂಗತಿಗಳು ಮಾತ್ರ ಬೀರಬಲ್ಲವು. ಆತನು ತಿಳಿಸುತ್ತಿರುವ ಸಂಗತಿಯು ಆತನ ತಲೆಯಲ್ಲಿರುವದನ್ನಷ್ಟೆ ಅಲ್ಲದೆ, ಆತನ ಹೃದಯವು ಏನು ಮಾತಾಡುತ್ತಿದೆ ಎಂಬುದನ್ನು ಆತನ ವಾಚಕರಿಗೆ ತಿಳಿಸುವದಾದರೆ, ಆತನು ತನ್ನ ಜೀವಿತದಲ್ಲಿರುವ ದೇವರ ಶಕ್ತಿಯ ಕುರಿತಾಗಿ ಸಾಕ್ಷಿ ಹೇಳುತ್ತಿರಬಹುದಾಗಿದೆ. ಒಬ್ಬ ಬೋಧಕ ಅಥವಾ ಲೇಖಕನು ಕೇವಲ ಶ್ರೋತೃಗಳನ್ನು ಮೆಚ್ಚಿಸುವದಕ್ಕೇ ಮಾತ್ರವೇ ಪ್ರಯತ್ನಿಸಿದೆ ಆತನು ಮಾತಾಡುತ್ತಿರುವ ವಾಕ್ಯದ ಪ್ರಭಾವದಿಂದಾಗಿ ಭಾವವು ಆತನಲ್ಲಿ ಉಕ್ಕಿ ಬರುವದಾದಲ್ಲಿ ಅಂಥ ಭಾವವು ಇರುವದು ಒಳ್ಳೇದಾಗಿರಬಲ್ಲದು. ನಮ್ಮ ಮುಂದಿರುವ ವಾಕ್ಯಭಾಗದಲ್ಲಿ, ಪೌಲನ ಸಂದೇಶದಲ್ಲಿ ಖಂಡಿತವಾಗಿಯೂ ಆತನ ಭಾವವು ಪಾತ್ರ ವಹಿಸಿತ್ತು.

**ಚಂಚಲತೆ (4:15)**

ಪೌಲನು ಗಲಾತ್ಯದವರಿಗೆ ಹೀಗೆ ಕೇಳಿದನು, "ಆಗ ನಮಗೆ ಶುಭವಾಯಿತೆಂದು ನೀವು ಅಂದುಕೊಂಡಿರಲ್ಲಾ; ಆ ಶುಭವು ಎಲ್ಲಿ ಹೋಯಿತು?" (4:15a). ಈ ಪ್ರಶ್ನೆಯು ಸಂಪೂರ್ಣ ತಿರುಗುಮುರುಗಾಗಿದ್ದ ಅವರ ಮನೋಭಾವವನ್ನು ಬಯಲಿಗೇಳೆದಿತ್ತು, ಅದು ಯೆಹೂದಿಕರಣಗೊಳಿಸುವವರು ಮೋಸತನದಿಂದ ಮಾಡಿದ ಕೆಲಸದ ಫಲಿತವಾಗಿತ್ತು. ಈ ಮೇಲಕ್ಕೆ ಕಾಣಿಸುವ ಚಾಂಚಲ್ಯತೆಯು ಗಲಾತ್ಯದವರಿಗೆ ವೈಶಿಷ್ಟ್ಯವಾಗಿತ್ತದೆಂದು ನಾವು ಹೇಳಬಹುದೋ? ಇಲ್ಲ, ಯೇಸುವಿನ ದಿನದಲ್ಲಿದ್ದ ಯೆಹೂದ್ಯರಲ್ಲಿ ಸಹ ಏಕಾಏಕಿ ಬದಲಾಣೆಯು ಸಂಭವಿಸಿತ್ತು: ಒಂದು ಕ್ಷಣ ಅವರು ಜಯಭರಿತವಾಗಿ ಯೆರೂಸಲೇಮಿಗೆ ಪ್ರವೇಶ ಮಾಡುತ್ತಿದ್ದ "ಕರ್ತನ ಹೆಸರಿನಲ್ಲಿ ಬರುವ" ಅರಸನನ್ನು ಕೊಂಡಾಡುತ್ತಿದ್ದರು, ಮತ್ತು ಅದಾಗಿ ಇನ್ನೂ ಒಂದು ವಾರವೂ ಕಳೆದಿರಲಿಲ್ಲ, ಅವರು "ಆತನನ್ನು ಶಿಲುಬೆಗೆ ಹಾಕಿರಿ" ಎಂದು ಕೂಗುತ್ತಿದ್ದರು (ಮತ್ತಾಯ 21:9; 27:22, 23).

ಸಾರ್ವತ್ರಿಕವಾಗಿ ಅನ್ವಯವಾಗಬಲ್ಲ ಬಿತ್ತುವವನ ಸಾಮ್ಯದಲ್ಲಿ ಅದೇ ವಿಧವಾದ ಅಸ್ಥಿರತೆಯನ್ನು ಕಾಣುತ್ತೇವೆ (ಮತ್ತಾಯ 13:5, 6, 20, 21). ಇಂದು ತೋರ್ಕೆಯ, ಉದ್ವೇಗಗಕ್ಕೊಳಗಾಗುವ ಜನರು ಕ್ರಿಸ್ತನಿಗೆ ಸ್ಪಂದಿಸುತ್ತಾರೆ ಆದರೆ ಬಳಿಕ ಆತನನ್ನು ಹಿಂಬಾಲಿಸುವದರಿಂದ ವಿಮುಖರಾಗುತ್ತಾರೆಂಬುದನ್ನು ನಾವು ಕಾಣುತ್ತೇವೆ. ನಮ್ಮ ವಿಷಯವೇನು? ಕರ್ತನೊಂದಿಗಿನ ನಮ್ಮ ಸಂಬಂಧದಲ್ಲಿ ನಮ್ಮಲ್ಲಿ ಯಾರಾದರೂ ವ್ಯತ್ಯಾಸವಾಗಿರುತ್ತೇವೆಂದು ಹೇಳಿಕೊಳ್ಳಬಲ್ಲೆವೋ? ನಮ್ಮ "ಮೊದಲಿದ್ದ ಪ್ರೀತಿ"ಯನ್ನು ಬಿಟ್ಟು ನಾವು ಎಷ್ಟು ಸಾರಿ ಬೇರೆಯದ್ದರ ಕಡೆಗೆ ಗಮನ ಕೊಡುತ್ತೇವೆ? ಆತನು ನಿಜಕ್ಕೂ ಹೇಗಿದ್ದಾನೆಂಬುದನ್ನು ಮತ್ತು ಆತನು ಸತ್ಯವಾಗಿಯೂ ನಮಗೆಷ್ಟು ಅರ್ಥಪೂರ್ಣನು ಎಂಬುದನ್ನು ಶ್ಲಾಘಿಸುವವರಾಗಿ, ನಾವು ಮೊದಲ ಬಾರಿಗೆ ಆತನನ್ನು ಹುರುಪಿನಿಂದ ಭೇಟಿಯಾದದ್ದನ್ನು ಪುನಃ ಸೆರೆ ಹಿಡಿಯಬೇಕೆಂದು ಹಂಬಿಸುತ್ತೇವೋ? ಈ ಬಯಕೆಯು "ಓ ದೇವರೊಂದಿಗೆ ಒಂದು ನಿಕಟ ನಡೆಗೋಸ್ಕರ" ಎಂಬ ಸಂಕೀರ್ತನೆಯಲ್ಲಿ ಸೆರೆ ಹಿಡಿಯಲ್ಪಟ್ಟಿದೆ:

ನಾನು ಕರ್ತನನ್ನು ಮೊದಲ ಬಾರಿಗೆ ನೋಡಿದ ವೇಳೆ
ತಿಳಿದಿದ್ದ ಆ ಧನ್ಯತೆಯು ಎಲ್ಲಿದೆ?
ಆತ್ಮಕ್ಕೆ ಚೈತನ್ಯ ನೀಡುವ ಯೇಸುವಿನ ನೋಟ ಮತ್ತು ಆತನ ವಾಕ್ಯವು ಎಲ್ಲಿದೆ?[66]

ಈ ಹಾಡು ನಮ್ಮಲ್ಲಿ ನೆನಪನ್ನು ಎಬ್ಬಿಸತಕ್ಕದ್ದು ಮತ್ತು ಆ ಧನ್ಯ ಭಾವದ ಆರಂಭಿಕ ಉತ್ತುಂಗತೆಯನ್ನು ಮರುಕಳಿಸುವಂತೆ ಮಾಡತಕ್ಕದ್ದು. ನಾವು ಆತನ ಬಳಿಗೆ ಮೊದಲ ಬಾರಿಗೆ ಬಂದ ವೇಳೆ ಅನುಭವಿಸಿದ, ನಾವು ಎಂದಿಗೂ ನಿರೀಕ್ಷೆಯನ್ನೇ ಮಾಡಿದರ ಮಟ್ಟಕ್ಕೆ ಆತನು ನಮ್ಮನ್ನು ಮೇಲತ್ತಿದ್ದ ವೇಳೆ ಆದ ಆತ್ಮೀಕ ಉನ್ಮಾದವನ್ನು ನಾವು ಗಟ್ಟಿಯಾಗಿ ಹಿಡಿದುಕೊಳ್ಳಲು ಹಾರೈಸುವದಿಲ್ಲವೋ? ಹೊಸದಾಗಿ ಹುಟ್ಟಿ ಲೌಕಿಕವಾದ, ಭೌತಿಕ ಜೀವಿತದ ಮಟ್ಟದಿಂದ ದೇವರ ಪರಿಶುದ್ಧಾತ್ಮನ ಮಟ್ಟಕ್ಕೆ ಸಾಗುವವರೆಲ್ಲರ ಅನುಭವವಾಗಿರತಕ್ಕದ್ದು. ಹೇಗೂ, ನೀತಿಗೆಟ್ಟ ಮತ್ತು ಸ್ವಚ್ಛಂದ ವಿಗ್ರಹಾರಾಧನೆಯ ಜೀವನ ಶೈಲಿಯಲ್ಲಿ ಬೆಳೆದವರಾಗಿದ್ದವರಿಗೆ ಈ ಸ್ಥಿತ್ಯಂತರಣವು ಇನ್ನಷ್ಟು ಅಧಿಕ ನಾಟಕೀಯತೆಯಿಂದ ಕೂಡಿರತಕ್ಕದ್ದು!

ಪೌಲನಿಗೆ ಅಷ್ಟೊಂದು ಆಘಾತಕಾರಿ ಅನ್ನಿಸಿದ್ದ ಸಂಗತಿಯು ಏನೆಂದರೆ, ಕ್ರೈಸ್ತತ್ವದ ಆರಂಭಿಕ ದಿನಗಳಲ್ಲಿದ್ದ ಯಾರಾದರೂ, ಹಿಂದೆ ಅವರಿಗಿದ್ದ ವಿಗ್ರಹಾರಾಧನೆ ಅಥವಾ ಧರ್ಮಶಾಸ್ತ್ರಾಧೀನದ "ಕೆಲಸಕ್ಕೆ ಬಾರದ ದರಿದ್ರಬಾಲಬೋಧೆಗೆ" (4:9) ಹಿಂದಿರುಗುವ ಕುರಿತು ಕಲ್ಪನೆಯನ್ನು ಸಹ ಮಾಡಿಕೊಳ್ಳಲು ಸಾಧ್ಯವಾಗಿತ್ತು ಎಂಬುದೆ. ಆತನು ಹೀಗೆ ಕೇಳುವವನಾಗಿದ್ದನು, "ನೀವು ಹಾಗೆ ಮಾಡುವದಕ್ಕಾದರೂ ಹೇಗೆ ಸಾಧ್ಯ? ನಿಮಗೆ ಅಂಥ ಧೈರ್ಯವಾದರೂ ಹೇಗೆ ಬಂದಿತು! ನೀವು ಅಷ್ಟೊಂದು ಮೂರ್ಖರಾಗಿರುವದಕ್ಕೆ ಹೇಗೆ ಸಾಧ್ಯವಾಗಿರುತ್ತದೆ?"

## ಭಾವೋದ್ರಿಕ್ತವಾದ ಬೋಧನೆ (4:19)

1. ಬೋಧನೆಯಲ್ಲಿ ಭಾವನಾತ್ಮಕವಾಗಿ ಬೇಡಿಕೊಳ್ಳುವದನ್ನು ಬಳಸಬೇಕೋ? "ಭಾವ" ಎಂಬ ಪದವು "ಚಲನೆ," "ಪ್ರೇರಣೆ," "ಉದ್ದೇಶ," ಮತ್ತು "ಚಾಲಕ ಯಂತ್ರ" ಸಹ ಎಂಬ ಪದಗಳಿಗೆ ಸಂಬಂಧಿಸಿರುತ್ತದೆ. ಇದು ತೀರ್ಮಾನಗಳನ್ನು ಮಾಡಿಕೊಳ್ಳುವಂತೆ ಮತ್ತು ಕ್ರಿಯೆ ಮಾಡುವಂತೆ ಜನರನ್ನು ನಡಿಸುವಂಥದ್ದಾಗಿದೆ. ಇದನ್ನು ವಿವಿಧ ದಾರಿಗಳಲ್ಲಿ ಸಾಧಿಸಬಹುದಾಗಿದೆ: ಒತ್ತಡಭರಿತವಾದ ವಾದವಿವಾದದಿಂದ, ಬುದ್ಧಿಯಿಂದ ಯೋಚಿಸುವಂತೆ ಮಾಡುವದರಿಂದ; ಅವರಲ್ಲಿ ಪಾಪದ ಅರುಹು ಹುಟ್ಟಿಸುವದರಿಂದ, ಮನಸ್ಸಾಕ್ಷಿಯನ್ನು ಸೆಳೆಯುವ ಮೂಲಕ; ಅವರಲ್ಲಿ ಹೆದರಿಕೆಯುಂಟಾಗುವಂತೆ ಮಾಡುವದರಿಂದ, ತಪ್ಪು ಕೃತ್ಯದಿಂದಾಗುವ ಪರಿಣಾಮಗಳೇನೆಂಬುದನ್ನು ತೋರಿಸಿ ಕೊಡುವದರಿಂದ;[67] ಮತ್ತು ನಾಚಿಕೆ, ಕೃತಜ್ಞತೆ, ಪ್ರೀತಿ, ಮತ್ತು ನಿರೀಕ್ಷೆಗಳ ಸಂವೇದನೆಗಳನ್ನು ಅವರಲ್ಲಿ ಎಬ್ಬಿಸುವದರ ಮೂಲಕ. ಅಪಾಯದ ಸಮ್ಮುಖದಲ್ಲಿ ಧೈರ್ಯವನ್ನು ತೋರಿಸುವಂತೆ, ಸಂಕಷ್ಟಗಳನ್ನು ಮತ್ತು ಶ್ರಮೆಯನ್ನು ಸಹಿಸಿಕೊಳ್ಳುವಂತೆ, ದೊಡ್ಡ ಅಡೆತಡೆಗಳನ್ನು ಜಯಿಸುವಂತೆ, ಪಾಪವನ್ನು ಎದುರಿಸುವಂತೆ, ನೀತಿಯ ಧ್ಯೇಯವನ್ನು ಮುನ್ನಡೆಸಬೇಕೆಂದು ಆಕಾಂಕ್ಷಿಸುವಂತೆ ಜನರನ್ನು ನಡಿಸುವದು, ಅಥವಾ ಒಬ್ಬ ವ್ಯಕ್ತಿಯನ್ನು ಆತನ ಜಢಭಾವ ಅಥವಾ ಅಸಡ್ಡೆತನದಿಂದ ಎಚ್ಚೆತ್ತು ಹೊರ ಬರುವಂತೆ ಮಾಡುವದು ಭಾವವೇ ಆಗಿರುತ್ತದೆ.

ಜನರಿಗೆ ಸುವಾರ್ತೆಯ ವಾಸ್ತವಾಂಶಗಳನ್ನು - ಆತನ ಶ್ರೋತೃಗಳು ಆತನಲ್ಲಿ ಏನು ಕಾಣುತ್ತಾರೆ ಮತ್ತು ಕೇಳಿಸಿಕೊಳ್ಳುತ್ತಾರೆಂಬುದರ ಅರಿವು ಇಲ್ಲದೆ, ಕ್ರಿಸ್ತನ ಸಿದ್ಧಾಂತವನ್ನು ನೀಡಿ ಬಿಟ್ಟರೆ - ಕೊಟ್ಟರಷ್ಟೆ ಸಾಕಾಗುತ್ತದೆ ಎಂದು ಯೋಚಿಸುವ ಭಾವಿ ಸುವಾರ್ತಿಕನು ಆತನ ಧ್ಯೇಯದಲ್ಲಿ ವಿಫಲನಾಗುವದಂತೂ ಖಚಿತವಾಗಿರುತ್ತದೆ. ಯಾರನ್ನೂ ಕ್ರಿಯೆ ಮಾಡುವಂತೆ ಕದಲಿಸದಂತಹ ಅಪಾರವಾದ ಮಾಹಿತಿಯು ಸಪ್ಪೆಯುಳ್ಳ, ಬೇಸರ ಹಿಡಿಸುವಂತೆ ಮಾಡುವ

ರೀತಿಯಲ್ಲಿ (ವಾಸ್ತವಾಂಶಗಳಿಂದ ಕೂಡಿದ್ದಾಗ್ಯೂ) ಸುವಾರ್ತೆಯ ಸಂದೇಶವನ್ನು ಸಾರುವ ಸಾಧ್ಯತೆಯ ಬಹಳವಿರುತ್ತದೆ. ಸ್ವತಃ ಬೋಧಕನು ತಾನು ಸಾರುತ್ತಿರುವ ಸಂಗತಿಯಿಂದ ಸೆಳೆಯಲ್ಪಟ್ಟಿದ್ದಾನೆಂಬ ಅನಿಸಿಕೆಯು ಬರುವಂತೆ ನಡೆದುಕೊಳ್ಳುವದಿಲ್ಲವಾದರೆ, ಆತನೇ ಅದರಿಂದ ಕದಲಿಸಲ್ಪಟ್ಟಿಲ್ಲವಾದ್ದರಿಂದ ಶ್ರೋತೃಗಳು ಅದರಿಂದ ಸ್ಪರ್ಶಿಸಲ್ಪಡುವದು ಅಸಂಭನೀಯವಾಗುತ್ತದೆ.

ಪದವಿ ವ್ಯಾಸಂಗವನ್ನು ಮಾಡುತ್ತಿರುವ ವೇಳೆ, ತನ್ನ ತರಗತಿಯಲ್ಲಿ ಎಲ್ಲಾ ಕೋರ್ಸುಗಳಲ್ಲಿಯೂ ಅಗ್ರ ಸ್ಥಾನದಲ್ಲಿ ಅಥವಾ ಅದಕ್ಕೆ ಸಮೀಪದಲ್ಲಿದ್ದಂಥ ಒಬ್ಬ ಅತ್ಯಂಥ ಬುದ್ಧಿವಂತ ಯುವಕನ ಪರಿಚಯ ಮಾಡಿಕೊಂಡೆನು. ಪದವಿ ಪ್ರಧಾನ ಮುಗಿದ ಬಳಿಕ, ಆತನು "ಸೇವೆಯನ್ನು ಪ್ರವೇಶಿಸಿದನು" ಮತ್ತು, ಸ್ವಲ್ಪ ಕಾಲದಲ್ಲಿ, ಆತನು ಬೃಹತ್ ಸಭೆಗಳಲ್ಲಿ ಬೋಧನೆಯನ್ನು ಮಾಡುತ್ತಿದ್ದನು. ಆತನ ಪ್ರಸಂಗದ ವಿನ್ಯಾಸ, ವಿಷಯವಸ್ತು, ತರ್ಕ, ವಾಕ್ಯಕ್ಕೆ ನಿಷ್ಠೆ ಮುಂತಾದವುಗಳಲ್ಲಿ ಯಾವ ತಪ್ಪುಗಳೂ ಇರುತ್ತಿರಲಿಲ್ಲ. ಅವುಗಳನ್ನು ಒಂದು ಪ್ರತಿಧ್ವನಿಸುವ ಸ್ವರದಲ್ಲಿ, ಅಂಶಗಳನ್ನು ಬರೆದಿಟ್ಟುಕೊಳ್ಳದೆಯೇ ಪ್ರಸಂಗಿಸುತ್ತಿದ್ದನು. ಹೇಗೋ, ವರವನ್ನು ಹೊಂದಿದ್ದ ಈ ಮನುಷ್ಯನು ಕುಂದಿಲ್ಲದ ಗುಣಮಟ್ಟದ ಮತ್ತು ಅಪಾರ ಪ್ರಾಮುಖ್ಯತೆಯುಳ್ಳ ಪಾಠಗಳನ್ನು ಬೋಧಿಸುವ ಸಾಮರ್ಥ್ಯವಿದ್ದರೂ ತಾನು ಹೇಳುತ್ತಿರುವ ಸಂಗತಿಯು ಆತನ ಮೇಲೆ ಪರಿಣಾಮ ಬೀರಿರುತ್ತದೆ ಎಂಬುದಕ್ಕೆ ಸ್ವಲ್ಪವೂ ಪುರಾವೆಯನ್ನು ತೋರ್ಪಡಿಸದವನಾಗಿದ್ದನು! ಆತನಿಗೆ ಸಾಕಷ್ಟು ಪ್ರತಿಭೆಗಳಿದ್ದಾಗ್ಯೂ, ಸುವಾರ್ತೆಯ ಸೇವಕನಾಗಿ ಆತನು ತಕ್ಕವನಾಗಿರಲಿಲ್ಲ.

ಇನ್ನೊಂದೆಡೆಯಲ್ಲಿ, ಭಾವವನ್ನು ತೋರಿಸಬೇಕೆಂಬ ಕಾರಣಕ್ಕೆ ಮಾತ್ರವೇ ಭಾವವನ್ನು ಬಳಸುವದು ಅಪ್ರಾಮಾಣಿಕತೆ ಮತ್ತು ವಂಚನೆಗಳಿಂದ ಕೂಡಿರುತ್ತದೆ. ಅದು ಜನರನ್ನು ಕೆಲವೊಂದು ವಿಧಗಳಲ್ಲಿ ಕದಲಿಸಬಹುದಾದರೂ, ಭಾವನಾತ್ಮಕತೆಯನ್ನು ವಿಧಾನಶಾಸ್ತ್ರವಾಗಿ ಬಳಸುವದು ಕೇವಲ ಜನರನ್ನು ಮೆಚ್ಚಿಸುವ ವಿಷಯವಾಗುತ್ತದೆ. ಅಂಥ ಪ್ರಯತ್ನದ ಮೂಲ ಮತ್ತು ಪರಿಣಾಮ ಯಾವದಾಗಿರಬಲ್ಲದು? ಪ್ರಭಾವಿತನಾದ ಶ್ರೋತೃವು ತನ್ನನ್ನು ಕ್ರಿಸ್ತನೊಂದಿಗೆ ಜೋಡಿಸಿಕೊಳ್ಳುವನೋ, ಅಥವಾ ಆತನು ತನ್ನ ಭಾವಗಳನ್ನು ಸೆರೆ ಹಿಡಿದುಕೊಂಡ ಬೋಧಕನಿಗೆ ಶಿಷ್ಯನಾಗಬೇಕೆಂದು ಒಪ್ಪಿಸಿಕೊಳ್ಳುವನೋ? ಭಾವವು ಮಾನವ ಮೂಲದಿಂದ ಬಂದಿರುವದಾದರೆ ಮತ್ತು ಒಂದು ಗುರಿಯನ್ನು ಸಾಧಿಸಬೇಕೆಂಬುದಕ್ಕಾಗಿ ಒಂದು ವಿಧಾನವಾಗಿ ಮಾತ್ರವೇ ಬಳಸಿಕೊಳ್ಳಲ್ಪಟ್ಟಿರುವದಾದರೆ, ಸಾಧಿಸಲ್ಪಟ್ಟಿದ್ದು ಏನೇ ಆಗಿದ್ದರೂ ಅದು ಕೇವಲ ಒಬ್ಬ ಮನುಷ್ಯನಿಂದಾದ ಕ್ರಿಯೆಯಾಗಿ ಮಾರ್ಪಡಬಲ್ಲದು.

ಬೋಧಕನು ತೋರ್ಪಡಿಸಿದ ಭಾವವು ದೇವರ ವಾಕ್ಯವನ್ನು ಅಂತರ್ಮುಖವಾಗಿಸಿಕೊಂಡು ಧ್ಯಾನ ಮಾಡುವದರಿಂದಾಗಿ ಎಬ್ಬಿಸಲ್ಪಟ್ಟಿರುವದಾದರೆ ಪರಿಣಾಮವು ವ್ಯತ್ಯಾಸವಾಗಿರುತ್ತದೆ. ಆತನು ತನ್ನ ಸ್ವಂತ ಜೀವಿತ ಮತ್ತು ಆತನ ಶ್ರೋತೃಗಳ ಜೀವಿತಕ್ಕೆ ಸುವಾರ್ತೆಯು ಹೊಂದಿರುವ ಅರ್ಥದ ಮೂಲಕವಾಗಿ ಭಾವನಾತ್ಮಕವಾಗಿರುವದಾದರೆ, ಆತನ ಭಾವೋದ್ರಿಕ್ತತನದ ಮೂಲವು ದೇವರ ವಾಕ್ಯದ ಮೂಲಕವಾಗಿ ದೇವರಾತ್ಮನು ಮಾಡಿದ ಕೆಲಸವೇ ಆಗಿರುತ್ತದೆ. ಇದು ಕೇವಲ ಮಾನವ ಕೆಲಸವಾಗಿರುವದಿಲ್ಲ, ಆದರೆ ದೇವರ ಕೆಲಸವೇ ಆಗಿರುತ್ತದೆ.

ಪೌಲನು ತನ್ನ "ಚಿಕ್ಕ ಮಕ್ಕಳಿಗೆ" (4:19; ESV) ಮನವಿ ಮಾಡಿಕೊಳ್ಳುವವನಾಗಿ ನುಡಿದ ಆತನ ನೋವುಭರಿತ ಮತ್ತು ವೇದನೆಯಿಂದ ಕೂಡಿದ ಮಾತುಗಳಲ್ಲಿ ಈ ವಿಧವಾದ ಭಾವವನ್ನೇ ನಾವು ಕಾಣುತ್ತೇವೆ. ಆತನ ಪ್ರಿಯರಾದ ಆತ್ಮೀಕ ಮಕ್ಕಳು, ಆತನಿಂದ ಮಾತ್ರವೇ

ಅಲ್ಲ, ಆದರೆ ಕ್ರಿಸ್ತನಿಂದ ಸಹ ವಿಮುಖರಾಗಿ ತಿರುಗಿಕೊಳ್ಳುವದನ್ನು ಕಂಡಾಗ, ಆತನು ಹೇಗೆ ಭಾವಾವೇಶಕ್ಕೊಳಗಾಗದೆ ಇರುವದಕ್ಕೆ ಸಾಧ್ಯವಿತ್ತು? ಆತನು ಪುನಃ ಅವರನ್ನು ಪಶ್ಚಾತ್ತಾಪಕ್ಕೆ ನಡಿಸುವದಕ್ಕೆ ಶಕ್ತನಾಗುವ ಹೊರತು, ಅಂಥ ಮತಭ್ರಷ್ಟತೆಯು ಫಲಿತವು ಅಂತಿಮವಾಗಿ ಅವರು ನಾಶವಾಗುವದೇ ಆಗಿತ್ತು. ಪೌಲನನ್ನು ಅಷ್ಟೊಂದು ಆಳವಾಗಿ ಕ್ರಿಯಾಶೀಲಗೊಳಿಸಿದ್ದು ಆತನಲ್ಲಿದ್ದ ಕ್ರಿಸ್ತನ ಆತ್ಮದ ಪ್ರತಿಫಲನೇ ಹೊರತು ಮತ್ತೇನೂ ಆಗಿರಲಿಲ್ಲ.

2. ಕ್ರಿಸ್ತನು ಯಾವ ಭಾವಗಳನ್ನು ತೋರ್ಪಡಿಸಿದನು? ಕ್ರಿಸ್ತನ ಭಾವಗಳನ್ನು ಪರಿಗಣಿಸೋಣ. ಈ ವಿಷಯದ ಕಡೆಗೆ ಗಮನವನ್ನು ಹರಿಸದೆ ಇರುವ ವ್ಯಕ್ತಿಗೆ ಮೂಲ ಗ್ರೀಕ್ ಭಾಷೆಯಲ್ಲಿರುವ ಕೆಲವೊಂದು ಮಾತುಗಳು ಅಚ್ಚರಿಯನ್ನುಂಟು ಮಾಡಬಲ್ಲವು. ಈ ಭಾವಗಳು ಹರ್ಷಗೊಳ್ಳುವಿಕೆಯಿಂದ ಹಿಡಿದು ಕೋಪ ಮತ್ತು ಆಳವಾದ ವೇದನೆಯಂತಹ ಪೂರ್ಣ ವ್ಯಾಪ್ತಿಗೊಳ ಪಟ್ಟಿರುತ್ತವೆ.

*ಸಂತೋಷ.* "ಆತನು ಪವಿತ್ರಾತ್ಮನ ಪ್ರೇರಣೆಯಿಂದ ಉಲ್ಲಾಸಗೊಂಡು" (ಲೂಕ 10:21). "ಉಲ್ಲಾಸಗೊಂಡು" (ἀγαλλιάω, *agalliaō*) ಎಂಬುದಕ್ಕಿರುವ ಗ್ರೀಕ್ ಪದದ ಅರ್ಥವು "ಅತ್ಯಧಿಕವಾಗಿ ಸಂತೋಷಗೊಳ್ಳು, *ಹರ್ಷಗೊಳ್ಳು*, *ಆನಂದಿಸು*, *ಅತ್ಯಾನಂದಗೊಳ್ಳು*"[68] ಎಂದಾಗಿರುತ್ತದೆ. ಇದು ದೇವರಿಂದ ಮಾತ್ರವೇ ಬರಬಲ್ಲಂಥ ಸಂತೋಷದ ಪ್ರಮಾಣವನ್ನು ಸೂಚಿಸುತ್ತದೆ.

*ಕೋಪ.* ಯೇಸುವಿನ ಬಳಿಗೆ ತಮ್ಮ ಮಕ್ಕಳನ್ನು ಕರೆದು ತರಬೇಕೆಂದು ಪ್ರಯತ್ನಿಸುತ್ತಿದ್ದ ತಂದೆತಾಯಿಗಳನ್ನು ಆತನ ಶಿಷ್ಯರು ಗದರಿಸಿದ ವೇಳೆ, "ಯೇಸು ಅದನ್ನು ಕಂಡು ಕೋಪಗೊಂಡು ಅವರಿಗೆ - ಮಕ್ಕಳನ್ನು ನನ್ನ ಹತ್ತಿರಕ್ಕೆ ಬರಗೊಡಿಸಿರಿ; ಅವುಗಳಿಗೆ ಅಡ್ಡಿಮಾಡಬೇಡಿರಿ; ದೇವರ ರಾಜ್ಯವು ಇಂಥವರದೇ" (ಮಾರ್ಕ 10:14). ἀγανακτέω (*aganakteō*) ಎಂಬ ಪದದ ಅರ್ಥವು "ಕೆರಳಿದವನಾಗು," "ಕುಪಿತನಾಗು," ಅಥವಾ "ಕೋಪಗೊಳ್ಳು" ಎಂದಾಗಿರುತ್ತದೆ.

*ಕೋಪ.* ಲಾಜರನು ಮರಣ ಹೊಂದಿದ ಬಳಿಕ, "ಆಕೆ [ಮರಿಯಳು] ಗೋಳಾಡುವದನ್ನೂ ಆಕೆಯ ಸಂಗಡ ಬಂದ ಯೆಹೂದ್ಯರು ಗೋಳಾಡುವದನ್ನೂ ಯೇಸು ಕಂಡಾಗ ಆತ್ಮದಲ್ಲಿ ನೊಂದುಕೊಂಡು ತತ್ತರಿಸಿ" (ಯೋಹಾನ 11:33). "ನೊಂದುಕೊಂಡು" ಎಂಬುದು ἐμβριμάομαι (*embrimaomai*) ಗ್ರೀಕ್ ಪದದಿಂದ ಬರುತ್ತದೆ. "ಬೈಬಲ್ ಹೊರಗಿನ ಗ್ರೀಕ್ ಭಾಷೆಯಲ್ಲಿ, ಅದು ಕುದುರೆಗಳು *ಬುಸುಗುಟ್ಟುವಿಕೆ*ಯನ್ನು ಸೂಚಿಸುತ್ತದೆ; ಮಾನವ ಜೀವಿಗಳಿಗೆ ಅನ್ವಯಿಸುವಾಗ, ಅದು ಯಾವದೇ ವ್ಯತ್ಯಾಸವಿಲ್ಲದೆ ಕೋಪ, ರೌದ್ರ ಅಥವಾ ಭಾವನಾತ್ಮಕವಾಗಿ ಕೆರಳುವಿಕೆಯನ್ನು ಸೂಚಿಸುತ್ತದೆ." ಗೋಳಾಡುತ್ತಿದ್ದ ಮರಿಯಳು ಮತ್ತು ಮಾರ್ಥಳು ಹಾಗೂ ಇತರರ ವೇದನೆಯನ್ನು ಕಂಡು ಆಳವಾಗಿ "ನೊಂದುಕೊಳ್ಳುವ" ಬದಲಾಗಿ, ಯೇಸುವು "ಈ ಬಿದ್ದುಹೋಗಿರುವ ಲೋಕದಲ್ಲಿರುವ ಪಾಪ, ವ್ಯಾಧಿ ಮತ್ತು ಮರಣಗಳಿಂದಾಗಿ" ಅಥವಾ ಗೋಳಾಡುತ್ತಿದ್ದವರ ಅಪನಂಬಿಕೆ ಮತ್ತು ಹತಾಶೆಯನ್ನು ಕಂಡು ಕೋಪಗೊಂಡಿರಬಹುದು.[69]

*ದೇವರ ರೌದ್ರ.* ಬತ್ತಿಹೋದ ಕೈಯುಳ್ಳ ಮನುಷ್ಯನನ್ನು ಗುಣಪಡಿಸುವದಕ್ಕೆ ಮುಂಚಿತವಾಗಿ, ಯೇಸುವು "ಅವರ ಮನಸ್ಸು ಕಲ್ಲಾಗಿರುವದನ್ನು ಕಂಡು ದುಃಖಪಟ್ಟು ಕೋಪದಿಂದ ಸುತ್ತಲೂ [ಫರಿಸಾಯರನ್ನು] ನೋಡಿದನು" (ಮಾರ್ಕ 3:5). ಈ ವಚನವು ὀργή (*orgē*, "ಕೋಪ" ಅಥವಾ "ರೌದ್ರ") ಮತ್ತು συλλυπέω (*sullupeō*, "ಆಳವಾಗಿ ನೊಂದುಕೋ" ಅಥವಾ "ಕನಿಕರ ಪಡು") ಎಂಬ ಎರಡೂ ಪದಗಳನ್ನು ಒಳಗೊಂಡಿರುತ್ತದೆ.

“ನೊಂದುಕೋ” ಎಂಬುದಕ್ಕಿರುವ ಸಾಮಾನ್ಯ ಪದವು λυπέω (*lupeō*), *ಆದರೆ ಈ ಪದಕ್ಕೆ ತೀಕ್ಷ್ಣಗೊಳ್ಳುವ* σύν (*sun*) *ಎಂಬ ಉಪಸರ್ಗವಿರುತ್ತದೆ, ಅದು ಸಮೀಕರಣದ ಮೂಲಕವಾಗಿ* συλ- (*sul*-) ಎಂಬುದಕ್ಕೆ ಬದಲಾಗುತ್ತದೆ. ಕ್ರಿಯಾಪದದ ಸೂಚ್ಯಾರ್ಥವು “ಆಳವಾಗಿ ನೊಂದುಕೋ” ಎಂಬುದರಿಂದ ಬಲಗೊಳಿಸಲ್ಪಡುತ್ತದೆ, ಅದು ಬಲವಾದ ಭಾವವನ್ನು ತೋರಿಸುತ್ತದೆ.

*ಪ್ರಲಾಪಿಸುವದು.* “ತರುವಾಯ ಆತನು [ಯೇಸುವು ಯೆರೂಸಲೇಮ್] ಸಮೀಪಕ್ಕೆ ಬಂದಾಗ ಪಟ್ಟಣವನ್ನು ನೋಡಿ ಅದರ ವಿಷಯವಾಗಿ ಅತ್ತು” (ಲೂಕ 19:41). κλαίω (*klaiō*) ಎಂಬುದರ ಅರ್ಥವು “ಅಳು,” “ಪ್ರಲಾಪಿಸು,” ಅಥವಾ “ಕಣ್ಣೀರಿಡು” ಎಂದಾಗಿರುತ್ತದೆ. ಅದೇ ರೀತಿಯಲ್ಲಿಯೇ, ಆಂಗ್ಲ ಬೈಬಲಿನಲ್ಲಿಯೇ ಅತ್ಯಂಥ ಚಿಕ್ಕದಾಗಿರುವ ವಚನದಲ್ಲಿ, ನಾವು ಲಾಜರನ ಸಮಾಧಿಯ ಬಳಿಯಲ್ಲಿ “ಯೇಸು ಕಣ್ಣೀರಿಟ್ಟನು” ಎಂದು ಓದುತ್ತೇವೆ (ಯೋಹಾನ 11:35). ಇನ್ನೊಂದು ಕ್ರಿಯಾಪದವು δακρύω (*dakruō*) ಎಂದಾಗಿದ್ದು, ಇಲ್ಲಿ ಇದೇ ಪದವು ಬಳಸಲ್ಪಟ್ಟಿದೆ; ಇದು ವಾಸ್ತವಿಕದಲ್ಲಿ ಅನಿಶ್ಚಿತ ಭೂತಕಾಲ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ ಮತ್ತು ಅದರ ಉತ್ತಮ ಅನುವಾದವೆಂದರೆ “ಏಕಾಏಕೀ ಜೋರಾಗಿ ಕಣ್ಣೀರು ಸುರಿಸಿ ಅಳು” ಎಂಬುದೆ.[70] ಮೊದಲ ಎರಡು ಪದಗಳು ಶಬ್ದದಿಂದ ಅಳುವದನ್ನು ವ್ಯಕ್ತಪಡಿಸಿದರೆ, ಎರಡನೆಯದ್ದು ಕಣ್ಣೀರಿನ ಮೇಲೆ ಗಮನ ಹರಿಸುತ್ತದೆ. ಇವರೆಡೂ ಬಲವಾದ ಭಾವವನ್ನು ವ್ಯಕ್ತಪಡಿಸುತ್ತದೆ.

*ಕನಿಕರ.* “ಆದರೆ ಜನರ ಗುಂಪುಗಳನ್ನು ನೋಡಿ ಅವರು ಕುರುಬನಿಲ್ಲದ ಕುರಿಗಳ ಹಾಗೆ ತೊಳಲಿ ಬಳಲಿ ಹೋಗಿದ್ದಾರಲ್ಲ ಎಂದು ಅವರ ಮೇಲೆ ಕನಿಕರಪಟ್ಟನು” (ಮತ್ತಾಯ 9:36). “ಕನಿಕರಪಟ್ಟು” ಎಂಬುದು σπλαγχνίζομαι (*splanchnizomai*), ಅದರರ್ಥವು “ಮರುಕ ಪಡು.” ಅದಕೆಕ ಸಂಬಂಧಿಸಿದ ನಾಮಪದವು, σπλάγχνον (*splanchnon*), ಎಂಬ ಗ್ರೀಕ್ ಕ್ರಿಯಾಪದದಿಂದ ಬರುತ್ತದೆ, ಇದು ಎಲ್ಲಾ ಶಾಸ್ತ್ರಗಳಲ್ಲಿಯೇ ಭಾವ ಅಥವಾ ಉದ್ವೇಗಗಳಿಗಾಗಿ ಬಳಸಿರುವ ಅತ್ಯಂಥ ವರ್ಣರಂಜಿತ ವ್ಯಕ್ತಪಡಿಸುವಿಕೆಗಳಲ್ಲೊಂದು ಆಗಿರುತ್ತದೆ. KJVಯಲ್ಲಿ, ಇದನ್ನು ಅನೇಕ ಸಾರಿ “ಕರುಳುಗಳು” ಎಂದು ಅನುವಾದಿಸಲ್ಪಟ್ಟಿರುತ್ತದೆ, ಅವುಗಳನ್ನು ಮಮತೆ, ದಯೆ, ಮತ್ತು ಕನಿಕರದಂತಹ ಬಲವಾದ ಭಾವಗಳ ನೆಲೆಯಾಗಿರುತ್ತವೆಂದು ಭಾವಿಸಲಾಗಿತ್ತು (ನೋಡಿರಿ ಫಿಲಿಪ್ಪಿ 1:8; ಕೊಲೊಸ್ಸೆ 3:12; KJV).

*ಪ್ರೀತಿ, ಹಗೆತನ, ಮತ್ತು ಇತರ ಭಾವಗಳು.* ಯೇಸುವಿನ ಭಾವಗಳನ್ನು ಬಣ್ಣಿಸುವ ಇತರ ಅನೇಕ ಪದಗಳನ್ನು ಸೇರ್ಪಡೆಗೊಳಿಸಬಹುದಾಗಿದೆ. ಆತನಿಗೆ “ಪ್ರೀತಿ” ಮಾಡುವದು ಮಾತ್ರವಲ್ಲದೆ “ಹಗೆ” ಮಾಡುವದೆಂದರೆ ಗೊತ್ತಿತ್ತು. ಹಳೆಯ ಒಡಂಬಡಿಕೆಯಿಂದ ಎತ್ತಿಕೊಳ್ಳುವವನಾಗಿ, ಇಬ್ರಿಯರಿಗೆ ಪತ್ರಿಕೆಯ ಲೇಖಕನು ಕ್ರಿಸ್ತನ ಕುರಿತಾಗಿ ಹೀಗೆ ಹೇಳಿದನು, “ನೀನು ಧರ್ಮವನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ” (ಇಬ್ರಿಯ 1:9a).[71] ಯೇಸುವು ಅಚ್ಚರಿ ಮತ್ತು ಹತಾಶೆಯಂತಹ ಭಾವಗಳನ್ನು ಸಹ ಅನುಭವಿಸಿದನು (ನೋಡಿರಿ ಮತ್ತಾಯ 8:10; 26:37). ವಾಸ್ತವಿಕದಲ್ಲಿ, ಆತನು ಶಿಲುಬೆಯ ಮೇಲಿನ ಕೊನೆಯ ಗಳಿಗೆಗಳಲ್ಲಿ ನುಡಿದ ಭಯಂಕರವಾದ ಮಾತುಗಳನ್ನು ಆಲಿಸುವಾಗ, “ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ” (ಮತ್ತಾಯ 27:46), ಆತನಿಗೆ ಹತಾಶೆ ಎಂದರೆ ಏನೆಂಬುದು ಸಹ ಗೊತ್ತಿತ್ತೆಂದು ಭಾವಿಸಿಕೊಳ್ಳತಕ್ಕದ್ದು.

ಪೌಲನು ಯೇಸುವಿನ ಹೃದಯವನ್ನು ಪ್ರತಿಫಲಿಸಿದನು - ಮತ್ತು ನಾವು ಸಹ ಪ್ರತಿಫಲಿಸತಕ್ಕದ್ದು. ಪೌಲನು ತನ್ನ ಆತ್ಮೀಕ ಮಕ್ಕಳಾದ ಗಲಾತ್ಯದವರ ತಿರಸ್ಕಾರ ಮತ್ತು

ಪಾಪವನ್ನು ಕಂಡಾಗ ಬಹಳವಾಗಿ ನೊಂದುಕೊಂಡನು ಮತ್ತು ಅಚ್ಚರಿಗೊಂಡನು. ಈ ವಿಧದಲ್ಲಿ, ಆತನು ಯೇಸುವಿನಂತೆ ನಡೆದುಕೊಂಡನು, ಯೇಸುವು ತಾನು ರಕ್ಷಿಸಲು ಬಂದ ಜನರನ್ನು ಪ್ರೀತಿಸಿ ಅವರಿಗಾಗಿ ಬಾಧೆಯನ್ನು ಅನುಭವಿಸುವದಕ್ಕೆ ಸಿದ್ಧನಾಗಿದ್ದನು. ಯೇಸುವಿನ ಶಿಷ್ಯರಾಗಿ, ನಮ್ಮಲ್ಲಿ ಸಹ ಕ್ರಿಸ್ತನಲ್ಲಿದ್ದ "ಮನಸ್ಸು" ಇರತಕ್ಕದ್ದು (ಫಿಲಿಪ್ಪಿ 2:5).

ಈ ವಿಷಯಗಳನ್ನು ಗಮನಿಸುವ ಮೂಲಕ, ದೇವರು ನಮ್ಮ ವಿಷಯದಲ್ಲಿ ಸಂಕಲ್ಪಿಸಿರುವದೆಲ್ಲದರ ರೀತಿಯಲ್ಲಿ ರೂಪಗೊಳ್ಳಲು ಭಾವಗಳು ಒಂದು ಪ್ರಾಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಯೇಸುವಿನ ಆಂತರೀಕ ಜೀವಿತವು ನಮ್ಮ ಕ್ರಿಯೆಗಳಲ್ಲಿ ಮಾತ್ರವೇ ಅಲ್ಲ ಆದರೆ ನಮ್ಮ ಮನೋಭಾವಗಳಲ್ಲಿ ಸಹ ತೋರ್ಪಡತಕ್ಕದ್ದು. ಆಗ ನಮ್ಮ ಹೃದಯಗಳು ಯೇಸುವಿನ ಹೃದಯದಂತೆ ಹೊಂದಿಸಿಕೊಳ್ಳಬೇಕು.

### ಒಡಂಬಡಿಕೆಗಳಲ್ಲಿ ಭೇದವನ್ನು ತಿಳಿಯುವದು (4:31)

ಪೌಲನು 4:22-31ರಲ್ಲಿ ತನ್ನ ಸಾಂಕೇತಿಕ ನಿರೂಪಣೆಯನ್ನು ಮುಕ್ತಾಯಗೊಳಿಸುವ ವೇಳೆ, ಆತನು ಹೀಗೆ ಹೇಳಿದನು, "ಸಹೋದರರೇ, ನಾವು ದಾಸಿಯ ಮಕ್ಕಳಲ್ಲ, ಆ ಧರ್ಮಪತ್ನಿಯ ಮಕ್ಕಳೇ ಎಂದು ತಿಳುಕೊಳ್ಳಿರಿ" (4:31). ಕ್ರೈಸ್ತರು ಧರ್ಮಶಾಸ್ತ್ರಕ್ಕೆ ದಾಸತ್ವದಲ್ಲಿಲ್ಲ ಆದರೆ ಕ್ರಿಸ್ತನಲ್ಲಿ ಸ್ವತಂತ್ರರು ಎಂಬುದನ್ನು ಆತನು ಒತ್ತಿ ಹೇಳುತ್ತಿದ್ದಾನೆ. ನಾವು ಹಳೆಯ ಒಡಂಬಡಿಕೆಯ ಅಡಿಯಲ್ಲಿ ಇಲ್ಲ; ನಾವು ಹೊಸ ಒಡಂಬಡಿಕೆಯಲ್ಲಿ ಭಾಗಿಗಳಾಗಿದ್ದೇವೆ.

ಬೈಬಲಿಗೆ ಸಂಬಂಧಿಸಿದಂತೆ ಗೊಂದಲ ಹಾಗೂ ಅಪಾರ್ಥಗಳನ್ನುಂಟು ಅತ್ಯಂಥ ದೊಡ್ಡ ಕಾರಣಗಳಲ್ಲೊಂದು ಎಂದರೆ ಅದರ ಎರಡು ಒಡಂಬಡಿಕೆಗಳಲ್ಲಿ ಭೇದವನ್ನು ಗುರುತಿಸಲು ವಿಫಲರಾಗುವದೇ ಆಗಿರುತ್ತದೆ. ಈ ರೀತಿಯಾಗಿ ಇರಕೂಡದು, ಯಾಕೆಂದರೆ ಶಾಸ್ತ್ರಗಳಲ್ಲಿ ಅಷ್ಟೊಂದು ಬಲವಾಗಿ ಪ್ರಾಧಾನ್ಯತೆ ಕೊಟ್ಟು ಹೇಳಲ್ಪಟ್ಟಿರುವ ಸಂಗತಿಗಳು ಕೇಲವೇ ಕೆಲವು ಇರುತ್ತವೆ. ಹಳೆಯ ಒಡಂಬಡಿಕೆಯು ಯೇಸು ಕ್ರಿಸ್ತನ ಯಜ್ಞದಿಂದ ನೆರವೇರಿಸಲ್ಪಟ್ಟಿತು. ಆತನು ಒಂದು ಹೊಸ ಮತ್ತು ಉತ್ತಮವಾದ ಒಡಂಬಡಿಕೆಯನ್ನು ಪ್ರತಿಷ್ಠಾಪಿಸಿದ್ದಾನೆ, ಅದು ಆತನ ಸ್ವರಕ್ತದಿಂದ ಊರ್ಜಿತಗೊಳಿಸಲ್ಪಟ್ಟಿತು (ಇಬ್ರಿಯ 8-10). ಶಾಸ್ತ್ರಗಳನ್ನು ಸೂಕ್ತವಾಗಿ ಅರ್ಥಮಾಡಿಕೊಂಡು ಅನ್ವಯಿಸಿಕೊಳ್ಳುವದಕ್ಕೆ ಕೋರುವವರು ಈ ತತ್ವವನ್ನು ದೃಢವಾಗಿ ಗ್ರಹಿಸಿಕೊಳ್ಳತಕ್ಕದ್ದು.

---

**ಅಡಿಟಿಪ್ಪಣಿಗಳು**

[1]ಈ ಗ್ರೀಕ್ ಪದವು ಅನೇಕ ಸಾರಿ "ಕರ್ತನು" ಅಥವಾ ದೇವರನ್ನು ಸೂಚಿಸುವ "ಕರ್ತನು" ಎಂಬುದಾಗಿ ಅನುವಾದಿಸಲ್ಪಟ್ಟಿದೆ. ಇದು ಬಹಳಷ್ಟು ಸಾರಿ ಕರ್ತನಾದ ಯೇಸುವಿಗೆ ಅನ್ವಯಿಸಲ್ಪಟ್ಟಿರುತ್ತದೆ. [2]Walter Bauer, *A Greek-English Lexicon of the New Testament and Other Early Christian Literature*, 3rd ed., rev. and ed. Frederick William Danker (Chicago: University of Chicago Press, 2000), 385. ಒಂದು ಪ್ರಾಂತ್ಯದ ಅಧಿಪತಿಗೆ "ಬೊಕ್ಕಸದ ಅಧಿಕಾರಿ" ಎಂಬ ಬಿರುದು ಬಳಸಲ್ಪಡುತ್ತಿತ್ತು; ಪ್ರಥಮ ಶತಮಾನ ಮಧ್ಯಭಾಗದಲ್ಲಿ "ಪರಿಪೂರ್ಣ" ಎಂಬ ಪದವು ಅದರ ಸ್ಥಾನವನ್ನು ತೆಗೆದುಕೊಂಡಿತು. [3]Ibid. [4]ಅನೇಕ ಸಾರಿ ಆಕಾಶಕಾಯಗಳನ್ನು ಆರಾಧಿಸಲಾಗುತ್ತಿತ್ತು, ಇದೊಂದು ರೀತಿಯ ವಿಗ್ರಹಾರಾಧನೆಯಾಗಿದ್ದು ಇಸ್ರಾಯೇಲ್ಯರು ಸಹ ಅದಕ್ಕೆ ತಪ್ಪಿಸಿಕೊಳ್ಳಲಿಲ್ಲ (2 ಅರಸು 21:3; 23:4, 5). [5]Bauer, 946; Henry George Liddell and Robert Scott, *A Greek-English Lexicon*, 9th ed., rev. and aug. with supplement, rev. Henry Stuart Jones and Roderick McKenzie (Oxford: Clarendon Press, 1968), 1647. [6]ಕ್ರೈಸ್ತತ್ವದ "*ಬಾಲಬೋಧೆ*" *ಎಂಬುದಕ್ಕೆ ಇಬ್ರಿಯ* 5:12*ರಲ್ಲಿ* (NASB) *ಸ್ಟೊಯಿಖೆಯಿಯ ಎಂಬ ಪದವು ಬಳಸಲ್ಪಟ್ಟಿದೆ.* [7]ಈ ಪದಗುಚ್ಛವನ್ನು ಅನೇಕ ಸಾರಿ ನೈಸಿನೆಯ ವಿಶ್ವಾಸಪ್ರಮಾಣದಿಂದ (ಕ್ರಿ.ಶ. 325), ತೆಗೆದುಕೊಳ್ಳಲ್ಪಟ್ಟಿರುತ್ತದೆಂದು

ಉಲ್ಲೇಖಿಸಲಾಗುತ್ತದೆಯಾದರೂ, ಆ ಹೇಳಿಕೆಯಲ್ಲಿ "ಸ್ವತಃ [ಸತ್ಯ] ದೇವರ ಸ್ವತಃ [ಸತ್ಯ] ದೇವರು" ಎಂದಷ್ಟೇ ಸೇರ್ಪಡೆಗೊಳಿಸಲಾಗಿತ್ತು. "ಸ್ವತಃ ಮನುಷ್ಯನೇ" ಎಂಬ ಮಾತುಗಳು ಸಭೆಯ "ಧರ್ಮದ ಮೂವತ್ತೊಂಭತ್ತು ಕಲಂಗಳು" ಎಂಬುದರಲ್ಲಿರುವ ಕ್ಯಾಥೋಲಿಕ್ are from a Catholic ಪ್ರತಿಪಾದನೆ ಆಗಿರುತ್ತದೆ. ಕಲಂ ॥ (3) ಹೇಳುವದೇನೆಂದರೆ "ಒಬ್ಬ ವ್ಯಕ್ತಿಯಲ್ಲಿ ದೇವತ್ವ ಮತ್ತು ಮನುಷ್ಯತ್ವ ಎರಡೂ ಒಂದುಗೂಡಿದ್ದವು, ಕ್ರಿಸ್ತನು ಸ್ವತಃ ದೇವರು, ಮತ್ತು ಸ್ವತಃ ಮನುಷ್ಯನು" (Thomas Rogers, *The Catholic Doctrine of the Church of England*, ed. J. J. S. Perowne [Cambridge: University Press, 1854], 46). [8]F. F. Bruce, *The Epistle to the Galatians*, The New International Greek Testament Commentary (Grand Rapids, Mich.: Wm. B. Eerdmans Publishing Co., 1982), 196. [9]ನೋಡಿರಿ ಕೀರ್ತನೆ 22:1-22; 69:21; ಯೆಶಾಯ 53:1-12; ಜೆಕರ್ಯ 12:10; ಲೂಕ 24:25-27, 44-47. [10]Bauer, 475.

[11]Ben Witherington III, *Grace in Galatia: A Commentary on St Paul's Letter to the Galatians* (Grand Rapids, Mich.: Wm. B. Eerdmans Publishing Co., 1998), 288. [12]ನೋಡಿರಿ ಅಪೊಸ್ತಲರ ಕೃತ್ಯಗಳು 1:5-8; 2:16, 17, 32, 33; 10:44, 45; 11:15-17. [13]ಕ್ರೈಸ್ತನು ದೇವರ ಮಗುವಾಗಿದ್ದಾನೆ ಮತ್ತು ಈಗಾಗಲೇ ವಿಮೋಚನೆಯನ್ನು (ἀπολύτρωσις, *apolutrōsis*) ಪಾಪಗಳ ಕ್ಷಮಾಪಣೆಯ ಮೂಲಕವಾಗಿ ಸ್ವೀಕರಿಸಿಕೊಂಡಿದ್ದಾರೆ (ಎಫೆಸ 1:7). ಹೇಗೂ, ಆತನು ತನ್ನ ದೇಹದ ವಿಮೋಚನೆಗಾಗಿ ಇನ್ನೂ ಕಾದುಕೊಂಡಿರುತ್ತಾನೆ (ರೋಮಾ 8:23); ಅದು ವ್ಯಾಧಿ, ಅನಾರೋಗ್ಯ, ಮತ್ತು ಮರಣಕ್ಕೆ ಒಳಗಾಗುವಂತದ್ದಾಗಿದೆ. ಆತನು ತನ್ನ ಮಕ್ಕಳಿಗೋಸ್ಕರ ದೇವರು ಸಿದ್ಧಪಡಿಸಿರುವಂಥ ಮಹಿಮಕರವಾದ, ನಿರ್ಲಯವಾದ, ಆತ್ಮೀಕವಾದ ದೇಹವನ್ನು ಪಡೆದುಕೊಳ್ಳುವನು. ಈ ದೇಹವು ಅಂತಹ ರೋಗಗಳಿಗೆ ಒಳಗಾಗುವದಿಲ್ಲ, ಆದರೆ ಬದಲಾಗಿ ಪುನರುತ್ಥಾನದ ಜೀವಿತಕ್ಕೆ ಪರಿಪೂರ್ಣವಾಗಿ ಸರಿಹೊಂದುವಂತದ್ದು (1 ಕೊರಿಂಥ 15:42-54; ಫಿಲಿಪ್ಪಿ 3:20, 21; 1 ಯೋಹಾನ 3:2). [14]F. F. Bruce, *Romans*, The Tyndale New Testament Commentaries (Downer's Grove, Ill.: InterVarsity Press, 1985), 164. The poetic lines, by John Berridge (1716–1793), appear in this form in Richard Whittingham, *The Works of the Rev. John Berridge* (London: Simpkin, Marshall, and Co., 1838), 43. [15]ದೇವರು ಆತ್ಮನ ಯುಗವನ್ನು ಪರಿಚಯಿಸುವದಕ್ಕೆ ಇಸ್ರಾಯೇಲಿನ ಇತಿಹಾಸದ ಮಿತಿಯೊಳಗೆ ಕ್ರಿಯೆ ಮಾಡಿದನು. ಯೇಸುವು ಬಾವಿಯ ಬಳಿಯಲ್ಲಿ ಸಮಾರ್ಯದ ಸ್ತ್ರೀಗೆ ಹೇಳಿದ್ದೇನೆಂದರೆ, "ಬರಬೇಕಾದ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೆ" (ಯೋಹಾನ 4:22). ಕ್ರಿಸ್ತನ ಆಗಮನದ ಇಡೀ ಮತ್ತು ಸುವಾರ್ತೆಯ ನಾಟಕವು ಅದನ್ನು ಬರಮಾಡಿಕೊಳ್ಳುವದಕ್ಕೆ ದೇವರ ಸಾಧನವಾಗಿರುವ ಇಸ್ರಾಯೇಲ್ಯರ ಮೇಲೆ ಪ್ರಾಥಮಿಕವಾಗಿ ಮುಖ್ಯ ಗಮನವನ್ನು ಹರಿಸುತ್ತದೆ (ನೋಡಿರಿ ರೋಮಾ 9:1-5). [16]ಇದು ಯಾವಾಗಲೂ ಹೀಗೆಯೇ ಇರುವದಿಲ್ಲ. ಪ್ರಾಚೀನ ಇಸ್ರಾಯೇಲಿನಲ್ಲಿ, ಒಬ್ಬ ದಾಸನು ಬಿಡುಗಡೆಗೊಳ್ಳುವ ಪರಮಾಧಿಕಾರವನ್ನು ಹೊಂದಿರುವ ವೇಳೆಯಲ್ಲಿ ಒಬ್ಬ ದಾಸನಾಗಿರುವದನ್ನು ಆರಿಸಿಕೊಳ್ಳುವ ಅವಕಾಶವನ್ನು ಒದಗಿಸಲಾಗಿತ್ತು (ವಿಮೋಚನೆ 21:1-6). [17]"ಗುಲಾಂ ವಿಮೋಚನೆ" ಎಂದರೆ "ದಾಸತ್ವದಿಂದ ಬಿಡುಗಡೆ" ಎಂಬ ಅರ್ಥವಾಗಿರುತ್ತದೆ. ಈ ವಿಧವಾದ ಸಮಾರಂಭದಲ್ಲಿ, ಒಬ್ಬ ಗುಲಾಮನು ಒಂದು ದೇವರಿಗೆ ಮಾರಲ್ಪಟ್ಟವನು ಅಥವಾ ಮೀಸಲಿಡಲ್ಪಟ್ಟವನೆಂದು ಹೇಳಲಾಗುತ್ತಿತ್ತು, ಹೀಗೆ ಆತನು ಆಗ ತನ್ನ ಯಜಮಾನನದಿಂದ ಸ್ವತಂತ್ರನು ಅಥವಾ ದೇವರ ಗುಲಾಮನಾಗಲಿದ್ದನು. [18]ಹೊಸ ಒಡಂಬಡಿಕೆಯು "ಚೀಟುಗಳ" ಬಳಕೆ ಮಾಡುವದರೊಂದಿಗೆ ಒಂದು ಪರಸ್ಪರ ಸಂಬಂಧವನ್ನು ಹೊಂದಿರುತ್ತದೆ. "ಚೀಟುಗಳು" ಎಂಬುದಕ್ಕೆ ಗ್ರೀಕ್ ಪದವು κλῆρος (*klēros*) ಎಂಬುದು, ಇದು κληρονόμος (*klēronomos*) ಗ್ರೀಕ್ ಪದದೊಂದಿಗೆ ಸಂಬಂಧ ಹೊಂದಿರುತ್ತದೆ, ಇದು 4:7ರಲ್ಲಿ "ಬಾಧ್ಯನು" ಎಂದು ಅನುವಾದಿಸಲ್ಪಟ್ಟಿದೆ. [19]ಇಂಥ ವ್ಯತ್ಯಾಸತೆಗಳಿಂದ ನಾವು ಅಧಿಕವಾಗಿ ನಮ್ಮನ್ನು ಕಳವಳಕ್ಕೊಳಪಡಿಸಿಕೊಳ್ಳುವ ಅಗತ್ಯವಿಲ್ಲ, ನೂರಾರು ವರ್ಷಗಳಲ್ಲಿ ವಿವಿಧ ಹಸ್ತಪ್ರತಿ ನಕುಗಾರರು ಕೈಬರಹದ ಮೂಲಕವಾಗಿ ನಕಲು ಮಾಡಲ್ಪಟ್ಟಿರುವ ದಸ್ತಾವೇಜುಗಳಲ್ಲಿ ಇವುಗಳು ಸರ್ವಸಾಮಾನ್ಯವಾಗಿರುತ್ತವೆ. ವಾಸ್ತವಿಕದಲ್ಲಿ, ಅಷ್ಟೊಂದು ಸಂಖ್ಯೆಯಲ್ಲಿ (ಗ್ರೀಕ್ ಹಸ್ತಪ್ರತಿಗಳೇ ಮೂರು ಸಾವಿರದಷ್ಟಿರುತ್ತವೆ, ಬೇರೆ ಭಾಷೆಗಳಲ್ಲಿ ಇನ್ನೂ ಸಾವಿರಾರು ಇರುತ್ತವೆಂದು ಹೇಳುವ ಅಗತ್ಯವೇ ಇಲ್ಲ) ದಸ್ತಾವೇಜುಗಳಿರುವದಿಂದಲೇ ಹೊಸ ಒಡಂಬಡಿಕೆಯ ವಿಜ್ಞಾನವನ್ನು ಅಭಿವೃದ್ಧಿಗೊಳಿಸಿ ಮತ್ತು ಸಂಸ್ಕರಿಸಿ ಗ್ರಂಥಪಾಠದ ವಿಮರ್ಶೆಯನ್ನು ಅಂಥ ಉನ್ನತ ಮಟ್ಟಕ್ಕೆ ಕೊಂಡೊಯ್ಯುವಂತೆ ಮತ್ತು ಮೂಲ ಆತ್ಮಚರಿತ್ರೆಗೆ ನಿಕಟವಾಗಿದ್ದಂಥ ವಾಚನಗಳ ಸಂಬಂಧಿತ ಯುಗ ಮತ್ತು ಅಪ್ಪಟತನವನ್ನು ನಿರ್ಧರಿಸುವದಕ್ಕೆ ವೇದ ಪಂಡಿತರು ಶಕ್ತರಾಗಿದ್ದರು. (ಈ ನಿರ್ದಿಷ್ಟವಾದ ವಾಕ್ಯಭಾಗದ ಅರ್ಥವನ್ನು ಸ್ಪಷ್ಟಪಡಿಸುವ ನಿಟ್ಟಿನಲ್ಲಿ ಪ್ರಾಚೀನ ಹಸ್ತಪ್ರತಿ ನಕಲುಗಾರರ ಪ್ರಯತ್ನಕ್ಕೆ ಒಂದು ಆಸಕ್ತಿಕರವಾದ ಸಮಾನಾರ್ಥಕವು NASBಯ ಕೆಲವೊಂದು ಹಳೆದಯ ಮುದ್ರಣಗಳ ಬದಿಯ ಟಿಪ್ಪಣಿಗಳಲ್ಲಿ ಉಲ್ಲೇಖಿಸಲ್ಪಟ್ಟಿದ್ದು, ಅದು "ದೇವರ ಮೂಲಕ" ಎಂಬುದನ್ನು "ದೇವರ ಕೃಪಾಭರಿತ ಕ್ರಿಯೆಯ ಮೂಲಕ" ಎಂದು ಅನುವಾದಿಸುತ್ತದೆ. ಇದು ಅಕ್ಷರಶಃ ಅನುವಾದವಲ್ಲವಾದರ, ಪೌಲನು ಹೇಳುತ್ತಿರುವ ವಿಚಾರವನ್ನಂತೂ ಅದು ಖಂಡಿತವಾಗಿಯೂ ಸೆರೆ ಹಿಡಿಯುತ್ತದೆ.) [20]ಕೆಲವೊಂದು ಸನ್ನಿವೇಶಗಳಲ್ಲಿ, "ಅರಿಯುವಿಕೆ" (*ಗಿನೋಸ್ಕೋ*) ಎಂಬುದು ಲೈಂಗಿಕ ಸಂಬಂಧವನ್ನು ಸೂಚಿಸಲು

ಬಳಸುವ ಸೌಮ್ಯೋಕ್ತಿ ಆಗಿರುತ್ತದೆ (ಮತ್ತಾಯ 1:25; ಲೂಕ 1:34; ನೋಡಿರಿ KJV).

[21]ನೋಡಿರಿ ಅಪೊಸ್ತಲರ ಕೃತ್ಯಗಳು 11:1-3, 17, 18; 1 ಪೇತ್ರ 2:10. [22]Robert Lowry, "Nothing But the Blood," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [23]Bauer, 558. [24]ನೋಡಿರಿ 3:4; 1 ಕೊರಿಂಥ 15:2, 58; ಫಿಲಿಪ್ಪಿ 2:16; 1 ಥೆಸಲೋನಿಕ 2:1; 3:5. [25]ನೋಡಿರಿ 1 ಕೊರಿಂಥ. 4:16, 17; 11:1, 2; ಫಿಲಿಪ್ಪಿ 1:29, 30; 3:17, 18; ಇಬ್ರಿಯ 13:7. [26]R. Alan Cole, *The Epistle of Paul to the Galatians*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1965), 120. [27]Bruce, *Galatians*, 208. [28]J. B. Lightfoot, *The Epistle of St. Paul to the Galatians*, Classic Commentary Library (Grand Rapids, Mich.: Zondervan Publishing House, 1957), 174. [29]William M. Ramsay, *St. Paul the Traveller and the Roman Citizen*, new ed. (Grand Rapids, Mich.: Baker Book House, 1982), 92–97. [30]Kenneth L. Boles, *Galatians & Ephesians*, The College Press NIV Commentary (Joplin, Mo.: College Press Publishing Co., 1993), 110.

[31]ಕರ್ತನು "ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ" ಅರಣ್ಯಕ್ಕೆ ನಡಿಸಲ್ಪಟ್ಟನು (ಮತ್ತಾಯ 4:1) ಎಂಬುದನ್ನು ಸೂಚಿಸಲು ಒಂದು ಕ್ರಿಯಾಪದವು (πειράζω, *peirazō*) ಬಳಸಲ್ಪಟ್ಟಿದೆ. [32]Bauer, 309. [33]Lucian *Friendship* 40–41. [34]Robert L. Johnson, *The Letter of Paul to the Galatians*, The Living Word Commentary (Austin, Tex.: R. B. Sweet Co., 1969), 120. 4:17ರ ವಿಷಯದಲ್ಲಿ, Lightfoot ಹೀಗೆ ಬರೆದನು, "ಅವರ ಬಯಕೆಯು ಏನೆಂದರೆ ನಿಮ್ಮನ್ನು ಕ್ರಿಸ್ತ*ನಿಂದ* ಹೊರಗೆ ಹಾಕಬೇಕೆಂಬುದೇ. ಆ ವಿಧದಲ್ಲಿ ನೀವು ಅವರಿಗೆ ಮೆಚ್ಚಿಕೆಯನ್ನು ಸಂಪಾದಿಸಿಕೊಳ್ಳಲು ಒತ್ತಾಯಿಸಲ್ಪಡುವಿರಿ" (Lightfoot, 176; ಒತ್ತಿ ಹೇಳಿದ್ದು ನನ್ನದು). "ಓಲೈಸುವದು" ಅಥವಾ "ಓಲೈಸಲ್ಪಡುವದು" ನಿಸ್ಸಂದೇಹವಾಗಿ ಉಪಸ್ಥಿತಿಯಲ್ಲಿತ್ತಾದರೂ, Lightfootನ ವ್ಯಾಖ್ಯಾನವು ತಪ್ಪಾಗಿರುವಂತೆ ಕಾಣಿಸುತ್ತದೆ. ಯೆಹೂದಿಕರಣಗೊಳಿಸುವವರ ಲಕ್ಷ್ಯವು ಕ್ರಿಸ್ತನನ್ನು ತಿರಸ್ಕರಿಸುವಂತೆ ಮತ್ತು ಅವರ ಕ್ರೈಸ್ಸೇತರ ಶಿಷ್ಯರಾಗುವಂತೆ ಗಲಾತ್ಯದವರನ್ನು ಮನವೊಲಿಸುವದಾಗಿರಲಿಲ್ಲ. ಗಲಾತ್ಯದವರು ಅಮಾಯಕರಾಗಿ ಇದ್ದಿರಬಹುದಾದರೂ, ಅವರು ಸ್ವತಃ ಕರ್ತನನ್ನು ತಿರಸ್ಕರಿಸಿರಲಾರರು. ಅಂತೂ, ಅವರು ಹೊಸ ಜನನವನ್ನು ಅನುಭವಿಸಿದ್ದರು. ಅಲ್ಲದೆ, ಯೆಹೂದಿಕರಣಗೊಳಿಸುವವರು ಸ್ವತಃ ಕ್ರೈಸ್ತರಾಗಿದ್ದರು. ಈ ಭಾಷೆಯು ಆದಿಯಲ್ಲಿದ್ದ ಅನೇಕ ಯೆಹೂದಿ ಕ್ರೈಸ್ತರೊಳಗೆ ಇದ್ದಂಥ ಒಂದು ಮನೋಭಾವವನ್ನು ಪ್ರತಿನಿಧಿಸುತ್ತದೆ (ಅಪೊಸ್ತಲರ ಕೃತ್ಯಗಳು 15:1-6; 2 ಕೊರಿಂಥ 11:13-15, 22, 23; ಗಲಾತ್ಯ 6:12, 13). [35]ಅದರ ಗ್ರೀಕ್ ಬಳಕೆಯಲ್ಲಿ, *ಝೇಲೂ* ಎಂಬ ಪದದ ಅರ್ಥವು "ಪ್ರಚೋದಿಸಲ್ಪಡು" ಎಂದಾಗಿರುತ್ತದೆ ಮತ್ತು ಒಬ್ಬನು ಬೇರೊಬ್ಬನ ವಿಷಯದಲ್ಲಿ ಹೊಂದಿದ್ದ ವೈಯಕ್ತಿಕ ಮೆಚ್ಚುಗೆಯನ್ನು ಸೂಚಿಸಬಹುದಾಗಿದೆ. ಇದು ಅನೇಕ ಸಾರಿ ಆ ವ್ಯಕ್ತಿಯನ್ನು ಉತ್ಸಾಹದಿಂದ ಅನುಕರಣೆ ಮಾಡುವಂತೆ ನಡಿಸುತ್ತದೆ. [36]ಗಲಾತ್ಯದವರನ್ನು 1:11; 3:15; 4:12, 28, 31; 5:11, 13; 6:1, 18 ವಚನಗಳಲ್ಲಿ "ಸಹೋದರರೇ" ಎಂದು ಕರೆಯಲಾಗಿದೆ. [37]ಪೌಲನು ತನ್ನ ಪ್ರತಿಕೆಗಳಲ್ಲಿ "ಮಕ್ಕಳೇ" (*ಟೆಕೆನಾ*) ಎಂದು ಬಳಕೆ ಮಾಡುತ್ತಾನೆ, ಇದು 4:19ರಲ್ಲಿರುವ ವಾಚನಕ್ಕೆ ಆಧಾರವನ್ನು ಒದಗಿಸುತ್ತದೆ. ಹೇಗೂ, ಈ ಸನ್ನಿವೇಶದಲ್ಲಿ ಮಗುವನ್ನು ಹೆರುವದು ರೂಪಕೋಕ್ತಿಯು "ಚಿಕ್ಕ ಮಕ್ಕಳೇ" (ಟೆಕಿನಾ) ಎಂಬ ವಾಚನಕ್ಕೆ ಬೆಂಬಲವನ್ನು ಒದಗಿಸಬಹುದಾಗಿದೆ. (Witherington, 315; Bauer, 994.) [38]ನೋಡಿರಿ ಅಪೊಸ್ತಲರ ಕೃತ್ಯಗಳು 23:6; 24:15; 26:6; 28:20; ಗಲಾತ್ಯ 5:5; ಎಫೆಸ 1:18; ಕೊಲೊಸ್ಸೆ 1:5, 6, 23; 1 ಥೆಸಲೋನಿಕ 4:13-18; ತೀತನು 1:1-3. [39]ಅನೇಕ ಆವೃತ್ತಿಗಳಲ್ಲಿ (ಉದಾಹರಣೆಗೆ NASB) "ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು" ಎಂದಿರುತ್ತದೆಯಾದರೂ, NRSV ತರ್ಜುಮೆಯಲ್ಲಿರುವ ಪ್ರಕಾರ, "ದರ್ಪಣದಲ್ಲಿ ಪ್ರತಿಬಿಂಬಿಸಲ್ಪಟ್ಟಿರುತ್ತದೆ" ಎಂದು ಅನುವಾದಿಸಲ್ಪಡುವದಕ್ಕೆ ಉತ್ತಮ ಕಾರಣವಿರುತ್ತದೆ. ಅಪೊಸ್ತಲರ ಕುರಿತಾಗಿ ಹೇಳಲ್ಪಟ್ಟಿದ್ದು ಮೋಶೆಯು ಮುಖಕ್ಕೆ ಮುಸುಕು ಹಾಕಿಕೊಂಡಿರುವದಕ್ಕೆ ಸಾದೃಶ್ಯವಾಗಿತ್ತು, ಆತನ ಮುಖವು ದೇವರ ಪ್ರಭಾವವನ್ನು ಪ್ರತಿಫಲಿಸುವದಾಗಿತ್ತು. ಮೋಶೆಯಂತಲ್ಲದೆ, ಅಪೊಸ್ತಲರು ಹೊಸ ಒಡಂಬಡಿಕೆಯ ಸೇವಕರಾಗಿ ಯಾವದನ್ನು ಬಯಲುಗೊಳಿಸಿದೆ ಹಿಂದಕ್ಕೆ ಹಿಡಿದಿಟ್ಟುಕೊಂಡಿರಲಿಲ್ಲ (2 ಕೊರಿಂಥ 3:6); ಅವರು ಕರ್ತನ ಪ್ರಭಾವವನ್ನು ಪ್ರತಿಬಿಂಬಿಸುವವರಾಗಿ, ತಮ್ಮ "ಮುಸುಕು ತೆಗೆದವರಾಗಿ" ತಮ್ಮ ಸಂದೇಶಗಳನ್ನು ಸಾರಿದರು. Κατοπτρίζω (*katoptrizō*) ಎಂಬುದರಿಂದ ಬಂದಿರುವ ಕ್ರಿಯಾಪದವು, ಅಪೂರ್ವ ಪ್ರಯೋಗದಲ್ಲಿರುತ್ತದೆ ಮತ್ತು "ಪ್ರತಿಫಲಿಸು" ಎಂಬುದಾಗಿ ಅನುವಾದಿಸಲ್ಪಟಡುವದು ಸಮರ್ಪಕವಾಗಿರುತ್ತದೆ. (Bauer, 535.) [40]J. D. Douglas and Merrill C. Tenney, eds., *The New International Dictionary of the Bible*, pictorial ed. (Grand Rapids, Mich.: Zondervan Publishing House, 1987), 1025.

[41]John E. Hartley, "תּוֹרָה," in *Theological Wordbook of the Old Testament*, ed. R. Laird Harris, Gleason L. Archer, Jr., and Bruce K. Waltke (Chicago: Moody Press, 1980), 1:403. [42]The NIV1984 ತರ್ಜುಮೆಯು ಈ ವಚನಗಳಿಗೆ ಅತ್ಯಂಥ ನಿಕಟವಾದ ರೀತಿಯಲ್ಲಿ ನಿಖರವಾದ ಅನುವಾದವನ್ನು

ಒದಗಿಸುತ್ತದೆ. NASB ಸೇರಿದಂತೆ, ಹಲವಾರು ತರ್ಜುಮೆಗಳು ಇಬ್ರಿಯ 11:11ರನ್ನು ಸಾರಳು ಗರ್ಭಿಣಿಯಾಗುವದಕ್ಕೆ ಶಕ್ತಿಯನ್ನು ಪಡೆದುಕೊಂಡಳು ಎಂಬ ಅರ್ಥ ಬರುವ ರೀತಿಯಲ್ಲಿ ಅನುವಾದಿಸಿರುತ್ತವೆ. ಈ ವಚನದ ಮೂಲ ಪದಗಳ ವಿಷಯದಲ್ಲಿ ಹಲವಾರು ಗ್ರಂಥಪಾಠ-ವಿಮರ್ಶೆಯ ಪ್ರಶ್ನೆಗಳು ಇರುತ್ತವೆ. ಇವುಗಳು ಉಪಲೇಖಗಳಲ್ಲಿ ಬಿಂದುವನ್ನು ಕೈ ಬಿಡುವದು ಮತ್ತು ಮುಖ್ಯ ಪದವಾದ στεῖρα (*steira,* "ಬಂಜೆ") ಎಂಬುದನ್ನು ಸೇರ್ಪಡೆಗೊಳಿಸುವದಕ್ಕೆ ಸಂಬಂಧಿಸಿರುತ್ತವೆ. ಹಾಗಿದ್ದರೂ, ಯಾವದು ಅತಿ ಪ್ರಾಮುಖ್ಯವಾದದ್ದಾಗಿ ಮತ್ತು ನಿರ್ಣಾಯಕವಾದ ಕಾರಣಾಂಶವಾಗಿ ಕಾಣಿಡುತ್ತದೋ ಆ ಪದಗುಚ್ಛವು εἰς καταβολὴν σπέρματος (*eis katabolēn spermatos*), ಇದರ ಅಕ್ಷರಶಃ ಅರ್ಥವು "ಸಂತಾನವು ಸ್ಥಾಪಿಸಲ್ಪಡುವದಕ್ಕಾಗಿ" ಎಂದಾಗಿರುತ್ತದೆ. ಇದು ಒಂದು ಮಗುವನ್ನು ಹುಟ್ಟಿಸುವದರಲ್ಲಿ ಅಥವಾ ಸಂತತಿಯನ್ನು ಸ್ಥಿರಪಡಿಸುವದರಲ್ಲಿ ಪುರುಷನಿಗಿರುವ ಪಾತ್ರವನ್ನು ಸೂಚಿಸಲು ಬಳಸಲ್ಪಡುವ ಒಂದು ತಾಂತ್ರಿಕ ಪದವಾಗಿರುತ್ತದೆ. ಆದದರಿಂದ, ಈ ವಾಕ್ಯಭಾಗದಲ್ಲಿ, ಇದು ಸಾರಳು ಗರ್ಭವತಿಯಾಗುವದಕ್ಕೆ ಶಕ್ತಳಾಗುವದರ ಕುರಿತಾದ ವಿಷಯವಲ್ಲ ಆದರೆ ಬದಲಾಗಿ ನಂಬಿಕೆಯ ಮೂಲಕವಾಗಿ, ಮಗುವನ್ನು ಪಡೆಯುವದಕ್ಕೆ ಅಬ್ರಹಾಮನು ಶಕ್ತಗೊಳಿಸಲ್ಪಡುವದರ ಕುರಿತಾಗಿರುತ್ತದೆ. ಇಡೀ ಸನ್ನಿವೇಶದ ಚರ್ಚೆಯ ವಿಷಯವು ಅಬ್ರಹಾಮನೇ ಆಗಿರುತ್ತಾನೆ (ಇಬ್ರಿಯ 11:8-12). ಹೆಚ್ಚಿನ ಮಾಹಿತಿಗಾಗಿ, ನೋಡಿರಿ F. F. Bruce, *The Epistle to the Hebrews*, The New International Commentary on the New Testament (Grand Rapids, Mich.: Wm. B. Eerdmans Publishing Co., 1964), 299–302. [43]Bauer, 658. [44]F. F. Bruceನು ಗಮನಕ್ಕೆ ತಂದಿದ್ದೇನೆಂದರೆ, ಪೌಲನು ತನ್ನ ಪರಿವರ್ತನೆಯ ಮುಂಚೆ ರಬ್ಬಿಗಳ ಶಾಲೆಯಲ್ಲಿ ಅಭ್ಯಾಸವನ್ನು ಮಾಡಿರುವದಾದರೆ, ಆತನು ಸಮಾನಾರ್ಥಗೊಳಿಸುವಿಕೆಗಳು ಬಹಳ ತದ್ವಿರುದ್ಧವಾಗಿರುತ್ತಿದ್ದಿರಬಹುದಿತ್ತು: "ಇಸಾಕನು ಆದುಕೊಳ್ಳಲ್ಪಟ್ಟ ಜನರಿಗೆ ಮೂಲಪಿತೃವಾಗಿದ್ದಾನೆ; ಇಸ್ಮಾಯೇಲ್ಯರು ಅನ್ಯಜನರು. ಇಸ್ರಾಯೇಲ್ಯರು ಸ್ವತಂತ್ರ ಸ್ತ್ರೀಯ [ಸಾರಳು] ಮಕ್ಕಳಾಗಿದ್ದರು; ಅನ್ಯಜನರು ದಾಸಿಯ [ಹಾಗರಳು] ಮಕ್ಕಳು. ಯೆಹೂದ್ಯರು ಧರ್ಮಶಾಸ್ತ್ರದ ಬಿಡುಗಡೆಗೊಳಿಸುವಂಥ ಜ್ಞಾನವನ್ನು ಪಡೆದುಕೊಂಡಿರುವರು; ಅನ್ಯಜನರು ಅಜ್ಞಾನ ಮತ್ತು ಪಾಪಕ್ಕೆ ದಾಸತ್ವದಲ್ಲಿದ್ದಾರೆ" (F. F. Bruce, *The Epistle to the Galatians*, The New International Greek Testament Commentary [Grand Rapids, Mich.: Wm. B. Eerdmans Publishing Co., 1982], 218–19). [45]Liddell and Scott, 1735. [46]Lightfoot, 181ದಿಂದ ಆಯ್ದುಕೊಂಡದ್ದು. [47]James Burton Coffman, *Commentary on Galatians, Ephesians, Philippians, Colossians* (Austin, Tex.: Firm Foundation Publishing House, 1977), 83ದಿಂದ ಆಯ್ದುಕೊಂಡದ್ದು. [48]ನೋಡಿರಿ 4:30, ಇದು ಆದಿಕಾಂಡ 21:10ರಿಂದ ಉಲ್ಲೇಖ ಮಾಡುತ್ತದೆ. [49]LXXವು *ಟ್ಸಾಖಕ್* ಎಂಬುದನ್ನು παίζω (*paizō*, "ಆಡು") ಎಂಬ ಪದದಿಂದ ಅನುವಾದಿಸುತ್ತದೆ. [50]J. Barton Payne, "צָחַק," in *Theological Wordbook of the Old Testament*, ed. R. Laird Harris, Gleason L. Archer, Jr., and Bruce K. Waltke (Chicago: Moody Press, 1980), 2:763.

[51]ಇಸಾಕನು ಹುಟ್ಟಿದ ವೇಳೆಯಲ್ಲಿ ಇಸ್ಮಾಯೇಲನು ಸುಮಾರು ಹದಿನಾಲ್ಕು ವಯಸ್ಸಿನವನಾಗಿದ್ದನು (ಆದಿಕಾಂಡ 16:16; 21:5; ನೋಡಿರಿ 17:24, 25). ಅಷ್ಟುಮಾತ್ರವಲ್ಲದೆ, ಇಸಾಕನಿಗೆ ಸ್ತನ್ಯಪಾನವನ್ನು ಬಿಡಿಸಿದ ವೇಳೆಯಲ್ಲಿ ಆತನು ಮೂರು ವರ್ಷದವನಾಗಿದ್ದಿರಬಹುದು. ಇದು ಆದಿಕಾಂಡ 21:8ರಲ್ಲಿ ಹಬ್ಬದಲ್ಲಿ ಇಸ್ಮಾಯೇಲನನ್ನು ಸುಮಾರು ಹದಿನಾರು ಅಥವಾ ಹದಿನೇಳು ವರ್ಷದವನಾಗಿರುವಂತೆ ಮಾಡುತ್ತದೆ. [52]Johnson, 131. [53]ಹೇಗೂ, ಹಾಗರಳನ್ನು ತಾತ್ಸಾರಕ್ಕೊಳಗಾದವಳೆಂದು ತೋರ್ಪಡಿಸಲಾಗಿರುತ್ತದೆಂಬ ನಿರ್ಧಾರಕ್ಕೆ ಬರುವದು ಅವಶ್ಯವಿರುವದಿಲ್ಲ. ಆದಿಕಾಂಡ 21:14-21ರಲ್ಲಿ, ಹಾಗರಳು ಮತ್ತು ಇಸ್ಮಾಯೇಲನನ್ನು ಬೇರೆಯಾಗಿ ಕಳುಹಿಸಿ ಕೊಟ್ಟ ವೇಳೆಯಲ್ಲಿ ದೇವರು ಹಾಗರಳ ಪ್ರಾರ್ಥನೆಯನ್ನು ಆಲಿಸಿದನು ಮತ್ತು ಆಕೆಯ ವೇದನೆಯಲ್ಲಿ ಆದರಿಸಿದನು. [54]ನೋಡಿರಿ 3:28; 5:6; 1 ಕೊರಿಂಥ 7:19; 12:13; ಎಫೆಸ 6:8. [55]ನೋಡಿರಿ ಯೋಹಾನ 3:14-17, 36; 5:24, 39, 40; 11:25, 26; 14:6. [56]ನೋಡಿರಿ ಮತ್ತಾಯ 26:24, 54; ಲೂಕ 24:26, 27, 45, 46. [57]ನೋಡಿರಿ *ಅನುಬಂಧ: ಗ್ರೀಕೀಕರಣದ ಹರಡುವಿಕೆ*, ಪುಟಗಳು 247-49. [58]ಇನ್ನೂ ಕನಿಷ್ಠ ಹದಿನೆಂಟು ಪಟ್ಟಣಗಳಿಗೆ ಅಲೆಗ್ಸಾಂಡರನ ಹೆಸರು ಇಡಲಾಗಿತ್ತು. [59]Plato *Phaedo* 109B. [60]ಪ್ರಬಲವಾಗಿದ್ದ ರೋಮನ್ ಶಕ್ತಿಯು ಗ್ರೀಕ್ ಭಾಷೆ ಮತ್ತು ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿದ್ದರ ಫಲಿತವಾಗಿ "ರೋಮನ್ ಗ್ರೀಕೀಕರಣ" ಎಂಬುದು ಉಂಟಾಗಿತ್ತು.

[61]Francis Foulkes, *The Letter of Paul to the Ephesians*, rev. ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1989), 111. [62]ನೋಡಿರಿ ಅರಣ್ಯಕಾಂಡ 16:22; 27:16; ಇಬ್ರಿಯ 12:9; ಪ್ರಕಟನೆ 22:6. [63]"ಗ್ರಹಗಳು" (πλάνητες, *planētes*) ಎಂಬುದಕ್ಕಿರುವ ಗ್ರೀಕ್ ಪದದ ಅರ್ಥವು "ಅಲೆಮಾರಿಗಳು." [64]ಈ ಪದದ ಅಕ್ಷರಶಃ ಅರ್ಥವು "ಇನ್ನಷ್ಟು ಪಡೆದುಕೊಳ್ಳಬೇಕೆಂಬ ಬಯಕೆ." [65]F. Blass and A. Debrunner, *A Greek Grammar of the New Testament and Other Early Christian Literature*, trans. and rev. Robert W. Funk (Chicago: University of Chicago Press, 1961), 134 (no. 258). [66]William Cowper, "O for a Closer Walk

with God," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [67]ಒಂದು ಉದಾಹರಣೆಯೆಂದರೆ ಫೇಲಿಕ್ಸನ ಮುಂದೆ ಪೌಲನು ಮಾಡಿದ ವಾದವೇ, ಪೌಲನು ಅವನ ಸಂಗಡ "ಸುನೀತಿ ದಯೆ ಮುಂದಣ ನ್ಯಾಯವಿಚಾರಣೆ ಇವುಗಳ ವಿಷಯವಾಗಿ" ತರ್ಕಿಸುವಾಗ ಆತನು "ಭಯಗ್ರಸ್ತನಾದನು" (ಅಪೊಸ್ತಲರ ಕೃತ್ಯಗಳು 24:25). [68]Bauer, 4. [69]D. A. Carson, *The Gospel According to John* (Grand Rapids, Mich.: Wm. B. Eerdmans Publishing Co., 1991), 415–16. [70]Bauer, 211.

[71]"ಪ್ರೀತಿ" (ἀγάπη, *agapē*) ಎಂಬುದು ಒಂದು ಭಾವಕ್ಕಿಂತಲೂ ಎಷ್ಟೋ ಅಧಿಕವಾದದ್ದೆಂಬುದನ್ನು ನಾವು ನೆನಪಿಟ್ಟುಕೊಳ್ಳತಕ್ಕದ್ದು.